ಸೋಮವಾರ, ಏಪ್ರಿಲ್ 13, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿಣ್ಣರ ವೇಷ...


ಕಲಬುರಗಿಯ ರಂಗಾಯಣದಲ್ಲಿ ಆರಂಭಗೊಂಡ ಮಕ್ಕಳ ಬೇಸಿಗೆ ರಂಗತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳು ವಿವಿಧ ವೇಷ ಭೂಷಣ ತೊಟ್ಟು ಗಮನಸೆಳೆದರು





ಆಯುಷ್‌ಗೆ ಬೆಳ್ಳಿ

ಕನ್ನಡಿಗ ಆಯುಷ್ ಶೆಟ್ಟಿ, ಭಾನುವಾರ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಚೀನಾದ ಶಿ ಯು ಕೀ ವಿರುದ್ಧ ಸೋತು ಬೆಳ್ಳಿ ಪದಕ ಗಳಿಸಿದರು



ಮತ ಸಮರ

ಎಸ್‌ಐಆರ್‌ಗೆ ನಲುಗಿದ ಪಶ್ಚಿಮ ಬಂಗಾಳ

ಎಸ್‌ಐಆರ್ ಎಂದರೆ...

ಮತದಾರರ ಪಟ್ಟಿಯನ್ನು ಸಮಗ್ರವಾಗಿ, ಸಂಪೂರ್ಣವಾಗಿ ಪರಿಷ್ಕರಣೆ ಮಾಡುವುದು. ಮತದಾರರ ಪಟ್ಟಿಯ ನಿಖರತೆಯನ್ನು ಕಾಪಾಡಿಕೊಳ್ಳಲು ಕ್ಷೇತ್ರಗಳ ಬದಲಾವಣೆ ನಂತರ ಅಥವಾ ಪ್ರಮುಖ ಚುನಾವಣೆಗಳಿಗೆ ಮುನ್ನ ಇದನ್ನು ನಡೆಸಲಾಗುತ್ತದೆ. 1951ರಿಂದ 2004ರ ನಡುವೆ ಎಂಟು ಬಾರಿ ಎಸ್‌ಐಆರ್ ಮಾಡಲಾಗಿದೆ. 2002–2004ರಲ್ಲಿ ಎಸ್‌ಐಆರ್ ನಡೆದು 20 ವರ್ಷಗಳಾಗಿರುವುದರಿಂದ ಈಗ ಪ್ರಕ್ರಿಯೆ ಅಗತ್ಯವಾಗಿತ್ತು ಎಂದು ಭಾರತದ ಚುನಾವಣಾ ಆಯೋಗವು ಸಮರ್ಥಿಸಿಕೊಂಡಿದೆ.

• ಅನಿರ್ಬನ್ ಭೌಮಿಕ್

‘ನಿಮ್ಮಲ್ಲಿ ಎಷ್ಟು ಮಂದಿ ಮತದಾನದ ಹಕ್ಕನ್ನು ಕಳೆದುಕೊಂಡಿದ್ದೀರಿ?’

ತಮ್ಮ ಎಂದಿನ ಶೈಲಿಯಲ್ಲಿ ವೇದಿಕೆಯಿಂದ ಇಳಿಯುತ್ತಾ ಕೇಳಿದರು ಮಮತಾ ಬ್ಯಾನರ್ಜಿ. ಅಲ್ಲಿ ಸೇರಿದ್ದ ಶೇ 60ರಷ್ಟು ಮಂದಿ– ಹೆಚ್ಚಿನವರು ಮಹಿಳೆಯರು– ತಮ್ಮ ಕೈಗಳನ್ನು ಎತ್ತಿದರು.

‘ಹೌದಾ’. ನಂಬಲಸಾಧ್ಯ ಎನ್ನುವಂತೆ ಕ್ಷಣ ಹೊತ್ತು ಮೌನವಾದ ಮಮತಾ ಅವರು, ನಂತರ ಹೇಳಿದರು: ‘ಮತ್ತೆ ಓಟು ಹಾಕುವವರು ಯಾರು?’

ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ಸಮಗ್ರ ವಿಶೇಷ ಪರಿಷ್ಕರಣೆಯ (ಎಸ್‌ಐಆರ್) ಬಗ್ಗೆ ಮತ್ತು ಅದು ರಾಜ್ಯದ ಜನರ ಮೇಲೆ ಬೀರಿರುವ ಪರಿಣಾಮಗಳ ಬಗ್ಗೆ ಹಲವು ರೀತಿಯ ಕಥನಗಳಿವೆ. ಅದರ ಒಂದು ನೋಟವು ಮಾಲ್ಡಾದ ಇನಾಯತ್‌ಪುರದಲ್ಲಿ ನಡೆದ ತೃಣಮೂಲ ಕಾಂಗ್ರೆಸ್‌ನ ರ‍್ಯಾಲಿಯಲ್ಲಿ ಸಿಕ್ಕಿತು.

ಈಗ ವೀರಭೂಮಿಯ ರಾಮ್‌ಪುರಹಾಟ್‌ಗೆ ಬರೋಣ. ಮತಪಟ್ಟಿಯಿಂದ ಹೆಸರು ತೆಗೆದುಹಾಕಲಾಗಿರುವ ನೂರಾರು ಮಂದಿ ನ್ಯಾಯಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಲು ಅಲ್ಲಿನ ಉಪವಿಭಾಗಾಧಿಕಾರಿ ಕಚೇರಿಯ ಮುಂದೆ ಸಾಲುಗಟ್ಟಿ ನಿಂತಿದ್ದರು. ಅಷ್ಟರಲ್ಲಿ ಸುದ್ದಿಯೊಂದು ಬಂತು; ನ್ಯಾಯಮಂಡಳಿಗೆ ಸಲ್ಲಿಸಬೇಕಿದ್ದ ದಾಖಲೆಗಳನ್ನು ಅಲ್ಲಿಂದ ಒಂದು ಕಿಲೋಮೀಟರ್ ದೂರದ ಕಾಲೇಜಿನಲ್ಲಿ ಸ್ವೀಕರಿಸಲಾಗುತ್ತದೆ. ಮತದಾರರ ಪಟ್ಟಿಗೆ ಮತ್ತೆ ಹೆಸರು ಸೇರ್ಪಡೆಗೊಳಿಸಬೇಕು ಎಂದು ಕಾತರದಿಂದಿದ್ದ ಮಹಿಳೆಯರು ಮತ್ತು ಪುರುಷರು ತಕ್ಷಣವೇ ಕಾಲೇಜಿನ ಬಳಿ ಸರತಿ ಸಾಲಿನಲ್ಲಿ ನಿಲ್ಲಲು ಅತ್ತ ಕಡೆ ದೌಡಾಯಿಸಿದರು.

ರಾಮ್‌ಪುರಹಾಟ್‌ಗೆ 50 ಕಿ.ಮೀ. ದೂರದ ಸುರೀಯಲ್ಲಿ ಪರಿಸ್ಥಿತಿ ಮತ್ತಷ್ಟು ಭೀಕರವಾಗಿತ್ತು. ‘ಎಸ್‌ಐಆರ್ ಆರಂಭವಾದಾಗಿನಿಂದ ನಾನು ಒಂದಲ್ಲ, ಮೂರು ಬಾರಿ ಅವರು ಕೇಳಿದ ಎಲ್ಲ ದಾಖಲೆಗಳನ್ನು ಸಲ್ಲಿಸಿದ್ದೇನೆ. ಆದರೂ ಅವರು ನನ್ನ ಹೆಸರನ್ನು ಪಟ್ಟಿಯಿಂದ ತೆಗೆದುಹಾಕಿದ್ದಾರೆ’ ಎಂದರು ಮೀರಾ ಡೋಲುಯಿ. ಬೆಳಿಗ್ಗೆಯೇ ಮನೆ ಬಿಟ್ಟು ಹೊರಟು ಸುರೀ ತಲುಪಿದ್ದ ಅವರು, ಉದ್ದದ ಸಾಲಿನಲ್ಲಿ ನಿಂತು ನಾಲ್ಕನೇ ಬಾರಿಗೆ ದಾಖಲೆಗಳನ್ನು ಸಲ್ಲಿಸಿದ್ದರು. ‘ನ್ಯಾಯಮಂಡಳಿ ನನ್ನ ಮನವಿ ತಿರಸ್ಕರಿಸಿದರೆ, ನಾನು ಎಲ್ಲಿಗೆ ಹೋಗುತ್ತೇನೋ ಗೊತ್ತಿಲ್ಲ’ ಎಂದರು ಮೀರಾ.

ತಮ್ಮ ಮತದಾನದ ಹಕ್ಕನ್ನು ಕಸಿದುಕೊಂಡದ್ದರ ವಿರುದ್ಧ ದಾಖಲೆ ಸಲ್ಲಿಸಲು ದುಬ್ರಾಜ್‌ಪುರದಿಂದ ಬಂದಿದ್ದ ತನುಜಾ ಬೀಬಿ, ದಾಖಲೆ ಸಲ್ಲಿಸಿದವರೇ ಕುಸಿದುಬಿದ್ದರು. ‘ಸರತಿ ಸಾಲಿನಲ್ಲಿ ನಿಂತಿದ್ದಾಗ ನನ್ನ ಹೆಂಡತಿ ಅನಾರೋಗ್ಯಪೀಡಿತಳಾದಳು’ ಎಂದು ಆಕೆಯ ಗಂಡ ಮುಕಿಂ ಶೇಖ್ ಹೇಳಿದರು. ಅವರ ಹೆಸರೂ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ‘ಆದರೆ, ನಾವು ಸರತಿ ಬಿಟ್ಟು ಹೊರಬರುವಂತಿರಲಿಲ್ಲ. ಇಲ್ಲದಿದ್ದರೆ ಅದಕ್ಕಾಗಿ ನಾವು ಮತ್ತೊಂದು ದಿನ ಬರಬೇಕಾಗುತ್ತಿತ್ತು.’

ಜೀವನ್ ಕೃಷ್ಣ ವಿಸ್ವಾಸ್ ಅವರು ತಮ್ಮ ಮಗಳು ಚಂಪಾ ಅವರೊಂದಿಗೆ ಮುಂಜಾನೆ ನಾದಿಯಾ ಜಿಲ್ಲೆಯ ಗರಾಪೋಟಾದಲ್ಲಿರುವ ತಮ್ಮ ಮನೆಯಿಂದ ಹೊರಟರು. ತಂದೆ, ಮಗಳು– ಇಬ್ಬರ ಹೆಸರುಗಳನ್ನೂ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇಬ್ಬರೂ ನಡೆದುಕೊಂಡು ಹೋಗಿ, ಆಟೊ ಹಿಡಿದು, ನಂತರ ರೈಲಿನಲ್ಲಿ ರಾಣಘಾಟ್ ತಲುಪಿದರು. ಅವರು ನ್ಯಾಯಮಂಡಳಿಯ ಮುಂದೆ ಮೇಲ್ಮನವಿ ಸಲ್ಲಿಸಲು ಮತ್ತು ತಮ್ಮ ಮತದಾನದ ಹಕ್ಕನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸುವ ಸಲುವಾಗಿ ಹೊರಟಿದ್ದರು.

ಆದರೆ, ಅವರು ನಿಗದಿತ ಸ್ಥಳ ತಲುಪುವ ಮುನ್ನವೇ ಜೀವನ್ ಹೃದಯಾಘಾತಕ್ಕೆ ಒಳಗಾದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು. ಕುಟುಂಬವನ್ನು ಪೋಷಿಸಲು ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದ 68 ವರ್ಷದ ಅವರು ತಮ್ಮ ಜೀವನದಲ್ಲಿ ಅನೇಕ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದರು. ಆದರೆ, ಕೊನೆಗೆ ಆ ಹಕ್ಕು ಕಳೆದುಕೊಂಡು ಸಾವಿಗೀಡಾದರು.

ಹೀಗೆ ಆದದ್ದು ಅವರೊಬ್ಬರಿಗೇ ಏನಲ್ಲ. ಕಳೆದ ವಾರ ಮತದಾರರ ಪಟ್ಟಿಯಿಂದ ತಮ್ಮ ಹೆಸರನ್ನು ತೆಗೆದುಹಾಕಲಾಗಿದೆ ಎಂದು ತಿಳಿದ ನಂತರ 32 ವರ್ಷದ ಅನಾರುಲ್ ಶೇಖ್ ವೀರಭೂಮಿಯ ನಲ್ಹಟಿಯಲ್ಲಿರುವ ತಮ್ಮ ಮನೆಯಲ್ಲಿ ಸತ್ತುಬಿದ್ದಿದ್ದರು. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಮಾಲ್ಡಾದ ಸಹಾಪುರದ 37 ವರ್ಷದ ಕಬಿಲ್ ಶೇಖ್ ಅವರದ್ದು ಕೂಡ ಇದೇ ಕಥೆ. ಎರಡು ವಾರಗಳಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಿದ್ದಕ್ಕೆ ಸಂಬಂಧಿಸಿದಂತೆ ಇನ್ನೂ ನಾಲ್ಕು ಸಾವುಗಳು ರಾಜ್ಯದಲ್ಲಿ ವರದಿಯಾಗಿವೆ.

ಎಸ್‌ಐಆರ್ ಪ್ರಕ್ರಿಯೆಯು ಪಶ್ಚಿಮ ಬಂಗಾಳದಲ್ಲಿ ಸುಮಾರು 220 ಜೀವಗಳನ್ನು ಬಲಿ ತೆಗೆದುಕೊಂಡಿದೆ ಎಂದು ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.



ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಎಂದು ಕೋಲ್ಕತ್ತದ ಜನರು ಪರಿಶೀಲಿಸಿದರು ಪಿಟಿಐ ಚಿತ್ರ

ಆದರೆ, ಚುನಾವಣಾ ಆಯೋಗವು ಮಮತಾ ಅವರ ಹೇಳಿಕೆಯನ್ನು ಒಪ್ಪಿಲ್ಲ.

ಇದು ಉತ್ಪ್ರೇಕ್ಷೆ ಎನ್ನುವುದು ಬಿಜೆಪಿ ವಾದ. ಮತದಾರರ ಪಟ್ಟಿಯನ್ನು ಸರಿಸಡಿಸುವ ಪ್ರಕ್ರಿಯೆಗೆ ಕಳಂಕ ತರಲು ಸಹಜ ಸಾವುಗಳನ್ನೂ ಮಮತಾ ಬ್ಯಾನರ್ಜಿ ಅವರು ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ಅದರ ಆರೋಪ.

ವಿಧಾನಸಭಾ ಚುನಾವಣೆಗೆ ಸುಮಾರು ಆರು ತಿಂಗಳ ಮೊದಲು (2025ರ ನವೆಂಬರ್ 4ರಂದು) ಚುನಾವಣಾ ಆಯೋಗ (ಇಸಿ) ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಪ್ರಾರಂಭಿಸಿತು. ಡಿಸೆಂಬರ್ 16ರಂದು ಮೊದಲ ಹಂತ ಮುಗಿಯುವ ಹೊತ್ತಿಗೆ, ಮೊದಲು 7.66 ಕೋಟಿಯಷ್ಟಿದ್ದ ಮತದಾರರ ಸಂಖ್ಯೆಯು 7.08 ಕೋಟಿಗೆ ಇಳಿದಿತ್ತು. ಸುಮಾರು 58 ಲಕ್ಷ ಹೆಸರುಗಳನ್ನು ‘ಎಎಎಸ್‌ಡಿ’ಗಳು ಎಂದು ತೆಗೆದುಹಾಕಲಾಗಿದೆ. ಅಂದರೆ, ಗೈರುಹಾಜರಾದವರು, ಸ್ಥಳಾಂತರಗೊಂಡವರು, ಮರಣ ಹೊಂದಿದವರು ಮತ್ತು ನಕಲಿ ಮತದಾರರು.

ಚುನಾವಣಾ ಆಯೋಗವು ಸತ್ತಿದ್ದಾರೆ ಎಂದು ಘೋಷಿಸಿ, ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಿದ್ದ ಹಲವರನ್ನು ತೃಣಮೂಲ ಕಾಂಗ್ರೆಸ್‌ನ ಪರಮೋಚ್ಚ ನಾಯಕಿ ಮಮತಾ ಬ್ಯಾನರ್ಜಿ ಮತ್ತು ಅವರ ಉತ್ತರಾಧಿಕಾರಿ ಎನ್ನಲಾಗುವ ಅಭಿಷೇಕ್ ಬ್ಯಾನರ್ಜಿ ಅವರು ಕರೆತಂದು ಪರೇಡ್ ನಡೆಸಿದ್ದರು.

2025ರ ಡಿ.27ರಂದು ಆರಂಭವಾದ ಎರಡನೇ ಹಂತದಲ್ಲಿ ಪರಿಷ್ಕರಣೆ ಪಟ್ಟಿಯಲ್ಲಿದ್ದ 1.67 ಕೋಟಿ ಜನರನ್ನು ವಿಚಾರಣೆಗೆ ಕರೆಯಲಾಗಿತ್ತು. ಈ ಪೈಕಿ 1.36 ಕೋಟಿ ಮಂದಿಯ ಹೆಸರುಗಳ ‘ಮಾಹಿತಿ ಹೊಂದಿಕೆ ಆಗುತ್ತಿಲ್ಲ’ ಎನ್ನಲಾಗಿದೆ. 31 ಲಕ್ಷ ಮಂದಿಯ ಹೆಸರುಗಳು 2002ರ ಪಟ್ಟಿಯೊಂದಿಗೆ ಹೊಂದಾಣಿಕೆ ಆಗದಿರುವುದು ಸೇರಿದಂತೆ ಹಲವು ರೀತಿಯ ಸಮಸ್ಯೆ ಎದುರಿಸುತ್ತಿವೆ.

ರಾಜ್ಯದಾದ್ಯಂತ ಒಂದೇ ಪರಿಸ್ಥಿತಿ; ತಮ್ಮ ಮತದಾನದ ಹಕ್ಕನ್ನು ರಕ್ಷಿಸಿಕೊಳ್ಳಲು ಅಂಗವಿಕಲರು, ಹಿರಿಯ ನಾಗರಿಕರು, ಅನಾರೋಗ್ಯ ಇರುವವರು ಸೇರಿದಂತೆ ದೊಡ್ಡ ಸಂಖ್ಯೆಯ ಜನ ಉದ್ದದ ಸಾಲುಗಳಲ್ಲಿ ನಿಲ್ಲುತ್ತಿದ್ದಾರೆ. ಅಕ್ಷರ ದೋಷಗಳು, ಕುಟುಂಬದ ಹೆಸರಿನ ತಪ್ಪು ನಮೂದು, ವಯಸ್ಸು ಮತ್ತಿತರ ವಿವರಗಳಲ್ಲಿನ ತಪ್ಪುಗಳು ‘ಮಾಹಿತಿ ಹೊಂದಿಕೆ ಆಗುತ್ತಿಲ್ಲ’ ಪಟ್ಟಿಯಲ್ಲಿ ಬರುತ್ತವೆ. ಹೀಗಾಗಿ ನೈಜ ಮತದಾರರು ಕೂಡ ಮತ್ತೆ ಮತ್ತೆ ವಿಚಾರಣೆಗೆ ಹಾಜರಾಗಬೇಕಾದ, ಹಲವು ರೀತಿಯ ದಾಖಲೆ ಸಲ್ಲಿಸಬೇಕಾದ ಮತ್ತು ವಿಸ್ತೃತ ಆಡಳಿತಾತ್ಮಕ ಪ್ರಕ್ರಿಯೆ ಅನುಸರಿಸಬೇಕಾದ ಅನಿವಾರ್ಯಕ್ಕೆ ಸಿಲುಕಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಯೋಗವು ಫೆಬ್ರುವರಿ 28ರಂದು ಮತ್ತೊಂದು ಪಟ್ಟಿ ಪ್ರಕಟಿಸಿತು. 63.66 ಲಕ್ಷ (ಶೇ 8.3ರಷ್ಟು) ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿತ್ತು. ಜತೆಗೆ, 60.6 ಲಕ್ಷ ಮತದಾರರ ಹೆಸರುಗಳು ‘ಪರಿಶೀಲನೆಯ ಹಂತ’ ವಿಭಾಗದಲ್ಲಿ ಸೇರಿಸಲಾಗಿದೆ. ಇವರು ಪಟ್ಟಿಯಲ್ಲಿರಬೇಕೇ ಬೇಡವೇ ಎನ್ನುವುದನ್ನು ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಕಲ್ಕತ್ತ ಹೈಕೋರ್ಟ್‌ನ ನ್ಯಾಯಾಂಗ ಅಧಿಕಾರಿಗಳು ಪರಿಶೀಲಿಸಲಿದ್ದಾರೆ.

‘ಪರಿಶೀಲನೆಯ ಹಂತ’ದಲ್ಲಿರುವ 27 ಲಕ್ಷಕ್ಕೂ ಅಧಿಕ ಮಂದಿಯ ಹೆಸರುಗಳು ಮತದಾರರ ಪಟ್ಟಿಯಿಂದ ತೆಗೆದುಹಾಕಲ್ಪಟ್ಟಿದ್ದು, ಮೇಲ್ಮನವಿ ಸಲ್ಲಿಸಲು ಅವರು ಅದಕ್ಕಾಗಿ (ಸುಪ್ರೀಂ ಕೋರ್ಟ್ ನಿರ್ದೇಶನದಂತೆ) ಸ್ಥಾಪಿಸಲಾಗಿರುವ 19 ನ್ಯಾಯಮಂಡಳಿಗಳ ಮುಂದೆ ಮತ್ತೆ ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಏಪ್ರಿಲ್ ಆರು ಮತ್ತು ಏಳರಂದು ಆಯೋಗವು ಈ ಮಾಹಿತಿಯನ್ನು ಪ್ರಕಟಿಸಿದೆ.

ಆದಾಗ್ಯೂ, ಚುನಾವಣೆಗೆ ನಾಮಪತ್ರ ಸಲ್ಲಿಸುವ ದಿನಾಂಕ ಅಂತ್ಯವಾಗಿರುವುದರಿಂದ ರಾಜ್ಯದ 294 ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆ ಸ್ಥಗಿತವಾಗಿದೆ. ಪಟ್ಟಿಯಿಂದ 91 ಲಕ್ಷ ಮಂದಿಯ ಹೆಸರುಗಳನ್ನು ತೆಗೆದುಹಾಕಲಾಗಿದೆ. ರಾಜ್ಯದಲ್ಲಿ ಏಪ್ರಿಲ್ 23 ಮತ್ತು 29ರಂದು ಮತದಾನ ನಡೆಯಲಿದ್ದು, ಅದಕ್ಕೂ ಮುಂಚೆಯೇ ನ್ಯಾಯಮಂಡಳಿ ಅವರ ಹೆಸರುಗಳನ್ನು ಪಟ್ಟಿಗೆ ಸೇರಿಸಿದರೂ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡದ ಹೊರತು ಅವರು ತಮ್ಮ ಹಕ್ಕು ಚಲಾಯಿಸುವುದು ಸಾಧ್ಯವಿಲ್ಲ. ರಾಜ್ಯದಲ್ಲಿ ಮತದಾರರ ಸಂಖ್ಯೆಯು 6.77 ಕೋಟಿಗೆ ಇಳಿದಿದೆ.

ಮತದಾರರ ಲೆಕ್ಕಾಚಾರ


7.66 ಕೋಟಿ
ಎಸ್‌ಐಆರ್‌ಗೂ ಮುನ್ನ ಪಶ್ಚಿಮ ಬಂಗಾಳದಲ್ಲಿದ್ದ ಮತದಾರರು


6.77 ಕೋಟಿ
ಎಸ್‌ಐಆರ್ ನಂತರ ರಾಜ್ಯದಲ್ಲಿರುವ ಮತದಾರರು

90.83 ಲಕ್ಷ
ಎಸ್‌ಐಆರ್ ನಲ್ಲಿ ತೆಗೆದು ಹಾಕಲಾದ ಮತದಾರರು

27.16 ಲಕ್ಷ
ಮತದಾರರ ಪಟ್ಟಿಯಿಂದ ಹೊರಗಿದ್ದು, ತೀರ್ಮಾನಕ್ಕೆ ಬಾಕಿ ಇರುವವರು (ಪರಿಶೀಲನೆ ಹಂತದಲ್ಲಿರುವವರು)







ಆಯೋಗ–ಟಿಎಂಸಿ ಸಂಘರ್ಷ

ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಶುರುವಾದಾಗಿನಿಂದ ಚುನಾವಣಾ ಆಯೋಗ ಮತ್ತು ಟಿಎಂಸಿ ಸಂಘರ್ಷದಲ್ಲಿ ತೊಡಗಿವೆ. ವಿಧಾನಸಭಾ ಚುನಾವಣೆಯಲ್ಲಿ ಕೇಸರಿ ಪಾಳಯಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಬಿಜೆಪಿಯ ಸೂಚನೆಯ ಅನುಸಾರ ಚುನಾವಣಾ ಆಯೋಗವು ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸುತ್ತಿದೆ ಎಂದು ಟಿಎಂಸಿ ಆರೋಪಿಸಿದೆ.

ಚುನಾವಣಾ ವೇಳಾಪಟ್ಟಿ ಪ್ರಕಟವಾದ ನಂತರ ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳನ್ನು ಆಯೋಗವು ವರ್ಗಾವಣೆ ಮಾಡಿರುವುದು ಕೂಡ ಮಾಲ್ಡಾದ ಕಲಿಯಾಚಕ್‌ನಲ್ಲಿ ಉದ್ರಿಕ್ತರ ಗುಂಪು ನ್ಯಾಯಾಂಗ ಇಲಾಖೆಯ ಅಧಿಕಾರಿಗಳನ್ನು ಕೂಡಿ ಹಾಕುವಂತಹ ಸನ್ನಿವೇಶ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದಾರೆ.

ದೆಹಲಿಯ ನಿರ್ವಚನ ಭವನದಲ್ಲಿ (ಚುನಾವಣಾ ಆಯೋಗದ ಮುಖ್ಯ ಕಚೇರಿ) ಏಪ್ರಿಲ್ 8ರಂದು ಭೇಟಿಗೆ ಹೋಗಿದ್ದಾಗ ಮುಖ್ಯ ಚುನಾವಣಾ ಆಯುಕ್ತರು ತಮಗೆ ‘ಇಲ್ಲಿಂದ ತೊಲಗಿ’ (ಗೆಟ್ ಲಾಸ್ಟ್) ಎಂದಿದ್ದಾರೆ ಎಂದು ಟಿಎಂಸಿ ಸಂಸದರು ಆರೋಪಿಸಿದ್ದು ಆಯೋಗ ಮತ್ತು ಟಿಎಂಸಿ ನಡುವಿನ ಸಂಘರ್ಷದ ಇತ್ತೀಚಿನ ಕುದಿಬಿಂದುವಾಗಿದೆ. ಈ ಆರೋಪ ಕೇಳಿಬಂದ ನಂತರ ಈ ಬಗ್ಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದ ಆಯೋಗವು, ಟಿಎಂಸಿಗೆ ತನ್ನ ನೇರ ಮಾತುಗಳೆಂದರೆ– ಈ ಬಾರಿ ಪಶ್ಚಿಮ ಬಂಗಾಳದಲ್ಲಿ ಚುನಾವಣೆಯು ‘ಹಿಂಸಾಚಾರ–ಮುಕ್ತ’, ‘ಭಯ–ಮುಕ್ತ’, ‘ಆಮಿಷ–ಮುಕ್ತ’; ನಕಲಿ ಮತದಾನ ಇಲ್ಲದೆ, ಮತಗಟ್ಟೆ ಮತ್ತು ಸಂಪನ್ಮೂಲಗಳ ತಡೆ ಇಲ್ಲದೆ ನಡೆಯಲಿದೆ– ಎಂದು ಹೇಳಿತ್ತು. ಆಯೋಗದ ಈ ಪೋಸ್ಟ್‌ನಲ್ಲಿರುವ ಅಂಶಗಳು ‘ಪಶ್ಚಿಮ ಬಂಗಾಳದಲ್ಲಿ ಚುನಾವಣೆಯಲ್ಲಿ ಗೆಲ್ಲಲು ಟಿಎಂಸಿಯು ಇದೇ ರೀತಿ ಮಾಡುತ್ತಾ ಬಂದಿದೆ’ ಎಂದು ಬಿಜೆಪಿ ಹಿಂದಿನಿಂದಲೂ ಮಾಡುತ್ತಾ ಬಂದಿರುವ ಆರೋಪವನ್ನೇ ಪ್ರತಿಧ್ವನಿಸುವಂತಿತ್ತು.

2021ರ ಚುನಾವಣೆಯಲ್ಲಿ 3.28 ಕೋಟಿ ಮತಗಳನ್ನು (47.9 %) ಪಡೆಯುವ ಮೂಲಕ ಟಿಎಂಸಿಯು 294 ಸ್ಥಾನಗಳಲ್ಲಿ 213 ಸ್ಥಾನಗಳನ್ನು ಗೆದ್ದಿತ್ತು. ಬಿಜೆಪಿಯು 2.63 ಕೋಟಿ (38.1 %) ಮತಗಳನ್ನು ಪಡೆದು 77 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಎಸ್‌ಐಆರ್ ಪ್ರಕ್ರಿಯೆಯಲ್ಲಿ 91 ಲಕ್ಷ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದ್ದು, ಇದು 2021ರದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವಿನ 65 ಲಕ್ಷ ಮತಗಳ ವ್ಯತ್ಯಾಸಕ್ಕಿಂತ ಹೆಚ್ಚಿದೆ.

ನಂದಿಗ್ರಾಮದ ನಿವಾಸಿಗಳಲ್ಲಿ ಶೇ 25ರಷ್ಟು ಮುಸ್ಲಿಮರಿದ್ದಾರೆ. ಆದರೆ, ನ್ಯಾಯಾಂಗದ ಅಧಿಕಾರಿಗಳು ನಡೆಸಿರುವ ಮತದಾರರ ಪಟ್ಟಿ ಪರಿಶೀಲನೆಯ ನಂತರ ಮತದಾರರ ಪಟ್ಟಿಯಿಂದ ತೆಗೆದುಹಾಕಿದ ಹೆಸರುಗಳಲ್ಲಿ ಶೇ 95ರಷ್ಟು ಮುಸ್ಲಿಮರು ಇದ್ದಾರೆ ಎಂಬ ಸಂಗತಿ ಕೋಲ್ಕತ್ತದ ಸಬರ್ ಇನ್‌ಸ್ಟಿಟ್ಯೂಟ್ ನಡೆಸಿರುವ ಅಧ್ಯಯನದಿಂದ ತಿಳಿದುಬಂದಿದೆ. ಭವಾನಿಪುರದ ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು ಶೇ 20ರಷ್ಟು. ಆದರೆ, ‘ಪರಿಶೀಲನೆಯ ಹಂತ’ದಲ್ಲಿದೆ (ದಾಖಲೆಗಳು ಹೊಂದದೆ ಹಾಗೂ ಇತರ ಕಾರಣಗಳಿಂದ) ಎಂಬ ಕಾರಣಕ್ಕೆ ಸದ್ಯ ಮತದಾರರ ಪಟ್ಟಿಯಿಂದ ಕೈಬಿಟ್ಟವರಲ್ಲಿ ಶೇ 40ರಷ್ಟು ಮುಸ್ಲಿಮರು. 2021ರ ಚುನಾವಣೆಯಲ್ಲಿ ಸುವೇಂದು ಅವರು ನಂದಿಗ್ರಾಮದಲ್ಲಿ ಮಮತಾ ಅವರನ್ನು ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋಲಿಸಿದ್ದರು.

2025ರ ನವೆಂಬರ್‌ನಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭಗೊಂಡ ನಂತರ ಉತ್ತರ ಮತ್ತು ದಕ್ಷಿಣ ಪರಗಣ ಜಿಲ್ಲೆಗಳಲ್ಲಿ ಗರಿಷ್ಠ ಸಂಖ್ಯೆಯ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಉತ್ತರ ಪರಗಣ ಜಿಲ್ಲೆಯಲ್ಲಿದ್ದ 83 ಲಕ್ಷ ಮತದಾರರಲ್ಲಿ 12.6 ಲಕ್ಷ ಜನರನ್ನು ಮತ್ತು ದಕ್ಷಿಣ ಪರಗಣ ಜಿಲ್ಲೆಯಲ್ಲಿ 85.94 ಲಕ್ಷ ಮತದಾರರಲ್ಲಿ 10.91 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. 2021ರಲ್ಲಿ ಉತ್ತರ ಪರಗಣ ಜಿಲ್ಲೆಯಲ್ಲಿ 33 ಕ್ಷೇತ್ರಗಳಲ್ಲಿ 24 ಮತ್ತು ದಕ್ಷಿಣ ಪರಗಣ ಜಿಲ್ಲೆಯ 31 ಕ್ಷೇತ್ರಗಳ ಪೈಕಿ 30ರಲ್ಲಿ ಟಿಎಂಸಿ ಜಯಗಳಿಸಿತ್ತು. ಬಿಜೆಪಿಯು ಉತ್ತರ ಪರಗಣದಲ್ಲಿ ಐದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದರೆ, ದಕ್ಷಿಣ ಪರಗಣದಲ್ಲಿ ಯಾವುದೇ ಕ್ಷೇತ್ರದಲ್ಲಿ ಅದು ಜಯ ಗಳಿಸಿರಲಿಲ್ಲ.

ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್ (ಶೇ 66) ಮತ್ತು ಮಾಲ್ಡಾ (ಶೇ 51) ಜಿಲ್ಲೆಗಳಲ್ಲಿ ಅತಿ ಹೆಚ್ಚು ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ. ಈ ಎರಡು ಜಿಲ್ಲೆಗಳಲ್ಲಿ ‘ಪರಿಶೀಲನೆಯ ಹಂತ’ದಲ್ಲಿರುವ ಮತದಾರರ ಸಂಖ್ಯೆಯೂ ಗಣನೀಯವಾಗಿದ್ದು, ಕ್ರಮವಾಗಿ 4.55 ಲಕ್ಷ ಮತ್ತು 2.39 ಲಕ್ಷದಷ್ಟಿದ್ದಾರೆ.

ಪಟ್ಟಿಯಿಂದ ತೆಗೆಯಲಾದ ಮತದಾರರಲ್ಲಿ 57 ಲಕ್ಷದಷ್ಟು ಮಹಿಳೆಯರಿದ್ದಾರೆ. ಇದು ಕೂಡ ಬಿಜೆಪಿಗೆ ಅನುಕೂಲಕರವಾಗಬಹುದು ಎಂದು ಹೇಳಲಾಗಿದೆ. ‘ಕನ್ಯಶ್ರೀ’ ಮತ್ತು ‘ಲಕ್ಷ್ಮಿ ಭಂಡಾರ’ದಂತಹ ಕಲ್ಯಾಣ ಯೋಜನೆಗಳ ಮೂಲಕ ಟಿಎಂಸಿಯು ಅಲ್ಪಸಂಖ್ಯಾತ ಸಮುದಾಯದ ಬಳಿಕ ಮಹಿಳೆಯರನ್ನು ತನ್ನ ಅತ್ಯಂತ ಪ್ರಬಲ ಮತಬ್ಯಾಂಕ್ ಆಗಿಸಿಕೊಂಡಿತ್ತು.

ಲಾಭದೊಂದಿಗೆ ನಷ್ಟ

ಮತದಾರರ ಪಟ್ಟಿ ಪರಿಷ್ಕರಣೆಯಿಂದ ಬಿಜೆಪಿಗೆ ಆಗುವ ಲಾಭದೊಂದಿಗೆ ನಷ್ಟವೂ ಇದೆ. ಪಟ್ಟಿಯಿಂದ ತೆಗೆದುಹಾಕಲಾಗಿರುವ ಮತದಾರರಲ್ಲಿ ದೊಡ್ಡ ಸಂಖ್ಯೆಯಲ್ಲಿ, ಬಾಂಗ್ಲಾದೇಶದಿಂದ ಭಾರತಕ್ಕೆ ವಲಸೆ ಬಂದಿರುವ ಹಿಂದೂ ಮತುವಾ ಸಮುದಾಯದವರಿದ್ದಾರೆ. ಪಶ್ಚಿಮ ಬಂಗಾಳದ 45 ಕ್ಷೇತ್ರಗಳ ಫಲಿತಾಂಶದಲ್ಲಿ ಈ ಸಮುದಾಯದವರು ನಿರ್ಣಾಯಕವಾಗಿದ್ದಾರೆ.

‘ಅಕ್ರಮ ವಲಸಿಗ ಮುಸ್ಲಿಮರನ್ನು ಪತ್ತೆ ಹಚ್ಚಿ ಅವರನ್ನು ಗಡಿಪಾರು ಮಾಡುವ ಉದ್ದೇಶದಿಂದ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಲಾಗುತ್ತಿದೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ. ಆದರೆ, ಇಲ್ಲಿಗೆ ನಿರಾಶ್ರಿತರಾಗಿ ಬಂದಿರುವ ಹಿಂದೂ ಮತುವಾ ಸಮುದಾಯದವರನ್ನು ಅವರು ಈಗ ಯಾಕೆ ಗುರಿಯಾಗಿಸಿದ್ದಾರೆ ಎಂದು ಪ್ರಶ್ನಿಸುತ್ತಾರೆ ಸಮುದಾಯದ ನಾಯಕ ನವೀನ್ ವಿಶ್ವಾಸ್. ಕೆಲವು ವರ್ಷಗಳ ಹಿಂದೆ ನವೀನ್ ಅವರು ರಾಜಾರ್‌ಹಟ್‌ನ ನ್ಯೂ ಟೌನ್‌ನಲ್ಲಿರುವ ತಮ್ಮ ಪುಟ್ಟ ಮನೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರಿಗೆ ಆತಿಥ್ಯ ನೀಡಿದ್ದರು. ‘ನಾವು ರಾಜ್ಯ ಮತ್ತು ಕೇಂದ್ರದ ಬಿಜೆಪಿ ನಾಯಕರ ನಡೆಯಿಂದ ನಿರಾಸೆಹೊಂದಿದ್ದೇವೆ’ ಎಂದು ಹೇಳುತ್ತಾರೆ ಅವರು.

‘ಪಟ್ಟಿಯಿಂದ ಕೈಬಿಟ್ಟ 91 ಲಕ್ಷ ಮತದಾರರಲ್ಲಿ 57 ಲಕ್ಷ ಜನರು ಹಿಂದೂಗಳು, 31 ಲಕ್ಷ ಮುಸ್ಲಿಮರು’ ಎಂದು ಹೇಳುತ್ತವೆ ಟಿಎಂಸಿ ಮೂಲಗಳು. ಹಿಂದೂಗಳನ್ನು ರಕ್ಷಿಸಲು ಮತದಾರರ ಪಟ್ಟಿ ಪರಿಷ್ಕರಣೆ ಅಗತ್ಯ ಎಂದು ಬಿಜೆಪಿ ಹೇಳಿತ್ತು. ಆದರೆ ಎಸ್‌ಐಆರ್ ಪಶ್ಚಿಮ ಬಂಗಾಳದ ಹಿಂದೂಗಳಿಗೆ ಹೆಚ್ಚು ಗಾಸಿ ಉಂಟುಮಾಡಿದೆ’ ಎಂದು ಆಡಳಿತಾರೂಢ ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳುತ್ತಾರೆ.

‘ಮತದಾರರ ಪಟ್ಟಿಯಿಂದ ಹೊರಬಿದ್ದಿರುವ ಜನರಿಗೆ ನಾವು ಕಾನೂನು ನೆರವನ್ನು ನೀಡಿದ್ದೇವೆ. ಎಸ್‌ಐಆರ್ ಪ್ರಕ್ರಿಯೆಯು ಜನರನ್ನು ತೀವ್ರ ಸಂಕಟಕ್ಕೆ ದೂಡಿದ್ದು, ಅಂತಿಮವಾಗಿ ಇದು ಬಿಜೆಪಿಗೆ ಹಾನಿ ಮಾಡಲಿದೆ’ ಎಂದು ಅಲೀಪುರದುವಾರ್ ಜಿಲ್ಲೆಯಲ್ಲಿ ಪಕ್ಷದ ಚುನಾವಣಾ ಸಿದ್ಧತೆಗಳನ್ನು ನೋಡಿಕೊಳ್ಳುತ್ತಿರುವ ಟಿಎಂಸಿ ರಾಜ್ಯಸಭಾ ಸದಸ್ಯ ಪ್ರಕಾಶ್ ಚಿಕ್ ಬರೇಕ್ ಅವರು ನುಡಿಯುತ್ತಾರೆ.

ಕೂಚ್ ಬಿಹಾರ್ ಜಿಲ್ಲೆಯ ದಿನ್ಹಾಟಾ, ಮಥಾಭಂಗಾ ಮತ್ತು ಮೇಖಲೀಗಂಜ್... ಈ ಮೂರು ಉಪವಿಭಾಗಗಳು ಎಸ್‌ಐಆರ್‌ನಿಂದ ಅತಿ ಹೆಚ್ಚು ತೊಂದರೆಗೆ ಒಳಗಾಗಿವೆ. ಈ ಉಪವಿಭಾಗಗಳ ಕೆಲವು ಪ್ರದೇಶಗಳು ಬಾಂಗ್ಲಾದೇಶದೊಂದಿಗೆ ಗಡಿಹೊಂದಿವೆ. ಇಲ್ಲೆಲ್ಲ ಮತದಾರರ ಪಟ್ಟಿ ಪರಿಷ್ಕರಣೆ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿದೆ. ಭಾರತ ಮತ್ತು ಬಾಂಗ್ಲಾದೇಶದ ನಡುವೆ 2015ರಲ್ಲಿ ನಡೆದ ಒಪ್ಪಂದದ ಅಡಿಯಲ್ಲಿ 162 ಭೂಪ್ರದೇಶಗಳನ್ನು ವಿನಿಮಯ ಮಾಡಿಕೊಂಡ ನಂತರ, ಆ ಪ್ರದೇಶದಲ್ಲಿದ್ದವರಿಗೆ ಭಾರತದ ಪೌರತ್ವ ನೀಡುವ ಭರವಸೆ ನೀಡಲಾಗಿತ್ತು. ಈ ಪ್ರದೇಶದ ನಿವಾಸಿಗಳು, 2002ರ ಮತದಾರರ ಪಟ್ಟಿಯ ಬದಲಿಗೆ, 2015ರ ಮತದಾರರ ಪಟ್ಟಿಯ ಆಧಾರದಲ್ಲಿ ತಮ್ಮ ಹೆಸರುಗಳನ್ನು ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು, ಕೊನೆಯ ದಿನದಲ್ಲಿ ಪ್ರತಿ ನ್ಯಾಯಮಂಡಳಿಯು ಕೈಗೊಳ್ಳುವ ನಿರ್ಧಾರವನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು ಎಂದು ನ್ಯಾಯಾಲಯ ಹೇಳುತ್ತಿಲ್ಲ ಎಂದು ಸ್ಪಷ್ಟಪಡಿಸಿದೆ. ಆದರೆ, ಆದೇಶವು ನಿಗದಿತ ದಿನಾಂಕದ ಬಳಿಕವೂ ವಿಸ್ತರಣೆಯಾದರೆ, ಪೂರಕ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಕಾರ್ಯ ಸಾಧುವಾಗಲಾರದು.

‘ಇಂತಹ ಹಕ್ಕುಗಳನ್ನು ಶಾಶ್ವತವಾಗಿ ಕೊನೆಗಾಣಿಸಲು ಸಾಧ್ಯವಿಲ್ಲ’ ಎಂದು ಹೇಳಿದ್ದ ನ್ಯಾಯಾಲಯ, ಅವರಿಗೆ ಒಟ್ಟಾಗಿ ಮತದಾನದ ಹಕ್ಕುಗಳನ್ನು ನಿರಾಕರಿಸುವುದು ‘ತೀವ್ರ ದಬ್ಬಾಳಿಕೆಯ ಸನ್ನಿವೇಶ’ ಸೃಷ್ಟಿಸಬಹುದು ಎಂದು ಎಚ್ಚರಿಸಿತ್ತು. ಮತದಾರರ ಪಟ್ಟಿಯಲ್ಲಿ ಹೆಸರಿಗೆ ಸಂಬಂಧಿಸಿದ ಸಮಸ್ಯೆಯನ್ನು ಇತ್ಯರ್ಥಪಡಿಸಲು ಹೊಸ ದಾಖಲೆಗಳನ್ನು ಪರಿಗಣಿಸಲು ನ್ಯಾಯಾಲಯವು ಮೇಲ್ಮನವಿ ನ್ಯಾಯಮಂಡಳಿಗೆ ಅನುಮತಿ ನೀಡಿತ್ತು. ಆದರೆ, ದಾಖಲೆಗಳ ವಿಶ್ವಾಸಾರ್ಹತೆಯನ್ನು ಪರಿಶೀಲಿಸಿದ ನಂತರವಷ್ಟೇ ಪರಿಗಣಿಸಬೇಕು ಎಂದೂ ಹೇಳಿತ್ತು.

ಪೂರಕ ಮಾಹಿತಿ: ನವದೆಹಲಿಯಿಂದ ಆಶೀಶ್ ತ್ರಿಪಾಠಿ ಮತ್ತು ಡಾರ್ಜಿಲಿಂಗ್‌ನಿಂದ ಸುಮಿತ್ ಪಾಂಡೆ)

ಮತದಾನದ ಹಕ್ಕನ್ನು ಪ್ರಕ್ರಿಯೆಯೇ ಮೀರಿದಾಗ...

• ಎಸ್.ವೈ.ಖುರೇಷಿ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿದಂತೆ ಉಂಟಾಗಿರುವ ವಿವಾದವು ಒಂದು ಮೂಲಭೂತ ಪ್ರಶ್ನೆ ಏಳುವಂತೆ ಮಾಡಿದೆ: ಪರಿಷ್ಕರಣೆ ಪ್ರಕ್ರಿಯೆಯು ಮತದಾರನಾಗಿ ನೋಂದಣಿ ಮಾಡಲು ಇರುವ ಶಾಸನಬದ್ಧ ಮತ್ತು ಸಾಂವಿಧಾನಿಕ ಹಕ್ಕನ್ನು ಮೀರಬಹುದೇ?

ಈ ಪ್ರಶ್ನೆಗೆ ಉತ್ತರವು ಆಡಳಿತಾತ್ಮಕ ಕ್ರಮದಲ್ಲಿಲ್ಲ, ಬದಲಿಗೆ ಕಾನೂನಿನಲ್ಲಿಯೇ ಇದೆ.

1950ರ ಜನ ಪ್ರಾತಿನಿಧ್ಯ ಕಾಯ್ದೆಯು ಇದಕ್ಕೊಂದು ಚೌಕಟ್ಟು ನೀಡುತ್ತದೆ. ಕಾಯ್ದೆಯ ಸೆಕ್ಷನ್ 21(1) ಈ ಬಗ್ಗೆ ಸ್ಪಷ್ಟವಾಗಿ ವಿವರಿಸುತ್ತದೆ: ಪ್ರತಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ ನಂತರ ಅದು ತಕ್ಷಣದಿಂದಲೇ ಜಾರಿಗೆ ಬರುತ್ತದೆ. ಅದು ಪ್ರಾಯೋಗಿಕ ಅಥವಾ ಸಾಂದರ್ಭಿಕವಾಗಿ ಮಾಡಿಕೊಂಡ ವ್ಯವಸ್ಥೆ ಅಲ್ಲ. ಪಟ್ಟಿ ಒಮ್ಮೆ ಪ್ರಕಟವಾಯಿತು ಎಂದಾದರೆ, ಅದು ಕಾನೂನಾತ್ಮಕವಾಗಿ ಜಾರಿಯಲ್ಲಿರುತ್ತದೆ ಮತ್ತು ಚುನಾವಣೆಯಲ್ಲಿ ಮತ ಚಲಾಯಿಸುವ ಮತದಾರನ ಹಕ್ಕನ್ನು ಕಾನೂನುಬದ್ಧಗೊಳಿಸುತ್ತದೆ.

ಇದೇ ಕಾಯ್ದೆಯ ಸೆಕ್ಷನ್ 21(3), ಯಾವುದೇ ಕ್ಷೇತ್ರ ಅಥವಾ ಅದರ ಯಾವುದೇ ಭಾಗದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡುತ್ತದೆ. ಲೋಪರಹಿತವಾಗಿ ನಿಖರ ಮತ್ತು ಸಮಗ್ರವಾದ ಮತದಾರರ ಪಟ್ಟಿಯನ್ನು ಖಾತರಿ ಪಡಿಸುವುದಕ್ಕಾಗಿ ಆಯೋಗವು ಈ ಅಧಿಕಾರವನ್ನು ಆಗಾಗ ಬಳಸುತ್ತಿರುತ್ತದೆ. ಹಾಗಿದ್ದರೂ, ಈ ಸೆಕ್ಷನ್‌ನ ನಿಬಂಧನೆಗಳನ್ನು ಅದರಲ್ಲಿರುವ ಷರತ್ತುಗಳೊಂದಿಗೇ ಓದಬೇಕು. ಅದು ಅತ್ಯಂತ ಮುಖ್ಯ. ‘ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಸಂಬಂಧ ಆದೇಶ ನೀಡುವ ಸಂದರ್ಭದಲ್ಲಿ ಇರುವ ಮತದಾರರ ಪಟ್ಟಿಯು, ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಚಾಲ್ತಿಯಲ್ಲಿರುತ್ತದೆ’ ಎಂದು ಈ ಸೆಕ್ಷನ್ ಹೇಳುತ್ತದೆ.

ಇದರ ಅರ್ಥ ತುಂಬಾ ಸ್ಪಷ್ಟ. ವಿಶೇಷ ಪರಿಷ್ಕರಣೆಯು ನಡೆಯುತ್ತಿರುವಾಗಲೂ ಹಾಲಿ ಮತದಾರರ ಪಟ್ಟಿಯು ರದ್ದಾಗುವುದಿಲ್ಲ. ಪರಿಷ್ಕರಣೆ ಪ್ರಕ್ರಿಯೆ ಮುಕ್ತಾಯಗೊಂಡು ಅಂತಿಮ ಪಟ್ಟಿ ಪ್ರಕಟಗೊಳ್ಳುವವರೆಗೂ ಅದಕ್ಕೆ ಕಾನೂನು ಮಾನ್ಯತೆ ಇರುತ್ತದೆ.

ಕಾನೂನುಬದ್ಧ ಮಾನ್ಯತೆಯ ಮುಂದುವರಿಕೆ ಆಕಸ್ಮಿಕವಲ್ಲ. ಆಡಳಿತಾತ್ಮಕ ಪ್ರಕ್ರಿಯೆ ನಡೆಯುತ್ತಿರುವಾಗಲೂ ಮತದಾನ ಮಾಡುವ ಹಕ್ಕಿಗೆ ಧಕ್ಕೆಯಾಗಬಾರದು ಎಂಬುದನ್ನು ಖಾತ್ರಿಪಡಿಸುವ ಶಾಸಕಾಂಗದ ಉದ್ದೇಶವನ್ನು ಇದು ಪ್ರತಿಬಿಂಬಿಸುತ್ತದೆ. ಪರಿಷ್ಕರಣೆ ಪ್ರಕ್ರಿಯೆಯು ಮತದಾರರ ಪಟ್ಟಿಯನ್ನು ಸುಧಾರಿಸುವುದೇ ವಿನಾ, ಅದನ್ನು ಅಮಾನತು ಮಾಡುವುದಲ್ಲ.

ಕಾಯ್ದೆಯ 23ನೇ ಸೆಕ್ಷನ್ ಮತದಾರ ಹಕ್ಕನ್ನು ಇನ್ನಷ್ಟು ರಕ್ಷಿಸುತ್ತದೆ. ಪಟ್ಟಿಯಲ್ಲಿ ಹೆಸರು ಸೇರಿಸುವುದು ಅಥವಾ ತೆಗೆಯುವ ವಿಚಾರದಲ್ಲಿ ಯಾವುದೇ ವ್ಯತಿರಿಕ್ತ ನಿರ್ಧಾರ ಕೈಗೊಳ್ಳುವುದಕ್ಕೂ ಮೊದಲು ಮತದಾರರ ಹೆಸರು ನೋಂದಣಿ ಅಧಿಕಾರಿಯು ಸಂಬಂಧಿಸಿದ ಮತದಾರನಿಗೆ ತನ್ನ ಅಹವಾಲು ಸಲ್ಲಿಸಲು ಅವಕಾಶ ನೀಡಬೇಕು ಎಂದು ಈ ಸೆಕ್ಷನ್ ಹೇಳುತ್ತದೆ. ಇದು ಸಹಜ ನ್ಯಾಯದ ತತ್ವಗಳ ಶಾಸನಬದ್ಧ ಅಭಿವ್ಯಕ್ತಿಯಾಗಿದೆ.

ಒಟ್ಟಾಗಿ ನೋಡಿದರೆ, ಈ ನಿಬಂಧನೆಗಳು ಸ್ಪಷ್ಟ ಕಾನೂನು ಚೌಕಟ್ಟನ್ನು ರೂಪಿಸುತ್ತವೆ; ಮೊದಲನೆಯದಾಗಿ, ಅಂತಿಮ ಪ್ರಕಟಣೆಯ ನಂತರ ಮತದಾರರ ಪಟ್ಟಿಯು ಜಾರಿಗೆ ಬರುತ್ತದೆ. ಎರಡನೆಯದಾಗಿ, ವಿಶೇಷ ಸಮಗ್ರ ಪರಿಷ್ಕರಣೆಗೆ ಆದೇಶ ಮಾಡಿದರೂ, ಅದರ ಪ್ರಕ್ರಿಯೆ ಮುಗಿಯುವವರೆಗೂ ಚಾಲ್ತಿಯಲ್ಲಿರುವ ಪಟ್ಟಿಯೇ ಜಾರಿಯಲ್ಲಿರುತ್ತದೆ. ಮೂರನೆಯದಾಗಿ, ಯಾವುದೇ ಮತದಾರನ ಹೆಸರನ್ನು ಪಟ್ಟಿಯಿಂದ ಕೈಬಿಡುವ ಮುನ್ನ ತಮ್ಮ ಮತದಾನದ ಹಕ್ಕನ್ನು ಸಮರ್ಥಿಸಿಕೊಳ್ಳಲು ಅವರಿಗೆ ಅವಕಾಶ ನೀಡಬೇಕು.

ಈ ದಿಸೆಯಲ್ಲಿ, ತಮ್ಮ ಅರ್ಜಿ ವಿಚಾರಣೆಗೆ ಬಾಕಿ ಇರುವಾಗ ಅರ್ಹ ನಾಗರಿಕರು ಮತದಾನ ಮಾಡಲು ಸಾಧ್ಯವಾಗದೇ ಹೋದರೆ ಅಥವಾ ಮೇಲ್ಮನವಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗದಿದ್ದರೆ, ಅದು ಕಾನೂನಿನ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಅರ್ಜಿ ಬಾಕಿ ಇರುವುದು ಮತದಾರರ ಹೆಸರು ಕೈಬಿಡಲು ಕಾರಣವಾಗುವುದಿಲ್ಲ. ಅದೇ ರೀತಿ ಆಡಳಿತಾತ್ಮಕ ವಿಳಂಬವೂ ಸಾಂವಿಧಾನಿಕ ಹಕ್ಕನ್ನು ದುರ್ಬಲಗೊಳಿಸಬಾರದು.

ನಿಜ, ಕಾನೂನು ಖಚಿತತೆ ಇರಬೇಕು ಎನ್ನುತ್ತದೆ. ಆದರೆ, ಹಕ್ಕಿನ ಮುಂದುವರಿಕೆ ಮತ್ತು ನ್ಯಾಯಸಮ್ಮತತೆಗೂ ಅದು ಸಮಾನ ಒತ್ತು ನೀಡುತ್ತದೆ. ಇವೆರಡರ ನಡುವೆ ಸಮತೋಲನವು ಮುಖ್ಯವಾಗುತ್ತದೆ. ಜನರ ಭಾಗೀದಾರಿಕೆಗೆ ಸಂಬಂಧಿಸಿದ ಅಪಾಯಗಳಿಗಿಂತ ಪ್ರಕ್ರಿಯಾತ್ಮಕ ಪರಿಪೂರ್ಣತೆಯೇ ಮುಖ್ಯ ಎಂದು ಚುನಾವಣಾ ವ್ಯವಸ್ಥೆಯು ಪರಿಗಣಿಸಿದರೆ, ಕಾನೂನು ದುರ್ಬಲಗೊಂಡಂತಾಗುತ್ತದೆ. ಸಂವಿಧಾನದ 326ನೇ ವಿಧಿಯು ಮತದಾರರಾಗಿ ನೋಂದಣಿ ಮಾಡಿಕೊಳ್ಳುವ ಹಕ್ಕನ್ನು ಜನರಿಗೆ ನೀಡುತ್ತದೆ. ಮತದಾರರ ಪಟ್ಟಿಗೆ ಸಂಬಂಧಿಸಿದ ನಿಯಮಗಳನ್ನು ಒಳಗೊಳ್ಳುವಿಕೆಗೆ ತಕ್ಕಂತೆ ವ್ಯಾಖ್ಯಾನಿಸಬೇಕೇ ವಿನಾ ಹೊರಗಿಡುವಿಕೆಗೆ ತಕ್ಕಂತೆ ಅಲ್ಲ.


ಪರಿಷ್ಕರಣೆಯು ಅಗತ್ಯ. ಆದರೆ, ಈ ಪ್ರಕ್ರಿಯೆಯು ಹಕ್ಕನ್ನೇ ಮೊಟಕುಗೊಳಿಸುವಂತಿದ್ದರೆ, ಪ್ರಕ್ರಿಯೆಯನ್ನು ನಿಲ್ಲಿಸಬೇಕು ಮತ್ತು ತಪ್ಪನ್ನು ಸರಿಪಡಿಸಿಕೊಳ್ಳಬೇಕು.

ಮತದಾರರ ಪಟ್ಟಿಯು ಕೇವಲ ಒಂದು ಆಡಳಿತಾತ್ಮಕ ದಾಖಲೆ ಅಲ್ಲ. ಇದು ಪ್ರಜಾಪ್ರಭುತ್ವದ ಸಹಭಾಗಿ ವ್ಯವಸ್ಥೆಯ ಹೆಬ್ಬಾಗಿಲು. ಪರಿಷ್ಕರಣೆ ಮಾಡುವಾಗಲೂ, ಈ ಬಾಗಿಲು ತೆರೆದೇ ಇರಬೇಕು ಎಂದು ಕಾನೂನು ಹೇಳುತ್ತದೆ.

ಲೇಖಕ: ಚುನಾವಣಾ ಆಯೋಗದ ನಿವೃತ್ತ ಮುಖ್ಯ ಆಯುಕ್ತ ಮತ್ತು ‘ಆ್ಯನ್ ಅನ್‌ಡಾಕ್ಯುಮೆಂಟೆಡ್ ವಂಡರ್– ದ ಮೇಕಿಂಗ್ ಆಫ್ ದ ಗ್ರೇಟ್ ಇಂಡಿಯನ್ ಎಲೆಕ್ಷನ್’ ಕೃತಿಯ ಕರ್ತೃ

ಮುಸ್ಲಿಂ, ಮತುವಾ ಬಾಹುಳ್ಯದ ಪ್ರದೇಶಗಳಲ್ಲಿ ಮತದಾರರ ಸಂಖ್ಯೆ ಗಣನೀಯ ಇಳಿಕೆ

- ಉತ್ತರ 24 ಪರಗಣ ಮತ್ತು ದಕ್ಷಿಣ 24 ಪರಗಣ ಜಿಲ್ಲೆಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮತದಾರರು ಪಟ್ಟಿಯಿಂದ ಹೊರಬಿದ್ದಿದ್ದಾರೆ
- ಮತುವಾ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ 24 ಪರಗಣ ಮತ್ತು ನಾದಿಯಾ ಜಿಲ್ಲೆಗಳಲ್ಲಿ ಗಮನಾರ್ಹ ಸಂಖ್ಯೆಯ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ
- ಕೋಲ್ಕತ್ತ ಉತ್ತರ ಮತ್ತು ಕೋಲ್ಕತ್ತ ದಕ್ಷಿಣದಲ್ಲಿ ಗರಿಷ್ಠ ಪ್ರಮಾಣದಲ್ಲಿ ಮತದಾರರ ಕುಸಿತವಾಗಿದೆ
- ಮತದಾರರ ಪಟ್ಟಿಯಿಂದ ತೆಗೆದುಹಾಕಿದವರಲ್ಲಿ ಹಿಂದೂಗಳು ಶೇ 63 ಮತ್ತು ಮುಸ್ಲಿಮರು ಶೇ 34ರಷ್ಟಿದ್ದಾರೆ. ಆದರೆ, ಜನಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯ ಹೊಂದಿರುವ ಪಾಲನ್ನು ಗಮನಿಸಿದಾಗ, ಮುಸ್ಲಿಮರ ಮೇಲೆ ಹೆಚ್ಚು ಪರಿಣಾಮ ಬೀರಿದಂತೆ ಕಾಣುತ್ತದೆ
- ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್ ಮ್ತು ಮಾಲ್ಡಾ ಜಿಲ್ಲೆಗಳಲ್ಲಿ, ಮಾಹಿತಿಗಳ ಹೊಂದಾಣಿಕೆಯಾಗದೆ ಮತದಾನ ಮಾಡಲು ಅರ್ಹತೆ ಪಡೆಯದೆ ಪಟ್ಟಿಯಿಂದ ತೆಗೆದುಹಾಕಲಾದ ಮತದಾರರ ಸಂಖ್ಯೆ ಗರಿಷ್ಠವಾಗಿದೆ



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಜಯಂತಿಗೆ ಸಿದ್ಧತೆ



ನಾಗ್ಪುರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ವ್ಯಕ್ತಿಯೊಬ್ಬರು ಭಾನುವಾರ ಸ್ವಚ್ಛ ಮಾಡಿದರು

‘ತುಕ್ಡೆ ತುಕ್ಡೆ ಗ್ಯಾಂಗ್‌ಗೆ ಟಿಎಂಸಿ ಬೆಂಬಲ’ 8

ಮಾತುಕತೆ ವಿಫಲ: ತಪ್ಪದ ತಲ್ಲಣ

ಇಸ್ಲಾಮಾಬಾದ್: ಯಾವುದೇ ಒಪ್ಪಂದಕ್ಕೆ ಬಾರದ ಅಮೆರಿಕ ಹಾಗೂ ಇರಾನ್

ಇಸ್ಲಾಮಾಬಾದ್ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷಕ್ಕೆ ಅಂತ್ಯ ಹಾಡುವ ಸಂಬಂಧ ಅಮೆರಿಕ ಮತ್ತು ಇರಾನ್ ನಡುವೆ ಶನಿವಾರ ಸುದೀರ್ಘ 21 ಗಂಟೆ ನಡೆದ ಸಂಧಾನ ಮಾತುಕತೆ ವಿಫಲವಾಗಿದೆ.

ಈ ಬೆಳವಣಿಗೆ ಪಶ್ಚಿಮ ಏಷ್ಯಾದ ಸುರಕ್ಷತೆ, ಜಾಗತಿಕ ಇಂಧನ ಮಾರುಕಟ್ಟೆ ಹಾಗೂ ದೇಶ ದೇಶಗಳ ನಡುವಿನ ಸಂಬಂಧದ ಮೇಲೆ ದೂರಗಾಮಿ ಪರಿಣಾಮ ಬೀರಲಿರುವ ಕಾರಣ, ಇಸ್ಲಾಮಾಬಾದ್‌ನಲ್ಲಿ ನಡೆದ ಈ ಸಭೆ ಮೇಲೆ ಇಡೀ ಜಗತ್ತಿನ ಗಮನ ಕೇಂದ್ರೀಕೃತವಾಗಿತ್ತು.

‘ಅಣ್ವಸ್ತ್ರ ಕಾರ್ಯಕ್ರಮದಿಂದ ಇರಾನ್ ಹಿಂದೆ ಸರಿಯಬೇಕು ಎಂಬುದು ಮಾತುಕತೆಯ ಮುಖ್ಯ ಅಂಶವಾಗಿತ್ತು. ಆದರೆ, ಈ ಕಾರ್ಯಕ್ರಮವನ್ನು ಕೈಬಿಡಲು ಇರಾನ್ ಒಪ್ಪಲಿಲ್ಲ’ ಎಂದು ಅಮೆರಿಕ ನಿಯೋಗದ ನೇತೃತ್ವ ವಹಿಸಿದ್ದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಭಾನುವಾರ ಹೇಳಿದ್ದಾರೆ.

ಹೀಗಾಗಿ, ಶಾಂತಿ ಒಪ್ಪಂದ ಏರ್ಪಡದೇ ಉಭಯ ದೇಶಗಳ ನಿಯೋಗಗಳು ಪಾಕಿಸ್ತಾನದಿಂದ ನಿರ್ಗಮಿಸಿವೆ. ▶10

‘ವಿಪರೀತ ಬೇಡಿಕೆ ಸಂಧಾನ ವಿಫಲ’

‘ಅಮೆರಿಕ ನಿಯೋಗ ಮುಂದಿಟ್ಟ ವಿಪರೀತವಾದ ಬೇಡಿಕೆಗಳಿಂದಾಗಿಯೇ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆ ವಿಫಲವಾಯಿತು’ ಎಂದು ಇರಾನ್ ಪ್ರತಿಕ್ರಿಯಿಸಿದೆ.

ಯಾವುದೇ ರಾಜತಾಂತ್ರಿಕ ಪ್ರಕ್ರಿಯೆ ಯಶಸ್ಸು ಕಾಣಲು ಹಲವು ಕಾರಣಗಳಿರುತ್ತವೆ. ಎದುರು ಕಡೆಯವರು ಸಂಧಾನದ ವಿಚಾರವಾಗಿ ಎಷ್ಟು ಗಂಭೀರವಾಗಿದ್ದಾರೆ ಹಾಗೂ ಪ್ರಾಮಾಣಿಕತೆ ಹೊಂದಿದ್ದಾರೆ? ಅಗತ್ಯಕ್ಕಿಂತ ಹೆಚ್ಚು ಮತ್ತು ಕಾನೂನುಬಾಹಿರ ಬೇಡಿಕೆಗಳನ್ನು ಮುಂದಿಡದೇ ಅವರು ಎಷ್ಟು ಸಂಯಮ ತೋರುತ್ತಾರೆ ಎಂಬಂತಹ ಅಂಶಗಳನ್ನು ಯಶಸ್ಸು ಅವಲಂಬಿಸಿದೆ ಎಂದು ಇರಾನ್‌ನ ವಿದೇಶಾಂಗ ಸಚಿವಾಲಯ ಹೇಳಿದೆ. ▶10

‘ಹೊರ್ಮುಜ್’ಗೆ ದಿಗ್ಬಂಧನ



ವಾಷಿಂಗ್ಟನ್ (ಎಎಫ್‌ಪಿ): ‘ಹೊರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ ಎಲ್ಲ ಹಡಗುಗಳಿಗೆ ತಕ್ಷಣದಿಂದಲೇ ದಿಗ್ಬಂಧನ ವಿಧಿಸಲಾಗುವುದು’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

‘ಇರಾನ್‌ಗೆ ಟೋಲ್ ಶುಲ್ಕ ಪಾವತಿಸಿ, ಅಂತರರಾಷ್ಟ್ರೀಯ ಜಲಮಾರ್ಗದ ಮೂಲಕ ಸಾಗುತ್ತಿರುವ ಎಲ್ಲ ಹಡಗುಗಳ ಸಂಚಾರಕ್ಕೆ ತಡೆಯೊಡ್ಡಲಾಗುವುದು’ ಎಂದು ತಿಳಿಸಿದ್ದಾರೆ.

‘ಈ ಮಾರ್ಗದಲ್ಲಿ ಶಾಂತಿಯುತವಾಗಿ ಸಾಗುವ ಯಾವುದೇ ಹಡಗಿನ ಮೇಲೆ ದಾಳಿ ನಡೆಸಿದರೆ, ಅಂತಹವರನ್ನು ನರಕಕ್ಕೆ ದೂಡಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ. ▶10

ಕಚ್ಚಾ ತೈಲ ದರ ಬ್ಯಾರಲ್‌ಗೆ 140 ಡಾಲರ್?

ಬೆಂಗಳೂರು: ಇರಾನ್ -ಅಮೆರಿಕದ ನಡುವೆ ನಡೆದ ಮಾತುಕತೆಯು ವಿಫಲಗೊಂಡಿರುವುದು ಕಚ್ಚಾ ತೈಲದ ಬೆಲೆಯ ಮೇಲೆ ಪರಿಣಾಮ ಬೀರಬಹುದು ಎಂಬ ಭೀತಿ ವ್ಯಕ್ತವಾಗಿದೆ.

ಇಂಧನ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಲಭ್ಯತೆಯಲ್ಲಿ ತಕ್ಷಣಕ್ಕೆ ಸಮಸ್ಯೆ ಸೃಷ್ಟಿಯಾದಂತೆ ಕಾಣುತ್ತಿದ್ದು, ಯುರೋಪಿನ ‘ಉತ್ತರ ಸಮುದ್ರ’ ಪ್ರದೇಶದಲ್ಲಿ ವರ್ತಕರು ಮುಂದಿನ ವಾರಗಳಲ್ಲಿ ಪೂರೈಕೆ ಆಗುವ ಕಚ್ಚಾ ತೈಲಕ್ಕೆ ಪ್ರತಿ ಬ್ಯಾರಲ್‌ಗೆ 140 ಡಾಲರ್‌ವರೆಗೂ ಹಣ ಪಾವತಿ ಮಾಡಿದ್ದಾರೆ ಎಂದು ಕೆಲವು ವರದಿಗಳು ಹೇಳಿವೆ. ▶10





ಇರಾನ್ ಅಣ್ವಸ್ತ್ರಗಳನ್ನು ಹೊಂದಬಾರದು ಎಂಬುದೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮುಖ್ಯ ಗುರಿ. ನಾವು ಅಣ್ವಸ್ತ್ರ ತಯಾರಿಸುವುದಿಲ್ಲ ಹಾಗೂ ಅಣ್ವಸ್ತ್ರ ತಯಾರಿಕೆಗೆ ಅಗತ್ಯವಿರುವ ಸಾಧನಗಳನ್ನು ಹೊಂದುವುದಿಲ್ಲ ಎಂಬ ಬಗ್ಗೆ ಇರಾನ್ ಬದ್ಧತೆ ಪ್ರದರ್ಶಿಸಬೇಕು. ಇದು ಇರಾನ್‌ಗೆ ನಾವು ನೀಡುವ ಕೊನೆಯ ಮತ್ತು ಅತ್ಯುತ್ತಮ ಅವಕಾಶ. ಈ ಪ್ರಸ್ತಾವದೊಂದಿಗೆ ನಾವು ನಿರ್ಗಮಿಸುತ್ತೇವೆ

ಜೆ.ಡಿ.ವ್ಯಾನ್ಸ್, ಅಮೆರಿಕ ಉಪಾಧ್ಯಕ್ಷ



ಇರಾನ್ ನಿಯೋಗ ಪ್ರಗತಿಪರ ವಿಚಾರಗಳನ್ನೇ ಪ್ರಸ್ತಾಪಿಸಿತ್ತು. ಎದುರು ಪಕ್ಷದವರು ನಮ್ಮ ವಿಶ್ವಾಸ ಗಳಿಸುವಲ್ಲಿ ವಿಫಲರಾದರು. ದೇಶದ ರಕ್ಷಣೆಗಾಗಿ 40 ದಿನ ನಡೆಸಿದ ಹೋರಾಟವನ್ನು ವ್ಯರ್ಥ ಮಾಡಲು ನಾವು ಸಿದ್ಧರಿರಲಿಲ್ಲ. ಅಂತಿಮವಾಗಿ ಇರಾನ್‌ನ ವಿಶ್ವಾಸ ಗಳಿಸಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುವುದು ಅಮೆರಿಕಕ್ಕೆ ಬಿಟ್ಟದ್ದು

ಮೊಹಮ್ಮದ್ ಬಾಖಿರ್ ಖಾಲೀಬಾಫ್, ಇರಾನ್ ಸಂಸತ್‌ನ ಸ್ಪೀಕರ್

ಮಿದುಳು ಚೈತನ್ಯಕ್ಕೆ ‘ಚಿಪ್’ ಸಾಧನ

ಪಾರ್ಶ್ವವಾಯು ಪರಿಣಾಮದಿಂದ ಅಂಗಾಂಗಗಳ ಸ್ವಾಧೀನ ಕಳೆದು ಕೊಂಡವರು ಮರಳಿ ಚೈತನ್ಯ ಪಡೆಯುವುದಕ್ಕೆ ಪೂರಕವಾಗಿ ಮಿದುಳಿನ ಸಂಸ್ಕರಣಾ ವ್ಯವಸ್ಥೆ ಎನ್ನುವ ‘ಚಿಪ್’ ಮಾದರಿಯ ಪುಟ್ಟ ಸಾಧನ ಬರಲಿದೆ. ವಿವರ 4

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಗಾನ ಮುಗಿಸಿದ ಆಶಾ ಭೋಸ್ಲೆ

ಪ್ರಜಾವಾಣಿ ವಾರ್ತೆ



1933-2026

ಮುಂಬೈ: ತಮ್ಮ ಸುಶ್ರಾವ್ಯ ಶಾರೀರದಿಂದ ಭಾರತೀಯ ಚಿತ್ರರಂಗದ ಹಿನ್ನೆಲೆ ಗಾಯನವನ್ನು ಶ್ರೀಮಂತಗೊಳಿಸಿದ್ದ, ಖ್ಯಾತ ಹಿನ್ನೆಲೆ ಗಾಯಕಿ ಆಶಾ ಭೋಸ್ಲೆ ಅವರು ಮುಂಬೈನಲ್ಲಿ ಭಾನುವಾರ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು. ಎಂಟು ದಶಕಗಳ ವೃತ್ತಿ ಜೀವನದಲ್ಲಿ ಹಿಂದಿ ಸೇರಿ ಹಲವು ಭಾರತೀಯ ಭಾಷೆಗಳಲ್ಲಿ 12 ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡುವ ಮೂಲಕ ದೇಶದ ಜನರ ಮನಸೂರೆಗೊಂಡಿದ್ದ ಆಶಾ ತಮ್ಮ ಗಾನ ಯಾನ ಮುಗಿಸಿದ್ದಾರೆ. ▶9

ನುಡಿನಮನ ▶7

‘ನಸೀರ್ ರಾಜೀನಾಮೆ ಕೊಡಬಹುದು’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಚಿಕ್ಕಮಗಳೂರು: ‘ನನ್ನ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಇನ್ನೂ ರಾಜೀನಾಮೆ ಕೊಟ್ಟಿಲ್ಲ. ಕೊಡಬಹುದು ಅಂದು ಕೊಂಡಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಸಿಗದ ಕಾರಣಕ್ಕೆ ಪ್ರಚಾರದಿಂದ ದೂರ ಉಳಿದಿದ್ದ ನಸೀರ್ ಅಹಮದ್ ಅವರು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಹೈಕಮಾಂಡ್ ತಾಕೀತು ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಈ ರೀತಿ ಪ್ರತಿಕ್ರಿಯಿಸಿದರು.

ಎನ್.ಆರ್. ಪುರ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಭಾನುವಾರ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ದಾವಣಗೆರೆ ಉಪ ಚುನಾವಣೆಯ ಉಸ್ತುವಾರಿಗೆ ಹೈಕಮಾಂಡ್ ಎಐಸಿಸಿ ಕಾರ್ಯದರ್ಶಿಯನ್ನು ನೇಮಿಸಿತ್ತು. ಅವರು ನೀಡಿದ ವರದಿ ಮೇಲೆ ಹೈಕಮಾಂಡ್ ಕ್ರಮ ತೆಗೆದುಕೊಳ್ಳುತ್ತಿದೆ’ ಎಂದರು.

‘ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವುದು ಖಂಡಿತ. ತಲೆದಂಡಕ್ಕೆ ಚುನಾವಣೆಯ ಸೋಲು, ಗೆಲುವು ಕಾರಣವಲ್ಲ’ ಎಂದರು. ▶8

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಸ್ವಯಂ ಕಲಿಕೆಗೆ ಎ.ಐ ಆ್ಯಪ್

ಬೆಂಗಳೂರು: ಬಿ.ಎ, ಬಿ.ಕಾಂ, ಬಿ.ಎಸ್ಸಿ, ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಿರಿಯ ವಿಜ್ಞಾನಿ ಎಸ್.ಎಸ್. ಅಯ್ಯಂಗಾರ್ ಅವರು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧಾರಿತ ಎ.ಐ ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ.

ಇದು ಎ.ಐ ತಂತ್ರಜ್ಞಾನದ ಮೂಲಕ ಸ್ವಯಂ ಕಲಿಕೆಗೆ ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿದೆ ಎಂದು ಎಸ್.ಎಸ್. ಅಯ್ಯಂಗಾರ್ ತಿಳಿಸಿದ್ದಾರೆ.

ಆ್ಯಪ್ ಅನ್ನು ವಾಟ್ಸ್‌ಆ್ಯಪ್, ಡೆಸ್ಕ್‌ಟಾಪ್‌ಗಳಲ್ಲಿ ಬಳಕೆ ಮಾಡಬಹುದು. 1990ರಲ್ಲಿ ಅಟನಾಮಸ್ ಇಂಟೆಲಿಜೆನ್ಸ್ ರೋಬೊ ತಯಾರಿಸಲಾಯಿತು. ವಿಮಾನಯಾನದಲ್ಲಿ ಎ.ಐ.ತಂತ್ರಜ್ಞಾನ ಬಳಸಲಾಗಿದೆ. ಎ.ಐಗೆ ಲಕ್ಷಾಂತರ ಅಕ್ಷರ ಜೋಡಣೆ ಮಾಡಿ, ರಾಜ್ಯ ಶಿಕ್ಷಣ ಇಲಾಖೆಗೆ ಬಿ.ಎ. ಬಿಕಾಂ, ಬಿಎಸ್ಸಿ, ಎಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳು ಸ್ವಯಂ ಎ.ಐ. ತಂತ್ರಜ್ಞಾನ ಕಲಿಕೆಗೆ ಪ್ರೋತ್ಸಾಹ ದೊರೆಯಲಿದೆ. ಗ್ರಾಮೀಣ ಪ್ರದೇಶದ ಪ್ರತಿಭಾವಂತ ಯುವ ಸಮೂಹ ಎ.ಐ. ತಂತ್ರಜ್ಞಾನ ಬಳಕೆ ಮಾಡುವುದರಿಂದ ಅವರಿಗೆ ಉತ್ತಮ ಶಿಕ್ಷಣ ಪಡೆಯಲು ಸಾಧ್ಯವಾಗಲಿದೆ ಎಂದು ವಿವರಿಸಿದ್ದಾರೆ.

ಎಐ ತಂತ್ರಜ್ಞಾನದ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿಯಾಗಲಿದೆ. ವಿದ್ಯಾರ್ಥಿಗಳು ಕೇಳುವ ಎಲ್ಲ ಪ್ರಶ್ನೆಗಳಿಗೆ ಉತ್ತರ ದೊರೆಯಲಿದೆ. ವಿಷಯವನ್ನು ತಂತ್ರಜ್ಞಾನದ ಮೂಲಕ ಪಡೆಯಬಹುದು ಎಂದು ಎಸ್.ಎಸ್.ಐ.ಟಿ ಶಿಕ್ಷಣ ಸಂಸ್ಥೆಯ ಹಿರಿಯ ಸಮಾಲೋಚಕ ಕೈಲಾಶ್ ಶಿವನಗಿ ಮಾಹಿತಿ ನೀಡಿದರು.

‘ರಾಜ್‌ಕುಮಾರ್ ಪ್ರಜಾ ಪ್ರತಿಭೆ’

ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ‘ಕಥಾನಾಯಕನ ಕಥೆ’ ಆತ್ಮಚರಿತ್ರೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿನಯವಂತಿಕೆ ಜತೆಗೆ ಜೀವನದುದ್ದಕ್ಕೂ ಜಾತ್ಯತೀತರಾಗಿ ಬದುಕಿದ ಡಾ.ರಾಜ್‌ಕುಮಾರ್ ಅವರು ರಾಜಪ್ರತಿಭೆ ಮಾತ್ರವಲ್ಲ, ಅವರೊಬ್ಬ ಪ್ರಜಾಪ್ರತಿಭೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ.ರಾಜ್‌ಕುಮಾರ್ ಅಧ್ಯಯನ ಪೀಠ ಹೊರತಂದಿರುವ ಅವರ ಆತ್ಮಚರಿತ್ರೆ ‘ಕಥಾನಾಯಕನ ಕಥೆ’ಯನ್ನು ಭಾನುವಾರ ಇಲ್ಲಿ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ರಾಜ್‌ಕುಮಾರ್ ಅವರ ಕುರಿತು ನೂರಾರು ಕೃತಿಗಳು ಪ್ರಕಟವಾಗಿವೆ. ಇಷ್ಟೊಂದು ಪುಸ್ತಕಗಳು ದೇಶದ ಯಾವುದೇ ನಟನ ಬಗ್ಗೆ ಹೊರ ಬಂದಿಲ್ಲ. ವಿಭಿನ್ನ ಪಾತ್ರಗಳು, ಅಭಿನಯದ ಮೂಲಕ ಜನ ಮಾನಸದಲ್ಲಿ ಬೇರೂರಿರುವ ಪ್ರಜಾಪ್ರತಿಭೆಗೆ ಹಂಪಿ ವಿಶ್ವವಿದ್ಯಾಲಯ ದೊಡ್ಡ ಗೌರವವನ್ನೇ ನೀಡಿದೆ’ ಎಂದು ತಿಳಿಸಿದರು.

‘ಚಿತ್ರರಂಗದಲ್ಲಿ ಉತ್ತುಂಗ ಸ್ಥಾನಕ್ಕೆ ಏರಿದರೂ ಆಗಾಗ ಟೀಕೆಗಳು ವ್ಯಕ್ತವಾಗುತ್ತಿದ್ದವು. ಟೀಕೆಗಳನ್ನೆಲ್ಲಾ ಸಮಚಿತ್ತತೆಯಿಂದ ಎದುರಿಸಿದರು. ಕಿಡಿಗೇಡಿಗಳ ಮಾತಿಗೆ ನಮ್ಮ ಪ್ರತಿಭೆಯಿಂದಲೇ ಉತ್ತರ ಕೊಟ್ಟರು. ಅವರು ಅನುಭವಿಸಿದ ಸಂಕಟಗಳು, ಸವಾಲುಗಳನ್ನು ಕಥಾ ನಾಯಕನ ಕಥೆಯಲ್ಲಿ ಬಿಡಿಸಿಡಲಾಗಿದೆ. ಅಲ್ಲದೇ ಗಂಧದ ಗುಡಿ ಸಹಿತ ಹಲವು ಚಿತ್ರಗಳ ಸಂದರ್ಭದ ಘಟನೆಗಳ ಸತ್ಯವನ್ನು ಅನಾವರಣಗೊಳಿಸಲಾಗಿದೆ’ ಎಂದರು.

ನಟ ಶಿವರಾಜ್‌ಕುಮಾರ್ ಮಾತನಾಡಿ, ‘ಅಪ್ಪಾಜಿ ಭೌತಿಕವಾಗಿ ದೂರವಾಗಿ ಇಪ್ಪತ್ತು ವರ್ಷ ಆಗಿರಬಹುದು. ಈಗಲೂ ನಮ್ಮೊಂದಿಗೆ ಇದ್ದಾರೆ ಎನ್ನುವ ಭಾವನೆ ಎಲ್ಲರಲ್ಲೂ ಇದೆ. ಕಡಿಮೆ ಶಿಕ್ಷಣ ಪಡೆದರೂ ವಿಶ್ವವಿದ್ಯಾಲಯಗಳಲ್ಲಿ ಅವರ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಹೇಳಿದರು.

ನಿರ್ದೇಶಕ ಭಾರ್ಗವ ಮಾತನಾಡಿ, ‘ರಾಜ್‌ಕುಮಾರ್ ಅವರೊಂದಿಗೆ ಬಂಗಾರದ ಮನುಷ್ಯ, ಬಬ್ರುವಾಹನ ಸಹಿತ 12 ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಅವರು ಓದಿದ್ದು ಮೂರನೇ ತರಗತಿಯಾದರೂ ಎಂತಹ ಕಷ್ಟದ ಸಂಭಾಷಣೆಯನ್ನೂ ಸುಸೂತ್ರವಾಗಿ ಹೇಳುತ್ತಿದ್ದರು. ಸರಸ್ವತಿ ಅವರಿಗೆ ಅಷ್ಟರ ಮಟ್ಟಿಗೆ ಒಲಿದಿದ್ದಳು’ ಎಂದು ತಿಳಿಸಿದರು.

ನಟ ಗುರುದತ್, ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಕುಲಪತಿ ಬಿ.ರಮೇಶ್, ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಸಚಿವ ವಿರೂಪಾಕ್ಷ ಪೂಜಾರಹಳ್ಳಿ, ಡೀನ್ ಪಿ.ಮಹದೇವಯ್ಯ, ರಾಜ್‌ಕುಮಾರ್ ಅಧ್ಯಯನ ಪೀಠದ ಸಂಚಾಲಕ ಎ.ಎಸ್. ಪ್ರಭಾಕರ್ ಉಪಸ್ಥಿತರಿದ್ದರು.

ಹಂಪಿ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿರುವ ರಾಜ್‌ಕುಮಾರ್ ಕಲಾ ಬದುಕಿನ ಛಾಯಾಚಿತ್ರಗಳ ಗ್ಯಾಲರಿಯನ್ನು ವರ್ಚ್ಯುವಲ್ ರೂಪದಲ್ಲಿ ಅನಾವರಣಗೊಳಿಸಲಾಯಿತು.



ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ರಾಜ್‌ಕುಮಾರ್ ಅಧ್ಯಯನ ಪೀಠ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್‌ಕುಮಾರ್ ಅವರ ಆತ್ಮಚರಿತ್ರೆ ‘ಕಥಾನಾಯಕನ ಕಥೆ’ ಜನಾರ್ಪಣೆಗೊಳಿಸಲಾಯಿತು. ಎ.ಎಸ್.ಪ್ರಭಾಕರ್, ವಿರೂಪಾಕ್ಷ ಪೂಜಾರಹಳ್ಳಿ. ಬಿ.ರಮೇಶ್, ಬರಗೂರು ರಾಮಚಂದ್ರಪ್ಪ, ಶಿವರಾಜ್ ಕುಮಾರ್, ಭಾರ್ಗವ, ಜಯಮಾಲಾ, ಡಿ.ವಿ.ಪರಶಿವಮೂರ್ತಿ ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

‘ರಾಜ್ ಶತಮಾನೋತ್ಸವ ಭವನಕ್ಕೆ ಜಾಗ ಕೊಡಿ’

ಕರ್ನಾಟಕ ಚಲನ ಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಮಾತನಾಡಿ, ‘ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಯಲಹಂಕದಲ್ಲಿಯೇ ಎರಡು ಎಕರೆ ಜಮೀನು ನೀಡಿದರೆ ಅಲ್ಲಿಯೇ ಡಾ.ರಾಜ್‌ಕುಮಾರ್ ಅವರ ಶತಮಾನೋತ್ಸವ ಭವನ ನಿರ್ಮಿಸಬಹುದು’ ಎಂದು ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಿ.ವಿ. ಪರಶಿವಮೂರ್ತಿ ಮಾತನಾಡಿ, ‘ರಾಜ್‌ಕುಮಾರ್ ಅಧ್ಯಯನ ಪೀಠಕ್ಕೆ ಯಲಹಂಕ ಬಳಿ 11 ಎಕರೆ ಜಾಗ ನೀಡಲಾಗಿತ್ತು. ಅದು ವಕ್ಫ್‌ಗೆ ಸೇರಿದ ಜಾಗ ಎನ್ನುವ ವಿವಾದ ಉಂಟಾಗಿದ್ದರಿಂದ ಕೈಬಿಡಲಾಯಿತು. ನಮಗೆ 1ರಿಂದ 2 ಎಕರೆ ಜಾಗ ಸಿಕ್ಕರೆ ಸಾಕು. ಅಲ್ಲಿಯೇ ಅಧ್ಯಯನ ಪೀಠ ರೂಪಿಸಬಹುದು. ಇನ್ನಷ್ಟು ಕಾರ್ಯಕ್ರಮಗಳನ್ನು ಅಧ್ಯಯನ ಪೀಠದಿಂದ ಮಾಡಲು ಸಹಕಾರಿ ಆಗಲಿದ್ದು, ಇದಕ್ಕೆ ಬೆಂಬಲ ನೀಡಬೇಕು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಕ್ಯಾನ್ಸರ್ ಚಿಕಿತ್ಸೆ ಜೇಬಿಗೆ ಹೊರೆಯಾಗದಿರಲಿ’

ಬೆಂಗಳೂರು: ‘ಕ್ಯಾನ್ಸರ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಖಾಸಗಿ ಕ್ಯಾನ್ಸರ್ ಆಸ್ಪತ್ರೆಗಳು ಬಡ–ಮಧ್ಯಮ ವರ್ಗದವರ ಜೇಬಿಗೆ ಹೊರೆಯಾಗದಂತೆ ಚಿಕಿತ್ಸಾ ಸೌಲಭ್ಯ ಒದಗಿಸಬೇಕು’ ಎಂದು ಮಾಜಿ ಸಚಿವ ಟಿ.ಬಿ.ಜಯಚಂದ್ರ ಅಭಿಪ್ರಾಯಪಟ್ಟರು.

ಹೊಂಬೇಗೌಡನಗರದಲ್ಲಿ ನಿರ್ಮಾಣವಾಗಿರುವ ಎಆರ್‌ಸಿ ಕ್ಯಾನ್ಸರ್ ಆಸ್ಪತ್ರೆ ಭಾನುವಾರ ಕಾರ್ಯಾರಂಭ ಮಾಡಿತು. ಈ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಬದಲಾದ ಜೀವನಶೈಲಿ ಸೇರಿದಂತೆ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಇದೇ ಅವಧಿಯಲ್ಲಿ ಚಿಕಿತ್ಸಾ ಪದ್ಧತಿಯಲ್ಲಿಯೂ ಹೊಸ ಹೊಸ ಆವಿಷ್ಕಾರಗಳಾಗುತ್ತಿವೆ. ಗುಣಮಟ್ಟದ ವೈದ್ಯಕೀಯ ಚಿಕಿತ್ಸೆಗಳು ಎಲ್ಲರಿಗೂ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಬಡ–ಮಧ್ಯಮ ವರ್ಗದವರಿಗೆ ಅಗತ್ಯ ಸೇವಾಸೌಲಭ್ಯ ಒದಗಿಸುವುದು ಖಾಸಗಿ ಕ್ಯಾನ್ಸರ್ ಆಸ್ಪತ್ರೆಗಳ ಗುರಿಯಾಗಬೇಕು. ಸೇವೆಯನ್ನೇ ಆದ್ಯತೆಯನ್ನಾಗಿಸಿಕೊಂಡಿರುವ ಖಾಸಗಿ ಆಸ್ಪತ್ರೆಗಳಿಗೂ ಸರ್ಕಾರ ನೆರವು ನೀಡಬೇಕು’ ಎಂದು ಹೇಳಿದರು.

ಎಆರ್‌ಸಿ ಕ್ಯಾನ್ಸರ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಶ್ರೀಹರಿ ಶಾಪುರ್, ‘ಕ್ಯಾನ್ಸರ್ ಚಿಕಿತ್ಸೆಯಲ್ಲಿನ ಕಂದಕ ನಿವಾರಣೆಗೆ ಈ ಆಸ್ಪತ್ರೆಯನ್ನು ಸ್ಥಾಪಿಸಲಾಗಿದೆ. ಸಮಾಜದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮಧ್ಯಮ ವರ್ಗದವರಿಗೆ ಕೈಗೆಟುಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸುವುದು ಈ ಆಸ್ಪತ್ರೆಯ ಗುರಿಯಾಗಿದೆ. ಬಿಪಿಎಲ್ ಕುಟುಂಬದ ಸದಸ್ಯರು ಹಾಗೂ ಆಯುಷ್ಮಾನ್ ಯೋಜನೆ ಫಲಾನುಭವಿಗಳಿಗೆ ಇಲ್ಲಿ ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತದೆ’ ಎಂದರು.

ಆಸ್ಪತ್ರೆಯ ಅಧ್ಯಕ್ಷ ಡಾ.ದಿನೇಶ್ ಮಾವಿನಹಳ್ಳಿ, ವೈದ್ಯಕೀಯ ನಿರ್ದೇಶಕಿ ಡಾ.ಸಂಸ್ಕೃತಿ ಪಿ. ಮೂರ್ತಿ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಗೆ ರಾಷ್ಟ್ರಮಟ್ಟದ ಮೂರು ಪ್ರಶಸ್ತಿ



ಬೆಂಗಳೂರು: ಬ್ರ್ಯಾಂಡಿಂಗ್, ಅವತಾರ್ 4.0 ತಂತ್ರಜ್ಞಾನ, ಮಾನವ ಸಂಪನ್ಮೂಲ ಮತ್ತು ಆರೋಗ್ಯ ಯೋಜನೆಗಳಿಗಾಗಿ ಕೆಎಸ್‌ಆರ್‌ಟಿಸಿ ರಾಷ್ಟ್ರಮಟ್ಟದ ಮೂರು ಪ್ರಶಸ್ತಿಗಳನ್ನು ಪಡೆದಿದೆ.

ಅವತಾರ್‌ನಿಂದಾಗಿ ಟಿಕೆಟ್ ಕಾಯ್ದಿರಿಸುವುದು, ನೈಜ ಸಮಯ ಮತ್ತು ಆಸನದ ಮಾಹಿತಿ, ನಗದುರಹಿತ ಯುಪಿಐ ಪಾವತಿ ಸುಲಭವಾಗಿದೆ. ಈ ಕ್ರಮಕ್ಕಾಗಿ ತಂತ್ರಜ್ಞಾನದ ಅತ್ಯುತ್ತಮ ಬಳಕೆ ಪ್ರಶಸ್ತಿ ನೀಡಲಾಗಿದೆ. ಮಾನವ ಸಂಪನ್ಮೂಲದ ಉತ್ತಮ ಬಳಕೆ ಮತ್ತು ಆರೋಗ್ಯ ಕಾಪಾಡಿಕೊಳ್ಳಲು ರೂಪಿಸಿರುವ ಯೋಜನೆಗಳಿಗಾಗಿ ಮಾನವ ಸಂಪನ್ಮೂಲ ಪ್ರಶಸ್ತಿ, ಅಂಬಾರಿ ಉತ್ಸವ, ಪಲ್ಲಕ್ಕಿ, ಐರಾವತ ಕ್ಲಬ್ ಕ್ಲಾಸ್ 2.0 , ಅಶ್ವಮೇಧ ಬಸ್‌ಗಳು ಹೆಚ್ಚು ಜನಮನ್ನಣೆ ಗಳಿಸಲು ಕಾರಣವಾದ ಬ್ರ್ಯಾಂಡಿಂಗ್‌ಗಾಗಿ ಅತ್ಯುತ್ತಮ ಗ್ರಾಹಕ ಸ್ವಾಧೀನ ಮತ್ತು ಧಾರಣ ವರ್ಗದಲ್ಲಿ ಪ್ರಶಸ್ತಿ ನೀಡಲಾಗಿದೆ.

ನವದೆಹಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿಗಮದ ಪರವಾಗಿ ಪುತ್ತೂರು ವಿಭಾಗೀಯ ನಿಯಂತ್ರಣಾಧಿಕಾರಿ ಎಂ.ಪಿ. ಶ್ರೀಹರಿ ಬಾಬು, ಹಾಸನ ವಿಭಾಗೀಯ ನಿಯಂತ್ರಣಾಧಿಕಾರಿ ಎಸ್.ಎಸ್. ದಶರಥ್ ಪ್ರಶಸ್ತಿ ಸ್ವೀಕರಿಸಿದರು.

ಕೆಟ್ಟು ನಿಂತ ಲಾರಿಗೆ ಮತ್ತೊಂದು ಲಾರಿ ಡಿಕ್ಕಿ: ಕ್ಲೀನರ್ ಸಾವು

ಸಾದಪ್ಪನಹಳ್ಳಿಗೇಟ್(ಹೊಸಕೋಟೆ): ಇಲ್ಲಿಗೆ ಸಮೀಪದ ದಾಬಸ್ ಪೇಟೆ ಮತ್ತು ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಶನಿವಾರ ತಡರಾತ್ರಿ 1 ಗಂಟೆ ಸುಮಾರಿಗೆ ಕೆಟ್ಟು ನಿಂತಿದ್ದ ಲಾರಿಗೆ ಮತ್ತೊಂದು ಲಾರಿ ಡಿಕ್ಕಿ ಹಿಂದಿನಿಂದ ಹೊಡೆದು ಕ್ಲೀನರ್ ಮೃತಪಟ್ಟಿದ್ದು, ಎರಡೂ ಲಾರಿಗಳ ಚಾಲಕರು ಗಾಯಗೊಂಡಿದ್ದಾರೆ.

ಮಹಾರಾಷ್ಟ್ರದ ಮಹದೇವ ಶಿಂಧೆ(29) ಮೃತರು. ತಮಿಳುನಾಡು ಮೂಲದ ಗೋಕುಲ್, ಧನಶೇಖರ್ ಗಾಯಗೊಂಡು ಹೊಸಕೋಟೆ ನಗರದ ಸಿಲಿಕಾನ್ ಸಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೊಸಕೋಟೆಯಿಂದ ದೇವನಹಳ್ಳಿ ಕಡೆ ಹೋಗುತ್ತಿದ್ದ ಲಾರಿಯೊಂದು ಕೆಟ್ಟು ಸಾದಪ್ಪನ ಹಳ್ಳಿ ಬಳಿ ನಿಂತಿತ್ತು. ಹೆದ್ದಾರಿಯ ಬದಿಯಲ್ಲಿ ನಿಲ್ಲಿಸಿ ರಿಪೇರಿ ಮಾಡಲಾಗುತ್ತಿತ್ತು. ಇದೇ ಮಾರ್ಗದಲ್ಲಿ ಸರಕು ತುಂಬಿಕೊಂಡು ಬಂದ ಮತ್ತೊಂದು ಲಾರಿಯ ಕೆಟ್ಟು ನಿಂತ ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ.

ವಸ್ತು ಸಂಗ್ರಹಾಲಯ ಪುನರಾರಂಭ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್‌ನ ನವೀಕೃತ ವೈಮಾನಿಕ ವಸ್ತು ಸಂಗ್ರಹಾಲಯವು ಸೋಮವಾರದಿಂದ (ಏಪ್ರಿಲ್ 13) ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಲಿದೆ.

2001ರಲ್ಲಿ ಆರಂಭವಾದ ಈ ಕೇಂದ್ರವು ವೈಮಾನಿಕ ಜಗತ್ತಿನ ಸಂಶೋಧನೆ ಮತ್ತು ಅಭಿವೃದ್ಧಿ, ತಯಾರಿಕೆಯಲ್ಲಿನ ಹಂತಗಳನ್ನು ವಿವರಿಸುವ ದೇಶದ ಏಕೈಕ ವಸ್ತು ಸಂಗ್ರಹಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನವೀಕರಣಕ್ಕಾಗಿ ಇದನ್ನು ಈಚೆಗೆ ಸ್ಥಗಿತಗೊಳಿಸಲಾಗಿತ್ತು.

ಹಲವು ತಿಂಗಳ ಕಾಮಗಾರಿಗಳ ನಂತರ ಇದೇ 10ರಂದು ನವೀಕೃತ ವಸ್ತು ಸಂಗ್ರಹಾಲಯವನ್ನು ಉದ್ಘಾಟಿಸಲಾಗಿದೆ.

ಆದರೆ ಸೋಮವಾರದಿಂದ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಎಚ್‌ಎಎಲ್ ಪ್ರಕಟಣೆ ತಿಳಿಸಿದೆ.

ನಗರದ ಮಾರತ್‌ಹಳ್ಳಿಯಲ್ಲಿರುವ ಎಚ್‌ಎಎಲ್ ಆವರಣದಲ್ಲಿ ಈ ಸಂಗ್ರಹಾಲಯ ಇದ್ದು, ವಾರದ ದಿನಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಸಾರ್ವಜನಿಕರ ವೀಕ್ಷಣೆಗೆ ತೆರೆದಿರುತ್ತದೆ. ಇಲ್ಲಿ ವಿವಿಧ ಮಳಿಗೆಗಳು ಮತ್ತು ರೆಸ್ಟೋರೆಂಟ್ ಸಹ ಲಭ್ಯವಿದೆ.

ಎಚ್‌ಎಎಲ್

‘ದೇಶದ ಯುವ ತಲೆಮಾರನ್ನು ಆಕರ್ಷಿಸುವ ರೀತಿಯಲ್ಲಿ ಈ ವಸ್ತು ಸಂಗ್ರಹಾಲಯವನ್ನು ರೂಪಿಸಲಾಗಿದೆ. ದೇಶಕ್ಕೆ ಎಚ್‌ಎಎಲ್ ಏನೆಲ್ಲಾ ಕೊಡುಗೆ ನೀಡಿದೆ ಎಂಬುದನ್ನು ವಿವರಿಸುವುದರ ಜತೆಗೆ, ಎಂಜಿನಿಯರಿಂಗ್ ಕೌಶಲವನ್ನೂ ಜನರಿಗೆ ಮನವರಿಕೆ ಮಾಡಿಕೊಡುವಂತೆ ಮರುವಿನ್ಯಾಸ ಮಾಡಲಾಗಿದೆ’ ಎನ್ನುತ್ತಾರೆ ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಿ.ಕೆ.ಸುನಿಲ್.

ಆಕರ್ಷಣೆಗಳು

- ಎಚ್‌ಎಎಲ್‌ನ ವಿವಿಧ ವಿಮಾನಗಳಲ್ಲಿ ಬಳಕೆಯಲ್ಲಿರುವ ‘ಹಿಂದೂಸ್ತಾನ್ ಟರ್ಬೊಫ್ಯಾನ್ ಎಂಜಿನ್–ಎಚ್‌ಟಿಎಫ್‌ಇ:25’ ಎಂಜಿನ್‌ನ ಮಾದರಿ
- ಎಚ್‌ಎಎಲ್ ಅಭಿವೃದ್ಧಿಪಡಿಸಿರುವ ಪ್ರಚಂಡ ಮತ್ತು ತೇಜಸ್ ವಿಮಾನಗಳು ಟೇಕಾಫ್ ಆಗುವ 3 ಆಯಾಮದ ವಿಡಿಯೊ ಪ್ರದರ್ಶನ
- ಎಚ್‌ಎಎಲ್ ಆರಂಭವಾದಾಗಿನಿಂದ ಈವರೆಗೆ ದೇಶಕ್ಕೆ ಅದು ನೀಡಿರುವ ಕೊಡುಗೆಗಳು, ಸಂಸ್ಥೆಯು ಅಭಿವೃದ್ಧಿಪಡಿಸಿದ ಎಂಜಿನ್/ವಿಮಾನ/ಹೆಲಿಕಾಪ್ಟರ್‌ಗಳ ವಿವರ ನೀಡುವ ‘ವಿಂಗ್ಸ್ ಆಫ್ ಭಾರತ’ ಪ್ರದರ್ಶನ. ‘ತೇಜಸ್ವಿ’ ಎಂಬ ಹಾಲೋಗ್ರಾಫಿಕ್ ಮಾನವಾಕೃತಿ ಈ ಪ್ರದರ್ಶನವನ್ನು ನಡೆಸಿಕೊಡಲಿದೆ
- ಎಚ್‌ಎಎಲ್ ಅಭಿವೃದ್ಧಿಪಡಿಸಿರುವ ವಿಮಾನಗಳು, ಹೆಲಿಕಾಪ್ಟರ್‌ಗಳು, ಎಂಜಿನ್‌ಗಳು, ವೈಮಾನಿಕ ಚಾಲನಾ ವ್ಯವಸ್ಥೆಗಳ ನೈಜ ಪ್ರತಿಕೃತಿಗಳು. ಈ ಎಲ್ಲವುಗಳ ವಿವರಗಳನ್ನು ನೀಡುವ ಡಿಜಿಟಲ್ ಪುಸ್ತಕ, ಧ್ರುವ್ ಹೆಲಿಕಾಪ್ಟರ್‌ನ ಸಿಮ್ಯುಲೇಟರ್
- **ಹೊರಾಂಗಣ ವೈಮಾನಿಕ ಉದ್ಯಾನ:** ಎಚ್‌ಎಫ್–24 ಮಾರುತ್, ಅಜೀತ್, ಲಕ್ಷ್ಯ ಯುದ್ಧವಿಮಾನಗಳು, ಲಘು ಯುದ್ಧ ವಿಮಾನ ತೇಜಸ್, ಧ್ರುವ್ ಲಘು ಹೆಲಿಕಾಪ್ಟರ್ ಮತ್ತು ಮಿಗ್–21 ಯುದ್ಧ ವಿಮಾನಗಳ ಪ್ರತಿಕೃತಿಗಳು ಈ ಉದ್ಯಾನದಲ್ಲಿ ಇವೆ
- ಮಕ್ಕಳಿಗಾಗಿ ಕಿರು ವೈಮಾನಿಕ ಪ್ರಯೋಗಾಲಯ, ರಸಪ್ರಶ್ನೆ ಕಾರ್ಯಕ್ರಮ, ಕಲಾ ವಿಭಾಗ. ಫೋಟೊಬೂತ್ ಸಹ ಇದೆ



ವಸ್ತು ಸಂಗ್ರಹಾಲಯದಲ್ಲಿರುವ ಮಾದರಿ ವೀಕ್ಷಿಸಿದ ಎಚ್‌ಎಎಲ್ ಅಧ್ಯಕ್ಷ ಡಿ.ಕೆ.ಸುನಿಲ್

ನಿಧನ ವಾರ್ತೆ

ಆರ್. ಎಲ್. ಜಯಮ್ಮ



ಬೆಂಗಳೂರು: ಮಾಜಿ ಸಚಿವ ಆರ್.ಎಲ್.ಜಾಲಪ್ಪ ಅವರ ಸಹೋದರಿ ಆರ್.ಎಲ್.ಜಯಮ್ಮ (91) ಅವರು ವಯೋಸಹಜ ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾಗಿದ್ದಾರೆ.

ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್‌ನ ಛಾಯಾಗ್ರಾಹಕರಾಗಿದ್ದ ಜಿ.ಭಗವಾನ್ ಅವರ ಪತ್ನಿಯಾದ ಜಯಮ್ಮ ಅವರಿಗೆ ಆರು ಮಂದಿ ಪುತ್ರಿಯರು, ಅಳಿಯಂದಿರು ಹಾಗೂ ಮೊಮ್ಮಕ್ಕಳಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರಾದ ದೊಡ್ಡಬಳ್ಳಾಪುರದಲ್ಲಿ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



ಹೋಟೆಲ್ ಕಾರ್ಮಿಕರ ಉದ್ಯೋಗಕ್ಕೆ ಕುತ್ತು

• ಕೆ.ಎಸ್.ಸುನಿಲ್

ಬೆಂಗಳೂರು: ವಾಣಿಜ್ಯ ಬಳಕೆ ಅನಿಲ ಪೂರೈಕೆ ಅಸ್ತವ್ಯಸ್ತವಾಗಿದ್ದು, ಹೋಟೆಲ್ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಹೋಟೆಲ್ ನಿರ್ವಹಣೆ, ಕೆಲಸಗಾರರ ಸಂಬಳದ ಖರ್ಚು ಹೊರೆಯಾಗುತ್ತಿದೆ. ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ.

ಸಣ್ಣ ಹೋಟೆಲ್‌ಗಳು, ಫಾಸ್ಟ್‌ಫುಡ್ ಸೆಂಟರ್, ಕ್ಯಾಂಟೀನ್‌ನಲ್ಲಿ ಕೆಲಸ ಮಾಡುತ್ತಿದ್ದವರಿಗೆ ತೊಂದರೆಯಾಗಿದೆ. ಫಾಸ್ಟ್‌ಫುಡ್ ಸೆಂಟರ್‌ಗಳನ್ನು ನಂಬಿ ಬದುಕು ಕಟ್ಟಿಕೊಂಡವರು ಪರದಾಡು-ತ್ತಿದ್ದಾರೆ. ಹೀಗಾಗಿ ಈ ಉದ್ಯಮವನ್ನೇ ನೆಚ್ಚಿಕೊಂಡು ಬದುಕು ಕಟ್ಟಿಕೊಂಡಿದ್ದ ಸಾವಿರಾರು ಮಂದಿ ಈಗ ದುಡಿಮೆಯ ಆಸರೆಯೇ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಇದರ ನಡುವೆ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿ ವ್ಯತ್ಯಯ ಹಾಗೂ ದರ ಹೆಚ್ಚಳ ಮಾಡಿರುವ ಕಾರಣ ಹೋಟೆಲ್‌ಗಳಲ್ಲಿ ತಿಂಡಿ–ತಿನಿಸುಗಳ ದರದಲ್ಲಿ ಶೇಕಡ 10ರಿಂದ 20ರಷ್ಟು ಹೆಚ್ಚಳವಾಗಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ.

ದುಪ್ಪಟ್ಟು ಹಣ ನೀಡಿದರೂ ಸಿಲಿಂಡರ್ ಸಿಗದ ಕಾರಣ ಹಲವು ಹೋಟೆಲ್‌ಗಳು ಬಂದ್ ಆಗಿವೆ. ಇದರ ಹೊರತಾಗಿಯೂ ಕೆಲವು ಹೋಟೆಲ್‌ಗಳು ಇಂಡಕ್ಷನ್ ಸ್ಟೌ, ಸೌದೆ ಒಲೆ, ಎಲೆಕ್ಟ್ರಿಕಲ್ ಸ್ಟೌ ಸಹಿತ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ದಿನ ದೂಡುತ್ತಿದ್ದಾರೆ. ಮೆನುವಿನಲ್ಲಿ ಕೆಲವೊಂದು ಖಾದ್ಯಗಳನ್ನು ಕಡಿತಗೊಳಿಸಿ ಸೀಮಿತ ಪ್ರಮಾಣದಲ್ಲಿ ಆಹಾರ ವಿತರಿಸಲಾಗುತ್ತಿದೆ.



ರಾಜಕುಮಾರ್ ರಸ್ತೆಯಲ್ಲಿ ಹೋಟೆಲ್ ಬಂದ್ ಆಗಿದೆ –ಪ್ರಜಾವಾಣಿ ಚಿತ್ರ

ನಗರದಲ್ಲಿ 40 ಸಾವಿರಕ್ಕೂ ಅಧಿಕ ಹೋಟೆಲ್‌ಗಳಿವೆ. ಸಾರ್ವಜನಿಕರು, ಆಟೊ–ಟ್ಯಾಕ್ಸಿ ಚಾಲಕರು, ಆನ್‌ಲೈನ್ ಡೆಲಿವರಿ ನೌಕರರು, ಕಟ್ಟಡ ನಿರ್ಮಾಣ ಕಾರ್ಮಿಕರು, ಆಸ್ಪತ್ರೆಗಳ ರೋಗಿಗಳು, ಅವಿವಾಹಿತರು, ಹಿರಿಯ ನಾಗರಿಕರು , ಪೇಯಿಂಗ್ ಗೆಸ್ಟ್‌ಗಳಲ್ಲಿ ವಾಸವಾಗಿರುವ-ವರು ನಿತ್ಯ ಹೋಟೆಲ್‌ಗಳನ್ನು ಅವಲಂಬಿ-ಸಿದ್ದಾರೆ. ಆರು ಲಕ್ಷಕ್ಕೂ ಹೆಚ್ಚು ನೌಕರರಿಗೆ ಸಮಸ್ಯೆ ಉಂಟಾಗಿದೆ.

ಬಂದ್ ಆಗಿರುವ ಹೋಟೆಲ್‌ಗಳು ಇನ್ನೂ ಬಾಗಿಲು ತೆರೆದಿಲ್ಲ. ರಾಜ್ಯದ ಜನರಷ್ಟೇ ಅಲ್ಲ, ಉತ್ತರ ಭಾರತ, ಈಶಾನ್ಯ ಭಾರತದ ಹಲವು ಜನರು ನಗರದ ಹೋಟೆಲ್ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಈಗ ಕಾರ್ಮಿಕರಿಗೆ ಕೆಲಸ ನೀಡಲಾಗದ ಸ್ಥಿತಿಗೆ ಹೋಟೆಲ್ ಮಾಲೀಕರು ತಲುಪಿದ್ದಾರೆ.

‘ಕೆಂಗೇರಿಯಲ್ಲಿ ಸಣ್ಣ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಎಲ್‌ಪಿಜಿ ಸಿಲಿಂಡರ್ ಸಿಗದ ಕಾರಣ ಬಂದ್ ಮಾಡಲಾಯಿತು. ಇನ್ನೂ ಹೋಟೆಲ್ ತೆರೆದಿಲ್ಲ. ಮೂರು ಜನ ಕೆಲಸ ಕಳೆದುಕೊಂಡಿದ್ದೇವೆ. ಸುತ್ತಮುತ್ತ-ಲಿನ ಬಡಾವಣೆಗಳಲ್ಲಿ ಹಲವು ಹೋಟೆಲ್ ಬಂದ್ ಆಗಿದ್ದು, ಅಲ್ಲಿನ ಕಾರ್ಮಿಕರು ಕೆಲಸ ಕಳೆದುಕೊಂಡು, ಬೇರೆ ಕೆಲಸಕ್ಕೆ ಹುಡುಕಾಡುತ್ತಿದ್ದಾರೆ. ಏನು ಮಾಡುವುದೋ ದಿಕ್ಕೇ ತೋಚುತ್ತಿಲ್ಲ’ ಎಂದು ಹೋಟೆಲ್ ಕಾರ್ಮಿಕ ರಮೇಶ್ ಬೇಸರ ವ್ಯಕ್ತಪಡಿಸಿದರು.

ಎರಡು ಇಡ್ಲಿ ದರ ₹50, ಈರುಳ್ಳಿ ದೋಸೆ ₹100, ಒಂದು ವಡೆ ₹25, ಕಾಫಿ–ಟೀ ದರಗಳಲ್ಲಿ ₹10ರಿಂದ ₹15ರವರೆಗೆ ಹೆಚ್ಚಳ ಮಾಡಲಾಗಿದೆ. ಊಟದ ದರವನ್ನು ₹10ರಿಂದ ₹20ರವರೆಗೆ ಹೆಚ್ಚಿಸಲಾಗಿದೆ. ಎರಡು ಪೂರಿಗೆ ₹100, ಪುಳಿಯೋಗರೆ ₹70ರಿಂದ 80 ತಲುಪಿದೆ.

ಸಣ್ಣ ಹೋಟೆಲ್‌ಗಳಲ್ಲಿ ಕಬಾಬ್ 200 ಗ್ರಾಂಗೆ ₹100 ಇದ್ದದ್ದು,ಈಗ ₹120ಕ್ಕೆ ಏರಿಕೆಯಾಗಿದೆ. ಚಿಕನ್ ಬಿರಿಯಾನಿ ದರದಲ್ಲಿ ₹20ರಿಂದ ₹30 ಹೆಚ್ಚಳ ಮಾಡಲಾಗಿದೆ. ಇದೇ ರೀತಿ ನಗರದ ಬಹುತೇಕ ಹೋಟೆಲ್‌ಗಳಲ್ಲಿ ದರ ಏರಿಕೆ ಮಾಡಲಾಗಿದೆ.

ಅಲ್ಲದೇ ಹೋಟೆಲ್‌ಗಳಲ್ಲಿ ಊಟ, ತಿಂಡಿ ಪಾರ್ಸೆಲ್ ಐಟಂಗೆ ₹5 ಹೆಚ್ಚುವರಿಯಾಗಿ ನಿಗದಿ ಮಾಡಲಾಗಿದೆ. ಮೊದಲು ₹5 ಪಡೆಯಲಾಗುತ್ತಿತ್ತು. ಈಗ ₹10ಕ್ಕೆ ಏರಿಕೆಯಾಗಿದೆ.

ಗ್ರಾಹಕರ ಇಳಿಕೆ

‘ನಿತ್ಯ ಹೋಟೆಲ್‌ಗೆ ಹತ್ತು ಸಿಲಿಂಡರ್ ಅವಶ್ಯಕತೆ ಇದೆ. ಸದ್ಯ ಐದು ಸಿಲಿಂಡರ್ ಸಿಗುತ್ತಿದೆ. ಮೆನುವಿನಲ್ಲಿ ಕಡಿತ ಮಾಡಲಾಗಿದೆ. ಹಾಗಾಗಿ ಗ್ರಾಹಕರ ಸಂಖ್ಯೆಯೂ ಕಡಿಮೆ ಆಗಿದೆ. ನಮ್ಮದೇ ಹದಿಮೂರು ಶಾಖೆಗಳಿದ್ದು, ಎಲ್ಲವನ್ನೂ ನಿಭಾಯಿಸುತ್ತಿದ್ದೇವೆ. ಎಲ್ಲದಕ್ಕೂ ಎಲೆಕ್ಟ್ರಿಕ್ ಸ್ಟೌ ಬಳಸಲು ಆಗುವುದಿಲ್ಲ. ಕೆಲವು ಕಡೆ ಸೌದೆ ಒಲೆ ಬಳಸುತ್ತಿದ್ದೇವೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಹೋಟೆಲ್ ಉದ್ಯಮಕ್ಕೆ ಸಂಕಷ್ಟ ತಪ್ಪಿದಲ್ಲ’ ಎಂದು ಕದಂಬ ಗ್ರೂಪ್ ಹೋಟೆಲ್ ಮಾಲೀಕ ರಾಘವೇಂದ್ರ ರಾವ್ ತಿಳಿಸಿದರು.

ಶೇಕಡ 25 ವ್ಯಾಪಾರ ಕಡಿಮೆ

‘ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಹೋಟೆಲ್ ವ್ಯಾಪಾರ ಶೇಕಡ 25ರಷ್ಟು ಕಡಿಮೆ ಆಗಿದೆ. ಎಲ್‌ಪಿಜಿ ಕೊರತೆ ಒಂದಡೆಯಾದರೆ, ಪ್ರವಾಸಿಗರ ಸಂಖ್ಯೆಯೂ ಕಡಿಮೆಯಾಗಿದೆ. ಏಪ್ರಿಲ್ ಎರಡನೇ ವಾರದಿಂದ ಚೇತರಿಕೆಯಾಗಬಹು-ದು ಎಂಬ ನಿರೀಕ್ಷೆ ಇದೆ. ಮೆನುವಿನಲ್ಲಿ ಖಾದ್ಯ ಕಡಿತ ಮಾಡಿರುವುದರಿಂದ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿದೆ. ಹಾಗಾಗಿ ಕಾರ್ಮಿಕರು ಕೆಲಸ ಕಳೆದು-ಕೊಂಡಿದ್ದಾರೆ’ ಎಂದು ರಾಜ್ಯ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಜಿ.ಕೆ. ಶೆಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.



ನಗರದ ಕನಕಪುರ ರಸ್ತೆಯ ಜರಗನಹಳ್ಳಿಯ ಶ್ರೀ ರಾಮಾಂಜನೇಯ ದೇವಸ್ಥಾನದಲ್ಲಿ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು –ಪ್ರಜಾವಾಣಿ ಚಿತ್ರ







ನಿತ್ಯ 19 ಸಾವಿರ ಪ್ರಕರಣ ದಾಖಲು

ನಿಯಮ ಉಲ್ಲಂಘನೆ: ಮೂರು ತಿಂಗಳಲ್ಲಿ 14.36 ಲಕ್ಷ ಪ್ರಕರಣಗಳು ದಾಖಲು

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲಿ ರಸ್ತೆಗೆ ಇಳಿಯುತ್ತಿರುವ ಹೊಸ ವಾಹನಗಳ ಸಂಖ್ಯೆ ಹೆಚ್ಚುತ್ತಿದ್ದು, ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳೂ ಅಷ್ಟೇ ವೇಗದಲ್ಲಿ ಏರಿಕೆ ಆಗುತ್ತಿವೆ. ನಗರದಲ್ಲಿ ನಿತ್ಯ ಅಂದಾಜು 19 ಸಾವಿರ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ದಾಖಲಾಗುತ್ತಿವೆ.

ಬೆಂಗಳೂರಿಗೆ 'ದಟ್ಟಣೆ ನಗರ' ಎಂಬ ಅಪಖ್ಯಾತಿ ಇದೆ. ಅದನ್ನು ಹೋಗಲಾಡಿಸಲು ಹಾಗೂ ಸುಗಮ ಸಂಚಾರಕ್ಕಾಗಿ ವಾಹನಗಳ ದಟ್ಟಣೆ ಆಧರಿಸಿ, ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ ವ್ಯವಸ್ಥೆ ಜಾರಿ ಮಾಡಲಾಗಿದೆ. ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧರಿಸಿ ಸಂಪರ್ಕರಹಿತವಾಗಿ ದಂಡ ವಿಧಿಸುವ ವ್ಯವಸ್ಥೆ ನಗರದಲ್ಲಿ ಜಾರಿಯಲ್ಲಿದೆ.

ಎ.ಐ ಆಧಾರಿತ ಕ್ಯಾಮೆರಾಗಳು ಹೆಲ್ಮೆಟ್‌ರಹಿತ ಪ್ರಯಾಣ, ಅತಿವೇಗದ ಚಾಲನೆ, ಸಿಗ್ನಲ್ ದಾಟುವುದು, ಅಡ್ಡಾದಿಡ್ಡಿ ವಾಹನ ಚಾಲನೆ, ನಿರ್ಬಂಧಿತ ರಸ್ತೆಗಳಲ್ಲಿ ವಾಹನಗಳ ನಿಲುಗಡೆಯನ್ನು ನಿಖರವಾಗಿ ಪತ್ತೆಹಚ್ಚುತ್ತಿವೆ. ಇದರ ಪರಿಣಾಮ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿ ಆಗುತ್ತಿದ್ದು, ದಂಡ ಸಂಗ್ರಹದ ಮೊತ್ತವೂ ಹೆಚ್ಚಳವಾಗುತ್ತಿದೆ.

ದಂಡದ ಪಾವತಿಯಲ್ಲಿ ರಿಯಾಯಿತಿ ಘೋಷಣೆ ಹಾಗೂ ಪರಿಣಾಮಕಾರಿ ಕ್ರಮ, ತಂತ್ರಜ್ಞಾನ ಅಳವಡಿಕೆಯಿಂದಾಗಿ 2025ರಲ್ಲಿ ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಲ್ಲಿ ₹258.16 ಕೋಟಿ ದಂಡ ಸಂಗ್ರಹವಾಗಿತ್ತು. ಇದು ಕಳೆದ ಒಂದು ದಶಕದಲ್ಲಿಯೇ ಸಂಗ್ರಹವಾದ ಅತ್ಯಧಿಕ ದಂಡದ ಮೊತ್ತ. ಈ ವರ್ಷ ಇದುವರೆಗೂ ₹24.80 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

'ಕಳೆದ ವರ್ಷ ನಗರದಲ್ಲಿ ವಿವಿಧ ಮಾದರಿಯ ಸಂಚಾರ ನಿಯಮ ಉಲ್ಲಂಘನೆಯ 69.89 ಲಕ್ಷ ಪ್ರಕರಣಗಳನ್ನು ದಾಖಲು ಮಾಡಲಾಗಿತ್ತು. ಈ ವರ್ಷ ಮೂರು ತಿಂಗಳಲ್ಲಿಯೇ 14.36 ಲಕ್ಷ ಪ್ರಕರಣಗಳು ದಾಖಲಾಗಿವೆ ಎಂದು ಸಂಚಾರ ವಿಭಾಗದ ಪೊಲೀಸರು ಸಂಗ್ರಹಿಸಿರುವ ಮಾಹಿತಿಯಿಂದ ಗೊತ್ತಾಗಿದೆ. ತಂತ್ರಜ್ಞಾನ ಆಧರಿಸಿ, ಶೇ 88 ರಷ್ಟು ಪ್ರಕರಣಗಳು (ಸಂಪರ್ಕರಹಿತ) ದಾಖಲಾಗುತ್ತಿದ್ದರೆ, ಬಾಡಿವೋರ್ನ್ ಕ್ಯಾಮೆರಾದಲ್ಲಿ ದಾಖಲಾದ ದೃಶ್ಯಾವಳಿ ಹಾಗೂ ಸಿಬ್ಬಂದಿಯ ಕಣ್ಣಿಗೆ ಗೋಚರಿಸಿದಂತೆ (ಸಂಪರ್ಕಸಹಿತ) ಶೇ 12ರಷ್ಟು ಪ್ರಕರಣಗಳು ದಾಖಲಾಗುತ್ತಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವಾಹನ ಚಾಲಕರಿಗೆ ಸಂಚಾರ ನಿಯಮಗಳ ಕುರಿತು ಜಾಗೃತಿ, ತರಬೇತಿ ಹಾಗೂ ದಂಡ ವಿಧಿಸುವ ಮೂಲಕ ಎಚ್ಚರಿಕೆ ನೀಡುತ್ತಿದ್ದರೂ ಸಂಚಾರ ನಿಯಮಗಳನ್ನು ಉಲ್ಲಂಘಿಸುವುದು ಕಡಿಮೆಯಾಗಿಲ್ಲ. ಕಚೇರಿಗೆ ಬೇಗನೇ ತಲುಪುವ, ಮನೆಗೆ ವಾಪಸ್ ಬರುವ ಧಾವಂತದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವುದು ಸಾಮಾನ್ಯವಾಗಿದೆ.

'ಬೆಳಿಗ್ಗೆ 7ರಿಂದ 11ರ ವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 10ರವರೆಗೆ ದಟ್ಟಣೆ ಅವಧಿಯಿದೆ. ಆ ಸಮಯದಲ್ಲಿ ವಾಹನಗಳನ್ನು ತಡೆದು ತಪಾಸಣೆ ಮಾಡುವಂತಿಲ್ಲ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಕಂಡುಬಂದಾಗ ಮಾತ್ರವೇ ವಾಹನಗಳನ್ನು ನಿಲ್ಲಿಸಿ ಪ್ರಕರಣ ದಾಖಲಿಸಬೇಕು. ಕಡ್ಡಾಯವಾಗಿ ಬಾಡಿವೋರ್ನ್ ಕ್ಯಾಮೆರಾ ಧರಿಸಿರಬೇಕು ಎಂದು ಸಿಬ್ಬಂದಿಗೆ ಸೂಚಿಸಲಾಗಿದೆ. ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿರುವ ಪ್ರಕರಣಗಳು ನಗರದಲ್ಲಿ ಹೆಚ್ಚಾಗಿವೆ. ಇದರಿಂದ ಅಪಘಾತಗಳು ಸಂಭವಿಸುತ್ತಿವೆ. ಇದರ ವಿರುದ್ಧ ವಿಶೇಷ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಇದುವರೆಗೂ ವ್ಹೀಲಿ, ಮದ್ಯಸೇವಿಸಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗುತ್ತಿತ್ತು. ಸದ್ಯ ಪಶ್ಚಿಮ ವಿಭಾಗದ ಎಲ್ಲ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಪ್ರಕರಣ ದಾಖಲು ಮಾಡಲಾಗುತ್ತಿದೆ. ಇತರೆ ವಿಭಾಗಕ್ಕೂ ಈ ನಿಯಮ ವಿಸ್ತರಿಸುವ ಆಲೋಚನೆಯಿದೆ' ಎಂದು ಮೂಲಗಳು ಹೇಳಿವೆ.



ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿದ್ದ ಆಟೊಗಳನ್ನು ಸಂಚಾರ ಪೊಲೀಸರು ತೆರವುಗೊಳಿಸಿದ್ದ ದೃಶ್ಯ

ಪ್ರತಿನಿತ್ಯ ನಗರದಲ್ಲಿ ಸರಾಸರಿ ದಾಖಲಾಗುವ ಪ್ರಕರಣಗಳು

ಸಂಪರ್ಕರಹಿತ ಪ್ರಕರಣ	ಸಂಪರ್ಕಸಹಿತ ಪ್ರಕರಣ
16,819	2,072

ಐದು ವರ್ಷಗಳಲ್ಲಿ ಸಂಗ್ರಹವಾದ ದಂಡದ ವಿವರ (₹ಕೋಟಿಯಲ್ಲಿ)

ವರ್ಷ	ದಂಡ
2022	₹179.76
2023	₹185.14
2024	₹84.91
2025	₹258.16
2026*	₹24.80

*ಏಪ್ರಿಲ್ 5ರ ವರೆಗೆ

ಕಳೆದ ಮೂರು ತಿಂಗಳಲ್ಲಿ ದಾಖಲಾದ ಪ್ರಕರಣಗಳು

ಉಲ್ಲಂಘನೆ	ಪ್ರಕರಣ
ಅಜಾಗರೂಕತೆ	1,721
ವೇಗದ ಮಿತಿ ಉಲ್ಲಂಘನೆ	4,202
ಮದ್ಯಪಾನ	6,661
ಬಾಡಿಗೆಗೆ ನಿರಾಕರಣೆ	1,068
ಅಧಿಕ ಬಾಡಿಗೆಗೆ ಒತ್ತಾಯ	942
ದೋಷಪೂರಿತ ಸೈಲೆನ್ಸರ್	650
ಡಿ.ಎಲ್ ಇಲ್ಲದೇ ಚಾಲನೆ	4,513
ಸಿಗ್ನಲ್ ದಾಟಿದ್ದು	1,76,097
ನಿರ್ಬಂಧಿತ ಪ್ರದೇಶದಲ್ಲಿ ನಿಲುಗಡೆ	2,60,779
ದೋಷಪೂರಿತ ನೋಂದಣಿ ಫಲಕ	41,327
ನಿಷೇಧಿತ ರಸ್ತೆಗಳಲ್ಲಿ ಚಾಲನೆ	1,19,368
ಪಾದಚಾರಿ ಮಾರ್ಗದಲ್ಲಿ ನಿಲುಗಡೆ	30,823
ದ್ವಿಚಕ್ರ ವಾಹನದಲ್ಲಿ ಮೂವರು	19,360
ಸೀಟ್ ಬೆಲ್ಟ್ ಧರಿಸದಿರುವುದು	78,411
ಹೆಲ್ಮೆಟ್ ಧರಿಸದೇ ಚಾಲನೆ	3,49,842

ಪಶು ಆಹಾರ ದಾಸ್ತಾನು ಖಾಲಿ: ಹೆಚ್ಚಿದ ಬೇಡಿಕೆ

ದೊಡ್ಡಬಳ್ಳಾಪುರ: ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಸಂಘರ್ಷ ಹಾಗೂ ಬಿಸಿಲಿನ ತಾಪಮಾನ ಏರಿಕೆಯಿಂದ ಏಕಾಏಕಿ ಹೆಚ್ಚಾದ ಬೇಡಿಕೆಯಿಂದ ಹಾಲು ಉತ್ಪಾದಕರ ಸಹಾಕರ ಸಂಘಗಳಲ್ಲಿ ಪಶು ಆಹಾರದ ಕೊರತೆ ಎದುರಾಗಿದ್ದು, ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ಸಮಸ್ಯೆ ಎದುರಾಗಿದೆ.

ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ರೈತರಿಗಾಗಿ ಗುಣಮಟ್ಟದ 'ನಂದಿನಿ' ಬ್ರ್ಯಾಂಡಿನ ಪಶು ಆಹಾರವನ್ನು ತಾಲ್ಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಪೂರೈಸುತ್ತದೆ. ಇದು ಹಸುಗಳ ಆರೋಗ್ಯ ಮತ್ತು ಹೆಚ್ಚಿನ ಹಾಲು ಹೆಚ್ಚಲು ಸಮತೋಲಿತ ಆಹಾರವೂ ಆಗಿದೆ. ಅದರಲ್ಲೂ ಬೇಸಿಗೆ ಕಾಲದಲ್ಲಿ ರಾಸುಗಳಿಗೆ ಪಶು ಆಹಾರದ ಬೇಡಿಕೆ ಹೆಚ್ಚಾಗಿಯೇ ಇರಲಿದೆ.

ತಾಲ್ಲೂಕಿನ ಹಾಲಿನ ಡೇರಿಗಳಲ್ಲಿ ಪಶು ಆಹಾರ ದಾಸ್ತಾನು ಇಲ್ಲವಾಗಿದೆ. ಏಪ್ರಿಲ್ 1ರಿಂದ ಇಂಡೆಂಟ್ ಹಾಕಲಾಗುತ್ತಿದ್ದರೂ ಪೂರೈಕೆ ಇಲ್ಲವಾಗಿದೆ. ಫೀಡ್ ಕೊರತೆಯಿಂದ ಹಾಲು ಉತ್ಪಾದನೆ ಕಡಿಮೆಯಾಗಿದೆ. ಪಶು ಆಹಾರಕ್ಕಾಗಿ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ. ಯಾವ ಅಧಿಕಾರಿಗಳೂ ರೈತರಿಗೆ ಸ್ಪಂದಿಸುತ್ತಿಲ್ಲ ಎಂದು ಸಾಸಲು ಗ್ರಾಮದ ರೈತ ವೆಂಕಟೇಶ್ ತಮ್ಮ ಅಳಲು ತೋಡಿಕೊಂಡಿದ್ದಾರೆ.

ಸುದ್ದಿ 2 ನಿಮಿಷ

'ಬಿಜೆಪಿ ಸೇರುತ್ತೇನೆ ಎನ್ನುವವರೇ ಮುಂದೆ ಜೆಡಿಎಸ್‌ಗೆ ಸೇರುವರು'

ಬೆಳಗಾವಿ: 'ನಾನು ಬೇರೆ ಪಕ್ಷಕ್ಕೆ ಹೋಗುವುದಾಗಿ ಎಲ್ಲಿಯೂ ಹೇಳಿಲ್ಲ. ನಾನು ಬಿಜೆಪಿಗೆ ಸೇರುತ್ತೇನೆ ಎಂದು ಹೇಳುತ್ತಿದ್ದಾರೆಯೋ, ಮುಂದೆ ಬಿಜೆಪಿಯಲ್ಲಿ ಅವರೇ ಬಹಳ ದಿನ ಇರಲ್ಲ. ಜೆಡಿಎಸ್‌ಗೆ ಸೇರುತ್ತಾರೆ' ಎಂದು ಶಾಸಕ ಲಕ್ಷ್ಮಣ ಸವದಿ ಹೇಳುವ ಮೂಲಕ, ಪರೋಕ್ಷವಾಗಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ತಿರುಗೇಟು ಕೊಟ್ಟರು.

'ಕೆಲವರು ದುರುದ್ದೇಶದ ಕಾರಣಕ್ಕೆ ಏನೇನೋ ವಿಷಯ ಚರ್ಚಿಸುತ್ತಿದ್ದಾರೆ. ಅದಕ್ಕೆ ತಲೆ ಕೆಡಿಸಿಕೊಳ್ಳಲ್ಲ. ಅವರೇ ಬೇರೆ ಪಕ್ಷಕ್ಕೆ ಹೋಗಲು ಚಿಂತನೆ ನಡೆಸಿದ್ದಾರೆ. ಹಾಗಾಗಿ ನನ್ನ ಬಗ್ಗೆ ಅನುಮಾನ ಏಕೆ. ತಲೆಬುಡ ಇಲ್ಲದೆ ಚರ್ಚಿಸುವವರು ಆಡುವ ಮಾತು ಮತ್ತು ಆರೋಪಗಳಿಗೆ ನಾನು ಕಿವಿಗೊಡುವುದಿಲ್ಲ' ಎಂದು ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಪಕ್ಷದ ವರಿಷ್ಠರು ಸಚಿವ ಸ್ಥಾನದ ಬಗ್ಗೆ ತೀರ್ಮಾನಿಸುತ್ತಾರೆ. ನಮ್ಮ ಪಕ್ಷದಲ್ಲಿ ಯಾವ ಗೊಂದಲವೂ ಇಲ್ಲ. ಕೆಲ ದಿನಗಳಲ್ಲೇ ಎಲ್ಲದಕ್ಕೂ ತೆರೆ ಬೀಳುತ್ತದೆ. ನನ್ನ ಕ್ಷೇತ್ರದಲ್ಲಿ ಸೋಮವಾರ ಅನೇಕ ಕಾರ್ಯಕ್ರಮ ಇವೆ. ಅವುಗಳಲ್ಲಿ ಭಾಗವಹಿಸಬೇಕಿರುವ ಕಾರಣ, ನಾನು ದೆಹಲಿಗೆ ಹೋಗುತ್ತಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಂತರರಾಷ್ಟ್ರೀಯ ನೃತ್ಯ ಉತ್ಸವ



ಬೆಂಗಳೂರು: ಆರು ನೃತ್ಯ ಪ್ರಕಾರಗಳನ್ನು ಪ್ರತಿನಿಧಿಸುವ ದೇಶದ ನಾನಾ ಭಾಗದ 100 ಕಲಾವಿದರು ನಗರದ ಬಸವ ಸಮಿತಿ ಸಭಾಂಗಣದಲ್ಲಿ ಭಾನುವಾರ ಪ್ರದರ್ಶನ ನೀಡಿದರು.

ಉತ್ಸವದಲ್ಲಿ ಕಲಾವಿದರು ಲಯಬದ್ಧ ಹಾಡುಗಳಿಗೆ ಎರಡು ಗಂಟೆ ಕಾಲ ಹೆಜ್ಜೆಗಳನ್ನು ಹಾಕಿದ್ದು ಗಮನ ಸೆಳೆಯಿತು.

ಭಾರತ ಅಂತರರಾಷ್ಟ್ರೀಯ ನೃತ್ಯೋತ್ಸವ, ಬಹು-ನಗರ ಉತ್ಸವದ ಭಾಗವಾಗಿ ದೇಶದಾದ್ಯಂತ ಕಲಾವಿದರನ್ನು ನಗರಕ್ಕೆ ಆಹ್ವಾನಿಸಲಾಗಿತ್ತು. ಕಥಾ ನೃತ್ಯ ಅಂಗನ ಮತ್ತು ಬಸವ ಸಮಿತಿಯ ಸಹಯೋಗದಲ್ಲಿ ನಡೆದ ಭಾರತ ಅಂತರರಾಷ್ಟ್ರೀಯ ನೃತ್ಯ ಉತ್ಸವವನ್ನು ಮಾಜಿ ಸಚಿವೆ ರಾಣಿ ಸತೀಶ್ ಉದ್ಘಾಟಿಸಿದರು.

ಬಸವ ಸಮಿತಿ ಉಪಾಧ್ಯಕ್ಷ ಪ್ರಭುದೇವ ಚಿಗಟೇರಿ, ಜಂಟಿ ಕಾರ್ಯದರ್ಶಿ ನಿರ್ಮಲಾ ಯಲಿಗಾರ್ ಅತಿಥಿಗಳಾಗಿದ್ದರು.

'ಜೆಡಿಎಸ್ ದೋಣಿ ಮುಳುಗುತ್ತಿದೆ'

ರಾಜರಾಜೇಶ್ವರಿನಗರ: 'ಜೆಡಿಎಸ್ ದೋಣಿ ಮುಳುಗುತ್ತಿದೆ. ರಕ್ಷಣೆಗಾಗಿ ಎನ್‌ಡಿಎ ಸೇರಿ ಕೇಂದ್ರ ಮಂತ್ರಿಯಾಗಿರುವ ಎಚ್.ಡಿ. ಕುಮಾರಸ್ವಾಮಿ ಕೆಲವೇ ದಿನಗಳಲ್ಲಿ ಮೈತ್ರಿಕೂಟ ತೊರೆಯಲಿದ್ದಾರೆ' ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ತಾವರೆಕೆರೆ ಹೋಬಳಿಯ ಚಂದ್ರಪ್ಪ ಸರ್ಕಲ್‌ನಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಗೆ ಹಾಜರಾಗುವ ಜೆಡಿಎಸ್ ನಾಯಕರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ಎಂದರು.

ಮುಖ್ಯಮಂತ್ರಿಯಾಗಿದ್ದಾಗ ಕುಮಾರಸ್ವಾಮಿ ವಿಧಾನಸೌಧಕ್ಕೆ ಬಾರದೇ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲೇ ಕುಳಿತು ಆಡಳಿತ ನಡೆಸಿದ್ದರಿಂದ ಶಾಸಕರಿಗೆ ಕ್ಷೇತ್ರದ ಸಮಸ್ಯೆ ಹೇಳಿಕೊಳ್ಳಲು ಆಗುತ್ತಿರಲಿಲ್ಲ. ಕೊನೆಗೆ ಜೆಡಿಎಸ್ ಶಾಸಕರು ರಾಜೀನಾಮೆ ನೀಡಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬೆಂಬಲಿಸಿದ್ದರಿಂದ ಅಭಿವೃದ್ಧಿ ನಡೆಸಲು ಸಾಧ್ಯವಾಯಿತು ಎಂದು ಹೇಳಿದರು.

ಗಾಯಕಿ ಸಂಗೀತ ಕಟ್ಟಿ ಮಾತನಾಡಿ, 'ಹೆಣ್ಣಿಗೆ ಎಲ್ಲಿ ಬೆಲೆ ಸಿಗುತ್ತದೆಯೋ ಅಲ್ಲಿ ಲಕ್ಷ್ಮೀ ನೆಲಸಿರುತ್ತಾರೆ. ಅಂತಹ ಕಾಯಕದಲ್ಲಿ ಎಸ್.ಟಿ. ಸೋಮಶೇಖರ್ ತೊಡಗಿಸಿಕೊಂಡಿದ್ದಾರೆ' ಎಂದರು.

ನಿಶಾಂತ್ ಸೋಮಶೇಖರ್, ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಎಂ. ಜೈ ಕುಮಾರ್, ಎಪಿಎಂಸಿ ಮಾಜಿ ನಿರ್ದೇಶಕ ಕೆಂಚಪ್ಪ, ಬಮೂಲ್ ನಿರ್ದೇಶಕ ಕೃಷ್ಣಯ್ಯ, ದೊಡ್ಡೇರಿ ಉಮಾಶಂಕರ್, ತಾವರೆಕೆರೆ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ವಿನೋದ ನರಸಿಂಹಮೂರ್ತಿ, ಟಿ.ಎಲ್.ಕೆಂಪೇಗೌಡ, ಕೆಂಚನಪುರ ತಿಮ್ಮೇಗೌಡ, ಎಚ್.ಶ್ರೀಧರ್, ಲಕ್ಷ್ಮೀ ಪ್ರಭು, ಗಿಲ್ಕಾ ನಾಯಕ ಭಾಗವಹಿಸಿದ್ದರು.

ಹಿಂದಿನ ಎರಡು ಹರಾಜುಗಳಲ್ಲಿ ₹2,097 ಕೋಟಿ ಗಳಿಸಿದ್ದ ಪ್ರಾಧಿಕಾರ

ಬಿಡಿಎ ಜಾಗ: ಇ–ಹರಾಜಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ಮಹತ್ವಾಕಾಂಕ್ಷೆಯ ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವುದಕ್ಕಾಗಿ ಜಮೀನು ಹರಾಜು ಮಾಡಲು ಮುಂದಾಗಿದೆ.

ಬಿಡಿಎ ಭಾರಿ ಪ್ರಮಾಣದ ಭೂಮಿಯನ್ನು ಎರಡು ಹಂತದಲ್ಲಿ ಹರಾಜು ಮಾಡಿ ದಾಖಲೆಯ ₹2,097 ಕೋಟಿ ಸಂಗ್ರಹಿಸಿತ್ತು. ಇದೀಗ ಮೂರನೇ ಬಾರಿಗೆ ಇ-ಹರಾಜು ಆರಂಭಿಸಿದ್ದು, ಪ್ರಮುಖ ಸ್ಥಳಗಳಲ್ಲಿ 47ಕ್ಕೂ ಹೆಚ್ಚು ಪ್ಲ್ಯಾಟ್‌ಗಳನ್ನು ಮಾರಾಟ ಮಾಡಲಿದೆ.

ಬಿಡಿಎ ಇತ್ತೀಚೆಗೆ ಹೊರಡಿಸಿದ ಅಧಿಸೂಚನೆಯ ಪ್ರಕಾರ ವಶಪಡಿಸಿಕೊಳ್ಳಲಾದ ನಿವೇಶನಗಳು ಆರ್‌ಎಂವಿ 2ನೇ ಹಂತ, ಬನಶಂಕರಿ 6ನೇ ಹಂತ, ಚಂದ್ರಾ ಲೇಔಟ್, ಸರ್ ಎಂ.ವಿಶ್ವೇಶರಯ್ಯ ಲೇಔಟ್ ಮತ್ತು ಅರ್ಕಾವತಿ ಲೇಔಟ್ ಸೇರಿದಂತೆ ನಗರದ ಸುತ್ತಮುತ್ತ ಇವೆ.

4,593 ಚದರ ಮೀಟರ್ ವಿಸ್ತೀರ್ಣದ ಅತಿ ದೊಡ್ಡ ಪ್ಲ್ಯಾಟ್ ಎಚ್‌ಬಿಆರ್ 1ನೇ ಹಂತದಲ್ಲಿದೆ. 403 ಚದರ ಮೀಟರ್ ವಿಸ್ತೀರ್ಣದ ಅತಿಚಿಕ್ಕ ಪ್ಲ್ಯಾಟ್ ಲಿಂಗಧೀರನಹಳ್ಳಿ ಮತ್ತು ಹೇರೋಹಳ್ಳಿಯಲ್ಲಿದೆ. ಆಯಾ ಸ್ಥಳಗಳ ಮೌಲ್ಯ ಆಧರಿಸಿ ಪ್ರತಿ ಚದರ ಮೀಟರ್‌ಗೆ ₹63,000ನಿಂದ ₹1.65 ಲಕ್ಷವರೆಗೆ ದರ ಇದೆ.

ಹಳೆ ಮದ್ರಾಸ್ ರಸ್ತೆಯ ಕೋನದಾಸಪುರದಲ್ಲಿ 52 ಎಕರೆಗಳನ್ನು ಮಾರಾಟ ಮಾಡುವ ಮೂಲಕ ಬಿಡಿಎ ₹2,097 ಕೋಟಿ ಗಳಿಸಿತ್ತು.

ಬಿಡಿಎನ ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮಗಳು–1984 ರ ಅಡಿಯಲ್ಲಿ ಹೊರಡಿಸಲಾದ ಇತ್ತೀಚಿನ ಅಧಿಸೂಚನೆಯಂತೆ ಮೇ 6 ರಂದು ನೇರ ಬಿಡ್ಡಿಂಗ್ ನಡೆಯಲಿದೆ. ಆಸಕ್ತರು ಮೇ 5 ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ನಿವೇಶನಕ್ಕಿಂತ ಫ್ಲ್ಯಾಟ್ ಉತ್ತಮ

ಬಹು-ವಾಸಸ್ಥಳ ಘಟಕ ಅಭಿವೃದ್ಧಿಯನ್ನು ಉತ್ತೇಜಿಸುವ ಮೂಲಕ ಬೆಂಗಳೂರಿನಲ್ಲಿ ಜಮೀನು ಕೊರತೆಯನ್ನು ನೀಗಿಸಬಹುದು. ಅದಕ್ಕಾಗಿ ಬೃಹತ್ ಭೂ ಹರಾಜನ್ನು ವಿನ್ಯಾಸಗೊಳಿಸಲಾಗಿದೆ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಡಿಮೆ ಜನರಿಗೆ ಉಪಯೋಗವಾಗುವ ನಿವೇಶನಗಳನ್ನು ಅಭಿವೃದ್ಧಿಪಡಿಸುವ ಬದಲು ಜಮೀನನ್ನು ಹರಾಜು ಮಾಡಿ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸುವುದರಿಂದ ಭೂ ಬಳಕೆ ಪರಿಣಾಮಕಾರಿಯಾಗುತ್ತದೆ. ಒಂದು ಎಕರೆಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿದಾಗ ಅಧಿಕ ಮನೆಗಳು ದೊರೆಯಲು ಸಾಧ್ಯ. ಇದರಿಂದ ಬರುವ ಆದಾಯವನ್ನು ಅಗತ್ಯ ಮೂಲಸೌಕರ್ಯಗಳಿಗೆ ಬಳಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಪ್ಲಾಸ್ಟಿಕ್ ಸಂಗ್ರಹ

ಪ್ರಜಾವಾಣಿ ವಾರ್ತೆ



ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಯೋಜಿಸಿದ್ದ ಎನ್‌ಎಸ್‌ಎಸ್ ವಾರ್ಷಿಕ ಶಿಬಿರದಲ್ಲಿ ವಿದ್ಯಾರ್ಥಿಗಳು ಚೋಳನಾಯಕನಹಳ್ಳಿ ಗ್ರಾಮದಲ್ಲಿ ಪ್ಲಾಸ್ಟಿಕ್ ಸಂಗ್ರಹಿಸಿದರು

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ರಸ್ತೆ ಗುಂಡಿ ಮುಚ್ಚಿ'



ಮಲ್ಲೇಶಪಾಳ್ಯದಿಂದ ಬಸವನಗರ ಮುಖ್ಯರಸ್ತೆಯು ಗುಂಡಿಗಳಿಂದ ಕೂಡಿದೆ. ಅದರಲ್ಲೂ ರಾಮದೇವ ಸಾಗರ್ ಬಟ್ಟೆ ಅಂಗಡಿ ಬಳಿ ದೊಡ್ಡದಾದ ಗುಂಡಿ ಬಿದ್ದಿದೆ. ಇಲ್ಲಿ ದ್ವಿಚಕ್ರ ವಾಹನ ಸವಾರರು ಸಂಚರಿಸುವುದು ಕಷ್ಟಸಾಧ್ಯವಾಗಿದೆ. ಭಯದಲ್ಲೇ ಸಂಚರಿಸಬೇಕಾದ ದುಃಸ್ಥಿತಿ ಇದ್ದು, ನಿಯಂತ್ರಣ ತಪ್ಪಿ ಬೀಳುವ ಸಾಧ್ಯತೆಯಿದೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಆದಷ್ಟು ಬೇಗ ಗುಂಡಿಗಳನ್ನು ಮುಚ್ಚಬೇಕು.

ವೀರೇಶ್, ಸ್ಥಳೀಯ ನಿವಾಸಿ

ವರದಿ ಪರಿಣಾಮ

ತಾವರೆಕೆರೆ–ಕೆಂಗೇರಿ ಮುಖ್ಯ ರಸ್ತೆಯ ಎರಡೂ ಬದಿಗಳಲ್ಲಿ ರಾಶಿಗಟ್ಟಲೇ ಬಿದ್ದಿದ್ದ ಕಸವನ್ನು ಚನ್ನೇನಹಳ್ಳಿ ಗ್ರಾಮಪಂಚಾಯಿತಿ ಸ್ವಚ್ಛಗೊಳಿಸಿದೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಏ.6ರಂದು 'ರಸ್ತೆ ಬದಿಯಲ್ಲಿ ಕಸದ ರಾಶಿ' ಶೀರ್ಷಿಕೆ ಅಡಿಯಲ್ಲಿ ಸಮಸ್ಯೆ ಕುರಿತಾದ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಗ್ರಾಮ ಪಂಚಾಯಿತಿ ಸಿಬ್ಬಂದಿ ರಸ್ತೆಯನ್ನು ಸ್ವಚ್ಛಗೊಳಿಸಿದ್ದಾರೆ.




'ರಸ್ತೆಯಲ್ಲಿ ಚರಂಡಿ ನೀರು'

ಹೆಬ್ಬಾಳದ ಅಮರ್ ಜ್ಯೋತಿ ಬಡಾವಣೆಯ ಗುಂಡಪ್ಪ ರೆಡ್ಡಿ ಲೇಔಟ್ ಮೊದಲನೇ ಕ್ರಾಸ್‌ನಲ್ಲಿ ಚರಂಡಿ ನೀರು ರಸ್ತೆಯಲ್ಲಿಯೇ ಹರಿಯುತ್ತಿದೆ. ಇದರಿಂದ ಸಾರ್ವಜನಿಕರ ಓಡಾಟ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿದೆ. ಈ ರಸ್ತೆಯು ಆರ್.ಟಿ. ನಗರದಿಂದ ನಾಗವಾರ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಕೂಡಲೇ ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಜಿ.ಎಸ್. ಮಂಜುನಾಥ್
ಅಮರ್ ಜ್ಯೋತಿ ಲೇಔಟ್

'ವಿಲೇವಾರಿಯಾಗದ ಕಸ'



ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಕುಮಾರಸ್ವಾಮಿ ಬಡಾವಣೆಯ 181ನೇ ವಾರ್ಡ್‌ನ ಮಿನಾಜ್ ನಗರಕ್ಕೆ ಕಸ ಸಂಗ್ರಹದ ಆಟೊ ವಾರದಲ್ಲಿ ಒಂದು ದಿನ ಮಾತ್ರ ಬರುತ್ತಿದೆ. ಮನೆಯಲ್ಲಿ ಶೇಖರಣೆಯಾದ ಕಸವನ್ನು ಸಾರ್ವಜನಿಕರು ಖಾಲಿ ಇರುವ ಸ್ಥಳಾವಕಾಶಗಳಲ್ಲಿ ಎಸೆಯುತ್ತಿದ್ದಾರೆ. ಪೌರಕಾರ್ಮಿಕರು ಅಲ್ಲಲ್ಲಿ ರಾಶಿ ಹಾಕಿಟ್ಟರೂ, ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಿಂದಾಗಿ ಜನರು ಕಸದ ರಾಶಿ ಮೇಲೆ ಮತ್ತಷ್ಟು ಕಸ ತಂದು ಸುರಿಯುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ, ಸಹಾಯವಾಣಿ ಸಂಖ್ಯೆ 1533ಕ್ಕೆ ಕರೆ ಮಾಡಿದರೂ ಯಾವುದೇ ಕ್ರಮಕೈಗೊಂಡಿಲ್ಲ. ಸ್ಥಳೀಯ ಅಧಿಕಾರಿಗಳು ದೂರವಾಣಿ ಕರೆಯನ್ನೇ ಸ್ವೀಕರಿಸುತ್ತಿಲ್ಲ.

ಅಬ್ದುಲ್ ರಜಾಕ್, ಸ್ಥಳೀಯ ನಿವಾಸಿ

'ಕಸ ವಿಲೇವಾರಿ ಮಾಡಿ'



ಚಿಕ್ಕಪೇಟೆಯ ಮಾಮೂಲ್ ಪೇಟೆ ಮುಖ್ಯರಸ್ತೆಯಲ್ಲಿ ಕಸದ ರಾಶಿ ಹಾಕಲಾಗಿದೆ. ಹಲವು ದಿನಗಳಿಂದ ಇರುವ ಈ ಕಸದ ರಾಶಿಯನ್ನು ತೆರವು ಮಾಡುತ್ತಿಲ್ಲ. ಪೌರಕಾರ್ಮಿಕರು ಅಥವಾ ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸುತ್ತಿಲ್ಲ. ಇದರಿಂದಾಗಿ ಕಸದ ರಾಶಿ ಬೆಳೆಯುತ್ತಲೇ ಇದೆ. ಸ್ಥಳೀಯ ನಿವಾಸಿಗಳು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಕಸವು ರಸ್ತೆಯನ್ನೂ ಆವರಿಸಿಕೊಳ್ಳುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ತುರ್ತಾಗಿ ಕಸ ತೆರವಿಗೆ ಕ್ರಮವಹಿಸಬೇಕು.

ಗಿರೀಶ್, ಸ್ಥಳೀಯ ನಿವಾಸಿ

'ವಾರದಿಂದ ಒಣ ಕಸ ಸಂಗ್ರಹವಿಲ್ಲ'

ಆರ್.ಆರ್.ನಗರ ವಿಧಾನಸಭೆ ವ್ಯಾಪ್ತಿಯಲ್ಲಿರುವ ಹೊಸಕೆರೆಹಳ್ಳಿಯ ಸಪ್ತಗಿರಿ ನಗರಕ್ಕೆ ಕಳೆದೊಂದು ವಾರದಿಂದ ಒಣ ಕಸ ಸಂಗ್ರಹದ ವಾಹನ ಬಂದಿಲ್ಲ. ಇದರಿಂದಾಗಿ ಈ ಪ್ರದೇಶದಲ್ಲಿ ಕಸದ ವಿಲೇವಾರಿ ಸಮಸ್ಯೆಯಾಗಿದ್ದು, ಜನರು ಎಲ್ಲೆಂದರಲ್ಲಿ ಕಸ ಎಸೆಯುತ್ತಿದ್ದಾರೆ. ಈ ಹಿಂದೆಯೂ ಕೆಲ ಬಾರಿ ಎಲ್ಲ ರಸ್ತೆಗಳಿಗೆ ಕಸ ಸಂಗ್ರಹದ ವಾಹನ ಬರುತ್ತಿರಲಿಲ್ಲ. ಇದರಿಂದಾಗಿ ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಕೆಲ ದಿನಗಳು ಕಸದ ರಾಶಿ ಕಾಣಸಿಗುತ್ತದೆ. ಕಸದ ವಾಹನಗಳು ನಿಯಮಿತವಾಗಿ ಬಂದಲ್ಲಿ ಈ ಸಮಸ್ಯೆ ನಿವಾರಣೆಯಾಗಲಿದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು.

ರಾಮಕೃಷ್ಣ, ಸಪ್ತಗಿರಿ ನಗರ

ಹೊಯ್ಸಳ ಪಿಯು ಕಾಲೇಜು ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಪಟ್ಟಣದ ಹೊಯ್ಸಳ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದ ವಿದ್ಯಾರ್ಥಿ ಎ.ಬಿಂದು ಶೇ 99.5 ಪಡೆಯುವುದರ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ, ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿದ್ದಾರೆ. ಒಟ್ಟು 36 ವಿದ್ಯಾರ್ಥಿಗಳು ಶೇ 95ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ವಿಜ್ಞಾನ ವಿಭಾಗ: ಕೆ.ಎಸ್.ಗನಶ್ರೀ ಶೇ 98.16, ಚಿತ್ರಶ್ರೀ ಶೇ 98, ಎಂ.ನಂದಿತ ಶೇ 97.6, ಎಂ.ಎಸ್. ಮೃದುಲಾ ಶೇ 97.5, ಪಿ.ರಚನಾ ಶೇ 97.5, ಆರ್.ಪುನರ್ವ ಶೇ 97,



ಎ. ಬಿಂದು



ಜಿ. ಪ್ರಾರ್ಥನಾ

ಎನ್. ಸ್ನೇಹ ಶೇ 96.83, ದರ್ಶನ್ ಮಂಜುನಾಥ್ ಗೌಡ ಶೇ 96.6, ಕೆ.ವಿ. ಸೃಜನಾ ಶೇ 96.6, ಎಂ.ಡಿ. ಪೂಜಿತಾ ಶೇ 96.5, ಡಿ.ಸಿ. ಚೇತನ್‌ಗೌಡ ಶೇ 96.3, ಎಂ. ನಂದಿತಾ ಶೇ 96.3, ಬಿ. ಗೌತಮಿ ಶೇ 96.16, ಜಿ.ಹರ್ಷಿತಾ ಶೇ 96, ಎನ್. ಪ್ರಜ್ವಲ್‌ಗೌಡ ಶೇ 96, ಬಿ.ಎನ್. ಮೋಹಿತ್ ಶೇ 95.83, ಎನ್. ನಿತ್ಯಶ್ರೀ ಶೇ 95.83 ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ: ಜಿ.ಪ್ರಾರ್ಥನಾ ಶೇ 99, ರಕ್ಷಾ ಶೇ 98.83, ಎನ್. ಪೃಥ್ವಿಕ್ ಜೈನ್ ಶೇ 98.66, ಆರ್. ಭಾವನಾ ಶೇ 98.16, ವರ್ಷಿಣಿ ಲಲಿತಾ ರಾಜ್ ಶೇ 98.16, ಆರ್. ಚೈತ್ರ ಶೇ 97.83, ಎಂ. ಪ್ರೀತಿ ಶೇ 97.83, ಕೆ. ಡಿಂಪಲ್ ಶೇ 97.5, ಜಿ.ಪಲ್ಲವಿ ಶೇ 97.83, ಸುಲ್ತಾನಾ ಶೇ 97.83, ಜಿ. ಜೀವಿತಾ ಶೇ 97.33, ನಂದಿತಾ ಶೇ 97.33, ಕೆ.ಬಿ. ರಾಘವೇಂದ್ರ ಶೇ 97.16, ಕೆ. ಊರ್ಮಿಳಾ ಶೇ 97, ಬಿ.ಎಸ್. ವರ್ಷ ಶೇ 96.83, ಚಂಚಲ್ ಶೇ 96.5, ಎಲ್. ರಶ್ಮಿತಾ ಶೇ 96.33, ಎಸ್. ಪ್ರೀತಿ ಶೇ 96.33ರಷ್ಟು ಅಂಕಗಳನ್ನು ಪಡೆದಿದ್ದಾರೆ ಎಂದು ಪ್ರಾಂಶುಪಾಲರಾದ ಕೆ.ವಿ.ಗೌರಿಶಂಕರ್ ಮತ್ತು ಎಚ್.ಆರ್.ಗೋಪಾಲ್ ತಿಳಿಸಿದ್ದಾರೆ.

ಪಿಯುಸಿ: ಉತ್ತಮ ಫಲಿತಾಂಶ

ಬೆಂಗಳೂರು: ಅರಿಶಿನಕುಂಟೆಯ ಪುನರ್ವಸು ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಧೃತಿ ಭಟ್ ಶೇ 99.16 ರಷ್ಟು, ಪುನೀತ್ ಶೇ 95.5ರಷ್ಟು ಹಾಗೂ ಅಭಿಜ್ಞಾ ಶೇ 90.67ರಷ್ಟು ಅಂಕಗಳನ್ನು ಗಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಮಾನಸ ಕೆ.ಎಲ್. ಶೇ 93.8ರಷ್ಟು ಹಾಗೂ ಜ್ಞಾನೇಶ್ ಶೇ 91.5ರಷ್ಟು ಅಂಕಗಳನ್ನು ಪಡೆದಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಾಲೇಜಿಗೆ ಶೇ 100ರಷ್ಟು ಫಲಿತಾಂಶ ಲಭಿಸಿದೆ ಎಂದು ಕಾಲೇಜಿನ ಅಧ್ಯಕ್ಷ ಅಜಿತ್ ಹರೀಶ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಶ್ರಮ ಮತ್ತು ಬೋಧಕ ವರ್ಗದ ಶಿಸ್ತುಬದ್ಧ ಮಾರ್ಗದರ್ಶನದಿಂದಾಗಿ ಯಶಸ್ಸು ಲಭಿಸಿದೆ ಎಂದು ತಿಳಿಸಿರುವ ಅವರು, ಉತ್ತೀರ್ಣರಾಗಿರುವ ಎಲ್ಲ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.



ಧೃತಿ ಭಟ್



ಪುನೀತ್

ಶ್ರೀವೆಂಕಟೇಶ್ವರ ಪಿಯು ಕಾಲೇಜು



ಇಂಚರಾ ದತ್ತ ಎಂ.ಎಸ್.
584 (ಶೇ 97.33)
ವಿಜ್ಞಾನ ವಿಭಾಗ

ಕಣ್ಣೂರಮ್ಮ ದೇವಿ ಪ್ರತಿಷ್ಠಾಪನಾ ಮಹೋತ್ಸವ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ದೇವಿನಗರದಲ್ಲಿ ಕಣ್ಣೂರಮ್ಮ ದೇವಿ ಹಾಗೂ ಮುನೇಶ್ವರಸ್ವಾಮಿ ದೇವಾಲಯಗಳ ಟ್ರಸ್ಟ್ ಮತ್ತು ಕಣ್ಣೂರಮ್ಮ ಸೇವಾ ಸಮಿತಿ ವತಿಯಿಂದ ದೇವಿಯ ಪ್ರತಿಷ್ಠಾಪನಾ ಮಹೋತ್ಸವದ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿದವು.

ಮಹೋತ್ಸವದ ಪ್ರಯುಕ್ತ ದೇವಿ ನಗರದ ಮಹಾದ್ವಾರವನ್ನು ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಮುನೇಶ್ವರಸ್ವಾಮಿಯ 12ನೇ ವರ್ಷದ ಪೂರ್ಣ ಕುಂಭಾಭಿಷೇಕ, ಕಣ್ಣೂರಮ್ಮ ದೇವಿಯ ಶಿಲಾಮೂರ್ತಿ ಪ್ರತಿಷ್ಠಾಪನೆ, ನೂತನ ವಿಮಾನ ಗೋಪುರ ಹಾಗೂ ಮೂಲವಿಗ್ರಹಕ್ಕೆ ಕಳಶಾಭಿಷೇಕ ನೆರವೇರಿಸಲಾಯಿತು. ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಕುಂಕುಮಾರ್ಚನೆ ಮತ್ತು ಅನ್ನದಾನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕಂದಾಯ ಸಚಿವ ಕೃಷ್ಣ ಬೈರೇಗೌಡ, ಆದಿಶಕ್ತಿ ಮಹಾಸಂಸ್ಥಾನಮಠದ ಪೀಠಾಧಿಪತಿ ಪ್ರಣವಾನಂದಪುರಿ ಸ್ವಾಮೀಜಿ, ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್.ರಮೇಶ್, ಬಿಜೆಪಿ ಮುಖಂಡ ಎ.ರವಿ, ಟ್ರಸ್ಟ್‌ನ ಅಧ್ಯಕ್ಷ ಸಿ.ರಾಮಕೃಷ್ಣಪ್ಪ, ಉಪಾಧ್ಯಕ್ಷ ಎಂ.ಮುನಿರಾಜು, ಕಾರ್ಯದರ್ಶಿ ಎಂ. ನಾರಾಯಣಸ್ವಾಮಿ ಹಾಗೂ ಗ್ರಾಮದ ಮುಖಂಡರಾದ ಸಿ.ಶಿವಣ್ಣ, ಸಿ.ವೆಂಕಟಸ್ವಾಮಿ, ಶಾಮಣ್ಣ ಉಪಸ್ಥಿತರಿದ್ದರು.

ರಸ್ತೆಗೆ ತಡೆ: ಗ್ರಾಮಸ್ಥರ ಪ್ರತಿಭಟನೆ

ಕೆ.ಆರ್.ಪುರ: ಹೂಡಿಯಿಂದ ಸಾದರಮಂಗಲಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗವನ್ನು ರೈಲ್ವೆ ಇಲಾಖೆ ಮುಚ್ಚಿದ್ದು, ಕೂಡಲೇ ತೆರೆಯುವಂತೆ ಆಗ್ರಹಿಸಿ ಸಾದರಮಂಗಲ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ರಸ್ತೆ ಮಧ್ಯೆ ಕುಳಿತು ಪ್ರತಿಭಟನೆ ನಡೆಸಿದರು.

ಹೂಡಿಯಿಂದ ಸಾದರಮಂಗಲ, ಬೆಳತ್ತೂರು, ಕುಂಬೇನಾ ಅಗ್ರಹಾರ, ಕಾಡುಗುಡಿ, ವೈಟ್‌ಫೀಲ್ಡ್ ಕಡೆಗೆ ಸಂಚರಿಸುವ 60 ಅಡಿ ರಸ್ತೆಯನ್ನು ಯಾವುದೇ ಸೂಚನೆ ನೀಡದೆ ಏಕಾಏಕಿ ರಾತ್ರಿ ಮುಚ್ಚಿರುವುದರಿಂದ ಸಾದರಮಂಗಲ ಸುತ್ತಮುತ್ತ ಲಿನ ಸುಮಾರು 20 ಗ್ರಾಮದ ಜನರಿಗೆ ತೊಂದರೆ ಆಗುತ್ತಿದೆ ಎಂದು ಪ್ರತಿಭಟನ ಕಾರರು ಆಕ್ರೋಶ ವ್ಯಕ್ತಪಡಿಸಿದರು.

'15 ದಿನಗಳ ಹಿಂದೆ ಇಲ್ಲಿ ರಸ್ತೆ ಇತ್ತು. ಜನರು ನಿತ್ಯದ ಕೆಲಸಗಳಿಗಾಗಿ ಹಾಗೂ ಶಾಲಾ ಕಾಲೇಜಿಗೆ ತೆರಳಲು ಇದೇ ಮಾರ್ಗ ಅವಲಂಬಿಸಿ ದ್ದರು. ಇತ್ತೀಚೆಗೆ ಈ ರಸ್ತೆಯಲ್ಲಿ ಓಡಾಡಲು ರೈಲ್ವೆ ಅಧಿಕಾರಿಗಳು ಅವಕಾಶ ನೀಡುತ್ತಿಲ್ಲ. ಯಾವುದೋ ಕಾರಣವೊಡ್ಡಿ ಮಾರ್ಗವನ್ನು ಮುಚ್ಚಿ ತೊಂದರೆ ನೀಡುವುದು ಸಾಮಾನ್ಯವಾಗಿದೆ. ಪ್ರಶ್ನೆ ಮಾಡಲು ಹೋದರೆ ನಮ್ಮ ಮೇಲೆ ದೂರು ದಾಖಲಿಸುವುದಾಗಿ ರೈಲ್ವೆ ಅಧಿಕಾರಿಗಳು ಬೆದರಿಕೆಯೊಡ್ಡುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದರು.

ಕೊಡಿಗೇಹಳ್ಳಿ ಗ್ರಾಮದಲ್ಲಿ ₹20 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣ

ಸರ್ಕಾರಿ ಶಾಲೆಗೆ ದಾನಿಯಿಂದ ಕೊಠಡಿ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ವಲಸೆ, ಬಡ ಕೂಲಿ ಕಾರ್ಮಿಕರ ಮಕ್ಕಳೇ ಓದುತ್ತಿರುವ ನಲ್ವತ್ತು ವರ್ಷಗಳ ಹಳೆಯ ಶಾಲೆಯಲ್ಲಿ ಕೊಠಡಿಗಳ ಕೊರತೆ ಇರುವುದನ್ನು ಮನಗಂಡ ಸ್ಥಳೀಯ ನಿವಾಸಿಯಾದ ಉದ್ಯಮಿ ವಿ.ವಿವೇಕ್ ಅವರು ₹20 ಲಕ್ಷ ವೆಚ್ಚದಲ್ಲಿ ಹೆಚ್ಚುವರಿಯಾಗಿ ಎರಡು ಕೊಠಡಿಗಳನ್ನು ನಿರ್ಮಿಸಿಕೊಟ್ಟು, ಶಾಲೆಗೆ ನೆರವಾಗಿದ್ದಾರೆ.



ವಿ. ವಿವೇಕ್

ಮಹದೇವಪುರದ ಕ್ಷೇತ್ರದ ಕೆ.ಆರ್.ಪುರ ಹೋಬಳಿ ವ್ಯಾಪ್ತಿಗೆ ಒಳಪಡುವ ಕೊಡಿಗೇಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎರಡು ಕೊಠಡಿಗಳು ಮಾತ್ರ ಇದ್ದವು. 220ಕ್ಕೂ ಹೆಚ್ಚು ಮಕ್ಕಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಬಿಹಾರ, ಉತ್ತರ ಪ್ರದೇಶ, ನೇಪಾಳ, ಆಂಧ್ರಪ್ರದೇಶ, ತೆಲಂಗಾಣದಿಂದ ಕೆಲಸಕ್ಕಾಗಿ ಬಂದಿರುವ ಪೋಷಕರ ಮಕ್ಕಳೇ ಇಲ್ಲಿ ಹೆಚ್ಚಿದ್ದಾರೆ.

ಇದನ್ನು ನೋಡಿದ ವಿವೇಕ್ ಅವರು ಮೂರು ತಿಂಗಳಲ್ಲಿ ಎರಡು ಅಂತಸ್ತಿನ ಸುಸಜ್ಜಿತ ಕಟ್ಟಡವನ್ನು ಕಟ್ಟಿಸಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರೂ ಆಗಿರುವ ಅವರ ತಂದೆಯಿಂದಲೇ ಉದ್ಘಾಟನೆ ಮಾಡಿಸಿದ್ದಾರೆ. ಈ ಕೊಠಡಿಗಳು ಎಲ್ಲ ಸೌಲಭ್ಯಗಳನ್ನು ಹೊಂದಿವೆ.

'ಎಸ್‌ಡಿಎಂಸಿ ಅಧ್ಯಕ್ಷರಾಗಿರುವ ನನ್ನ ತಂದೆ ವೆಂಕಟೇಶ್ ಅವರು ಶಾಲೆಗೆ ನೆರವಾಗಲು ಕೋರಿದ್ದರು. ನಮ್ಮ ಊರಿನ ಶಾಲೆಗೆ ಏನಾದರೂ ಕೊಡುಗೆ ನೀಡುವ ಉದ್ದೇಶದಿಂದ ನನ್ನ ದುಡಿಮೆಯ ಹಣದಿಂದ ಎರಡು ಅಂತಸ್ತಿನ ಕಟ್ಟಡ ನಿರ್ಮಿಸಿಕೊಟ್ಟಿದ್ದೇನೆ' ಎಂದು ವಿ. ವಿವೇಕ್ ತಿಳಿಸಿದರು.

'ಶಾಲೆಯ ಮುಂಭಾಗದಲ್ಲಿ 19 ಗುಂಟೆ ಸರ್ಕಾರಿ ಜಾಗವಿದ್ದು, ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದನ್ನು ತೆರವುಗೊಳಿಸಿ ತಡೆಗೋಡೆ ನಿರ್ಮಿಸಿ ಮಕ್ಕಳಿಗೆ ಕ್ರೀಡೆಗೆ ಅನುಕೂಲವಾಗಲು ಶೆಲ್ಟರ್ ವ್ಯವಸ್ಥೆ ಮಾಡಿಕೊಡುವ ಆಸೆಯಿದೆ. ಸರ್ಕಾರ ಕೂಡ ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯ ಒದಗಿಸಲು ಮುಂದಾಗಬೇಕು' ಎಂದರು.

'ವಿವೇಕ್ ಅವರು ಈ ಹಿಂದೆಯೂ ಅಡುಗೆ ಕೋಣೆ, ಮಕ್ಕಳಿಗೆ ಶೌಚಾಲಯ, ಕುಡಿಯುವ ನೀರಿನ ಶುದ್ಧೀಕರಣ ಘಟಕವನ್ನು ನಿರ್ಮಿಸಿ ಕೊಟ್ಟಿದ್ದರು. ಈಗ ಕೊಠಡಿ ನಿರ್ಮಿಸಿ ಕೊಟ್ಟಿದ್ದಾರೆ' ಎಂದು ಶಾಲೆಯ ಶಿಕ್ಷಕರು ಮಾಹಿತಿ ನೀಡಿದರು.



ಕೊಡಿಗೇಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡ

ಸ್ನೇಹಿತನ ಅಪಹರಣ: ಹಣಕ್ಕಾಗಿ ಬೇಡಿಕೆ

ಒಂದೇ ಕಾಲೇಜಿನ, ಬೇರೆ ಬೇರೆ ರಾಜ್ಯಗಳ ನಾಲ್ವರು ವಿದ್ಯಾರ್ಥಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿಯನ್ನು ಅಪಹರಿಸಿ, ಹಣಕ್ಕಾಗಿ ಬೇಡಿಕೆ ಇಟ್ಟಿದ್ದ ಅದೇ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳನ್ನು ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿಗಳಾದ ಶೌರ್ಯ ಅಗರವಾಲ್, ನಿರುಂಜಿ, ಆದಿತ್ಯ ಮತ್ತು ಸೈಯದ್ ಬಿಲಾಲ್ ಎಂಬುವರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ್ದ ಕಾರು, ಚಾಕು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಲೇಜಿನಲ್ಲಿ ಒಡಿಶಾದ ವೃಷಭ್ ಮೊಹಾಂತಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದು, ಬಿಟಿಎಂ ಲೇಔಟ್‌ನ ಹಾಸ್ಟೆಲ್‌ನಲ್ಲಿದ್ದಾರೆ. ಹಣಕ್ಕಾಗಿ ತಾವು ಓದುತ್ತಿದ್ದ ಕಾಲೇಜಿನ ವಿದ್ಯಾರ್ಥಿಯನ್ನು ಅಪಹರಿಸಲು ಆರೋಪಿಗಳು ಸಂಚು ರೂಪಿಸಿದ್ದರು. ಏಪ್ರಿಲ್ 11ರಂದು ರಾತ್ರಿ ಕಾಲೇಜಿನ ಹಾಸ್ಟೆಲ್ ಬಳಿ ಆರೋಪಿಗಳು ವೃಷಭ್‌ನನ್ನು ಅಪಹರಿಸಿ ಕಾರಿನಲ್ಲಿ ಕರೆದೊಯ್ದಿದ್ದಾರೆ. ಜಯನಗರದ ಮನೆಯೊಂದರಲ್ಲಿ ಕೂಡಿ ಹಾಕಿ, ಸ್ನೇಹಿತರಿಂದ ಹಣ ಕೊಡಿಸುವಂತೆ ಒತ್ತಾಯಿಸಿ, ಬೆದರಿಸಿದ್ದರು.

ನಂತರ ಅಪಹರಣಕ್ಕೆ ಒಳಗಾದ ವಿದ್ಯಾರ್ಥಿಯ ಸ್ನೇಹಿತನಿಗೆ ಕರೆ ಮಾಡಿ ₹50 ಸಾವಿರಕ್ಕೆ ಬೇಡಿಯಿಟ್ಟದ್ದರು. ಸ್ನೇಹಿತ ಕೂಡಲೇ 112 ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ.

ಮಡಿವಾಳ ಠಾಣೆ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಅಪಹರಣಕಾರರ ಬಗ್ಗೆ ಮಾಹಿತಿ ಕಲೆಹಾಕಿ, ಅವರ ಮೊಬೈಲ್ ಲೊಕೇಷನ್ ಆಧರಿಸಿ ಪತ್ತೆ ಮಾಡಿದರು. ಘಟನೆ ನಡೆದ ಐದು ತಾಸಿನೊಳಗೆ ವಿದ್ಯಾರ್ಥಿಯನ್ನು ರಕ್ಷಿಸಿ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದರು.

'ಐಷಾರಾಮಿ ಜೀವನ ನಡೆಸಲು ಹಣಕ್ಕಾಗಿ ಸ್ನೇಹಿತನನ್ನೇ ಅಪಹರಿಸಿ, ₹50 ಸಾವಿರಕ್ಕೆ ಬೇಡಿಕೆಯಿಟ್ಟದ್ದರು. ವಿದ್ಯಾರ್ಥಿಯನ್ನು ರಕ್ಷಿಸಲಾಗಿದೆ. ನಾಲ್ವರು ಆರೋಪಿಗಳು ಬೇರೆ ಬೇರೆ ರಾಜ್ಯಕ್ಕೆ ಸೇರಿದವರಾಗಿದ್ದು ವಿಚಾರಣೆಗೆ ಒಳಪಡಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಚಿಟಿಕೆ ಸುದ್ದಿ

ಯಶವಂತಪುರ–ಕಾಕೋಳುಗೆ ಎಸಿ ಬಸ್

ಬೆಂಗಳೂರು: ಯಶವಂತಪುರದಿಂದ ಕಾಕೋಳುಗೆ ಬಿಎಂಟಿಸಿ ಹವಾನಿಯಂತ್ರಿತ ಬಸ್ ಏ.15ರಿಂದ ಆರಂಭಗೊಳ್ಳಲಿದೆ.

251 'ಎ' ಸಂಖ್ಯೆಯ ಬಸ್ ಯಶವಂತಪುರ ಟಿಟಿಎಂಸಿಯಿಂದ ಕಾಕೋಳುಗೆ ಬೆಳಿಗ್ಗೆ 6.45 ಮತ್ತು ಮಧ್ಯಾಹ್ನ 3.25ಕ್ಕೆ ಹೊರಡಲಿದೆ. ಕಾಕೋಳುನಿಂದ ಯಶವಂತಪುರಕ್ಕೆ ಬೆಳಿಗ್ಗೆ 8.30 ಮತ್ತು ಸಂಜೆ 5.30ಕ್ಕೆ ಹೊರಡಲಿದೆ. ಮಾರ್ಗಮಧ್ಯೆ ಜಾಲಹಳ್ಳಿ ಕ್ರಾಸ್, ಚಿಕ್ಕಬಾಣಾವರ, ಹೆಸರಘಟ್ಟ, ಟಿ.ಬಿ. ಕ್ರಾಸ್, ಮುತ್ತೂರು, ಲಿಂಗನಹಳ್ಳಿ, ಕೊಳುವರಾಯನಹಳ್ಳಿ, ಸೀತಕೆಂಪನಹಳ್ಳಿ ಕ್ರಾಸ್ 1ರಲ್ಲಿ ನಿಲುಗಡೆ ಇರಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮನವೊಲಿಸಿ ತಂಗುದಾಣ ನಿರ್ಮಾಣ

ಪೀಣ್ಯ ದಾಸರಹಳ್ಳಿ: ವಿಡಿಯಾ ಸ್ಕೂಲ್ ಬಸ್ ನಿಲ್ದಾಣದಲ್ಲಿ ಸಮೀಪ ಅಂಗಡಿಯವರ ಮನವೊಲಿಸಿ ತಂಗುದಾಣ ನಿರ್ಮಾಣ ಕಾರ್ಯ ಈಚೆಗೆ ಆರಂಭಿಸಲಾಯಿತು.

'ಪ್ರಯಾಣಿಕರು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ತಂಗುದಾಣದ ಅಗತ್ಯವಿತ್ತು. ಆದರೆ ಅಲ್ಲಿನ ಅಂಗಡಿಯವರು ತಮ್ಮ ಅಂಗಡಿಗೆ ಮರೆಯಾಗುತ್ತದೆ ಎಂದು ತಂಗುದಾಣ ನಿರ್ಮಿಸಲು ಬಿಡುತ್ತಿರಲಿಲ್ಲ, ಹಾಗಾಗಿ ನಾನೇ ಖುದ್ದಾಗಿ ಸ್ಥಳ ಪರಿಶೀಲಿಸಿ, ಅವರ ಮನವೊಲಿಸಿ ತಂಗುದಾಣ ನಿರ್ಮಾಣ ಕಾರ್ಯ ಆರಂಭಿಸಲು ಸೂಚಿಸಿದ್ದೇನೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಮದ್ಯದ ಅಮಲಿನಲ್ಲಿ ಪೊಲೀಸರ ಮೇಲೆ ಹಲ್ಲೆ

ಅಪರಾಧ ಸುದ್ದಿ

ಬೆಂಗಳೂರು: ಕರ್ತವ್ಯನಿರತ ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿದ ವ್ಯಕ್ತಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಸಿದ್ದರಾಮ ಅವರ ದೂರಿನ ಮೇಲೆ ಕುಮಾರ್ ರೆಡ್ಡಿ (26) ಎಂಬಾತನನ್ನು ಬಂಧಿಸಲಾಗಿದೆ.

ಏಪ್ರಿಲ್ 7ರಂದು ಎಎಸ್‌ಐ ಸಿದ್ದರಾಮ ಮತ್ತು ಪೊಲೀಸ್ ಕಾನ್‌ಸ್ಟೆಬಲ್ ಮುತ್ತುರಾಜು ಅವರು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಮಧ್ಯರಾತ್ರಿ 1 ಗಂಟೆ ಸುಮಾರಿಗೆ ನೀಲಾದ್ರಿ ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ, ವ್ಯಕ್ತಿಯೊಬ್ಬ ಪಿಸಿಆರ್ ಜಂಕ್ಷನ್ ಹತ್ತಿರ ಇರುವ ಬಾರ್‌ವೊಂದರ ಬಾಗಿಲು ತೆರೆಯುವಂತೆ ಗಲಾಟೆ ಮಾಡುತ್ತಿರುವ ಬಗ್ಗೆ ದೂರು ಬಂದಿತ್ತು.

ಪೊಲೀಸರು ಬಾರ್ ಹತ್ತಿರ ಹೋಗಿ ನೋಡಿದಾಗ ಕುಮಾರ್ ರೆಡ್ಡಿ, ಮದ್ಯದ ಅಮಲಿನಲ್ಲಿ ಕೂಗಾಡುತ್ತಾ ಮದ್ಯ ಕೊಡುವಂತೆ ಅಂಗಡಿ ಬಾಗಿಲು ಬಡಿಯುತ್ತಿರುವುದು ಕಂಡುಬಂತು. ಈ ಬಗ್ಗೆ ಪ್ರಶ್ನಿಸಿದ ಪೊಲೀಸರನ್ನು ಆರೋಪಿಯು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದ.

ಸಿದ್ದರಾಮ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಳಿಕ ಆರೋಪಿ ವಿರುದ್ಧ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿಕ್ಷಕಿಗೆ ಬ್ಲ್ಯಾಕ್‌ಮೇಲ್: ಆರೋಪಿ ಬಂಧನ

ಬೆಂಗಳೂರು: ಖಾಸಗಿ ಫೋಟೊ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಶಿಕ್ಷಕಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

ಆಂಧ್ರ ಪ್ರದೇಶದ ಪುಟ್ಟಪರ್ತಿ ನಿವಾಸಿ ಹರ್ಷದ್(37) ಬಂಧಿತ. ಆರೋಪಿ ನಗರದ ಪ್ರತಿಷ್ಠಿತ ಶಾಲೆಯ ಶಿಕ್ಷಕಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಪತಿ ಹಾಗೂ ಇಬ್ಬರು ಮಕ್ಕಳ ಜತೆ ವೀರಸಂದ್ರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಆರೋಪಿ ಹರ್ಷದ್‌ಗೆ ಈಗಾಗಲೇ ಮದುವೆಯಾಗಿದ್ದು, ಪತ್ನಿಯಿಂದ ದೂರವಾಗಿದ್ದಾನೆ. ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದು ಹೇಳಿದರು.

ವರ್ಷದ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಶಿಕ್ಷಕಿ ಹಾಗೂ ಆರೋಪಿಯ ಪರಿಚಯವಾಗಿದ್ದು, ಆತ್ಮೀಯವಾಗಿದ್ದರು. ಅದನ್ನೇ ದುರುಪಯೋಗ ಪಡಿಸಿಕೊಂಡ ಆರೋಪಿ, ಶಿಕ್ಷಕಿಯ ಖಾಸಗಿ ವಿಡಿಯೊಗಳನ್ನು ಸಂಗ್ರಹಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಲು ಆರಂಭಿಸಿದ್ದಾನೆ. ಅದಕ್ಕೆ ಹೆದರಿದ ಶಿಕ್ಷಕಿ, ಆರೋಪಿಗೆ ₹1 ಲಕ್ಷ ವರೆಗೂ ಹಣ ನೀಡಿದ್ದಾರೆ. ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಾಗ, ಹಣ ಕೊಡುವುದಾಗಿ ನಗರಕ್ಕೆ ಕರೆಸಿಕೊಂಡರು. ಪೊಲೀಸರು ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಕು ಇರಿತ: ಮಹಿಳೆ ಸಾವು


ಮಾಗೇಶ್ವರಿ


ಕೊಲೆ ಆರೋಪಿಗಳು

ಬೆಂಗಳೂರು: ಕೌಟುಂಬಿಕ ಕಲಹದ ವೇಳೆ ಸೋದರ ಸಂಬಂಧಿಗಳಿಂದಲೇ ಚಾಕು ಇರಿತಕ್ಕೆ ಒಳಗಾಗಿದ್ದ ಮಹಿಳೆಯೊಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಅಂಬೇಡ್ಕರ್ ನಗರದ ನಿವಾಸಿ ಮಾಗೇಶ್ವರಿ (55) ಮೃತ ಮಹಿಳೆ. ಮೃತಳ ತಮ್ಮ ಮಣಿವಣ್ಣನ್, ಆತನ ಮಗ ಮಣಿ ಕಿರಣ್, ಸ್ಟೀಫನ್ ಮತ್ತು ಅಭಿಷೇಕ್ ಬಂಧಿತರು. ಇವರೆಲ್ಲರೂ ತಮಿಳುನಾಡಿನವರು ಎಂದು ಆಡುಗೋಡಿ ಪೊಲೀಸರು ತಿಳಿಸಿದರು.

ಮಾಗೇಶ್ವರಿಯ ಮೊಮ್ಮಗಳು (ಮಗಳ ಮಗಳು) ಚಾರುಲತಾ, ಮಣಿಕಿರಣ್‌ನನ್ನು ಮದುವೆಯಾಗಿದ್ದರು. ಕೌಟುಂಬಿಕ ಕಾರಣಕ್ಕೆ ಚಾರುಲತಾ, ಮಣಿಕಿರಣ್‌ನಿಂದ ದೂರವಾಗಿ ಅಜ್ಜಿ ಮಾಗೇಶ್ವರಿಯ ಮನೆಯಲ್ಲಿ ವಾಸವಿದ್ದರು. ಮಣಿಕಿರಣ್ ಮತ್ತು ಪೋಷಕರು ಚಾರುಲತಾಗೆ ಹಲವು ಬಾರಿ ಕರೆ ಮಾಡಿ ಮನೆಗೆ ವಾಪಸ್ ಬರುವಂತೆ ಕರೆದಿದ್ದರು. ಆದರೂ ಪತಿಯ ಮನೆಗೆ ವಾಪಸ್ ಹೋಗಿರಲಿಲ್ಲ. ಈ ವಿಚಾರಕ್ಕೆ ಮಣಿವಣ್ಣನ್, ಮಣಿಕಿರಣ್, ಸ್ಟೀಫನ್ ಮತ್ತು ಅಭಿಷೇಕ್ ಒಟ್ಟಾಗಿ ಮಾರ್ಚ್ 25ರಂದು ಆಡುಗೋಡಿಯ ಅಂಬೇಡ್ಕರ್ ನಗರದಲ್ಲಿನ ಮಾಗೇಶ್ವರಿಯ ಮನೆಗೆ ಬಂದು ಜಗಳವಾಡಿದ್ದರು.

ಜಗಳ ವಿಕೋಪಕ್ಕೆ ತಿರುಗಿ ಆರೋಪಿಗಳು ಚಾರುಲತಾಳನ್ನು ಬಲವಂತವಾಗಿ ಎಳೆದೊಯ್ಯಲು ಯತ್ನಿಸಿದ್ದರು. ಆಗ ಮೊಮ್ಮಗಳ ರಕ್ಷಣೆಗೆ ಧಾವಿಸಿದ್ದ ಮಾಗೇಶ್ವರಿ ಅವರ ಮೇಲೆ ಆರೋಪಿಗಳು ಹಲ್ಲೆ ನಡೆಸಿ, ಚಾಕುವಿನಿಂದ ಇರಿದಿದ್ದರು. ಪರಿಣಾಮ ತೀವ್ರ ರಕ್ತಸ್ರಾವವಾಗಿ ಅಸ್ವಸ್ಥಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದ ಅವರು ಶನಿವಾರ ರಾತ್ರಿ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಘಟನೆಯ ಆರಂಭದಲ್ಲಿ ಕೊಲೆಯತ್ನ ಆರೋಪದಡಿ ಪ್ರಕರಣ ದಾಖಲಿಸಲಾಗಿತ್ತು. ಇದೀಗ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಸ್ಟೀಫನ್ ಮತ್ತು ಅಭಿಷೇಕ್, ಮಣಿಕಿರಣ್‌ನ ಸ್ನೇಹಿತರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿತ್ರಾವಳಿ


ಬೆಂಗಳೂರು ರೋಟರಿ ಕ್ಲಬ್ (ಆರ್‌ಸಿಬಿ) ನಗರದಲ್ಲಿ ಹಮ್ಮಿಕೊಂಡಿದ್ದ ಆರ್‌ಸಿಬಿ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಚಾಲನೆ ನೀಡಿದರು. ಬೆಂಗಳೂರು ರೋಟರಿ ಕ್ಲಬ್ ಅಧ್ಯಕ್ಷರಾದ ಸುಖೇನ್ ಪದ್ಮನಾಭ, ಮಾಜಿ ಅಧ್ಯಕ್ಷೆ ನಳಿನಿ ನಂಜುಂಡಯ್ಯ, ವಿದ್ಯಾಶಂಕರ್ ಮೊದಲಾದವರು ಪಾಲ್ಗೊಂಡಿದ್ದರು


ಬೆಂಗಳೂರಿನ 'ಕೋಟೆ ಹೈಸ್ಕೂಲ್' ಆವರಣದಲ್ಲಿ ಭಾನುವಾರ 'ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್' ಆಯೋಜಿಸಿದ್ದ '88ನೇ ಶ್ರೀ ರಾಮನವಮಿ ಸಂಗೀತೋತ್ಸವ 2026' ಕಾರ್ಯಕ್ರಮದಲ್ಲಿ ಡಾ. ಎನ್. ರಾಜಮ್ ಅವರಿಗೆ 'ಎಸ್‌ವಿಎನ್ ಗ್ಲೋಬಲ್ ಅವಾರ್ಡ್ ಫಾರ್ ಮ್ಯೂಸಿಕ್' ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಡಾ. ಸಿ.ಎಸ್ ಕೇದಾರ್, ನ್ಯಾಯಮೂರ್ತಿ ವಿ. ಶ್ರೀಶಾನಂದ ಮತ್ತು ನಿವೃತ್ತ ಪೊಲೀಸ್ ಅಧಿಕಾರಿ ಗೋಪಾಲ್ ಬಿ. ಹೊಸೂರು ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ


ಬೆಂಗಳೂರಿನ ಮೂಡಲಪಾಳ್ಯದಲ್ಲಿ ಭಾನುವಾರ ರಾಮರಾಜ್ ಕಾಟನ್ ನೂತನ ಮಳಿಗೆಯನ್ನು ಶಾಸಕ ಪ್ರಿಯಕೃಷ್ಣ ಉದ್ಘಾಟಿಸಿ ವೀಕ್ಷಣೆ ಮಾಡಿದರು. ವಿಜಯನಗರ ಎಜುಕೇಷನಲ್ ಅಕಾಡೆಮಿ ಕಾರ್ಯದರ್ಶಿ ಡಾ.ಎಸ್.ರಾಜು ಮತ್ತು ಕಟ್ಟಡದ ಮಾಲೀಕ ವಿನಯ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ


ಸರ್ಜಾಪುರದ ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ನಡೆದ ಪದವಿ ದಿನ ಕಾರ್ಯಕ್ರಮದಲ್ಲಿ ಆಂಧ್ರಪ್ರದೇಶದ ಸಚಿವ ನಾ.ರಾ.ಲೋಕೇಶ್, ಶಾಲೆಯ ಆಡಳಿಯ ಮಂಡಳಿಯ ಪದಾಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು

ಬಿಜೆಪಿ ನಾಯಕರ ಬೌದ್ಧಿಕ ದಿವಾಳಿತನ: ರಮೇಶ್ ಬಾಬು

ಬೆಂಗಳೂರು: 'ರಾಜಕೀಯವಾಗಿ ಕಂಗೆಟ್ಟಿರುವ, ಅಧಿಕಾರದ ಹಪಾಹಪಿಯಲ್ಲಿರುವ ಬಿಜೆಪಿಯ ಅನೇಕ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಚಿವ ಪ್ರಿಯಾಂಕ್ ಖರ್ಗೆಯರನ್ನು ವೈಯಕ್ತಿಕವಾಗಿ ಟೀಕೆ ಮಾಡುವ ಮೂಲಕ ತಮ್ಮ ರಾಜಕೀಯ ತೆವಲುಗಳನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ದೂರಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರವಾದ ಟೀಕೆ ಟಿಪ್ಪಣಿಗಳಿಗೆ ಅವಕಾಶವಿದೆ. ಆದರೆ, ಬಿಜೆಪಿ ನಾಯಕರು ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬದ ತೇಜೋವಧೆಗೆ ಇಳಿದಿದ್ದಾರೆ. ಇದು ಅವರ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತಿದೆ. ಸಂಘ ಪರಿವಾರದ ನಿರ್ದೇಶನಗಳಿಗೆ ಅನುಗುಣವಾಗಿ ಮತ್ತು ತಮ್ಮ ರಾಜಕೀಯ ಅಸ್ತಿತ್ವದ ಉಳಿವಿಗಾಗಿ ಬಿಜೆಪಿಯ ನಾಯಕರು ಕೀಳುಮಟ್ಟದ ಟೀಕೆಗಳನ್ನು ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜಕಾಲುವೆ ಬಳಿ ಗಣಿಗಾರಿಕೆ

ಕಾಲುವೆ ಒತ್ತುವರಿ: ಸರ್ವೆ ಕಾರ್ಯ ವರದಿಯಲ್ಲಿ ಬಹಿರಂಗ

ಪ್ರಜಾವಾಣಿ ವಾರ್ತೆ


ಮಾಯಸಂದ್ರ ಗ್ರಾಮದ ರಾಜಕಾಲುವೆ, ಹಳ್ಳ ಪ್ರದೇಶದಲ್ಲಿ ನಡೆಯುತ್ತಿರುವ ಗಣಿಗಾರಿಕೆ

ದೇವನಹಳ್ಳಿ: ತಾಲ್ಲೂಕಿನ ಕುಂದಾಣ ಹೋಬಳಿಯ ಮಾಯಸಂದ್ರ ಕೆರೆಯ ಸರ್ಕಾರಿ ಹಳ್ಳ ಹಾಗೂ ರಾಜಕಾಲುವೆ ಸುತ್ತಮುತ್ತಲಿನ ಪ್ರದೇಶವನ್ನು ಆಲಂಕಾರಿಕ ಕಲ್ಲು ಗಣಿಗಾರಿಕೆ ನಡೆಸಲು ಖಾಸಗಿ ಕಂಪನಿಗಳಿಗೆ ಜಿಲ್ಲಾಡಳಿತ 30 ವರ್ಷ ಭೋಗ್ಯಕ್ಕೆ (ಲೀಸ್) ನೀಡಿರುವುದು ಚರ್ಚೆಗೆ ಗ್ರಾಸವಾಗಿದೆ.

ಜಿಲ್ಲಾಡಳಿತದ ಸೂಚನೆಯಂತೆ ನಡೆದ ಜಂಟಿ ಸರ್ವೆ ಕಾರ್ಯದಲ್ಲಿ ಇದು ಬಯಲಾಗಿದೆ. ಸರ್ವೆ ಇಲಾಖೆಯ ಭೂ ಮಾಪಕರು, ಕಂದಾಯ ಅಧಿಕಾರಿಗಳು ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ ನಡೆದ ಪರಿಶೀಲನೆಯಲ್ಲಿ ಕೆರೆಗೆ ನೀರು ಹರಿಯುವ ನೈಸರ್ಗಿಕ ಹಳ್ಳ ಮತ್ತು ರಾಜಕಾಲುವೆಯ ಮೇಲೆ ಗಣಿಗಾರಿಕೆಗೆ ಅನುಮತಿ ನೀಡಿರುವುದು ದೃಢಪಟ್ಟಿದೆ.

ಗಣಿಗಾರಿಕೆಯಿಂದ ನೀರಿನ ಮೂಲ ನಾಶವಾಗಿವೆ. ರಾಜಕಾಲುವೆ ಸಂಪೂರ್ಣ ಮುಚ್ಚಿಹೋಗಿದ್ದು, ಕೆರೆಗೆ ನೀರು ಹರಿದು ಸೇರುವ ಹಳ್ಳದ ಗುರುತುಗಳೇ ಅಳಿದು ಹೋಗಿರುವುದು ದೇವನಹಳ್ಳಿ ತಹಶೀಲ್ದಾರ್ ಎಂ. ಅನಿಲ್ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗೆ ಸಲ್ಲಿಸಿರುವ ವರದಿಯಲ್ಲಿ ಇದು ಸ್ಪಷ್ಟವಾಗಿದೆ.

ಸರ್ವೆ ನಂ. 40 ಮತ್ತು 63ರಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ನೀರಿನ ಮೂಲ ನಾಶವಾಗಿದೆ ಎಂದು ಅವರು ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.


ನಕಾಶೆಯಲ್ಲಿದ್ದ ಹಳ್ಳ ಕಾಣೆ

ಕಂದಾಯ ದಾಖಲೆಗಳ ಪ್ರಕಾರ ಅಸ್ತಿತ್ವದಲ್ಲಿದ್ದ ಹಳ್ಳ ಈಗ ಕಾಣೆಯಾಗಿದೆ. ನಕ್ಷೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದ್ದ ಹಳ್ಳ ಈಗ ಕಾಣುತ್ತಿಲ್ಲ. ಅದರ ಭೌತಿಕ ಅಸ್ತಿತ್ವ ನಾಶವಾಗಿದೆ.

ಗಣಿಗಾರಿಕೆಗೆ ಈ ಪ್ರದೇಶ ಮಂಜೂರಾದ ನಂತರ ಹಳ್ಳ ನಾಶವಾಗಿದೆ ಎಂದು ಗ್ರಾಮಲೆಕ್ಕಾಧಿಕಾರಿಯ ವರದಿ ಹೇಳುತ್ತದೆ. ನೀರಿನ ಮೂಲ ಕಾಪಾಡಬೇಕಾದ ಜಿಲ್ಲಾಡಳಿತ, ಕಂದಾಯ ಇಲಾಖೆ ಮತ್ತು ಅಧಿಕಾರಿಗಳು ಮೌನ ವಹಿಸಿರುವುದಕ್ಕೆ ದೂರುದಾರ ಚಿರಂಜೀವಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಗಣಿಗಾರಿಕೆಗಾಗಿ ಸರ್ಕಾರಿ ರಾಜಕಾಲುವೆ ಮುಚ್ಚಿ, ಪ್ರಕೃತಿ ಸಂಪತ್ತು ದೋಚಲಾಗುತ್ತಿದೆ. ಕೆರೆಗೆ ನೀರು ಹರಿಯುವ ಮಾರ್ಗವನ್ನೇ ಛಿದ್ರಗೊಳಿಸಲಾಗಿದೆ. ಜಿಲ್ಲಾಡಳಿತ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಭಾರತೀಯ ಕಿಸಾನ್ ಸಂಘ ಅಹೋರಾತ್ರಿ ಧರಣಿ ನಡೆಸಲಿದೆ' ಎಂದು ಸಂಘದ ಅಧ್ಯಕ್ಷ ಶಿವಕುಮಾರ್ ಆರಾಧ್ಯ ಎಚ್ಚರಿಕೆ ನೀಡಿದ್ದಾರೆ.

36 ವರ್ಷಗಳ ಬಳಿಕ ಕೊಲೆ ಆರೋಪಿ ಬಂಧನ


ಸೀನಪ್ಪ

ಕೋಲಾರ: 36 ವರ್ಷಗಳ ಹಿಂದೆ ನಡೆದಿದ್ದ ಕೊಲೆ ಪ್ರಕರಣದ ಆರೋಪಿಯನ್ನು ಮುಳಬಾಗಿಲು ತಾಲ್ಲೂಕಿನ ನಂಗಲಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೀನಪ್ಪ ಬಂಧಿತ ಆರೋಪಿ. ಮುಳಬಾಗಿಲು ತಾಲ್ಲೂಕಿನ ಹಲೆಕುಪ್ಪ ಗ್ರಾಮದಲ್ಲಿ 1990ರಲ್ಲಿ ನಡೆದಿದ್ದ ಕೊಲೆ ಪ್ರಕರಣ ಇದಾಗಿದೆ.

1990ರ ಜ.30ರಂದು ತಮ್ಮ ಪುತ್ರ ನಾರಾಯಣಪ್ಪ (24) ಕಾಣೆಯಾಗಿರುವುದಾಗಿ ತಾಯಿ ವೆಂಕಟಮ್ಮ ದೂರು ನೀಡಿದ್ದರು. ಒಂದು ದಿನದ ನಂತರ ಸಣ್ಣ ಹಳ್ಳದಲ್ಲಿ ಹೂತ ಸ್ಥಿತಿಯಲ್ಲಿ ನಾರಾಯಣಪ್ಪ ಅವರ ಶವ ಪತ್ತೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರಿಗೆ ಇದು ಕೊಲೆ ಎಂಬುದು ಗೊತ್ತಾಗಿತ್ತು. ಆಗ ಆರೋಪಿಗೆ 29 ವರ್ಷವಾಗಿತ್ತು.

ಪ್ರಕರಣ ನಡೆದು 36 ವರ್ಷಗಳಾಗಿದ್ದರೂ ಆರೋಪಿ ಪತ್ತೆಯಾಗಿರಲಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಿಕ್ರಿವಾಲ್ ಹಳೆ ಪ್ರಕರಣದ ಕಡತ ತೆಗೆದು ಪರಿಶೀಲಿಸಿ ಆರೋಪಿ ಪತ್ತೆಗೆ ಸೂಚನೆ ನೀಡಿದ್ದರು.

ಮುಳಬಾಗಿಲು ವಿಭಾಗದ ಡಿಐಎಸ್ಪಿ ಮನಿಷಾ, ನಂಗಲಿ ಪೊಲೀಸ್ ಠಾಣೆಯ ಪಿಎಸ್‌ಐ ವಿದ್ಯಾಶ್ರೀ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಆರೋಪಿ ಪತ್ತೆಗಾಗಿ ನಂಗಲಿ ಠಾಣೆಯ ಎಎಸ್‌ಐ ನಾಗೇಂದ್ರ ರಾವ್, ಕಾನ್‌ಸ್ಟೆಬಲ್ ಪವನ್ ಕುಮಾರ್ ಅವರನ್ನು ನಿಯೋಜಿಸಲಾಗಿತ್ತು.

ತನ್ನ ಪತ್ನಿಯು ನಾರಾಯಣಪ್ಪ ಜೊತೆ ಅಕ್ರಮ ಸಂಬಂಧ ಹೊಂದಿದ್ದ ಕಾರಣ ಆರೋಪಿ ಸೀನಪ್ಪ ಈ ಕೊಲೆ ಮಾಡಿದ್ದಾನೆ. ನಂತರ ಭಯದಿಂದ ಬೆಂಗಳೂರಿಗೆ ಪರಾರಿಯಾಗಿ ಹೋಟೆಲ್‌ಗಳಲ್ಲಿ ಕೆಲಸ ಮಾಡಿದ್ದಾನೆ. ನಂತರ ಆಂಧ್ರ ಪ್ರದೇಶದ ಕುಪ್ಪಂ ಪಟ್ಟಣದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿರುವುದನ್ನು ಪತ್ತೆ ಹಚ್ಚಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿಸಿ ಕರೆತಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಸಿಬ್ಬಂದಿಯನ್ನು ಎಸ್‌ಪಿ ಶ್ಲಾಘಿಸಿದ್ದಾರೆ.

ಒಂಟಿ ಕಾಲಿನ ಕಳ್ಳನ ಬಂಧನ

ಜಿಗಣಿ (ಆನೇಕಲ್): ತಾಲ್ಲೂಕಿನ ಯಾರಂಡಹಳ್ಳಿಯಲ್ಲಿ ದರೋಡೆ ಮಾಡಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ಜಿಗಣಿ ಪೊಲೀಸರು ಬಂಧಿಸಿದ್ದಾರೆ.

ಕೃಷ್ಣ ನಾಯಕ್ ಅಲಿಯಾಸ್ ಕುಂಟ ಕೃಷ್ಣ, ನವೀನ್ ಅಲಿಯಾಸ್ ರಾಬರಿ ಕಾಳ ಬಂಧಿತರು. ಕೃಷ್ಣ ಒಂಟಿ ಕಾಲಿನಲ್ಲಿಯೇ ಕಳ್ಳತನ ಮಾಡುತ್ತಿದ್ದ.

ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಯಾರಂಡಹಳ್ಳಿಯಲ್ಲಿ ಸುಂದರ್ ರಾಜ್ ಎಂಬುವವರನ್ನು ಕೃಷ್ಣ ಮತ್ತು ನವೀನ್ ಆಟೊಗೆ ಹತ್ತಿಸಿಕೊಂಡು ಜೇಬಿನಲ್ಲಿದ್ದ ಹಣ, ಮೊಬೈಲ್ ಕಿತ್ತುಕೊಂಡಿದ್ದರು. ಬಳಿಕ ಎಟಿಎಂ ಕಾರ್ಡ್ ಕೊಡುವಂತೆ ಚಿತ್ರಹಿಂಸೆ ನೀಡಿ ಎಟಿಎಂನಲ್ಲಿದ್ದ ₹1 ಲಕ್ಷ ಡ್ರಾ ಮಾಡಿಸಿಕೊಂಡು, ನಿರ್ಜನ ಪ್ರದೇಶದಲ್ಲಿ ಬಿಟ್ಟು ಪರಾರಿಯಾಗಿದ್ದರು.

ಹಣ ಕಳೆದುಕೊಂಡ ವ್ಯಕ್ತಿ ನೀಡಿದ ದೂರಿನ ಮೇರೆಗೆ ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.


ಕೃಷ್ಣ ನಾಯಕ್ ಚಿಕ್ಕ ವಯಸ್ಸಿನಿಂದ ಕಳ್ಳತನ, ದರೋಡೆ ಮಾಡುತ್ತಿದ್ದ. ಆಟೊದಲ್ಲಿ ವ್ಯಕ್ತಿಗಳನ್ನು ಅಪಹರಿಸಿ ದರೋಡೆ ಮಾಡುತ್ತಿದ್ದ. ಆರೋಪಿ ಕಾಲಿಗೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಗುಂಡು ಹೊಡೆದಿದ್ದರಿಂದ ಒಂದು ಕಾಲು ಕಳೆದುಕೊಂಡಿದ್ದ.

ಕೃಷ್ಣ ಅಪರಾಧ ಚಟುವಟಿಕೆಗಳಲ್ಲಿ ತೊಡಗಿದ್ದು, 20ಕ್ಕೂ ಹೆಚ್ಚು ಅಪರಾಧ ಪ್ರಕರಣದಲ್ಲಿ ಭಾಗಿಯಾಗಿದ್ದ.

ಅತಿ ವೇಗವಾಗಿ ಚಾಲನೆ: ಬಸ್‌ಗೂ ಡಿಕ್ಕಿ ಹೊಡೆದ ಚಾಲಕ

ಕಾರು ರಿವರ್ಸ್: ಹಣ್ಣಿನ ವ್ಯಾಪಾರಿ ಸಾವು

ಪ್ರಜಾವಾಣಿ ವಾರ್ತೆ


ಸ್ವಾಮಿ ದೊರೈ

ಬೆಂಗಳೂರು: ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ಭಾನುವಾರ ಬೆಳಗಿನ ಜಾವ ಕಾರು ಡಿಕ್ಕಿಯಾಗಿ ಹಣ್ಣಿನ ವ್ಯಾಪಾರಿಯೊಬ್ಬರು ಮೃತಪಟ್ಟಿದ್ದಾರೆ.

ಶ್ರೀನಿವಾಸ ನಗರದ ನಿವಾಸಿ ಸ್ವಾಮಿ ದೊರೈ (50) ಮೃತ ವ್ಯಕ್ತಿ. ತಮಿಳುನಾಡಿನ ಸ್ವಾಮಿ ದೊರೈ, ಕುಟುಂಬದ ಸದಸ್ಯರೊಂದಿಗೆ ಸುಂಕದಕಟ್ಟೆಯ ಶ್ರೀನಿವಾಸ ನಗರದಲ್ಲಿ ವಾಸವಾಗಿದ್ದರು. ಪತ್ನಿ ಜಯಶ್ರೀ ಜತೆ ತಮಿಳುನಾಡಿಗೆ ಹೋಗಿದ್ದ ಅವರು ಬಸ್‌ನಲ್ಲಿ ಭಾನುವಾರ ಮುಂಜಾನೆ ನಗರಕ್ಕೆ ವಾಪಸ್ ಬಂದು ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ಇಳಿದಿದ್ದರು.

ನಂತರ ಸ್ವಾಮಿ ದೊರೈ ದಂಪತಿ ಶ್ರೀನಿವಾಸನಗರದ ಮನೆಗೆ ಹೋಗಲು ಬಿಎಂಟಿಸಿ ಬಸ್ ನಿಲ್ದಾಣದತ್ತ ನಡೆದು ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿಯೊಬ್ಬರು ತಮ್ಮ ಕಾರನ್ನು ಸ್ಯಾಟಲೈಟ್ ಬಸ್ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿ, ಕೀಯನ್ನು ಪಾರ್ಕಿಂಗ್ ಜಾಗದ ಕಾವಲುಗಾರ ಬಾಲಸುಬ್ರಮಣ್ಯ ಅವರಿಗೆ ಕೊಟ್ಟು ಹೋಗಿದ್ದರು. ಬೆಳಗಿನ ಜಾವ 4.30ರ ಸುಮಾರಿಗೆ ಮತ್ತೊಂದು ವಾಹನ ಬಂದ ಕಾರಣ ಅದಕ್ಕೆ ಜಾಗ ಮಾಡಿ ಕೊಡಲು ಬಾಲ ಸುಬ್ರಮಣ್ಯ, ಆ ಕಾರನ್ನು ಬೇರೆಡೆ ನಿಲ್ಲಿಸಲು ಯತ್ನಿಸಿದ್ದಾರೆ.

ಕಾರನ್ನು ನಿರ್ಲಕ್ಷ್ಯದಿಂದ ಅತಿ ವೇಗದಲ್ಲಿ ಹಿಮ್ಮುಖವಾಗಿ ಚಾಲನೆ ಮಾಡಿದ್ದಾರೆ. ಆಗ ಹಿಂದೆ ಹೋಗುತ್ತಿದ್ದ ಸ್ವಾಮಿ ದೊರೈಗೆ ಕಾರು ಡಿಕ್ಕಿ ಹೊಡೆದಿದೆ. ನಂತರ ಬಸ್‌ಗೂ ಗುದ್ದಿದೆ. ಬಸ್ ಮತ್ತು ಕಾರಿನ ನಡುವೆ ಸಿಲುಕಿ ತೀವ್ರವಾಗಿ ಗಾಯಗೊಂಡ ಸ್ವಾಮಿ ದೊರೈ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು ಎಂದು ಪೊಲೀಸರು ಹೇಳಿದ್ದಾರೆ.

ಬಾಲಸುಬ್ರಮಣ್ಯಗೆ ಸರಿಯಾಗಿ ಕಾರು ಚಾಲನೆ ಮಾಡಲು ಬರುತ್ತಿರಲಿಲ್ಲ. ಅಪಘಾತದ ನಂತರ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿ, ವೈದ್ಯಕೀಯ ಪರೀಕ್ಷೆ ಮಾಡಿಸಿದಾಗ ಮದ್ಯ ಸೇವಿಸಿರುವುದು ದೃಢಪಟ್ಟಿದೆ. ಮದ್ಯದ ನಶೆಯಲ್ಲಿ ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ್ದಾನೆ. ಸ್ವಾಮಿ ದೊರೈ ಜತೆಯೇ ನಡೆದು ಹೋಗುತ್ತಿದ್ದ ಅವರ ಪತ್ನಿ ಜಯಶ್ರೀ, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅಪಘಾತಕ್ಕೀಡಾಗಿರುವ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಬಸ್ ಸಹ ಜಖಂಗೊಂಡಿದೆ. ಬ್ಯಾಟರಾಯನಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೇಯಸಿ ದೂರ: ಯುವಕ ಆತ್ಮಹತ್ಯೆ

ಬೆಂಗಳೂರು: ಪ್ರೀತಿಸುತ್ತಿದ್ದ ಯುವತಿ ದೂರವಾದಳು ಎಂಬ ಕಾರಣಕ್ಕೆ ಮನನೊಂದು ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಲಹಂಕ ನ್ಯೂ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಠಾಣಾ ವ್ಯಾಪ್ತಿಯ ಅಟ್ಟೂರು ಲೇಔಟ್ ನಿವಾಸಿ, ಬಿ.ಕಾಂ ಪದವೀಧರ ಅಭಿಷೇಕ (23) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ಖಾಸಗಿ ಕಂಪನಿಯಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಅಭಿಷೇಕ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಆದರೆ, ಆಕೆಯ ಮನೆಯವರು ಇದಕ್ಕೆ ವಿರೋಧ ವ್ಯಕ್ತಪಡಿಸಿ ಪೊಲೀಸರಿಗೆ ದೂರು ನೀಡಿದ್ದರು. ನಂತರ ಪೊಲೀಸರು ಆತನನ್ನು ಠಾಣೆಗೆ ಕರೆಯಿಸಿ, ಬುದ್ಧಿಮಾತು ಹೇಳಿ, ಎಚ್ಚರಿಕೆ ನೀಡಿ ಕಳುಹಿಸಿದ್ದರು.

ನಂತರ ಯುವತಿ ಆತನಿಂದ ಅಂತರ ಕಾಯ್ದುಕೊಂಡಿದ್ದಳು. ಆದರೂ ಅಭಿಷೇಕ ಆಕೆಯೊಂದಿಗೆ ಮಾತನಾಡುವ ಸಲುವಾಗಿ ಕರೆ ಮಾಡಲು ಪ್ರಯತ್ನಿಸುತ್ತಿದ್ದ. ಯುವತಿ ಮಾತನಾಡಲು ನಿರಾಕರಿಸಿದ್ದರಿಂದ ಬೇಸರಗೊಂಡಿದ್ದ. ಏ. 9ರಂದು ಯುವತಿಗೆ ವಿಡಿಯೊ ಕರೆ ಮಾಡಿ, ತಾನು ಸಾಯುತ್ತಿರುವುದಾಗಿ ತಿಳಿಸಿದ್ದ. ನಂತರ ಮರಣಪತ್ರ ಸಹ ಬರೆದಿಟ್ಟು, ಮನೆಯ ಕಿಟಕಿಯ ಗ್ರಿಲ್‌ಗೆ ವೈರ್‌ನಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಯುವಕನ ಸಾವಿಗೆ ಯುವತಿಯೇ ಕಾರಣ ಎಂದು ಕುಟುಂಬಸ್ಥರು ದೂರು ನೀಡಿದ್ದಾರೆ. ಇಬ್ಬರ ನಡುವಿನ ಮೊಬೈಲ್ ಸಂದೇಶ ಹಾಗೂ ಕರೆಗಳ ವಿವರ ಸಂಗ್ರಹಿಸಲು ಪೊಲೀಸರು ಮುಂದಾಗಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಗರದಲ್ಲಿ ಇಂದು

10ನೇ ರಾಷ್ಟ್ರೀಯ 'ಟೆಕ್ನೊ' ಪ್ರದರ್ಶನ: ಅತಿಥಿಗಳು: ರಾಮನಗೌಡ ವಿ. ನಾಡಗೌಡ, ಎಂ.ಮಹಾದೇವ್, ಆರ್. ಕೃಷ್ಣಮೂರ್ತಿ, ಎಸ್. ಶಿವಮಲ್ಲು, ಬಿ.ಎನ್. ಉಮೇಶ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಹಾಗೂ ಸ್ಥಳ: ಕ್ರೀಡಾ ಸಂಕೀರ್ಣ ಮತ್ತು ಪಿಎಲ್‌ಎನ್ ಕ್ರೀಡಾಂಗಣ, ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಅಂಬೇಡ್ಕರ್ ಹಬ್ಬ: ಯುವಜನರಿಗಾಗಿ ಅಂಬೇಡ್ಕರ್ ಚರ್ಚೆ, ಆಲೋಚನೆ ಮತ್ತು ಆಚರಣೆ, ಆಯೋಜನೆ ಹಾಗೂ ಸ್ಥಳ: ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 11

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಪ್ರದ್ಯುಮ್ನ ಭಟ್ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಕೃತಿ ಭಟ್, ವಿಠ್ಠಲ್ ರಂಗನ್, ಕೆ.ಯು. ಜಯಚಂದ್ರ ರಾವ್, ಸುಕನ್ಯ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ


ಗಿರಿಜಾ ಲೋಕೇಶ್

'ವರನಟ ಡಾ.ರಾಜಕುಮಾರ್ ಪ್ರಶಸ್ತಿ' ಪ್ರದಾನ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಸಾ.ರಾ. ಗೋವಿಂದು, ಪ್ರಶಸ್ತಿ ಪುರಸ್ಕೃತರು: ಗಿರಿಜಾ ಲೋಕೇಶ್, ಅತಿಥಿ: ಕೆ. ಮೋಹನ್ ರಾವ್, ಉಪಸ್ಥಿತಿ: ಸಿ.ಕೆ. ರಾಮೇಗೌಡ, ಪಿ. ಮಲ್ಲಿಕಾರ್ಜುನಪ್ಪ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5.15

'ಶ್ರೀಮದ್ರಾಮಾಯಣ' ಧಾರ್ಮಿಕ ಪ್ರವಚನ: ಕಲ್ಲಾಪುರ ಪವಮಾನಾಚಾರ್ಯ, ಆಯೋಜನೆ: ವೈಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ಮಂದಿರ, 9ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6.30

'ಸಮಗ್ರ ಮಹಾಭಾರತ' ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಹಾಗೂ ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭಾಗವತದ ಸಂದೇಶ: ಅಶೋಕಾಚಾರ್ಯ ಜೋಶಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30


ಆರ್.ಕೆ.ಪದ್ಮನಾಭ

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಆರ್. ಕೆ. ಪದ್ಮನಾಭ, ಪಿಟೀಲು: ಕೇಶವ ಮೋಹನ್ ಕುಮಾರ್, ಮೃದಂಗ: ರೇಣುಕಾ ಪ್ರಸಾದ್, ಖಂಜಿರ: ವ್ಯಾಸ ವಿಠ್ಠಲ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪಾಸ್‌ಪೋರ್ಟ್ ಜಪ್ತಿಯಿಂದ ವಿದೇಶದಲ್ಲಿನ ವಿದ್ಯಾಭ್ಯಾಸಕ್ಕೆ ತೊಂದರೆ: ಅನಂತಕುಮಾರ್ ಅಹವಾಲು

ಮಗನ ವಿರುದ್ಧ ಪ್ರಕರಣ: ರದ್ದತಿಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಮಗನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದರಿಂದಾಗಿ ಅವನ ಪಾಸ್‌ಪೋರ್ಟ್ ಜಪ್ತಿಯಾಗಿದೆ. ವಿದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದ ಅವನು ಅಲ್ಲಿಗೆ ತೆರಳಲು ತೊಂದರೆಯಾಗಿದ್ದು, ಆತನನ್ನು ಪ್ರಕರಣದಿಂದ ಕೈಬಿಡಬೇಕು' ಎಂದು ಕೇಂದ್ರದ ಮಾಜಿ ಸಚಿವ, ಬಿಜೆಪಿ ಮುಖಂಡ ಅನಂತ ಕುಮಾರ್ ಹೆಗಡೆ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಅನಂತಕುಮಾರ್ ಹೆಗಡೆ ಪುತ್ರ ಅಶುತೋಷ್ ವಿದೇಶದಲ್ಲಿ ಓದುತ್ತಿದ್ದು, ತಾಯ್ನಾಡಿಗೆ ವಾಪಸ್ ಆಗಿದ್ದರು. ಈ ವೇಳೆ ವಾಹನ ಓವರ್‌ಟೇಕ್ ವಿಷಯದಲ್ಲಿ ನಡೆದ ವಾಗ್ವಾದದ ವಿಷಯದಲ್ಲಿ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಹಲವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು.

'ನಮ್ಮ ವಿರುದ್ಧ ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಅನಂತ ಕುಮಾರ್ ಹೆಗಡೆ, ಶಶಿಧರ ಬಿದ್ದಾಡಪ್ಪ ತೆಗ್ಗಿನವರ ಮತ್ತು ಮಹೇಶ್ ರಾಜು ಶೆಟ್ಟಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಮುಖ್ಯಾಂಶಗಳು

- ವಾಹನ ಓವರ್‌ಟೇಕ್ ವಿಷಯದಲ್ಲಿ ನಡೆದ ವಾಗ್ವಾದ
- ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಹಲವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು


ಅನಂತ ಕುಮಾರ್ ಹೆಗಡೆ

ವಿಚಾರಣೆ ವೇಳೆ ಅನಂತ ಕುಮಾರ್ ಪರ ಹೈಕೋರ್ಟ್ ವಕೀಲ ಪವನಚಂದ್ರ ಶೆಟ್ಟಿ, 'ಇದು ಅರ್ಜಿದಾರರು ಮತ್ತು ದೂರುದಾರ ಸೈಫ್ ಖಾನ್ ಅವರಿದ್ದ ಕಾರುಗಳ ಓವರ್ ಟೇಕ್ ಭರದಲ್ಲಿ ಉಂಟಾದ ಮಾತಿನ ಚಕಮಕಿಯಲ್ಲಿ ನಡೆದ ವಾಗ್ವಾದದ ಕ್ರಿಮಿನಲ್ ಪ್ರಕರಣ. ಇದರಲ್ಲಿ ಅನಂತಕುಮಾರ್ ಅಥವಾ ಅಶುತೋಷ್ ಅವರ ಪಾತ್ರವಿಲ್ಲ' ಎಂದರು.

'ಸಕ್ಷಮ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಯಲ್ಲಿ ಅನಂತ ಕುಮಾರ್ ಅವರ ಅಂಗರಕ್ಷಕ ಮತ್ತು ಚಾಲಕನ ವಿರುದ್ಧ ಮಾತ್ರವೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಅಶುತೋಷ್ ವಿರುದ್ಧ ಯಾವುದೇ ಆರೋಪಗಳಿಲ್ಲ. ಈ ಪ್ರಕರಣದಿಂದಾಗಿ ಅಶುತೋಷ್ ತಮ್ಮ ಪಾಸ್‌ಪೋರ್ಟ್ ಪಡೆಯುವುದಕ್ಕೆ ಅಡ್ಡಿಯಾಗಿದೆ. ಹೀಗಾಗಿ, ಅವರ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿದರು.


ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಮುಂದಿನ ವಿಚಾರಣೆ ವೇಳೆಗೆ ಅಶುತೋಷ್‌ಗೆ ಸಂಬಂಧಿಸಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದರು.

ಕೋರಿಕೆ ಆಲಿಸಿದ ನ್ಯಾಯಪೀಠ ಇದೇ 16ರಂದು ಅನಂತಕುಮಾರ್ ಅವರ ಮನವಿ ಪರಿಗಣಿಸುವುದಾಗಿ ತಿಳಿಸಿ ವಿಚಾರಣೆ ಮುಂದೂಡಿತು. ಸೈಫ್ ಖಾನ್ ಪರ ಹೈಕೋರ್ಟ್ ವಕೀಲೆ ನವ್ಯಾಶ್ರೀ ಹಾಜರಿದ್ದರು. ನೆಲಮಂಗಲ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣದ ವಿಚಾರಣೆ ರದ್ದುಗೊಳಿಸುವಂತೆ ಅರ್ಜಿದಾರರು ಕೋರಿದ್ದಾರೆ.

ಚಿಟಿಕೆ ಸುದ್ದಿ

ಕಾಡಾನೆ ದಾಳಿ: ರೈತ ಸಾವು

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಕಣಗುಪ್ಪೆ ಗ್ರಾಮದಲ್ಲಿ ಭಾನುವಾರ ಬೆಳಿಗ್ಗೆ ಕಾಡಾನೆ ದಾಳಿಯಿಂದ ಕಣಗುಪ್ಪೆ ಗ್ರಾಮದ ರೈತ ರಾಜಶೆಟ್ಟಿ (65) ಮೃತಪಟ್ಟರು.


ರಾಜಶೆಟ್ಟಿ

ಬೆಳಿಗ್ಗೆ ತೋಟಕ್ಕೆ ತೆರಳಿದ್ದ ವೇಳೆ ಘಟನೆ ನಡೆದಿದೆ. ಕಾಡಾನೆ ಎತ್ತಿ ರಭಸವಾಗಿ ಬಿಸಾಡಿದ್ದು, ನೆಲಕ್ಕೆ ಬಿದ್ದ ಅವರನ್ನು ಕಾಲಿನಿಂದ ತುಳಿದಿದೆ. ರಾಜಶೆಟ್ಟಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಎಚ್‌.ಕೆ.ಸುರೇಶ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ, ₹20 ಲಕ್ಷ ಪರಿಹಾರದ ಚೆಕ್ ವಿತರಿಸಿದರು.

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಸಾವು

ಮಡಿಕೇರಿ: ಪೊನ್ನಂಪೇಟೆ ತಾಲ್ಲೂಕಿನ ಬಾಳೆಲೆ ಗ್ರಾಮದಲ್ಲಿ ಕೃಷಿಹೊಂಡದಲ್ಲಿ ಮುಳುಗಿ 'ಬಾಳೆಲೆ ಗ್ರಾಮದ ಕೃಷ್ಣ (22), ಗೌತಮ್ (10) ಮೃತಪಟ್ಟಿದ್ದಾರೆ. ಶನಿವಾರ ಸಂಜೆ ಅವಘಡ ಸಂಭವಿಸಿದ್ದು, ಭಾನುವಾರ ಮೃತದೇಹ ಹೊರತೆಗೆಯಲಾಯಿತು. ಪೊನ್ನಂಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಚಿವ ಸ್ಥಾನಕ್ಕೆ ಪಟ್ಟು: ದೆಹಲಿಗೆ 'ಕೈ' ದಂಡು

ವರಿಷ್ಠರ ಭೇಟಿ ಮಾಡಿ ಹಕ್ಕೊತ್ತಾಯ ಮಂಡಿಸಲು ಹಿರಿಯ ಶಾಸಕರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ಪುನರ್‌ರಚನೆಗೆ ಪಟ್ಟು ಹಿಡಿದಿರುವ ಕಾಂಗ್ರೆಸ್‌ನ 25ಕ್ಕೂ ಹೆಚ್ಚು ಹಿರಿಯ ಶಾಸಕರು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಹಕ್ಕೊತ್ತಾಯ ಮಂಡಿಸಲು ದೆಹಲಿ ವಿಮಾನ ಏರಿದ್ದಾರೆ.

ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಪಟ್ಟಣ ಮತ್ತು ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ನೇತೃತ್ವದಲ್ಲಿ ಭಾನುವಾರ ಸಂಜೆ ಶಾಸಕರ ದಂಡು ದೆಹಲಿಗೆ ಪ್ರಯಾಣ ಬೆಳೆಸಿದೆ. ಈ ತಂಡದಲ್ಲಿ ಮುಖ್ಯಮಂತ್ರಿಯವರ ಆಪ್ತ ವಲಯದ ಶಾಸಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಸಂಪುಟದಲ್ಲಿರುವ ಸುಮಾರು 20 ಹಿರಿಯ ಸಚಿವರನ್ನು ಕೈಬಿಟ್ಟು, ಹೊಸಬರಿಗೆ ಮತ್ತು ಸತತವಾಗಿ ಗೆಲ್ಲುತ್ತಾ ಬಂದಿರುವವರಿಗೆ ಅವಕಾಶ ನೀಡಬೇಕೆಂದು ಒತ್ತಡ ಹೇರಲು ಶಾಸಕರು ಮುಂದಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸೇರಿದಂತೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಈ ಶಾಸಕರು ನಿರ್ಧರಿಸಿದ್ದಾರೆ.

ಸರ್ಕಾರ ಅಸ್ತಿತ್ವಕ್ಕೆ ಬಂದು ಮೇ 20ಕ್ಕೆ ಮೂರು ವರ್ಷ ತುಂಬಲಿದೆ.

> ನಾಲ್ಕೈದು ಬಾರಿ ಮಂತ್ರಿ ಆದವರೇ ಮತ್ತೆ ಮತ್ತೆ ಮಂತ್ರಿಯಾದರೆ ಹೇಗೆ? ಉಳಿದ 2 ವರ್ಷ ನಮಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ
> **ಅಶೋಕ ಪಟ್ಟಣ,** ಆಡಳಿತ ಪಕ್ಷದ ಮುಖ್ಯ ಸಚೇತಕ

> ವರ್ಷದ ಬಳಿಕ ಸಚಿವ ಸ್ಥಾನ ಕೊಡುವುದಾಗಿ ಸಿ.ಎಂ ನನಗೆ ಹೇಳಿದ್ದರು. ಆದರೆ, ಕೊಟ್ಟಿಲ್ಲ. ಹೀಗಾಗಿ ದೆಹಲಿಗೆ ಹೋಗುತ್ತಿದ್ದೇವೆ
> **ಸಿ. ಪುಟ್ಟರಂಗ ಶೆಟ್ಟಿ,** ಚಾಮರಾಜನಗರ ಶಾಸಕ

ಪಕ್ಷಕ್ಕಾಗಿ ದುಡಿದ ಮತ್ತು ಸತತವಾಗಿ ಗೆಲುವು ಸಾಧಿಸಿದ ನಮಗೆ ಸಂಪುಟದಲ್ಲಿ ಅವಕಾಶ ನೀಡಬೇಕು. ಹೊಸಬರಿಗೆ ಸಚಿವ ಸ್ಥಾನ ನೀಡುವ ಮೂಲಕ ಆಡಳಿತಕ್ಕೆ ಚುರುಕು ಮುಟ್ಟಿಸಬೇಕು ಎನ್ನುವುದು ದೆಹಲಿಗೆ ಹೊರಟ ಶಾಸಕರ ಬೇಡಿಕೆ.

ಈ ಕುರಿತು ಪ್ರತಿಕ್ರಿಯಿಸಿದ ಪುಟ್ಟರಂಗಶೆಟ್ಟಿ, 'ನಾವೆಲ್ಲ ಹಿರಿಯ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದೇವೆ. ಎರಡು ವರ್ಷದ ನಂತರ ಅನುಕೂಲ ಮಾಡಿಕೊಡುತ್ತೇವೆಂದು ಪಕ್ಷದ ನಾಯಕರು ಈ ಹಿಂದೆ ಹೇಳಿದ್ದರು. ಆದರೆ ಇನ್ನೂ ಏನೂ ಆಗಿಲ್ಲ. ಹೀಗಾಗಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ನಿರ್ಧರಿಸಿದ್ದೇವೆ' ಎಂದರು.

ಅಶೋಕ ಪಟ್ಟಣ ಮಾತನಾಡಿ, 'ನಾವು 3–4 ದಿನ ದೆಹಲಿಯಲ್ಲಿ ಉಳಿಯುತ್ತೇವೆ. ವೇಣುಗೋಪಾಲ್, ಸುರ್ಜೇವಾಲಾ ಸೇರಿದಂತೆ ಕೆಲವು ಹೈಕಮಾಂಡ್ ನಾಯಕರನ್ನು ಭೇಟಿ ಆಗುತ್ತೇವೆ. ಈ ವಿಷಯವನ್ನು ಅಧಿವೇಶನ ಸಮಯದಲ್ಲಿ ಮುಖ್ಯಮಂತ್ರಿ ಅವರ ಮತ್ತು ಉಪ ಮುಖ್ಯಮಂತ್ರಿಯ ಗಮನಕ್ಕೆ ತಂದಿದ್ದೇವೆ' ಎಂದು ಅವರು ಹೇಳಿದರು.

'ದೆಹಲಿಗೆ ಸಿ.ಎಂ ಬೆಂಬಲಿಗರೂ ಹೋಗುತ್ತಿದ್ದಾರೆ. ಡಿ.ಕೆ. ಶಿವಕುಮಾರ್ ಬೆಂಬಲಿಗರೂ ಹೋಗುತ್ತಿದ್ದಾರೆ. ಕೂಡಲೇ ಸಂಪುಟ ಪುನರ್‌ರಚನೆ ಮಾಡಬೇಕು ಎಂಬ ಒಂದೇ ಕಾರ್ಯಸೂಚಿ ಇಟ್ಟುಕೊಂಡು ನಾವು ವರಿಷ್ಠರನ್ನು ಭೇಟಿ ಮಾಡಲು ಹೋಗುತ್ತಿದ್ದೇವೆ. ನಾಯಕತ್ವ ಬದಲಾವಣೆ ವಿಚಾರ ನಮಗೆ ಸಂಬಂಧಿಸಿಲ್ಲ' ಎಂದೂ ಅವರು ಸ್ಪಷ್ಟನೆ ನೀಡಿದರು.

'ಹಿರಿಯ ಶಾಸಕರಿಗೆ ಅವಕಾಶ ಕೊಡಬೇಕು'

'ನಾವು ಹಿರಿಯ ಶಾಸಕರು ದೆಹಲಿಗೆ ಬಂದಿದ್ದೇವೆ. ಬೆಂಗಳೂರಿನಲ್ಲಿ ಎರಡು ಸಭೆ ಮಾಡಿ, ಮುಖ್ಯಮಂತ್ರಿಯನ್ನು ಭೇಟಿ ಮಾಡಿ ವರಿಷ್ಠರನ್ನು ಭೇಟಿ ಮಾಡುವ ವಿಷಯ ತಿಳಿಸಿದ್ದೇವೆ' ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ದೆಹಲಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾವೆಲ್ಲರೂ ಎರಡು ದಿನ ದೆಹಲಿಯಲ್ಲಿದ್ದು, ವರಿಷ್ಠರನ್ನು ಭೇಟಿ ಮಾಡುತ್ತೇವೆ. ಯಾವ ಜಿಲ್ಲೆಯಲ್ಲಿ ಹಿರಿಯ ಶಾಸಕರಿಗೆ ಅವಕಾಶ ಇದೆಯೊ ಅಲ್ಲಿ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು' ಎಂದೂ ಅವರು ಆಗ್ರಹಿಸಿದರು.

ಹೈಕಮಾಂಡ್ ನಿರ್ಧಾರ ಕೈಗೊಳ್ಳಬೇಕಿದೆ: ಮುಖ್ಯಮಂತ್ರಿ

'ಸಚಿವ ಸ್ಥಾನ ಆಕಾಂಕ್ಷಿ ಶಾಸಕರು ನವದೆಹಲಿಗೆ ಭೇಟಿ ನೀಡುವುದರಲ್ಲಿ ಯಾವುದೇ ತಪ್ಪಿಲ್ಲ. ಸಂಪುಟ ಪುನರ್‌ರಚನೆ ನಿರ್ಧಾರವನ್ನು ಹೈಕಮಾಂಡ್ ಕೈಗೊಳ್ಳಬೇಕಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹಿರಿಯ ಶಾಸಕರು ಹೈಕಮಾಂಡ್ ನಾಯಕರ ಭೇಟಿಗೆ ದೆಹಲಿಗೆ ತೆರಳಿರುವ ಬಗ್ಗೆ ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರದಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅವರು ವರಿಷ್ಠರನ್ನು ಭೇಟಿ ಮಾಡುವುದಕ್ಕೆ ನನ್ನ ತಕರಾರು ಇಲ್ಲ. ಸಚಿವ ಸಂಪುಟ ಪುನರ್‌ರಚನೆ ಬಾಕಿ ಇದೆ. ಐದು ರಾಜ್ಯಗಳ ಚುನಾವಣೆ, ಬಜೆಟ್ ಅಧಿವೇಶನ ಸಂಪುಟ ಪುನರ್‌ರಚನೆ ವಿಳಂಬಕ್ಕೆ ಕಾರಣ ಇರಬಹುದು' ಎಂದರು.

ದೆಹಲಿಗೆ ತೆರಳಿದ ಶಾಸಕರು ಯಾರು?

ಎಸ್.ಎನ್.ಸುಬ್ಬಾರೆಡ್ಡಿ (ಬಾಗೇಪಲ್ಲಿ), ಪುಟ್ಟರಂಗಶೆಟ್ಟಿ (ಚಾಮರಾಜನಗರ), ಹಂಪನಗೌಡ ಬಾದರ್ಲಿ (ಸಿಂಧನೂರು), ಡಿ.ಜಿ. ಶಾಂತನಗೌಡ (ಹೊನ್ನಾಳಿ), ಜೆ.ಟಿ. ಪಾಟೀಲ (ಬೀಳಗಿ), ಬಸವರಾಜ ಶಿವಣ್ಣನವರ (ಬ್ಯಾಡಗಿ),ಎ.ಆರ್. ಕೃಷ್ಣ ಮೂರ್ತಿ (ಕೊಳ್ಳೇಗಾಲ), ಪ್ರಸಾದ್ ಅಬ್ಬಯ್ಯ (ಹು-ಧಾ ಪೂರ್ವ), ಯು.ಬಿ. ಬಣಕಾರ (ಹಿರೇಕೆರೂರು), ಜಿ.ಎಸ್. ಪಾಟೀಲ (ರೋಣ), ಯಶವಂತರಾಯ ಗೌಡ ಪಾಟೀಲ (ಇಂಡಿ), ಷಡಕ್ಷರಿ (ತಿಪಟೂರು),ಟಿ.ಬಿ. ಜಯಚಂದ್ರ (ಶಿರಾ), ಅಶೋಕ್ ಪಟ್ಟಣ (ರಾಮದುರ್ಗ), ಎಸ್.ಎನ್. ನಾರಾಯಣ್ ಸ್ವಾಮಿ (ಬಂಗಾರಪೇಟೆ), ಲಕ್ಷ್ಮಣ ಸವದಿ (ಅಥಣಿ), ಅಪ್ಪಾಜಿ ನಾಡಗೌಡ (ಮುದ್ದೇ ಬಿಹಾಳ), ರಿಜ್ವಾನ್ ಅರ್ಷದ್ (ಶಿವಾಜಿನಗರ), ಪ್ರಿಯಾಕೃಷ್ಣ (ಗೋವಿಂದರಾಜನಗರ), ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ), ವಿ. ಶಿವಣ್ಣ (ಆನೇಕಲ್), ಪಿ.ಎಂ. ನರೇಂದ್ರ ಸ್ವಾಮಿ (ಮಳವಳ್ಳಿ), ವಿನಯ್ ಕುಲಕರ್ಣಿ (ಧಾರವಾಡ), ರಾಘವೇಂದ್ರ ಹಿಟ್ನಾಳ್ (ಕೊಪ್ಪಳ), ಬೇಳೂರು ಗೋಪಾಲಕೃಷ್ಣ (ಸಾಗರ).

ಸುದ್ದಿ 2 ನಿಮಿಷ

'30 ಶಾಸಕರು ದೆಹಲಿಗೆ; ಕಾಂಗ್ರೆಸ್ ಒಳಜಗಳವಲ್ಲವೇ?'

ಬೀದರ್: '30ಕ್ಕೂ ಹೆಚ್ಚು ಜನ ಕಾಂಗ್ರೆಸ್ ಪಕ್ಷದ ಕಿರಿಯ–ಹಿರಿಯ ಶಾಸಕರು ನವದೆಹಲಿಗೆ ಹೋಗುತ್ತಿದ್ದಾರೆ. ಇದು ಕಾಂಗ್ರೆಸ್ ಒಳಜಗಳವಲ್ಲವೇ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಭಾನುವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಬಣಗಳು ಸೃಷ್ಟಿಯಾಗಿವೆ. ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಒಬ್ಬರ ಮುಖ ಒಬ್ಬರು ನೋಡುತ್ತಿಲ್ಲ. ಹಲವಾರು ಸಭೆಗಳಿಗೆ ಉಪ ಮುಖ್ಯ-ಮಂತ್ರಿಗಳು ಬರುತ್ತಿಲ್ಲ. ಇದು ಏನು ತೋರಿಸುತ್ತದೆ' ಎಂದು ಪ್ರಶ್ನಿಸಿದರು.

'ಅಧಿಕಾರಕ್ಕಾಗಿ ಕಾಂಗ್ರೆಸ್‌ನವರು ಹಂಬಲಿಸುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಬೇಕಾಗಿಲ್ಲ. ಭಿನ್ನಮತೀಯ ಶಾಸಕರು ದೆಹಲಿಗೆ ಹೋಗ್ತಾ ಇದ್ದಾರೆ. ಸಿ.ಎಂ ಅವರನ್ನ ಕೆಳಗಿಳಿಸೋಕೆ ಒಂದು ಗ್ಯಾಂಗ್, ಅವರನ್ನು ಏರಿಸೋಕೆ ಮತ್ತೊಂದು ಗ್ಯಾಂಗ್ ಹೋಗ್ತಾ ಇದೆ. ನೆಪಕ್ಕೆ ಮಾತ್ರ ಮಂತ್ರಿ ಸ್ಥಾನದ ಲಾಬಿ. ಸಿ.ಎಂ ಅವರನ್ನು ಕೆಳಗಿಳಿಸುವ ಪ್ರಯತ್ನ ನಡೀತಾ ಇದೆ' ಎಂದು ಹೇಳಿದರು.



'ಸಿಎಂ ಬದಲಾವಣೆ ಆಗೋದು ಗ್ಯಾರಂಟಿ. ಆದರೆ, ಸಿ.ಎಂ ಕುರ್ಚಿ ಬಿಡಲ್ಲ ಅಂತಿದ್ದಾರೆ. ಡಿಕೆಶಿ ಒದ್ದು ಕಿತ್ಕೋತೀನಿ ಅಂತಿದ್ದಾರೆ. ಜನ ಬೇಸತ್ತಿದ್ದಾರೆ. ಸರ್ಕಾರ ತೊಲಗಿಸೋಕೆ ನಾವು ಕೆಲಸ ಮಾಡ್ತೀವಿ' ಎಂದರು.

ಆದಿಚುಂಚನಗಿರಿಯಲ್ಲಿ ಕುಂಭಾಭಿಷೇಕ: ಎಚ್‌ಡಿಕೆ ಭಾಗಿ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಶ್ರೀಕ್ಷೇತ್ರ ಆದಿಚುಂಚ-ನಗಿರಿಯಲ್ಲಿ ಗುರುಭೈರವೈಕ್ಯ ಮಂದಿರ ಲೋಕಾರ್ಪಣೆ ಅಂಗವಾಗಿ ಭಾನುವಾರ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಕುಂಭಾಭಿಷೇಕ ನಡೆಯಿತು.


ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಪಾಲ್ಗೊಂಡಿದ್ದರು. ನಿರ್ಮಲಾನಂದನಾಥ ಸ್ವಾಮೀಜಿ ಅವರು ಭಾನುವಾರ ಬೆಳಿಗ್ಗೆಯಿಂದಲೇ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಶ್ರೀಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಸೋಮೇಶ್ವರನಾಥ ಸ್ವಾಮೀಜಿ, ಶಂಭೂನಾಥ ಸ್ವಾಮೀಜಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಸುರೇಶ್‌ಗೌಡ, ವಿಧಾನಪರಿಷತ್ ಸದಸ್ಯ ಭೋಜೇಗೌಡ ಮೊದಲಾದವರು ಪಾಲ್ಗೊಂಡಿದ್ದರು.

ಪಾರ್ಶ್ವವಾಯು ಪೀಡಿತರಿಗೆ ವರದಾನ ಆಗಬಲ್ಲ ತಂತ್ರಜ್ಞಾನ ಆವಿಷ್ಕಾರಕ್ಕೆ ಸಿದ್ಧತೆ

ಮಿದುಳು ಚೈತನ್ಯಕ್ಕೆ 'ಚಿಪ್' ಸಾಧನ

• ಎಸ್.ರವಿಪ್ರಕಾಶ್



ಬೆಂಗಳೂರು: ಪಾರ್ಶ್ವವಾಯು ಪರಿಣಾಮದಿಂದ ಅಂಗಾಂಗಗಳ ಸ್ವಾಧೀನ ಕಳೆದುಕೊಂಡವರು ಮರಳಿ ಚೈತನ್ಯ ಪಡೆಯುವುದಕ್ಕೆ ಪೂರಕವಾಗಿ ಮಿದುಳಿನ ಸಂಸ್ಕರಣಾ ವ್ಯವಸ್ಥೆ (ಬ್ರೇನ್ ಕೋ ಪ್ರಾಸೆಸರ್) ಎನ್ನುವ 'ಚಿಪ್' ಮಾದರಿಯ ಪುಟ್ಟ ಸಾಧನ ಬರಲಿದೆ.

ಪಾರ್ಶ್ವವಾಯು ಕಾಯಿಲೆಯು ಮಿದುಳಿಗೆ ಸಂಬಂಧಿಸಿದ ಸಮಸ್ಯೆ. ಇದಕ್ಕೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ, ಮಿದುಳಿನ ಕೆಲಸ ಮಾಡದ ನರತಂತುಗಳನ್ನು ಕ್ರಿಯಾಶೀಲಗೊಳಿಸುವ ಮೂಲಕ ಸಮಸ್ಯೆಯನ್ನು ಸರಿಪಡಿಸಲು ಸಾಧ್ಯ ಎಂಬ ಪ್ರಬಲ ಆಲೋಚನೆ ಕಾರ್ಯರೂಪಕ್ಕೆ ಬರುವ ಹಂತ ತಲುಪಿದೆ. ಎಐನಿಂದ ಮಿದುಳಿನ ಮೂಲಕ ನಿಸ್ತೇಜಗೊಂಡ ದೇಹದ ಇತರ ಅವಯವಗಳಿಗೆ ಸಂದೇಶ ಕಳಿಸಿ, ಚೈತನ್ಯ ರಹಿತ ಅಂಗಗಳಿಗೆ ಮರುಜೀವ ನೀಡಲು ಸಾಧ್ಯ.

ಇಂತಹದ್ದೊಂದು ಸಂಕೀರ್ಣ ಸವಾಲನ್ನು ಕಾರ್ಯಸಾಧು ಮಾಡುವ ಸಾಹಸಕ್ಕೆ ಕೈಹಾಕಿರುವುದು 'ಭಾರತೀಯ ವಿಜ್ಞಾನ ಸಂಸ್ಥೆ' ಮತ್ತು 'ಪ್ರತೀಕ್ಷಾ ಪ್ರತಿಷ್ಠಾನ'. ಮಹತ್ವಾಕಾಂಕ್ಷೆಯ ಯೋಜನೆಗೆ 'ಮೂನ್ ಶಾಟ್' ಎಂದು ಹೆಸರಿಡಲಾಗಿದೆ. ಪಾರ್ಶ್ವವಾಯು ಪೀಡಿತ ವ್ಯಕ್ತಿಯ ಮಿದುಳಿನ ಚಟುವಟಿಕೆಗಳನ್ನು ಸಹಜವಾಗಿ ಮತ್ತು ಸ್ವಯಂಚಾಲಿತವಾಗಿ ನಿರ್ವಹಿಸಲು ಸಾಧ್ಯವಾಗುವ ಪುಟ್ಟ ಪ್ರಾಸೆಸರ್ ಅಳವಡಿಸಲಾಗುತ್ತದೆ. ಇದರಿಂದ ಬಾಧಿತ ವ್ಯಕ್ತಿಯ ಅಂಗಾಂಗಗಳು ಇತರ ಸಾಮಾನ್ಯ ವ್ಯಕ್ತಿಯಂತೆ ಕಾರ್ಯನಿರ್ವಹಿಸಲು ಸಾಧ್ಯವಾಗಬೇಕು.

ಇದು ಹೇಗೆ ಸಾಧ್ಯ?: ಈ ಯೋಜನೆಯ ಮುಖ್ಯ ಉದ್ದೇಶ ಮಾನವ ನರಮಂಡಲವನ್ನು ಅನುಕರಿಸುವ ಯಂತ್ರಾಂಶ (ನ್ಯೂರೊಮಾರ್ಫಿಕ್ ಹಾರ್ಡ್‌ವೇರ್) ಮತ್ತು ಕೃತಕ ಬುದ್ಧಿಮತ್ತೆಯ ಆಲ್ಗರಿದಮ್ (ಎಐ ಆಲ್ಗರಿದಮ್) ಅನ್ನು ಒಳಗೊಂಡ ಮಿದುಳಿನ ಸಂಸ್ಕರಣಾ ವ್ಯವಸ್ಥೆ (ಬ್ರೇನ್ ಕೋ ಪ್ರಾಸೆಸರ್) ಅಭಿವೃದ್ಧಿಪಡಿಸುವುದು. ಈ ಪ್ರಾಸೆಸರ್ ಎಷ್ಟು ಚಿಕ್ಕದು ಎಂದರೆ ರೋಗಿಯ ತಲೆಬುರುಡೆಯೊಳಗೆ ಹುದುಗಿಸುವಷ್ಟು ಸಣ್ಣಗಾತ್ರದ್ದಾಗಿರುತ್ತದೆ.

ದೇಹದ ಒಳಗೆ ಅಳವಡಿಸಬಹುದಾದ ಮತ್ತು ಅಳವಡಿಕೆ ಮಾಡದೇ ಹೊರಗಿನಿಂದ ನಿಯಂತ್ರಿಸಬಹುದಾದ ಅಂದರೆ ಎರಡು ಬಗೆಯ ಬ್ರೇನ್ ಕೋ ಪ್ರಾಸೆಸರ್ ಅಭಿವೃದ್ಧಿಪಡಿಸುವುದು ಯೋಜನೆಯ ಪ್ರಾಥಮಿಕ ಉದ್ದೇಶ. ಮುಖ್ಯವಾಗಿ, ನರವ್ಯೂಹದ ಚಟುವಟಿಕೆಗಳ ಧ್ವನಿ ಮುದ್ರಿಕೆಯ ರಹಸ್ಯ ಸಂಕೇತಗಳನ್ನು ಬ್ರೇನ್ ಕೋ ಪ್ರಾಸೆಸರ್ ಅನಾವರಣಗೊಳಿಸುತ್ತದೆ. ಈ ರಹಸ್ಯ ಸಂಕೇತಗಳನ್ನು ಎಐ ಆಲ್ಗರಿದಮ್ ಸಂಸ್ಕರಿಸಿ, ಸಂದೇಶವನ್ನು ಕೋಡ್ ರೂಪಕ್ಕೆ ಪರಿವರ್ತಿಸುತ್ತದೆ. ನರಗಳ ಪ್ರಚೋದನೆ ಅಥವಾ ನರಗಳ ಪ್ರತಿಕ್ರಿಯೆ ಮೂಲಕ ಸಂದೇಶ ಗಳನ್ನು ಮಿದುಳಿಗೆ ರವಾನಿಸುತ್ತದೆ. ಪುನರ್ವಸತಿಗಾಗಿ ದಾಖಲಾಗುವ ಪಾರ್ಶ್ವವಾಯು ಪೀಡಿತರಿಗೆ ಇಂತಹ ಬ್ರೇನ್ ಕೋ ಪ್ರಾಸೆಸರ್ ಅಳವಡಿಸಲಾಗುತ್ತದೆ. ಇವರಲ್ಲಿ ಅತ್ಯಂತ ಸೂಕ್ಷ್ಮ ಎನಿಸುವ ಗ್ರಹಿಕೆಯ ಮತ್ತು ಅದಕ್ಕೆ ಪ್ರತಿಕ್ರಿಯಿಸುವ ಸಾಮರ್ಥ್ಯ ಮರು ಸ್ಥಾಪಿಸುವುದು ಯೋಜನೆಯ ಮುಖ್ಯ ಉದ್ದೇಶ.

ಸಾಮರ್ಥ್ಯ ವೃದ್ಧಿಗೊಳಿಸುವ ತಂತ್ರಜ್ಞಾನ: ಬ್ರೇನ್ ಕೋ- ಪ್ರಾಸೆಸರ್ ಮಾನವ ಮಿದುಳಿನ ಸಹಜವಾದ ಸಾಮರ್ಥ್ಯ ವನ್ನು ವೃದ್ಧಿಗೊಳಿಸುವ ಉದಯೋನ್ಮುಖ ತಂತ್ರಜ್ಞಾನವಾಗಿ ಹೊರಹೊಮ್ಮಲಿದೆ. ಇದು ಹೆಚ್ಚು ಕಮ್ಮಿ ನೈಜ ಜೀವನದ ಸನ್ನಿವೇಶಗಳಿಗೆ ತಕ್ಕಂತೆ ಸ್ಪಂದಿಸುವ ಸಾಮರ್ಥ್ಯವನ್ನು ಪಡೆಯಲಿದೆ. ಹೊರಗಿನ ನಿರ್ದೇಶನ ಅಥವಾ ನಿಯಂತ್ರಣಗಳ ಅಗತ್ಯವಿಲ್ಲ. ವಿಭಿನ್ನ ಮತ್ತು ಸಂಕೀರ್ಣ ಸಮಸ್ಯೆಗಳನ್ನು ಮಿದುಳು ಯಾವ ರೀತಿಯಲ್ಲಿ ಬಗೆಹರಿಸಬಲ್ಲದೊ ಅದಕ್ಕೆ ಬೇಕಾಗುವ ಆಳವಾದ ಅರ್ಥೈಸುವಿಕೆಯ ಜ್ಞಾನ ಎಐಗೆ ಬೇಕಾಗುತ್ತದೆ. ಅದನ್ನು ಸಾಧ್ಯವಾಗಿಸಬೇಕಾಗಿದೆ. ಸುಲಲಿತ, ಸಮನ್ವಯದಿಂದ ಕೂಡಿದ ಕೃತಕ ಬುದ್ಧಿಮತ್ತೆ ಆಧಾರಿತ ಮತ್ತು ಮಾನವ ಹಸ್ತಕ್ಷೇಪವಿಲ್ಲದೆ ತನ್ನಷ್ಟಕ್ಕೇ ತಾನೇ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಲಿದೆ.

ಈ ಯೋಜನೆಯನ್ನು ಎರಡು ಹಂತಗಳಲ್ಲಿ ನಡೆಸಲಾಗುತ್ತದೆ. ಮೊದಲ ಹಂತದಲ್ಲಿ ಪಾರ್ಶ್ವವಾಯು ಪೀಡಿತ ವ್ಯಕ್ತಿಗಳಲ್ಲಿ ಸಂವೇದಕ ಪ್ರತಿಕ್ರಿಯೆ ನೀಡುವುದಕ್ಕೆ ಪೂರಕವಾಗಿ ಬ್ರೇನ್ ಕೋ ಪ್ರಾಸೆಸರ್ ಅಭಿವೃದ್ಧಿಪಡಿಸಿ, ಮೌಲ್ಯೀಕರಿಸಿ, ಪರಿಷ್ಕರಿಸುವ ಕೆಲಸ ಆಗುತ್ತದೆ. ಎರಡನೇ ಹಂತದಲ್ಲಿ ದೇಹದಲ್ಲಿ ಹುದುಗಿಸಬಹುದಾದ ನರಮಂಡಲವನ್ನು ಅನುಕರಿಸುವ ಕೋ ಪ್ರಾಸೆಸರ್ ಸಾಧನ ಅಭಿವೃದ್ಧಿ ಪಡಿಸಲಾಗುವುದು. ಇದು ಇಂದ್ರಿಯಗಳ ಸಂವೇದನೆ ತಕ್ಕಂತೆ ಪ್ರತಿಕ್ರಿಯಿಸುವ ವ್ಯವಸ್ಥೆಯನ್ನು ಸುಸ್ಥಿತಿಗೆ ತರುವ ಮತ್ತು ಎಂಸಿಎ (ಮಿಡಲ್ ಸೆರೆಬ್ರಲ್ ಆರ್ಟರಿ) ಪಾರ್ಶ್ವವಾಯುನಿಂದ ಆದ ತೀವ್ರ ಸ್ವರೂಪದ, ಬಹು ದೋಷಗಳ ಅಥವಾ ನ್ಯೂನತೆ ನೀಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಬಲ್ಲದು.

ಈ ಯೋಜನೆಗೆ 'ಪ್ರತೀಕ್ಷಾ ಫೌಂಡೇಷನ್'ನ ಕ್ರಿಸ್ ಗೋಪಾಲಕೃಷ್ಣನ್ ಮತ್ತು ಸುಧಾ ಗೋಪಾಲಕೃಷ್ಣನ್ ಅವರು ಆರ್ಥಿಕ ನೆರವು ನೀಡಿದ್ದಾರೆ.

'ಜಾಗತಿಕ ನಾಯಕನಾಗಿ ಭಾರತ'

ಅಂತಿಮವಾಗಿ ನಮ್ಮ ಈ ಆವಿಷ್ಕಾರ ನರಸಂಬಂಧಿ ಸಮಸ್ಯೆಗಳ ಚಿಕಿತ್ಸೆಗೆ ಜಾಗತಿಕ ಮಟ್ಟದಲ್ಲಿ ಅನುಕೂಲವಾಗಬೇಕು. ನರವಿಜ್ಞಾನ ಕ್ಷೇತ್ರದಲ್ಲಿ ಮೂಲ ಸಂಶೋಧನೆ ಮತ್ತು ಅದನ್ನು ಕ್ಲಿನಿಕಲ್ ಪ್ರಯೋಗಕ್ಕೆ ಅನ್ವಯಗೊಳಿಸುವುದರಲ್ಲಿ ಭಾರತವು ಜಾಗತಿಕ ನಾಯಕನಾಗಿ ಬೆಳೆಯುತ್ತಿದೆ

ಕ್ರಿಸ್ ಗೋಪಾಲಕೃಷ್ಣನ್, ಪ್ರತೀಕ್ಷಾ ಫೌಂಡೇಷನ್

'ಬ್ರೇನ್ ಕೊ– ಪ್ರಾಸೆಸರ್ ಅಭಿವೃದ್ಧಿ'

ಈ ಯೋಜನೆಗಾಗಿ ಐಐಎಸ್‌ಸಿಯ ವಿವಿಧ ವಿಭಾಗಗಳ ಸಂಶೋಧಕರು ಒಗ್ಗೂಡಿ ಕಾರ್ಯನಿರ್ವಹಿಸಲಿದ್ದಾರೆ. ನರವಿಜ್ಞಾನ, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಬಯೋ–ಎಲೆಕ್ಟ್ರಾನಿಕ್ಸ್ ಮತ್ತು ನ್ಯೂರೊ ಮಾರ್ಫಿಕ್ಸ್ ಕಂಪ್ಯೂಟಿಂಗ್ ವಿಭಾಗದವರು ಸೇರಿ ಬ್ರೇನ್ ಕೊ– ಪ್ರಾಸೆಸರ್‌ಗಳನ್ನು ಅಭಿವೃದ್ಧಿಪಡಿಸಲಿದ್ದಾರೆ.

ಪ್ರೊ.ರಂಗರಾಜನ್, ನಿರ್ದೇಶಕ, ಐಐಎಸ್‌ಸಿ

ವೇತನ–ರಜೆ ಹೆಚ್ಚಳಕ್ಕೆ ಆಯುಷ್ ವೈದ್ಯರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೇಲ್ದರ್ಜೆಗೇರಿದ ಆಯುಷ್ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞವೈದ್ಯರ ವೇತನ ಪರಿಷ್ಕರಣೆ, ಸಾಂದರ್ಭಿಕ ರಜೆ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ಗುತ್ತಿಗೆ ಆಯುಷ್ ತಜ್ಞ ವೈದ್ಯರ ಸಂಘ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಈ ಬಗ್ಗೆ ಸಂಘದ ಅಧ್ಯಕ್ಷ ಡಾ.ಸುಕುಮಾರ ಎಸ್., ಉಪಾಧ್ಯಕ್ಷ ಬಸವರಾಜ ಕಲಶೆಟ್ಟಿ ಅವರನ್ನು ಒಳಗೊಂಡ ನಿಯೋಗ ಇಲಾಖೆ ಆಯುಕ್ತ ಸುನೀಲ್ ಪನ್ವಾರ್ ಅವರಿಗೆ ಮನವಿ ಸಲ್ಲಿಸಿದೆ.

'ರಾಜ್ಯದಲ್ಲಿ 80ಕ್ಕೂ ಹೆಚ್ಚು ಮೇಲ್ದರ್ಜೆಗೇರಿದ ಆಸ್ಪತ್ರೆಗಳಲ್ಲಿ 129 ತಜ್ಞವೈದ್ಯರು, 10 ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಕೆಲ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪ್ರತಿವರ್ಷ ನಡೆಯುವ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಪಾರದರ್ಶಕವಾಗಿ ನಡೆಸಬೇಕು. ಕಳೆದ ಹಾಗೂ ಈ ವರ್ಷದ ವೇತನ ಪರಿಷ್ಕರಣೆಗೆ ಕ್ರಮವಹಿಸಬೇಕು' ಎಂದು ಸುಕುಮಾರ ಒತ್ತಾಯಿಸಿದ್ದಾರೆ.

'ನಿಯಮಿತ ಸಿಬ್ಬಂದಿಯಂತೆ ತಜ್ಞವೈದ್ಯರ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ರಾಜ್ಯ ಮಟ್ಟದ ವಿಶೇಷ ಘಟಕವನ್ನು ಸ್ಥಾಪಿಸಬೇಕು. ಸದ್ಯ 10 ದಿನಗಳ ಸಾಂದರ್ಭಿಕ ರಜೆ ನೀಡುತ್ತಿದ್ದು, ಇತರ ಇಲಾಖೆಗಳಂತೆ 15 ದಿನಗಳ ಸಾಂದರ್ಭಿಕ ರಜೆ ಸೌಲಭ್ಯ ಒದಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸಿಬ್ಬಂದಿ ಹಾಗೂ ಔಷಧ ಕೊರತೆಯ ಸಮಸ್ಯೆಯನ್ನು ನಿವಾರಿಸಬೇಕು. ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳ (ಐಪಿಎಚ್‌ಎಸ್) ಮಾರ್ಗಸೂಚಿ ಅನುಸಾರ ಪ್ರತಿ ಆಸ್ಪತ್ರೆಯಲ್ಲಿ ಕಾಯಂ ತಜ್ಞ ವೈದ್ಯರ ಹುದ್ದೆಗಳ ಸೃಷ್ಟಿಗೆ ಕ್ರಮವಹಿಸಬೇಕು. ತಜ್ಞವೈದ್ಯರ ಸೇವೆಗಳನ್ನು ಇನ್ನಷ್ಟು ಬಲಪಡಿಸಬೇಕು' ಎಂದು ಮನವಿ ಮಾಡಿದ್ದಾರೆ.

ಕೆಪಿಸಿಎಲ್: ಜಲ ವಿದ್ಯುತ್ ಉತ್ಪಾದನೆಯಲ್ಲಿ ದಾಖಲೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮವು (ಕೆಪಿಸಿಎಲ್) 2025-26ನೇ ಸಾಲಿನಲ್ಲಿ 15,509 ದಶಲಕ್ಷ ಯೂನಿಟ್ ಜಲ ವಿದ್ಯುತ್ ಉತ್ಪಾದಿಸುವ ಮೂಲಕ ದಾಖಲೆ ಮಾಡಿದೆ.

ಕೇಂದ್ರ ಅಂಕಿ–ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವರದಿಯ ಪ್ರಕಾರ 2025-26ನೇ ಸಾಲಿನಲ್ಲಿ ಕೆಪಿಸಿಎಲ್ 3.63 ಗಿಗಾವಾಟ್ ವಿದ್ಯುತ್‌ನೊಂದಿಗೆ ಜಲ ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದೆ. ಶರಾವತಿ ಕಣಿವೆಯಲ್ಲಿ ನಾಲ್ಕು, ಕಾಳಿ ಕಣಿವೆಯ ನಾಲ್ಕು, ವಾರಾಹಿ ಕಣಿವೆ ಮತ್ತು ಕಾವೇರಿ ಕಣಿವೆಯ ತಲಾ ಎರಡು, ಕೃಷ್ಣಾ ಮತ್ತು ತುಂಗಭದ್ರಾ ನದಿಗಳಲ್ಲಿ ತಲಾ ಒಂದು ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ 15,509 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ. 2024-25ನೇ ಸಾಲಿನಲ್ಲಿ 13,853 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಿರುವುದು ಇದುವರೆಗಿನ ದಾಖಲೆಯಾಗಿತ್ತು.

'ಕೆಪಿಸಿಎಲ್ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಶ್ರಮಿಸುತ್ತಿದೆ. ಶಿವನಸಮುದ್ರ, ಶಿಂಷಾ, ಶರಾವತಿ ಹಾಗೂ ಮಹಾತ್ಮ ಗಾಂಧಿ ಜಲ ವಿದ್ಯುತ್ ಕೇಂದ್ರದ ಕೆಲವು ಘಟಕಗಳು ರಾಜ್ಯದ ಅತ್ಯಂತ ಹಳೆಯ ಜಲವಿದ್ಯುತ್ ಕೇಂದ್ರಗಳಾಗಿದ್ದರೂ, ಈ ಘಟಕಗಳ ಕಾರ್ಯಕ್ಷಮತೆ ಗಮನಾರ್ಹವಾಗಿದೆ. ಉತ್ತಮ ನಿರ್ವಹಣೆಯಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದೆ' ಎಂದು ಕೆಪಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ತಿಳಿಸಿದ್ದಾರೆ. 'ಕಳೆದ ವರ್ಷ ಹೆಚ್ಚು ಮಳೆ ಬಿದ್ದಿರುವುದರ ಜತೆಗೆ ವಿದ್ಯುತ್ ಸ್ಥಾವರಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಿರುವುದರಿಂದ ರಾಜ್ಯದ ಜಲ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆಯಾಗಿದೆ' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ವಿದ್ಯುತ್ ದೀಪಾಲಂಕಾರ

ಪ್ರಜಾವಾಣಿ ಚಿತ್ರ: **ತಾಜುದ್ದೀನ್ ಆಜಾದ್**



ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಕಲಬುರಗಿಯ ಜಗತ್ ವೃತ್ತದಲ್ಲಿ ಅಂಬೇಡ್ಕರ್ ಹಾಗೂ ಸಂಸತ್ ಭವನದ ಪ್ರತಿಕೃತಿಗೆ ಮಾಡಿದ್ದ ವಿದ್ಯುತ್ ದೀಪಾಲಂಕಾರದ ದೃಶ್ಯ ಭಾನುವಾರ ಗಮನ ಸೆಳೆಯಿತು

ಕಾರಿನಲ್ಲಿದ್ದ ₹30 ಲಕ್ಷ ಕಳವು

ಪ್ರಜಾವಾಣಿ ವಾರ್ತೆ

ಹಾನಗಲ್ (ಹಾವೇರಿ ಜಿಲ್ಲೆ): ತಾಲ್ಲೂಕಿನ ಬಾಳಂಬೀಡ ಗ್ರಾಮದ ಬಳಿ ಶನಿವಾರ ರಾತ್ರಿ ಕಾರಿನಲ್ಲಿ ಇಟ್ಟಿದ್ದ ₹30 ಲಕ್ಷ ಕಳವಾದ ಘಟನೆ ನಡೆದಿದೆ.

ಶಿರಸಿಯ ಅಡಿಕೆ ವ್ಯಾಪಾರಿ ಅಬ್ದುಲ್‌ರಹೀಮ್ ಸಿಕ್ಕಲಗಾರ ಅವರು ₹30 ಲಕ್ಷ ಹಣವನ್ನು ಕಾರಿನಲ್ಲಿ ಸಾಗಿಸುವಾಗ ಶಿರಸಿ-ಹಾವೇರಿ ರಸ್ತೆಯ ಬಾಳಂಬೀಡ ಗ್ರಾಮದ ಬಳಿ ರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ, ಮೂತ್ರ ವಿಸರ್ಜನೆಗೆ ತೆರಳಿದ ವೇಳೆ ಕಾರಿನ ಕಿಟಕಿ ಗಾಜು ಒಡೆದು ಹಣ ದೋಚಲಾಗಿದೆ.

ಹಣ ದೋಚುತ್ತಿದ್ದ ಇಬ್ಬರನ್ನು ತಡೆಯಲು ಯತ್ನಿಸಿದ ತಮ್ಮ ಮೇಲೆ ಹಲ್ಲೆಯಾಗಿದ್ದು, ಕೈ ಮತ್ತು ಹಣೆ ಭಾಗಕ್ಕೆ ಗಾಯವಾಗಿದೆ ಎಂದು ಅಬ್ದುಲ್‌ರಹೀಮ್ ಆಡೂರ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.

ಅರೆ ವೈದ್ಯಕೀಯ: ರಾಷ್ಟ್ರೀಯ ಆಯೋಗಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಮನವಿ

ಪಿಯು ಕಡ್ಡಾಯ: ಕಾಲೇಜುಗಳ ಆಕ್ಷೇಪ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅರೆ ವೈದ್ಯಕೀಯ ಕೋರ್ಸ್‌ಗಳಿಗೆ (ಪ್ಯಾರಾ ಮೆಡಿಕಲ್) ವಿಜ್ಞಾನ ವಿಷಯದಲ್ಲಿ ದ್ವಿತೀಯ ಪಿಯು ಪೂರೈಸಿದ ವಿದ್ಯಾರ್ಥಿಗಳಿಗೇ ಪ್ರವೇಶ ನೀಡುವುದನ್ನು ಕಡ್ಡಾಯಗೊಳಿಸಿರುವ ಆದೇಶವನ್ನು ಪುನರ್ ಪರಿಶೀಲಿಸುವಂತೆ ಅಲೈಡ್ ಮತ್ತು ಹೆಲ್ತ್‌ಕೇರ್ ರಾಷ್ಟ್ರೀಯ ಆಯೋಗಕ್ಕೆ ಕರ್ನಾಟಕ ವೈದ್ಯಕೀಯ ಶಿಕ್ಷಣ ಇಲಾಖೆ ಮನವಿ ಮಾಡಿದೆ.

ಇದುವರೆಗೂ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರೆ ವೈದ್ಯಕೀಯ (ಡಿಪ್ಲೊಮಾ) ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದರು. ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ನಂತರ ಪ್ರಯೋಗಾಲಯ ತಂತ್ರಜ್ಞಾನ, ವೈದ್ಯಕೀಯ ಪ್ರತಿಫಲನ, ಶಸ್ತ್ರಚಿಕಿತ್ಸಾ ತಂತ್ರಜ್ಞಾನ, ಡಯಾಲಿಸಿಸ್, ಆರೋಗ್ಯ ಸಹಾಯಕರು, ಫಿಸಿಯೋಥೆರಪಿ, ಕಣ್ಣಿನ ತಂತ್ರಜ್ಞಾನ, ಶರೀರಶಾಸ್ತ್ರ, ಅಂಗರಚನಾ ಶಾಸ್ತ್ರ, ಸೂಕ್ಷ್ಮ ಜೀವವಿಜ್ಞಾನ, ಸಮುದಾಯ ಔಷಧ, ರೋಗಶಾಸ್ತ್ರ, ವಿಧಿವಿಜ್ಞಾನ ಔಷಧ, ಜೀವರಸಾಯನ ಶಾಸ್ತ್ರ ಸೇರಿದಂತೆ ವಿವಿಧ ಕೋರ್ಸ್‌ಗಳನ್ನು ಪೂರೈಸಿ, ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಉದ್ಯೋಗದ ಅವಕಾಶಗಳನ್ನು ಪಡೆಯುತ್ತಿದ್ದರು. ಎರಡು ಅಥವಾ ಮೂರು ವರ್ಷಗಳ ಉದ್ಯೋಗಾಧಾರಿತ ಅರೆ ವೈದ್ಯಕೀಯ ಕೋರ್ಸ್‌ಗಳನ್ನು ಪೂರೈಸಿದ ನಂತರ ಕೆಲವರು ಎರಡನೇ ವರ್ಷದ ಪದವಿ ಕೋರ್ಸ್‌ಗಳಿಗೆ ನೇರ ಪ್ರವೇಶ ಪಡೆಯುತ್ತಿದ್ದರು.

'ವಿಜ್ಞಾನ ವಿಷಯದಲ್ಲಿ ಪದವಿಪೂರ್ವ ಶಿಕ್ಷಣ ಪೂರೈಸಿದ ವಿದ್ಯಾರ್ಥಿಗಳಿಗೆ ವಿಫಲ ಅವಕಾಶಗಳಿವೆ. ವೈದ್ಯಕೀಯ, ದಂತ ವೈದ್ಯಕೀಯ, ಪಶುವೈದ್ಯಕೀಯ, ಆಯುಷ್ ಕೋರ್ಸ್‌ಗಳು, ಡಿ.ಫಾರ್ಮಾ, ಎಂಜಿನಿಯರಿಂಗ್, ಬಿಎಸ್‌ಸಿ ಕೃಷಿ, ಬಿಎಸ್‌ಸಿ ನರ್ಸಿಂಗ್ ಸೇರುತ್ತಾರೆ. ಮೂರು ವರ್ಷಗಳ ವಿಜ್ಞಾನ ಪದವಿ ಓದಬಹುದು. ಆದರೆ, ಗ್ರಾಮೀಣ ಪ್ರದೇಶ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಚ್ಚಿನ ಸಂಖ್ಯೆಯ ಮಕ್ಕಳು ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದ ನಂತರ ಉದ್ಯೋಗ ಪಡೆಯುವ ನಿರೀಕ್ಷೆಯಲ್ಲಿ ಅರೆ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದರು. ಅಲೈಡ್ ಮತ್ತು ಹೆಲ್ತ್‌ಕೇರ್ ರಾಷ್ಟ್ರೀಯ ಆಯೋಗದ ನಿರ್ಧಾರ ಇಂತಹ ಮಕ್ಕಳ ವೃತ್ತಿ ಶಿಕ್ಷಣದ ಅವಕಾಶ ಹಾಗೂ ಉದ್ಯೋಗದ ಭರವಸೆಯನ್ನೇ ಕಿತ್ತುಕೊಳ್ಳಲಿದೆ' ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ಆತಂಕ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಸೇರಿ 640 ಅರೆ ವೈದ್ಯಕೀಯ ಕಾಲೇಜುಗಳಿವೆ. 2026–27ನೇ ಸಾಲಿನಿಂದಲೇ ಪಿಯು ಪೂರೈಸಿದ ವಿದ್ಯಾರ್ಥಿಗಳನ್ನೇ ಪ್ರವೇಶಕ್ಕೆ ಪರಿಗಣಿಸಬೇಕು ಎಂಬ ಆದೇಶ ವಾಪಸ್ ಪಡೆಯಬೇಕು ಎಂದು ಕಾಲೇಜು ಆಡಳಿತ ಮಂಡಳಿಗಳು ಒತ್ತಾಯಿಸಿವೆ.

ಮುಖ್ಯಾಂಶಗಳು

- ಆದೇಶ ವಾಪಸ್‌ಗೆ ಕಾಲೇಜುಗಳ ಒತ್ತಾಯ
- ಉದ್ಯೋಗದ ಅವಕಾಶ ಕಿತ್ತುಕೊಳ್ಳದಂತೆ ಕೋರಿಕೆ

ಅಂಕಿ ಅಂಶಗಳು

32 ಸರ್ಕಾರಿ ಅರೆ ವೈದ್ಯಕೀಯ ಕಾಲೇಜುಗಳು

608 ಖಾಸಗಿ ಅರೆ ವೈದ್ಯಕೀಯ ಕಾಲೇಜುಗಳು

15,633 2024–25ನೇ ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು

ಏಳು ವರ್ಷ ವ್ಯಯ

ಹಲವು ಅರೆ ವೈದ್ಯಕೀಯ ಕೋರ್ಸ್‌ಗಳನ್ನು (ಪ್ಯಾರಾ ಮೆಡಿಕಲ್) ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನ ಎಂದು ರಾಜ್ಯ ಸರ್ಕಾರ ಪರಿಗಣಿಸಿರಲಿಲ್ಲ.

ಎಲ್ಲ ಅರೆ ವೈದ್ಯಕೀಯ ಕೋರ್ಸ್‌ಗಳನ್ನು ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನ ಎಂದು ಪರಿಗಣಿಸಲು ಕೋರಿ ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಪ್ರಾಧಿಕಾರ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು.

ಪದವಿಪೂರ್ವ ಶಿಕ್ಷಣಕ್ಕೆ ತತ್ಸಮಾನ ಎಂದು ಪರಿಗಣಿಸಿದರೆ ಸಾವಿರಾರು ವಿದ್ಯಾರ್ಥಿಗಳ ಪದವಿ ಶಿಕ್ಷಣಕ್ಕೆ ನೆರವಾಗುತ್ತದೆ. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ ಇಂತಹ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಕೋರಲಾಗಿತ್ತು. ಈಗ ಪಿಯು ಪೂರೈಸಿದ ವಿದ್ಯಾರ್ಥಿಗಳಿಗಷ್ಟೇ ಪ್ರವೇಶ ನೀಡುವ ನಿರ್ಧಾರದಿಂದ ಎಸ್‌ಎಸ್‌ಎಲ್‌ಸಿ ನಂತರ ಪದವಿ ಪೂರೈಸಲು ಏಳು ವರ್ಷಗಳನ್ನು ವ್ಯಯಿಸಬೇಕಾಗುತ್ತದೆ.



> ಅರೆ ವೈದ್ಯಕೀಯ ಪ್ರವೇಶಕ್ಕೆ ಪಿಯು ಕಡ್ಡಾಯ ನಿರ್ಧಾರ ಕಾಲೇಜುಗಳಿಗೆ ತೊಡಕಾಗಿದೆ. ನಿಯಮ ಎಲ್ಲ ರಾಜ್ಯಗಳಿಗೂ ಅನ್ವಯವಾಗುತ್ತದೆ. ತಿದ್ದುಪಡಿ ಸಾಧ್ಯವಿಲ್ಲ ಎಂದು ಆಯೋಗ ಹೇಳಿದೆ
> **ಶರಣಪ್ರಕಾಶ ಪಾಟೀಲ,** ವೈದ್ಯಕೀಯ ಶಿಕ್ಷಣ ಸಚಿವ



> ಹೊಸ ನೀತಿಯಿಂದ ಅರೆ ವೈದ್ಯಕೀಯ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಕೊರತೆ ಎದುರಾಗಿ ಶೇ 90ರಷ್ಟು ಕಾಲೇಜುಗಳು ಬಾಗಿಲು ಮುಚ್ಚಲಿವೆ. ಉಪನ್ಯಾಸಕರು, ಸಿಬ್ಬಂದಿ ಕೆಲಸ ಕಳೆದುಕೊಳ್ಳಲಿದ್ದಾರೆ
> **ಅನಿಲ್ ಜಾನ್ ಕ್ರಿಸ್ಟೋಫರ್,** ಮುಖ್ಯಸ್ಥ, ಸಿಎನ್‌ಕೆ ಶಿಕ್ಷಣ ಸಂಸ್ಥೆಗಳು

ದಶಕಗಳ ಬೇಡಿಕೆ; ₹38.50 ಕೋಟಿ ವೆಚ್ಚದಲ್ಲಿ ನಿರ್ಮಾಣ • ಇಂದು ಲೋಕಾರ್ಪಣೆ

ಭದ್ರಾ ಹಿನ್ನೀರಿನಲ್ಲಿ ಅರ್ಧ ಕಿ.ಮೀ ಸೇತುವೆ

ಪ್ರಜಾವಾಣಿ ವಾರ್ತೆ


ಚಿಕ್ಕಮಗಳೂರು: ಭದ್ರಾ ಹಿನ್ನೀರಿನಲ್ಲಿ ರಸ್ತೆ ಮುಳುಗಿದ್ದ ಕಾರಣ, ಪರ್ಯಾಯವಾಗಿ ಸೇತುವೆ ನಿರ್ಮಿಸಬೇಕು ದಶಕಗಳ ಬೇಡಿಕೆ ಈಡೇರಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೊಸ ಸೇತುವೆ ಲೋಕಾರ್ಪಣೆ ಮಾಡಲಿದ್ದಾರೆ.

ಭದ್ರಾ ಅಣೆಕಟ್ಟೆ ನಿರ್ಮಾಣಕ್ಕೂ ಮೊದಲು ತಾಲ್ಲೂಕು ಕೇಂದ್ರದಿಂದ ಹೊನ್ನೆಕೂಡಿಗೆ, ಹಂದೂರು, ಚಿನ್ನಕೂಡಿಗೆ, ಚಿಕ್ಕಂದೂರು ಮಾರ್ಗವಾಗಿ ನಾಗೇಸಾಲೂರು, ಬಿಳಾಲ್ ಕೊಪ್ಪ, ಕಲ್ಮನೆಯ ಮೂಲಕ ಭದ್ರಾನದಿಗೆ ಮತ್ತು ಹೆಬ್ಬೆ ಗ್ರಾಮದಲ್ಲಿದ್ದ ರೈಲು ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿತ್ತು.

ಅಣೆಕಟ್ಟೆ ನಿರ್ಮಾಣದ ಬಳಿಕ ಹಿನ್ನೀರು ಆವರಿಸಿ ಈ ಸಂಪರ್ಕ ಕಡಿದು ಹೋಯಿತು. ಇಲ್ಲಿ ಸೇತುವೆ ನಿರ್ಮಾಣಕ್ಕೆ ಗ್ರಾಮಸ್ಥರು ಹಲವು ಬಾರಿ ಮನವಿ ಸಲ್ಲಿಸಿದ್ದರು. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು 2016ರ ಜೂನ್ 3ರಂದು ಪಟ್ಟಣಕ್ಕೆ ಬಂದಿದ್ದ ಸಂದರ್ಭದಲ್ಲಿ ಸೇತುವೆ ನಿರ್ಮಾಣಕ್ಕೆ ಅಂದಿನ ವಿಧಾನ ಪರಿಷತ್ ಸದಸ್ಯರಾಗಿದ್ದ ಎಂ. ಶ್ರೀನಿವಾಸ್ ಮನವಿ ಮಾಡಿದ್ದರು.

ಸೇತುವೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸಿದ್ದರಾಮಯ್ಯ ಆದೇಶ ನೀಡಿದ್ದರು. ತಾಂತ್ರಿಕ ಸಮಿತಿ ಸ್ಥಳಕ್ಕೆ ಭೇಟಿ ನೀಡಿ ಕ್ರಿಯಾಯೋಜನೆ ರೂಪಿಸಿ ₹20 ಕೋಟಿ ಬೇಕಾಗಲಿದೆ ಎಂದು ವರದಿ ನೀಡಿತ್ತು. ಅನುದಾನ ಒದಗಿಸಿದ್ದ ಸಿದ್ದರಾಮಯ್ಯ, 2017ರ ನ. 30ರಂದು ಶಂಕುಸ್ಥಾಪನೆ ನೆರವೇರಿಸಿದ್ದರು. ಪುನಃ ತಾಂತ್ರಿಕ ಸಮಿತಿಯ ಸಲಹೆ ಮೇರೆಗೆ ₹34.85 ಕೋಟಿ ಅನುದಾನ ಬಿಡುಗಡೆಯಾಯಿತು. 2018ರಲ್ಲಿ ಆರಂಭವಾಗಿದ್ದ ಕಾಮಗಾರಿ 2021ರಲ್ಲಿ ಪೂರ್ಣಗೊಳ್ಳಬೇಕಿತ್ತು. ಸರ್ಕಾರದ ಬದಲಾವಣೆ, ಕೋವಿಡ್ ಮತ್ತಿತರ ಕಾರಣಗಳಿಂದ ಕಾಮಗಾರಿ ಕುಂಟುತ್ತ ಸಾಗಿತ್ತು. ಕಾಮಗಾರಿ ಮೊತ್ತ ಮತ್ತಷ್ಟು ಹೆಚ್ಚಾಗಿ ಒಟ್ಟು ₹38.50 ಕೋಟಿಯಲ್ಲಿ 504 ಮೀಟರ್ ಉದ್ದದ ಸೇತುವೆ ನಿರ್ಮಾಣಗೊಂಡಿದೆ.

ಹೊನ್ನೆಕೂಡಿಗೆ ಗ್ರಾಮದಿಂದ ಸುತ್ತಿ ಬಳಸಿ ಎನ್.ಆರ್.ಪುರ ತಲುಪಲು 20 ಕಿ.ಮೀ. ದೂರವಾಗುತ್ತಿತ್ತು. ಹೊಸ ಸೇತುವೆ ನಿರ್ಮಾಣದಿಂದ ಕ್ರಮಿಸುವ ಅಂತರ 5 ಕಿ.ಮೀ.ಗೆ ತಗ್ಗಲಿದೆ.



ಭದ್ರಾ ಹಿನ್ನೀರಿನಲ್ಲಿ ಮುಳುಗಿದ್ದ ರಸ್ತೆಗೆ ನಿರ್ಮಾಣವಾಗಿರುವ ಸೇತುವೆ

> ಎನ್.ಆರ್.ಪುರ ಸೇತುವೆ ಕಾಮಗಾರಿಗೆ ನಾನೇ ಶಂಕುಸ್ಥಾಪನೆ ನೆರವೇರಿಸಿದ್ದೆ, ನಾನೇ ಉದ್ಘಾಟನೆ ಮಾಡುತ್ತಿರುವುದು ಸಂತಸ ತಂದಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಉದ್ಯೋಗ ಕಿರಣ

ಕನ್ಸಲ್ಟ್‌ಬೇ (ConsultBae): ರಿಕ್ರೂಟ್‌ಮೆಂಟ್ ಟೀಮ್ ಇಂಟರ್ನ್‌ಗಳನ್ನು ನೇಮಿಸಿಕೊಳ್ಳಲಿದೆ. ರಿಕ್ರೂಟ್ ಮೆಂಟ್ ಬಗ್ಗೆ ಅರಿವಿರುವ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡುವ ಕೌಶಲ ಇರುವ ವಿದ್ಯಾರ್ಥಿಗಳು ಮೇ 10ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000–8,000. ಸಂಪರ್ಕ: internshala.com/i/153889.

ಡ್ಯಾಷ್‌ಟೂನ್: ಕ್ರಿಯೇಟಿವ್ ರೈಟಿಂಗ್ ಇಂಟರ್ನ್‌ಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಿದೆ. ಸೃಜನಾತ್ಮಕ ಬರವಣಿಗೆ ಹಾಗೂ ಇಂಗ್ಲಿಷ್‌ನಲ್ಲಿ ಬರೆಯುವ ಕೌಶಲ ಇರುವವರು ಮೇ 9ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000. ಸಂಪರ್ಕ: internshala.com/i/81e2ab.

ಹಂಸಿ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್: ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್) ಇಂಟರ್ನ್‌ಗಳನ್ನು ನೇಮಿಸಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್, ಇ-ಮೇಲ್ ಮಾರ್ಕೆಟಿಂಗ್, ಇಂಗ್ಲಿಷ್‌ನಲ್ಲಿ ಬರೆಯುವ ಸಾಮರ್ಥ್ಯ, ಎಂಎಸ್ ಎಕ್ಸೆಲ್ ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಅರಿತಿರುವವರು ಮೇ 1ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 13,000. ಸಂಪರ್ಕ: https://tinyurl.com/3a9pwtmv.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

LivNSense: ಫೈನಾನ್ಸ್ ಮತ್ತು ಅಕೌಂಟಿಂಗ್ ಇಂಟರ್ನ್‌ಗಳ ನೇಮಕಕ್ಕೆ ಅರ್ಜಿ ಆಹ್ವಾನಿಸಿದೆ. ಬಜೆಟ್ ನಿರ್ವಹಣೆ, ಫೈನಾನ್ಸ್ ರಿಪೋರ್ಟಿಂಗ್, ಎಂಎಸ್ ಎಕ್ಸೆಲ್, ಎಂಎಸ್ ಪವರ್‌ಪಾಯಿಂಟ್, ಪೇರೋಲ್ ಮತ್ತು ಟ್ಯಾಲಿ ಕುರಿತು ಜ್ಞಾನ ಇರುವವರು ಮೇ 10ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000–15,000 ಸಂಪರ್ಕ: internshala.com/i/cfaba6.

ಸುಹಾಸ್ ಡಿಸ್ಪೈನರ್ಸ್ ಎಲ್‌ಎಲ್‌ಪಿ: ಕಸ್ಟಮರ್ ಸಕ್ಸಸ್ & ಆಪರೇಷನ್ಸ್ ಇಂಟರ್ನ್‌ಗಳನ್ನು ನೇಮಿಸಿಕೊಳ್ಳಲಿದೆ. ಅರ್ಜಿದಾರರು ಕ್ಲೈಂಟ್ ಇಂಟರ‍್ಯಾಕ್ಷನ್, ಕ್ಲೈಂಟ್ ರಿಲೇಷನ್‌ಷಿಪ್, ಕ್ಲೈಂಟ್ ರಿಲೇಷನ್‌ಷಿಪ್ ಮ್ಯಾನೇಜ್‌ಮೆಂಟ್ (ಸಿಆರ್‌ಎಂ), ಪರಿಣಾಮಕಾರಿ ಸಂವಹನ, ಎಂಎಸ್ ಆಫೀಸ್ ಮತ್ತು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಬಗ್ಗೆ ಜ್ಞಾನ ಉಳ್ಳವರಾಗಿರಬೇಕು. ಆಸಕ್ತರು ಏಪ್ರಿಲ್ 30ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 13,500–19,500. ಸಂಪರ್ಕ: internshala.com/i/b06196.

ರೂರಲ್ ಎಕ್ವಿಪ್ ಪ್ರೈವೇಟ್ ಲಿಮಿಟೆಡ್: ಪ್ರಾಡಕ್ಟ್ ಮ್ಯಾನೇಜ್‌ಮೆಂಟ್ ಇಂಟರ್ನ್‌ಗಳನ್ನು ನೇಮಿಸಿಕೊಳ್ಳಲಿದೆ. ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ ಇರುವ, ಜಾವಾ, No?code development, Node.js, ಪಿಎಚ್‌ಪಿ, ಪ್ರಾಡಕ್ಟ್ ಲೈಫ್‌ಸೈಕಲ್ ಮ್ಯಾನೇಜ್‌ಮೆಂಟ್ (ಪಿಎಲ್‌ಎಂ), ಪ್ರಾಡಕ್ಟ್ ಮ್ಯಾನೇಜ್‌ಮೆಂಟ್ ಮತ್ತು ರಿಯಾಕ್ಟ್ ಬಗ್ಗೆ ಜ್ಞಾನ ಇರುವವರು ಏಪ್ರಿಲ್ 30ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 5,000–12,000. ಸಂಪರ್ಕ: https://tinyurl.com/2ssympza.

ವಿದ್ಯಾರ್ಥಿ ವೇತನ ಕೈಪಿಡಿ

ಐಡಿಆರ್‌ಬಿಟಿ ಯೋಜನೆ

ಐಡಿಆರ್‌ಬಿಟಿ ಸಂಸ್ಥೆಯ ಈ ಯೋಜನೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಾಜೆಕ್ಟ್‌ಗಳನ್ನು ಮಾಡಬಯಸುವ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಅವಕಾಶ ಒದಗಿಸಿಕೊಡುತ್ತದೆ. ಐಟಿ ಮತ್ತು ಸಂಬಂಧಿತ ವಿಭಾಗಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪೂರ್ಣಗೊಳಿಸಲಿರುವವರು ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ₹ 14,000 ಮಾಸಿಕ ಸ್ಟೈಪೆಂಡ್

ಅರ್ಜಿ ಸಲ್ಲಿಸಲು ಕೊನೇ ದಿನ: 15-04-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/IDSI2

ವಿಪ್ರೊ ಕನ್ಯಾಜ್ಞಾನ

ವಿಪ್ರೊ ಸಂಸ್ಥೆಯ ಈ ಉಪಕ್ರಮವು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರು ಸ್ಟೆಮ್ ವಿಷಯಗಳಲ್ಲಿ ಪದವಿ ಪಡೆಯಲು ಅವಕಾಶ ಮಾಡಿಕೊಡುತ್ತದೆ.

ಅರ್ಹತೆ: ಬಿ.ಟೆಕ್/ಬಿ.ಇ., ಬಿ.ಎಸ್ಸಿ., ಬಿ.ಸಿ.ಎ. ಮುಂತಾದ ವಿಷಯಗಳನ್ನು ಒಳಗೊಂಡ ಪ್ರಥಮ ಅಥವಾ ದ್ವಿತೀಯ ವರ್ಷದ ಪದವಿ ಓದುತ್ತಿರಬೇಕು. ಎನ್‌ಐಆರ್‌ಎಫ್ ಶ್ರೇಣಿ ಕಾಲೇಜಿನ ವಿದ್ಯಾರ್ಥಿನಿಯರಾಗಿರಬೇಕು. ಸರ್ಕಾರಿ ಕಾಲೇಜಿಗೆ ಆದ್ಯತೆ. ಪೋಷಕರ ಆದಾಯ ಎಲ್ಲ ಮೂಲಗಳಿಂದ ವಾರ್ಷಿಕ ₹ 5 ಲಕ್ಷ ಮೀರಿರಬಾರದು. ಅರ್ಜಿದಾರರು ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಹಾಗೂ ಇತ್ತೀಚಿನ ಶೈಕ್ಷಣಿಕ ವರ್ಷ ಅಥವಾ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 70ರಷ್ಟು ಅಂಕಗಳನ್ನು ಪಡೆದಿರಬೇಕು.

ಆರ್ಥಿಕ ನೆರವು: ಮೂರು ವರ್ಷಗಳ ಅವಧಿಗೆ ವರ್ಷಕ್ಕೆ ₹ 60,000 ನಿಶ್ಚಿತ ವಿದ್ಯಾರ್ಥಿವೇತನ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೇ ದಿನ: 15-04-2026

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: Short Url: www.b4s.in/praja/VKGSP1

‘ನೀಟ್’ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

‘ಸಿಇಟಿ’ ಗಣಿತ ವಿಷಯದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

52) Identify the statement that is NOT correct.

(a) Constant region of heavy and light chains are located at C-terminus of antibody molecules

(b) Each antibody has two light and two heavy chains.

(c) The heavy and light chains are held together by disulfide bonds.


(d) Antigen binding site is located at C-terminal region of antibody molecules.

Ans:- (d)

Expln:- Each antibody molecule has four peptide chains, two small called light chains and two longer called heavy chains. Hence, an antibody is represented as H_2L_2.

In an antibody molecule, antigen binding site is located at N-terminal region.

53)



In the diagram of the graafian follicle different parts are indicated by alphabets, choose the choice in which these alphabets are correctly matched with the parts –

a) A = Membrana granulosa; B = Theca interna; C = Ovum; D = Cumulus oophorus; E = Antrum; F = Theca externa

b) A = Theca externa; B = Theca interna; C = Ovum; D= Membrana granulosa; E=Antrum; F = Cumulus oophorus

c) A = membrana granulose, B = ovum, C = cumulus oophorus, D = Antrum, E = Theca interna, G = Theca externa.

d) A = Membrana granulosa; B = Theca externa; C = Ovum; D = Cumulus oophorus; E = Antrum; F = Theca interna

Ans:- d

54) Given below are a few statements related to external fertilization. Choose the correct statements.

i. The male and female gametes are formed and released simultaneously

ii. Only a few gametes are released into the medium

iii. Water is the medium in a majority of organisms exhibiting external fertilization

iv. Offspring formed as result of external fertilization have better chance of survival than those formed inside an organism

a) iii and iv   b) i and iii
c) ii and iv   d) i and iv

Ans:- b

55) The statements given below describe certain features that are observed in the pistil of flowers.

i. Pistil may have many carpels
ii. Each carpel may have more than one ovule
iii. Each carpel has only one ovule
iv. Pistil have only one carpel

Choose the statements that are true from the options below:

a) i and ii   b) i and iii
c) ii and iv   d) iii and iv

Ans:- a

56) Which of the following situations correctly describe the similarity between an angiosperm egg and a human egg?

i. Eggs of both are formed only once in a lifetime
ii. Both the angiosperm egg and human egg are stationary
iii. Both the angiosperm egg and human egg are motile transported
iv. Syngamy in both results in the formation of zygote

***Choose the correct answer from the options given below*:**

a) ii and iv   b) iv only
c) iii and iv   d) i and iv

Ans:- a

57) Given below are two statements: One is labelled as Assertion A and the other is labelled as Reason R:

Assertion A: ATP is used at two steps in glycolysis.

Reason R: First ATP is used in converting glucose into glucose-6-phosphate and second ATP is used in conversion of fructose-6- phosphate into fructose-1-6-diphosphate.

In the light of the above statements, choose the correct answer from the options given below is true,

a) A is false but R is true.

b) Both A and R are true and R is the correct explanation of A

c) Both A and R are true but R is NOT the correct explanation of A.

d) A is true but R is false.

Ans:- (b) ATP is utilised at two steps: first in the conversion of glucose into glucose 6-phosphate and second in the conversion of fructose 6-phosphate to fructose 1, 6-bisphosphate

(Contd…..)







ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಬರವೇ ಇರಲಿ, ಸಮೃದ್ಧಿ ಬರಲಿ, ತಾಳುವ ಬಾಳಿನ ಬಾವುಟವಿರಲಿ.

–ಕೆ.ಎಸ್. ನರಸಿಂಹಸ್ವಾಮಿ

ಸಂಪಾದಕೀಯ

ಕಾದುನೋಡುವ ಆರ್‌ಬಿಐ ತಂತ್ರ ಅನಿಶ್ಚಿತ ಸಂದರ್ಭಕ್ಕೆ ಸೂಕ್ತ ಕ್ರಮ

ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ ಇರಲು ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ಸಭೆ ನಡೆಸಿದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ತೀರ್ಮಾನಿಸಿದೆ. ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಸವಾಲುಗಳು ಈ ತೀರ್ಮಾನಕ್ಕೆ ಕಾರಣವಾಗಿವೆ. ಏಪ್ರಿಲ್‌ಗೂ ಮೊದಲು ಎಂಪಿಸಿ ನಡೆಸಿದ ಸಭೆಗಳ ನಂತರದಲ್ಲಿ ದೇಶದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಸ್ಥಿತಿ ಬಹಳಷ್ಟು ಬದಲಾಗಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಭಾರತದ ಅರ್ಥ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಾಗಿರುವುದು, ದೇಶದ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಪೂರೈಕೆಗೆ ಅಡಚಣೆ ಉಂಟಾಗಿರುವುದು ಹಾಗೂ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ತೀವ್ರವಾಗಿ ಕುಸಿದಿರುವುದು ಸವಾಲುಗಳನ್ನು ಸೃಷ್ಟಿಸಿವೆ. ದೇಶದ ಅರ್ಥ ವ್ಯವಸ್ಥೆಯ ಮುಂದಿರುವ ಸವಾಲುಗಳನ್ನು ಒಪ್ಪಿಕೊಳ್ಳುವ ಹಾಗೂ ವಾಸ್ತವಕ್ಕೆ ಅನುಗುಣವಾಗಿರುವ ನೀತಿಯನ್ನು ಆರ್‌ಬಿಐ ಅನುಸರಿಸಿದೆ. ಹೀಗಾಗಿಯೇ ಅದು ರೆಪೊ ದರವನ್ನು ಶೇ 5.25ರ ಮಟ್ಟದಲ್ಲಿ ಮುಂದುವರಿಸಲು ನಿರ್ಧರಿಸಿದೆ. 'ಅರ್ಥ ವ್ಯವಸ್ಥೆಗೆ ಅಗತ್ಯವಿರುವ ಸರಕುಗಳ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಿದೆ. ಬದಲಾಗುತ್ತಿರುವ ಪರಿಸ್ಥಿತಿಯ ಮೇಲೆ ಹಾಗೂ ಬೆಳವಣಿಗೆ–ಹಣದುಬ್ಬರದ ಪರಿಸ್ಥಿತಿಯ ಮೇಲೆ ಗಮನ ಇರಿಸುವುದು, ಕಾದುನೋಡುವುದು ವಿವೇಕದ ಕ್ರಮವಾಗುತ್ತದೆ' ಎಂದು ಆರ್‌ಬಿಐ ಸ್ಪಷ್ಟವಾಗಿ ತಿಳಿಸಿದೆ.



ಯುದ್ಧದ ಪರಿಣಾಮಗಳು ಅಂದಾಜಿಗೆ ಸಿಗದಿರುವ ಪರಿಸ್ಥಿತಿಯಲ್ಲಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲು ಆರ್‌ಬಿಐ ನಿರ್ಧರಿಸಿದೆ. ಇದು ಕಾದು ನೋಡುವ ವಿವೇಕದ ಕ್ರಮ.

ದೇಶದ ಅರ್ಥ ವ್ಯವಸ್ಥೆಯು ತನ್ನ ಗಟ್ಟಿತನವನ್ನು ತೋರಿಸಿದೆ. ಆದರೆ ಇತ್ತೀಚಿನ ವಾರಗಳಲ್ಲಿ ವ್ಯವಸ್ಥೆಯ ಮೇಲೆ ಒಂದಿಷ್ಟು ಪೆಟ್ಟುಗಳು ಬಿದ್ದಿರುವುದು ನಿಜ. ಕೆಲವು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವ ಕಾರಣದಿಂದಾಗಿ, ಅಲ್ಲಿಂದ ಬೇರೆಡೆ ದುಡಿಯಲು ತೆರಳಿದ್ದ ಕಾರ್ಮಿಕರು ಮರಳಿ ಬಂದಿರುತ್ತಾರೆ. ಇದರ ಪರಿಣಾಮವು ಕೆಲವು ಆರ್ಥಿಕ ಚಟುವಟಿಕೆಗಳ ಮೇಲೆ ಉಂಟಾಗುತ್ತದೆ. ಯುದ್ಧದ ಕಾರಣದಿಂದಾಗಿ ಪೂರೈಕೆ ವ್ಯವಸ್ಥೆಗೆ ಧಕ್ಕೆ ಉಂಟಾಗಿದೆ. ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆ ಫಲಪ್ರದವಾಗಿಲ್ಲ ಎಂದು ವರದಿಗಳು ಹೇಳುತ್ತಿವೆ. ಮುಂದೆ ಏನಾಗಬಹುದು ಎಂಬುದು ಅಸ್ಪಷ್ಟವಾಗಿದೆ. ಕದನ ವಿರಾಮ ಘೋಷಣೆಯ ನಂತರದಲ್ಲಿ ಷೇರುಪೇಟೆಗಳು ಜಿಗಿದಿವೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ ಆಗಿದೆ. ಆದರೂ ಇಲ್ಲಿರುವ ಅನಿಶ್ಚಿತತೆ ಎದ್ದುಕಾಣುವಂತಿದೆ. ಕದನ ವಿರಾಮವು ಮುಂದುವರಿದರೂ, ಪೂರೈಕೆ ವ್ಯವಸ್ಥೆಯು ಸಹಜ ಸ್ಥಿತಿಗೆ ಮರಳಲು ತಿಂಗಳುಗಳೇ ಬೇಕಾಗಬಹುದು. ರಸಗೊಬ್ಬರ ಉತ್ಪಾದನೆ ಕಡಿಮೆಯಾಗುವ ಸಾಧ್ಯತೆ ಇದ್ದು, ಅದರಿಂದ ಕೃಷಿ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಕೃಷಿ ಉತ್ಪಾದನೆ ತಗ್ಗಿದರೆ ಗ್ರಾಮೀಣ ಜನರ ಆದಾಯವೂ ಕಡಿಮೆ ಆಗಬಹುದು; ಆಹಾರ ಉತ್ಪನ್ನಗಳ ಬೆಲೆ ಹೆಚ್ಚಬಹುದು. ರೆಪೊ ದರದ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವಾಗ ಎಂಪಿಸಿ ಸದಸ್ಯರು ಈ ಎಲ್ಲ ಅಂಶಗಳನ್ನು ಪರಿಗಣಿಸಿರಬಹುದು.

ಅಂದಾಜಿಗೆ ಸುಲಭಕ್ಕೆ ನಿಲುಕದ ಸಂಗತಿಗಳು ಸಾಕಷ್ಟಿರುವ ಈ ಹೊತ್ತಿನಲ್ಲಿ, 2026–27ನೆಯ ಸಾಲಿನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4.6ರಷ್ಟು ಆಗಬಹುದು ಎಂದು ಆರ್‌ಬಿಐ ಅಂದಾಜಿಸಿದೆ. ಇದು ಆರ್‌ಬಿಐ ನಿಗದಿ ಮಾಡಿಕೊಂಡಿರುವ ತಾಳಿಕೆಯ ಮಟ್ಟವೇ ಆದರೂ, ಈಚೆಗೆ ಕೆಲವು ತಿಂಗಳುಗಳಲ್ಲಿ ದಾಖಲಾದ ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚು. ಕದನ ವಿರಾಮ ಘೋಷಣೆ ಆದ ನಂತರದಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ ಕಂಡಿದ್ದರೂ, ಅದು ಇತ್ತೀಚಿನ ಸರಾಸರಿ ದರಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ. ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇ 6.9ರಷ್ಟು ಇರಲಿದೆ ಎಂಬುದು ಆರ್‌ಬಿಐ ಅಂದಾಜು. ಇದು 2025–26ರ ನಿರೀಕ್ಷಿತ ಶೇ 7.6ಕ್ಕೆ ಹೋಲಿಸಿದರೆ ಕಡಿಮೆ. ಇವೆಲ್ಲ ಈಗಿನ ಆರಂಭಿಕ ಅಂದಾಜುಗಳು ಮಾತ್ರ. ಬಾಹ್ಯ ಸಂಗತಿಗಳಿಂದ ದೇಶದ ಅರ್ಥ ವ್ಯವಸ್ಥೆಯ ಮೇಲೆ ಯಾವ ಪರಿಣಾಮ ಉಂಟಾಗಬಹುದು ಎಂಬುದನ್ನು ಆರ್‌ಬಿಐ ಅಂದಾಜಿಸಿದೆ. ಆದರೆ, ಯುದ್ಧ ಹಾಗೂ ಇತರ ಪರಿಸ್ಥಿತಿಗಳ ಪರಿಣಾಮ ಏನಿರುತ್ತದೆ ಎಂಬುದು ಇನ್ನೂ ಅಸ್ಪಷ್ಟವಾಗಿದೆ. ಯುದ್ಧದ ಪರಿಣಾಮಗಳು ಇನ್ನಷ್ಟು ಕೆಟ್ಟದ್ದೂ ಆಗಬಹುದು. ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 85 ಡಾಲರ್ ಆಗಬಹುದು ಎಂಬ ನಿರೀಕ್ಷೆಯೊಂದಿಗೆ ಈಗಿನ ಅಂದಾಜನ್ನು ಸಿದ್ಧಪಡಿಸಲಾಗಿದೆ. ವಾಸ್ತವದಲ್ಲಿ ಈ ಬೆಲೆಯು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. 'ಸಂಘರ್ಷವು ಇನ್ನಷ್ಟು ಪ್ರದೇಶಗಳಿಗೆ ವ್ಯಾಪಿಸಿದರೆ, ಜಾಗತಿಕ ಹಣಕಾಸು ಮಾರುಕಟ್ಟೆಗಳಲ್ಲಿ ಅನಿಶ್ಚಿತತೆ ಹೆಚ್ಚಾದರೆ, ಹವಾಮಾನಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾದರೆ, ದೇಶದ ಜಿಡಿಪಿ ಬೆಳವಣಿಗೆ ದರದ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದು ಆರ್‌ಬಿಐ ಹೇಳಿದೆ. ಹೀಗಾಗಿ, ಈಗಿನ ಹಂತದಲ್ಲಿ ಕಾದುನೋಡುವ ತಂತ್ರವೇ ಹೆಚ್ಚು ಸೂಕ್ತ. ಸ್ಥಿರತೆಯ ದೃಷ್ಟಿಯಿಂದ ಅದು ಸರಿಯಾದ ನಡೆ.

ಚಾಟಿ

ಅಮೆರಿಕದ ಸುಳ್ಳು ಪ್ರಚಾರ



ಹೊರ್ಮುಜ್ ಜಲಸಂಧಿಯನ್ನು ಇರಾನ್ ನಿಯಂತ್ರಿಸಲು ಹೊರಟಿರುವುದರಿಂದ ಅಮೆರಿಕ ನಿಜಕ್ಕೂ ಬೆಚ್ಚಿಬಿದ್ದಿದೆ. 'ಹೀಗೇ ಆದರೆ ಜಗತ್ತಿಗೇ ತೊಂದರೆಯಿದೆ' ಎಂಬ ಸುಳ್ಳನ್ನು ಹರಿಬಿಟ್ಟಿದೆ. 'ಅಮೆರಿಕಕ್ಕೆ ಹಾನಿಕಾರವಾದುದು ಇಡೀ ಜಗತ್ತಿಗೇ ಹಾನಿಕರ' ಎನ್ನುವ ಅಮೆರಿಕದ ಪ್ರಚಾರದಿಂದ ನಾವು ಹೊರಬರಬೇಕಾಗಿದೆ.

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ರಾಜ್ಯದಲ್ಲಿ ಹಿಂದೂ ವಿದ್ಯಾರ್ಥಿನಿಯರನ್ನು ಗುರಿಯಾಗಿಸಿ ಪ್ರೀತಿಯ ನಾಟಕವಾಡಿ, ಅವರ ಬಾಳನ್ನು ಹಾಳು ಮಾಡುವ ಜಾಲ ವ್ಯಾಪಕವಾಗಿ ಕಾರ್ಯಾಚರಿಸುತ್ತಿದೆ. ಹಿಂದೂ ಯುವತಿಯರನ್ನು ಬ್ಲ್ಯಾಕ್‌ಮೇಲ್ ಮಾಡುವುದು, ಅಶ್ಲೀಲ ಫೋಟೊ- ದೃಶ್ಯಗಳನ್ನು ಬಳಸಿಕೊಂಡು ಹೆಣ್ಣುಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ಸಹಿಸಲು ಸಾಧ್ಯವಿಲ್ಲ.

ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 13-4-2001

• ಚಲಿಸುತ್ತಿದ್ದ ಐಲ್ಯಾಂಡ್ ಎಕ್ಸ್‌ಪ್ರೆಸ್ ಬೋಗಿ ಪ್ರತ್ಯೇಕ

ಬೆಂಗಳೂರು, ಏ. 12– ಕೊಯ ಮತ್ತೂರಿಗೆ ಹೋಗುತ್ತಿದ್ದ ಐಲ್ಯಾಂಡ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೋಗಿಗಳ ಸಂಪರ್ಕ ಕೊಂಡಿಯೊಂದು ಕಳಚಿಕೊಂಡು ರೈಲು ಎರಡು ಭಾಗಗಳಾದ ಘಟನೆ ಇಂದು ರಾತ್ರಿ ನಡೆದಿದೆ.

ರಾತ್ರಿ 9.15ಕ್ಕೆ ನಗರ ರೈಲ್ವೆ ನಿಲ್ದಾಣದಿಂದ ಹೊರಟ ಐಲ್ಯಾಂಡ್ ಎಕ್ಸ್‌ಪ್ರೆಸ್ ರೈಲು ಮಾರತ್ತಹಳ್ಳಿ ಸಮೀಪ ಬೋಗಿಗಳ ಸಂಪರ್ಕ ಕಳಚಿಕೊಂಡಿತು. ಇಡೀ ರೈಲು ಎರಡು ಭಾಗವಾಯಿತು. ಚಾಲಕ, ರೈಲನ್ನು ನಿಲ್ಲಿಸಿ ಬೇರ್ಪಟ್ಟಿದ್ದ ಬೋಗಿಗಳನ್ನು ವಾಪಸ್ ತಂದರು.

• ಸ್ವಸ್ತಿ ಗ್ರಾಮ ಯೋಜನೆ: ಇಂದು ಉದ್ಘಾಟನೆ

ಬೆಂಗಳೂರು, ಏ. 12– ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ ಹುಟ್ಟೂರಾದ ಗೌರಿಬಿದನೂರು ತಾಲ್ಲೂಕು ಹೊಸೂರಿನ ಸಮಗ್ರ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿ ವೆಚ್ಚದ 'ಸ್ವಸ್ತಿ ಗ್ರಾಮ ಯೋಜನೆ' ನಾಳೆ ಉದ್ಘಾಟನೆ ಆಗಲಿದೆ.

75 ವರ್ಷಗಳ ಹಿಂದೆ

ಶುಕ್ರವಾರ, 13-4-1951

• ಮಂಚೂರಿಯಾ ಗಡಿಯಲ್ಲಿ ಭೀಕರ ವಿಮಾನ ಕಾಳಗ

ಟೋಕಿಯೋ, ಏ. 12– ಮಂಚೂರಿಯಾ ಗಡಿಯ ಬಳಿಯಲ್ಲಿ ಅಮೆರಿಕನ್ ಜೆಟ್ ಮತ್ತು ಬಾಂಬರ್ ವಿಮಾನಗಳು ಇಂದು ಕೊರಿಯಾ ಸಂಗ್ರಾಮದಲ್ಲೇ ಅತ್ಯಂತ ಭಾರಿಯಾದ ಎರಡು ವೈಮಾನಿಕ ಕಾಳಗಗಳನ್ನು ನಡೆಸಿ 22 ಕಮ್ಯುನಿಸ್ಟ್ ವಿಮಾನಗಳನ್ನು ನಾಶ ಅಥವಾ ಜಖಂಗೊಳಿಸಿದವು.

ಅಮೆರಿಕದ ಎರಡು ಸೂಪರ್‌ಫೋರ್ಟ್ ವಿಮಾನಗಳು ಜಖಂಗೊಂಡವು. ಎರಡನೇ ವಿಮಾನ ಕಾಳಗ ಮಧ್ಯಾಹ್ನದ ನಂತರ ಸಿನುಯ್ಜು ಮತ್ತೆ ಸಿನುಂಚು ಮಧ್ಯೆ, ಪಶ್ಚಿಮ ತೀರದಲ್ಲಿ ಇನ್ನೂ ದಕ್ಷಿಣದಲ್ಲಿ ನಡೆಯಿತು. 30ರಿಂದ 40 ಸಹಸ್ರ ಅಡಿ ಎತ್ತರದಲ್ಲಿ 15 ಕಮ್ಯುನಿಸ್ಟ್ ಜೆಟ್‌ಗಳೊಂದಿಗೆ 15 ಅಮೆರಿಕನ್ ಜೆಟ್‌ಗಳು ಹೋರಾಡಿದವು.

ಅಂಬೇಡ್ಕರ್: ಒಳಗೊಳ್ಳುವ ಅರಿವು



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

> ಅಸ್ಪೃಶ್ಯತೆಗೆ, ಸಮಾಜದ ಕಡೆಗಣನೆಗೆ ಒಳಗಾದ ಸಮುದಾಯಗಳಿಗೆ ಅಂಬೇಡ್ಕರ್ ಅರಿವು ಮತ್ತು ಆತ್ಮವಿಶ್ವಾಸ ತಂದುಕೊಟ್ಟವರು. ಸಮತೆ, ಮಮತೆ, ಕಾರುಣ್ಯ ಅವರ ಬದುಕಿನ ತಾತ್ತ್ವಿಕತೆ. ಸಾಮಾಜಿಕ ದಮನಿತರ ಒಗ್ಗಟ್ಟಿನಲ್ಲಿ ಬಿರುಕುಗಳು ಕಾಣಿಸಿಕೊಂಡಿರುವ ಸಂದರ್ಭದಲ್ಲಿ, ಬಾಬಾ ಸಾಹೇಬರ 'ಒಳಗೊಳ್ಳುವಿಕೆ'ಯ ಮಾರ್ಗ ಸಂಜೀವಿನಿಯಂತಿದೆ.

ಇನ್ನೊಂದು 'ಅಂಬೇಡ್ಕರ್ ಜಯಂತಿ' ಬರುವ ಅವಧಿಯಲ್ಲಿ ಏನೆಲ್ಲ ಸಂಭವಿಸಿದೆ ಎಂದು ಹಿಂತಿರುಗಿ ನೋಡಿದರೆ ಆತಂಕವಾಗುತ್ತದೆ. ಅಸ್ಪೃಶ್ಯತಾ ವಿರೋಧಿ ಹೋರಾಟದ ಜೊತೆಗೆ ಸಕಲ ಶೋಷಿತರ ಪರವಾದ ದಿಟ್ಟದನಿಯಾಗಿದ್ದ ಅಂಬೇಡ್ಕರ್ ಬಯಸಿದ ಸಾಮಾಜಿಕ ದಮನಿತರ ಒಗ್ಗಟ್ಟಿನಲ್ಲಿ ಒಡಕುಗಳು ಹುಟ್ಟಿವೆ. ಇಂತಹ ಸನ್ನಿವೇಶಕ್ಕೆ ಅದರದೇ ಆದ ಚಾರಿತ್ರಿಕ ಬೆಳವಣಿಗೆಯ ಕಾರಣಗಳಿರಬಹುದು. ಶೋಷಿತ ವಲಯದ 'ಅಸಂಘಟಿತ' ಸಣ್ಣಪುಟ್ಟ ಸಮುದಾಯಗಳು ತಂತಮ್ಮ ಅಸ್ಮಿತೆ–ಅಸ್ತಿತ್ವಕ್ಕಾಗಿ ಸಕಾರಾತ್ಮಕ ಧ್ರುವೀಕರಣಕ್ಕೆ ಒಳಗಾಗುವ ಪ್ರಕ್ರಿಯೆಯು ಸಾಮಾಜಿಕ ಚಲನೆಯ ಒಂದು ಸಂಕೇತವೂ ಹೌದು. ಸಂಘಟಿತ ಮತ್ತು ಅಸಂಘಟಿತ, ಶೋಷಿತರ ಒಗ್ಗಟ್ಟು ಅಪೇಕ್ಷಣೀಯವೂ ಹೌದು. ಒಂದೊಂದು ಸಮುದಾಯಕ್ಕೆ ಒಂದೊಂದು ರೀತಿಯ ಸಂಕಟಗಳು ಇರುತ್ತವೆ. ಈ ಸಂಕಟಗಳ ಒಳಸ್ಫೋಟವು ವಿಭಜಿತ ರೂಪದಲ್ಲಿ ಹೊರಗೆ ಬಂದಾಗ ಸಹಜವಾಗಿಯೇ ಆತಂಕಕ್ಕೆ ಕಾರಣವಾಗುತ್ತದೆ. ಈ ಆತಂಕದ 'ಮೂಲ' ಕಾರಣಗಳು ನಮ್ಮ ಸಾಮಾಜಿಕ ಶ್ರೇಣೀಕೃತ ವ್ಯವಸ್ಥೆಯಲ್ಲೇ ಇವೆ.

ನಮ್ಮ ಸಾಮಾಜಿಕ ಸಂರಚನೆಯ ಭಾಗವಾದ ಜಾತಿಪದ್ಧತಿ, ವರ್ಣಾಶ್ರಮ ವ್ಯವಸ್ಥೆ, ಉತ್ಪಾದನಾ ಪದ್ಧತಿಯ ವರ್ಗೀಕರಣಗಳು ಜನಸಮುದಾಯವನ್ನು ಮೂಲದಲ್ಲೇ ಒಡೆದು ಬಿಟ್ಟಿವೆ. ಒಂದೊಂದು ಸಮುದಾಯದ ಜೀವನ ವಿಧಾನವೂ ವಿಭಿನ್ನವಾಗಿದ್ದು, ಅದು ಸಾಂಸ್ಕೃತಿಕ ಬಹುತ್ವದ ಬಹುರೂಪತೆ ಆಗಿದೆ ಎಂಬುದು ನಿಜ. ಆದರೆ, ಸಾಂಸ್ಕೃತಿಕವಾಗಿ ನಿಜವಾದುದು ಸಾಮಾಜಿಕವಾಗಿ ನಿಜವಾಗಿಲ್ಲ. ಯಾಕೆಂದರೆ, ನಮ್ಮ ಸಾಮಾಜಿಕ ಸಂರಚನೆಯ ಮೂಲದಲ್ಲಿ ಅಸ್ಪೃಶ್ಯರಲ್ಲೇ ಇತರೆ ಅಸ್ಪೃಶ್ಯರನ್ನು ಹುಟ್ಟುಹಾಕಿ ವಿಭಜಿಸಲಾಗಿದೆ. ಶೂದ್ರರಲ್ಲೇ ಅನೇಕ ಶೂದ್ರರನ್ನು ವಿಂಗಡಿಸಿ ಭಿನ್ನಗೊಳಿಸಲಾಗಿದೆ. ಶೋಷಿತರಲ್ಲೇ ವಿವಿಧ ಶೋಷಿತರನ್ನು ಪ್ರತ್ಯೇಕಿಸಲಾಗಿದೆ. ಉತ್ಪಾದನಾ ಶಕ್ತಿಯ ಕೇಂದ್ರೀಕರಣದಿಂದ ಆರ್ಥಿಕ ಶೋಷಣೆಯ ಸ್ತರಗಳನ್ನು ವರ್ಗೀಕರಿಸಲಾಗಿದೆ; ಹೀಗಾಗಿ ಸಾಮಾಜಿಕ ಪ್ರತ್ಯೇಕತೆ ಮತ್ತು ಸಾಂಸ್ಕೃತಿಕ ವಿವಿಧತೆ, ಎರಡೂ ಒಟ್ಟಿಗೇ ಜೀವಿಸುತ್ತ ಬಂದಿವೆ. ಜಾತಿ, ವರ್ಗಗಳ ಸಾಮಾಜಿಕ ವಿಭಜನೆ ಮತ್ತು ಇದೇ ವಿಭಜನೆಯಲ್ಲಿ ಪ್ರಕಟಗೊಳ್ಳುವ ಸಾಂಸ್ಕೃತಿಕ ಬಹುತ್ವದ ವಾಸ್ತವಗಳೇ ಸಾಕ್ಷಿಗಳಾಗಿವೆ. ಸಂಘಟನೆ ಗಳ ವಿಘಟನೆಯ ಆಳದಲ್ಲಿ ಈ ವೈರುಧ್ಯದ ಪಾತ್ರವೂ ಇದೆ ಅನ್ನಿಸುತ್ತದೆ. ಪ್ರತಿ ಸಮುದಾಯವೂ ಸಾಮಾಜಿಕ ನ್ಯಾಯದಲ್ಲಿ ತನ್ನ ಪಾಲು ಕೇಳುವುದು ಸಹಜವಾಗಿದ್ದು, ಇದು ವಿಘಟನೆಯ ರೂಪದಲ್ಲಿ ಪ್ರಕಟ ಆಗುತ್ತಿದೆ.

ಕಟ್ಟಕಡೆಯ ಮನುಷ್ಯರಿಗೆ ಮೊಟ್ಟಮೊದಲ ಆದ್ಯತೆ ನೀಡುವುದು ಸಾಮಾಜಿಕ ನ್ಯಾಯದ ಮೊದಲ ಅಧ್ಯಾಯ. ನಮ್ಮ ಸಮಾಜದಲ್ಲಿ ಕಟ್ಟಕಡೆಯ ಮನುಷ್ಯರೆಂದರೆ ಅಸ್ಪೃಶ್ಯರು. ಆನಂತರ ಬುಡಕಟ್ಟು, ಅಲೆಮಾರಿ, ಅರೆಅಲೆಮಾರಿ ಜನಾಂಗದವರು ಮತ್ತು ಮಹಿಳೆಯರು. ಒಂದು ವರ್ಗವಾಗಿ ರೈತರು, ಕಾರ್ಮಿಕರು, ಕೂಲಿಕಾರರು. ವಿವಿಧ ಪ್ರಮಾಣದಲ್ಲಿ ಎಲ್ಲರೂ ಶೋಷಿತರೇ ಆಗಿದ್ದಾರೆ.

ಶೋಷಿತರು– ವಿಶೇಷವಾಗಿ ಅಸ್ಪೃಶ್ಯರು– ಉನ್ನತ ಶಿಕ್ಷಣ ಪಡೆದರೂ ಅವಮಾನಕ್ಕೊಳಗಾಗುವ ಇತಿಹಾಸ ನಮ್ಮಲ್ಲಿದೆ. ಅಂಬೇಡ್ಕರ್ ನಿದರ್ಶನವನ್ನೇ ನೋಡಿ. ಅವರು ವಿವಾಹವಾಗುವುದಕ್ಕೆ ಯಾರೂ ಒಂದು ಕಲ್ಯಾಣ ಮಂಟಪವನ್ನಾಗಲಿ, ಸಮುದಾಯ ಭವನವನ್ನಾಗಲಿ ಕೊಡಲಿಲ್ಲ. ಕಡೆಗೆ 'ಬೈಕಳ' ಎಂಬ ಮೀನಿನ ಮಾರ್ಕೆಟ್ಟಿನಲ್ಲಿ ವಿವಾಹವಾದರು. ಉನ್ನತ ಹುದ್ದೆಗೆ ಆಯ್ಕೆಯಾದ ಅಂಬೇಡ್ಕರ್ ಅವರು ಕಚೇರಿಯನ್ನು ಪ್ರವೇಶಿಸುವಾಗ ನೆಲದ ಮೇಲಿದ್ದ ಕೆಂಪುಹಾಸನ್ನು ತೆಗೆಯಲಾಗುತ್ತಿತ್ತು. ಅವರು ತಮ್ಮ ಚೇಂಬರ್‌ಗೆ ಹೋದ ಮೇಲೆ ಮತ್ತೆ ಕೆಂಪುಹಾಸನ್ನು ಮೊದಲಿನಂತೆ ಹಾಕಲಾಗುತ್ತಿತ್ತು. ಇನ್ನೊಂದು ನಿದರ್ಶನ: ಕೇಂದ್ರ ಸರ್ಕಾರದ ಪ್ರತಿಷ್ಠಿತ ಸಚಿವರಾಗಿದ್ದ ಜಗಜೀವನರಾಂ ಅವರು ಕಾಶಿಯಲ್ಲಿ ಸಂಪೂರ್ಣಾನಂದರ ವಿಗ್ರಹವನ್ನು ಅನಾವರಣಗೊಳಿಸಿದರು. ಅವರು ಕಾರ್ಯಕ್ರಮ ಮುಗಿಸಿ ವಾಪಸ್ ಆದ ನಂತರ ವಿಗ್ರಹವನ್ನು ತೊಳೆದು 'ಶುದ್ಧ'ಗೊಳಿಸುವ 'ಆಚರಣೆ' ಮಾಡಲಾಯಿತು. ಅಂಬೇಡ್ಕರ್ ಮತ್ತು ಜಗಜೀವನರಾಂ ಅವರು ಉನ್ನತ ಶಿಕ್ಷಣ ಮತ್ತು ಉನ್ನತ ಸ್ಥಾನ ಪಡೆದಿದ್ದರೂ 'ಅಸ್ಪೃಶ್ಯ'ರೆಂಬ ಕಾರಣಕ್ಕೆ ಅಮಾನವೀಯವಾಗಿ ನಡೆಸಿಕೊಳ್ಳಲಾಯಿತು.

ಇನ್ನೆರಡು ನಿದರ್ಶನಗಳನ್ನು ಇಲ್ಲಿ ನೀಡಬಹುದು. ಮಹಾತ್ಮ ಗಾಂಧಿಯವರು ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೊರಟಾಗ ಅವರ ಬನಿಯಾ ಜಾತಿಯ ಮುಖ್ಯಸ್ಥರು ಸಮುದ್ರ ದಾಟುವುದನ್ನು ವಿರೋಧಿಸುತ್ತಾರೆ. ಈ ವಿರೋಧವನ್ನು ಧಿಕ್ಕರಿಸಿ ಗಾಂಧಿಯವರು ವಿದೇಶಕ್ಕೆ ಹೊರಟಾಗ ಅವರ ಜಾತಿ ಮುಂದಾಳುಗಳು ಗಾಂಧಿ, ಕಸ್ತೂರ ಬಾ ಮತ್ತು ಎರಡು ವರ್ಷದ ಮಗು ಹರಿಲಾಲ್‌ನನ್ನು ಜಾತಿಭ್ರಷ್ಟರನ್ನಾಗಿಸಿ ಹೊರಹಾಕುತ್ತಾರೆ. ಇಂದಿರಾಗಾಂಧಿಯವರನ್ನು ಜಗನ್ನಾಥನ ದೇವಾಲಯ ಪ್ರವೇಶ ಮಾಡಲು ಬಿಡಲಿಲ್ಲ. ಅವರ ಅಂತರಧರ್ಮೀಯ ವಿವಾಹವೇ ಈ ನಿಷೇಧಕ್ಕೆ ಕಾರಣವಾಗಿತ್ತು. ಈಗ ಅಂತರಜಾತೀಯ ಮತ್ತು ಅಂತರಧರ್ಮೀಯ ವಿವಾಹಗಳ ಕಾರಣಕ್ಕೆ ನಮ್ಮ ಸಮಾಜದಲ್ಲಿ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತಲೇ ಇವೆ. ಈ ಎಲ್ಲ ನಿದರ್ಶನಗಳು ಜಾತಿ ಮತ್ತು ಸಾಂಸ್ಥಿಕ ಧರ್ಮಗಳ ಜಡ ಸ್ಥಿತಿಯ ಸಂಕೇತಗಳಾಗಿವೆ. ಆದ್ದರಿಂದಲೇ ಅಂಬೇಡ್ಕರ್ ನಡೆಸಿದ ಜಾತಿಪದ್ಧತಿ ವಿರೋಧಿ ಹೋರಾಟ ಇಂದಿಗೂ ಪ್ರಸ್ತುತವಾಗಿದೆ.


ಅಂಬೇಡ್ಕರ್ ಅಸ್ಪೃಶ್ಯರ ಪರವಾಗಿ ಅಷ್ಟೇ ಅಲ್ಲ, ಎಲ್ಲ ಶೋಷಿತರ ಪರವಾದ ದಿಟ್ಟದನಿ ಯಾಗಿದ್ದರು ಎನ್ನುವುದಕ್ಕೆ 1931ರ ಸೆಪ್ಟೆಂಬರ್ 15ರಂದು ಲಂಡನ್‌ನಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಪ್ರತಿಪಾದಿಸಿದ ವಿಷಯಗಳು ಸಾಕ್ಷಿಯಾಗಿವೆ: 'ನಮ್ಮ ದೇಶದಲ್ಲಿ ಬಂಡವಾಳಗಾರರು ಕಾರ್ಮಿಕರನ್ನು ಶೋಷಿಸುತ್ತಿದ್ದಾರೆ. ಭೂಮಾಲೀಕರು ಗೇಣಿದಾರರನ್ನು ಕಾಡಿಸುತ್ತಿದ್ದಾರೆ. ಮೇಲ್ವರ್ಗದವರು ದಲಿತರನ್ನು ದಮನಿಸುತ್ತಿದ್ದಾರೆ. ಈ ಎಲ್ಲಾ ಶೋಷಿತ ಸಮುದಾಯದವರ ವಿಮೋಚನೆಗೆ ಸರ್ಕಾರ ಪ್ರಯತ್ನಿಸಬೇಕು' – ಇದು ಅಂಬೇಡ್ಕರ್ ಅವರ ಹಕ್ಕೊತ್ತಾಯ. ಮಹಿಳೆಯರ ಉನ್ನತಿಯ ಬಗ್ಗೆಯೂ ಬದ್ಧರಾಗಿದ್ದ ಅಂಬೇಡ್ಕರ್ ಅವರು 'ಮಹಿಳೆಯರ ಅಭಿವೃದ್ಧಿಯು ಇಡೀ ದೇಶದ ಅಭಿವೃದ್ಧಿಯ ಒಂದು ಮುಖ್ಯ ಮಾನದಂಡ' ಎನ್ನುತ್ತಾರೆ. ಮುಂದುವರಿದು ಹೇಳುವುದಾದರೆ, ತಮ್ಮ ನೇತೃತ್ವದ ಮಹಾಡ್ ಸತ್ಯಾಗ್ರಹ, ಮನುಸ್ಮೃತಿ ದಹನದ ಸಂದರ್ಭದಲ್ಲಿ, ತಮ್ಮ ಜಾತಿಯ ಕೆಲವರ ವಿರೋಧದ ನಡುವೆಯೂ, ಮೇಲ್ಜಾತಿಯವರನ್ನು ಒಳಗೊಳ್ಳುತ್ತಾರೆ. ಪ್ರಗತಿಪರ ವಿಚಾರಧಾರೆಯವರನ್ನೆಲ್ಲ ಹೋರಾಟಗಳಲ್ಲಿ ಒಳಗೊಳ್ಳಬೇಕೆಂಬ ಆಶಯ ಮತ್ತು ಅನುಷ್ಠಾನದಿಂದ ನೈಜ ಜಾತ್ಯತೀತರಾಗುತ್ತಾರೆ. ಇದು ಇಂದಿಗೂ ಆದರ್ಶ ಮಾದರಿಯಾಗಬೇಕು.

ಖಾಸಗೀಕರಣ ಮತ್ತು ಖಾಸಗಿ ಆಸ್ತಿಯ ಹಕ್ಕಿಗೆ ಅಂಬೇಡ್ಕರ್ ವಿರೋಧಿಯಾಗಿದ್ದರು. 1947ರಲ್ಲಿ ಸಂವಿಧಾನ ಸಭೆಯನ್ನು ಉದ್ದೇಶಿಸಿ ಮಾತಾಡುತ್ತ ಅವರು 'ಖಾಸಗೀಕರಣವು ಸ್ವಾರ್ಥಕೇಂದ್ರಿತವಾಗುತ್ತದೆ' ಎಂದು ನುಡಿದ ಭವಿಷ್ಯ ಇಂದು ನಿಜವಾಗಿದೆ. ಖ್ಯಾತ ಲೇಖಕ ಮುಲ್ಕರಾಜ್ ಆನಂದ್ ಜೊತೆಗಿನ ಮಾತುಕತೆಯಲ್ಲಿ ಅಂಬೇಡ್ಕರ್ ಅವರು 'ಖಾಸಗಿ ಆಸ್ತಿ ಹಕ್ಕನ್ನು ನಿಯಂತ್ರಿಸುವ ಆಶಯಕ್ಕೆ ದನಿಗೂಡಿಸಿದ್ದು ನೆಹರೂ ಮಾತ್ರ. ಆಸ್ತಿಯ ಒಡೆತನದ ಹಕ್ಕು ಮೂಲಭೂತ ಹಕ್ಕು ಆಗಬಾರದು ಎಂದು ನೆಹರೂ ಸೆಣಸಾಡಿದರು' ಎಂದು ಹೇಳಿದ್ದಾರೆ. 'ಸಂಕಷ್ಟಕ್ಕೊಳಗಾದ ಎಲ್ಲರೂ ಒಂದುಗೂಡಿದರೆ ಖಾಸಗಿಆಸ್ತಿಯ ಒಡೆತನವನ್ನು ಕೊನೆಗಾಣಿಸಬಹುದು. ಕೇಂದ್ರೀಕೃತ ಬಂಡವಾಳಶಾಹಿಯು ಅಪಾಯಕಾರಿ' ಎಂಬ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಪ್ರಜಾಪ್ರಭುತ್ವದ ಪ್ರಬಲ ಪ್ರತಿಪಾದಕರಾದ ಅಂಬೇಡ್ಕರ್ ಅವರು 'ದೇಶದ ಎಲ್ಲಾ ಜನರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಕ್ರಾಂತಿಕಾರಕವಾಗಿ, ಯಾವುದೇ ಹಿಂಸಾತ್ಮಕ ಮಾರ್ಗವಿಲ್ಲದೆ, ಕಾನೂನಿನ ಮೂಲಕ ಬದಲಾವಣೆ ಮಾಡುವ ಪದ್ಧತಿಯೇ ಪ್ರಜಾಪ್ರಭುತ್ವ' ಎಂದು ನಿರ್ವಚಿಸಿದ್ದಾರೆ. ಅಂಬೇಡ್ಕರ್ ಅವರ ಹೋರಾಟವು ಯಾವತ್ತೂ ಹಿಂಸೆಯನ್ನು ಪ್ರಚೋದಿಸಲಿಲ್ಲ. ವಿಭಿನ್ನ ದಾರಿಯವರಾಗಿದ್ದರೂ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರ ಹೋರಾಟವೂ ಅಹಿಂಸಾತ್ಮಕ ನಿಲುವನ್ನು ಹೊಂದಿತ್ತು. ಅಂಬೇಡ್ಕರ್ ಹೋರಾಟದ ಭಾಷೆಯಲ್ಲಿ ಯಾವತ್ತೂ ಹೊಡೆಯುವ, ಬಡಿಯುವ, ಒದೆಯುವ ಪದಗಳಿಗೆ ಸ್ಥಾನವೇ ಇರಲಿಲ್ಲ.

ಧಾರ್ಮಿಕ ಮೂಲಭೂತವಾದವು ದ್ವೇಷದ ಉತ್ಪಾದನೆಯ ಕಾರ್ಖಾನೆಯಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಅಂಬೇಡ್ಕರ್ ಅವರು 'ಧರ್ಮ'ವನ್ನು ವ್ಯಾಖ್ಯಾನಿಸಿದ ರೀತಿ ತುಂಬಾ ವಿಶೇಷವಾಗಿದೆ. ಅವರ ಪ್ರಕಾರ 'ಧರ್ಮ ಇರುವುದು ಮನುಷ್ಯರಿಗಾಗಿ; ಮನುಷ್ಯರಿರುವುದು ಧರ್ಮಕ್ಕಾಗಿ ಅಲ್ಲ. ಸಹಮಾನವರ ಬಗ್ಗೆ ಪ್ರೀತಿ ತೋರದೆ ಇರುವ ಧರ್ಮವು ಧರ್ಮವೇ ಅಲ್ಲ'. ಮುಂದುವರಿದು 'ಸಮತೆ, ಮಮತೆ, ಕಾರುಣ್ಯಗಳು ಧರ್ಮಕ್ಕೆ ಆಧಾರವಾಗಿರಬೇಕು; ನಿಜವಾದ ಧರ್ಮವಿರುವುದು ಮನುಷ್ಯರ ಹೃದಯದಲ್ಲೇ ಹೊರತು ಶಾಸ್ತ್ರಗಳಲ್ಲಿ ಅಲ್ಲ' ಎಂದು ಖಚಿತ ದನಿಯಲ್ಲಿ ಪ್ರತಿಪಾದಿಸಿದ್ದಾರೆ. ಇಲ್ಲಿ ಗಾಂಧಿ ಅವರ ಅಭಿಪ್ರಾಯವೊಂದು ನೆನಪಾಗುತ್ತದೆ. ತಮ್ಮ ಬದುಕಿನ ಆರಂಭಿಕ ದಿನಗಳಲ್ಲಿ ಜಾತಿ, ವರ್ಣಾಶ್ರಮಗಳ ಬಗ್ಗೆ ಜಡ ಸಾಂಪ್ರದಾಯಿಕ ನಿಲುವು ಹೊಂದಿದ್ದ ಗಾಂಧೀಜಿಯವರು 1936ರ ಒಂದು ಸಂದರ್ಶನದಲ್ಲಿ 'ಇಂದು ಭಯಾನಕವಾಗಿರುವ ಜಾತಿಯನ್ನು ಶಾಸ್ತ್ರಗಳು ಪುರಸ್ಕರಿಸುವುದಾದರೆ ಅಂತಹ ಶಾಸ್ತ್ರಗಳನ್ನು ನಾನು ಒಪ್ಪುವುದಿಲ್ಲ. ಅಂತಹ ಹಿಂದೂ ಧರ್ಮದಲ್ಲೂ ನಾನಿರಲಾರೆ' ಎಂದು ಹೇಳಿದ್ದಾರೆ. ಗಾಂಧೀಜಿ ಹಿಂದೂ ಧರ್ಮದಲ್ಲೇ ಒಳವಿಮರ್ಶಕರಾಗಿ ಉಳಿದರು. ಅಂಬೇಡ್ಕರ್ ಅವರು ಹಿಂದೂ ಧರ್ಮ ತೊರೆದು ಬೌದ್ಧಧರ್ಮೀಯರಾದರು.

ಬೌದ್ಧ ಅನುಯಾಯಿಯಾದ ಅಂಬೇಡ್ಕರ್ ಎಲ್ಲ ಜಾತಿಗಳ ಪ್ರಗತಿಪರ ವೈಚಾರಿಕರನ್ನು ಹೋರಾಟಕ್ಕೆ ತೊಡಗಿಸಿಕೊಳ್ಳುವ ಮೂಲಕ ಒಳಗೊಳ್ಳುವಿಕೆಯ ಸಾಕ್ಷಿಸಂಕೇತವಾಗಿದ್ದಾರೆ. ವೈರುಧ್ಯಗಳನ್ನು ಮೀರಿದ ಒಳಗೊಳ್ಳುವಿಕೆಯ ಒಗ್ಗಟ್ಟು ಇಂದಿನ ಅಗತ್ಯ. ಇದು ಅಂಬೇಡ್ಕರ್ ಅವರಿಗೆ ಸಲ್ಲಿಸುವ ಗೌರವ.



ವಾಚಕರ ವಾಣಿ

ಚಾರಣ: ಸರ್ಕಾರಿ ನೀತಿ ಹೊರೆಯಾಗದಿರಲಿ

ಇತ್ತೀಚೆಗೆ ಕಾಡಿನ ಪ್ರದೇಶಗಳಲ್ಲಿ ಚಾರಣಕ್ಕೆ ಹೋದವರು ದಾರಿ ತಪ್ಪಿದ ಮತ್ತು ಜೀವ ಕಳೆದುಕೊಂಡ ಬಗ್ಗೆ ವರದಿಯಾಗುತ್ತಿದೆ. ಕೆಲವು ವರ್ಷಗಳ ಹಿಂದೆ ಬಹುತೇಕ ಸ್ಥಳಗಳು ಚಾರಣಿಗರಿಗೆ ಮುಕ್ತವಾಗಿದ್ದವು. ಕೆಲವೆಡೆ ಚಾರಣಿಗರನ್ನು ನಿಯಂತ್ರಿಸಲು ಮತ್ತು ಮಾಹಿತಿ ದಾಖಲಿಸಲು ಜಾಲತಾಣದಲ್ಲಿ ನೋಂದಾಯಿಸಿಕೊಂಡು ಚಾರಣಕ್ಕೆ ಹೋಗುವುದನ್ನು ಕಡ್ಡಾಯಗೊಳಿಸಲಾಯಿತು. ಅದಕ್ಕೆ ಶುಲ್ಕವನ್ನೂ ನಿಗದಿಪಡಿಸಲಾಯಿತು. ಆದರೆ, ಶುಲ್ಕ ಸಂಗ್ರಹಿಸುವ ಬಹುತೇಕ ಜಾಗಗಳಲ್ಲಿ ಅರಣ್ಯ ಇಲಾಖೆಯಿಂದ ಕುಡಿಯುವ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆಯ ಸೌಲಭ್ಯವಾಗಲಿ ಇಲ್ಲ. ಪರಿಸ್ಥಿತಿ ಹೀಗಿರುವಾಗ ಚಾರಣ ನಿಷೇಧಿಸುವುದು, ಮುಕ್ತವಾಗಿ ಉಳಿದಿರುವ ಹಲವು ತಾಣಗಳನ್ನೂ ಶುಲ್ಕದ ವ್ಯಾಪ್ತಿಗೆ ತರುವುದು, ಹೆಚ್ಚುವರಿ ವಿಮಾ ಶುಲ್ಕ ವಿಧಿಸುವುದು ಸರಿಯಾದ ನಡೆಯಲ್ಲ. ಹೊಣೆಗಾರಿಕೆಯಿಂದ ಚಾರಣ ಕೈಗೊಳ್ಳಲು ಜಾಗೃತಿ ಮೂಡಿಸಬೇಕೇ ಹೊರತು ಚಾರಣಿಗರಿಗೆ ಹೊರೆಯಾಗುವಂತಹ ನಿರುತ್ತೇಜನಕಾರಿ ಕ್ರಮ ಸರಿಯಲ್ಲ.

ವಿಕಾಸ್ ಹೆಗಡೆ, ಬೆಂಗಳೂರು

ವಂದೇ ಭಾರತ್: ರಾಜಕೀಯ ಮೇಲಾಟ

ಬೆಂಗಳೂರು–ಮುಂಬೈ ನಡುವಿನ ವಂದೇ ಭಾರತ್ ಸ್ಲೀಪರ್ ರೈಲಿನ ಘೋಷಣೆಯು ಸ್ವಾಗತಾರ್ಹ. ಆದರೆ, ಈ ಮಾರ್ಗದ ಆಯ್ಕೆಯಲ್ಲಿ ತಾರ್ಕಿಕತೆಗಿಂತ ರಾಜಕೀಯ ಪ್ರಭಾವ ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಗುಂಟಕಲ್–ಕಲಬುರಗಿ–ಸೋಲ್ಲಾಪುರ–ಪುಣೆ ಮಾರ್ಗ ಕಡಿಮೆ ದೂರವಿದೆ. ಪ್ರತಿ ಗಂಟೆಗೆ 130 ಕಿ.ಮೀ ವೇಗಕ್ಕೆ ಸಿದ್ಧವಾಗಿರುವ ಸುಧಾರಿತ ಹಳಿಯಿದೆ. ಆದರೆ, ಕೆಲವು ರಾಜಕಾರಣಿಗಳು ಈ ರೈಲನ್ನು ಹುಬ್ಬಳ್ಳಿ–ಬೆಳಗಾವಿ ಮಾರ್ಗದ ಕಡೆಗೆ ತಿರುಗಿಸುವ ಪ್ರಯತ್ನದಲ್ಲಿದ್ದಾರೆ. ಈ ಮಾರ್ಗದಲ್ಲಿ ಈಗಾಗಲೇ ಸೂಪರ್‌ಫಾಸ್ಟ್ ರೈಲು ಘೋಷಿಸಿರುವಾಗ ಮತ್ತೊಂದು ಪ್ರೀಮಿಯಂ ರೈಲನ್ನು ಓಡಿಸುವುದು ನ್ಯಾಯಸಮ್ಮತವಲ್ಲ. ಕಲ್ಯಾಣ ಕರ್ನಾಟಕವು ಹಲವಾರು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕೇಂದ್ರದ ಪ್ರತಿ ಯೋಜನೆಯು ಹುಬ್ಬಳ್ಳಿಯ ಪಾಲಾದರೆ 'ಕಲ್ಯಾಣ'ದ ಗತಿ ಏನು?

ವೆಂಕಟೇಶ್ ಮುದಗಲ್, ಕಲಬುರಗಿ

ಕೊಡಚಾದ್ರಿ ಬೆಟ್ಟದ ಯಮರೂಪಿ ರಸ್ತೆ

ಕಳೆದ ವಾರ ಕೊಡಚಾದ್ರಿ ಬೆಟ್ಟ ನೋಡಲು ಹೋಗಿದ್ದೆವು. ನಿಟ್ಟೂರಿನಿಂದ ಸುಮಾರು ಎಂಟು ಕಿ.ಮೀ. ಕಡಿದಾದ ಬೆಟ್ಟದ ರಸ್ತೆ ಮೂಲಕ ಜೀಪಿನಲ್ಲಿ ಅಲ್ಲಿಗೆ ಹೋಗಬೇಕು. ಜೀಪ್ ಹೊರತುಪಡಿಸಿ ಬೇರೆ ವಾಹನಗಳು ಹೋಗಲು ಸಾಧ್ಯವಿಲ್ಲ. ಅಲ್ಲಿ ರಸ್ತೆ ಅನ್ನುವುದೇ ಇಲ್ಲ. ಏರುದಾರಿಯಲ್ಲಿ ಆಳವಾದ ಕೊರಕಲು, ಘಾತಕ ತಿರುವುಗಳು, ಆಳದ ಗುಂಡಿಗಳು, ದೂಳಿನಲ್ಲಿ ಜೀವ ಕೈಯಲ್ಲಿ ಹಿಡಿದು ಸಾಗಬೇಕು. ಚಾಲಕ ಸ್ವಲ್ಪ ಯಾಮಾರಿದರೂ ವಾಹನಸಹಿತ ಪ್ರವಾಸಿಗರು ಪಾತಾಳಕ್ಕೆ ಬೀಳಲಿದ್ದಾರೆ. ಇಂತಹ ಕೆಟ್ಟ ರಸ್ತೆಯಲ್ಲಿ ವಾಹನಗಳನ್ನು ಬಿಡುವುದು ಅನಾಹುತಕ್ಕೆ ಕಾರಣವಾಗಬಹುದು. ಅರಣ್ಯ ಇಲಾಖೆಯು ಪ್ರತಿ ವಾಹನಕ್ಕೂ, ಪ್ರವಾಸಿಗರಿಗೂ ಶುಲ್ಕ ತೆಗೆದುಕೊಂಡು ಮೇಲೆ ಹೋಗಲು ಬಿಡುತ್ತಿದೆ; ಆದರೆ, ರಸ್ತೆಯ ಕನಿಷ್ಠ ನಿರ್ವಹಣೆ ಮಾಡುತ್ತಿಲ್ಲ.

ವೆಂಕಟೇಶ ಮಾಚಕನೂರ, ಧಾರವಾಡ

ಸಮುದ್ರದ ನಂಟಸ್ತನ; ಉಪ್ಪಿಗೆ ಬಡತನ

'ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುವರೆಗೆ ನೀರು' ಎಂಬ ಗಾದೆಮಾತು ವಿಜಯಪುರ ಜಿಲ್ಲಾ ಕೇಂದ್ರಕ್ಕೆ ಅನ್ವಯಿಸುತ್ತದೆ. ಕೇಂದ್ರದ ಅಮೃತ ಯೋಜನೆಯಡಿ ವಿಜಯಪುರ ನಗರದಲ್ಲಿ ಹಂತ ಹಂತವಾಗಿ 24x7 ನೀರು ಪೂರೈಕೆ ವ್ಯವಸ್ಥೆಯನ್ನು ಜಾರಿಗೆ ತಂದಿರುವುದಾಗಿ ಹೇಳಲಾಗುತ್ತಿದೆ. ಆದರೆ, ಇಲ್ಲಿನ ಕೋಟೆ ಒಳಭಾಗದ ಅನೇಕ ಹಳೆಯ ಬಡಾವಣೆಗಳಿಗೆ ಇಂದಿಗೂ 10ರಿಂದ 12 ದಿನಗಳಿಗೊಮ್ಮೆ ನೀರು ಪೂರೈಕೆ ಆಗುತ್ತಿದೆ. ವಿಜಯಪುರಕ್ಕೆ ಸುಮಾರು 50 ಕಿ.ಮೀ. ದೂರದಲ್ಲಿರುವ ಕೃಷ್ಣಾ ನದಿಯಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ನದಿಯಲ್ಲಿ ನೀರಿನ ಸಂಗ್ರಹ ಇದ್ದರೂ, ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ರಾಜಕಾರಣಿ ಗಳ ಇಚ್ಛಾಶಕ್ತಿಯ ಕೊರತೆಯಿಂದ ನೀರು ಪೂರೈಕೆ ನಿಯಮಿತವಾಗಿಲ್ಲ. ಜನಪ್ರತಿನಿಧಿಗಳು ಈ ಸಮಸ್ಯೆ ಬಗ್ಗೆ ಕಂಡುಕಾಣದಂತೆ ಕುರುಡಾಗಿದ್ದಾರೆ.

ಎಸ್.ಎಂ. ತಾಂಬೆ, ವಿಜಯಪುರ

ಕೊಟ್ಟ ಮಾತು ತಪ್ಪಿದ ಕಾಂಗ್ರೆಸ್ ಸರ್ಕಾರ

ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೇಂದ್ರದ ಎನ್‌ಇಪಿ–2020ನ್ನು ಸಂಪೂರ್ಣವಾಗಿ ಧಿಕ್ಕರಿಸಿ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಜಾರಿ ಮೂಲಕ ಶಿಕ್ಷಣದ ಬಲವರ್ಧನೆಗೆ ಭರವಸೆ ನೀಡಿತ್ತು. ಈಗ ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವಾಗಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯ ಜಾರಿಗೆ ಮುಂದಾಗಿದೆ. ಸರ್ಕಾರ ಆಡುವುದು ಒಂದು, ಮಾಡುವುದು ಮತ್ತೊಂದು ಎಂಬುದಕ್ಕೆ ಇದು ನಿದರ್ಶನ. ಈ ಯೋಜನೆಯಿಂದ ಖಾಸಗಿ ಶಾಲೆಗಳಿಗೆ ಇನ್ನಷ್ಟು ಬಲ ಸಿಗಲಿದೆ. ಬಡ ಪೋಷಕರು ಮತ್ತಷ್ಟು ದುರ್ಬಲರಾಗಲಿದ್ದಾರೆ. ಈ ಕುರಿತಂತೆ ಶಿಕ್ಷಣ ತಜ್ಞರು, ಸಾಹಿತಿಗಳು, ವಿದ್ಯಾರ್ಥಿಗಳು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ಗೊಂಡು ಯೋಜನೆಯನ್ನು ವಿರೋಧಿಸುವುದು ಸಕಾಲಿಕ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಫ್ಲೈಬಸ್: ಮಾರ್ಗಮಧ್ಯೆ ನಿಲುಗಡೆ ಅಗತ್ಯ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಮಡಿಕೇರಿ ನಡುವೆ ಸಂಚರಿಸುವ ಫ್ಲೈಬಸ್‌ನಲ್ಲಿನ, ಸುಮಾರು ಏಳು ಗಂಟೆಗಳ ತಡೆರಹಿತ ಪ್ರಯಾಣವು ಪ್ರಯಾಣಿಕರಿಗೆ ತ್ರಾಸದಾಯಕವಾಗಿದೆ. ಎಲ್ಲಿಯೂ ಊಟ, ಉಪಹಾರಕ್ಕೆ ಅವಕಾಶ ಇಲ್ಲ. ತಡೆರಹಿತ ಚಾಲನೆ ಚಾಲಕ, ನಿರ್ವಾಹಕರಿಗೂ ದಣಿವು ತರುತ್ತದೆ. ಮಾರ್ಗ ಮಧ್ಯದಲ್ಲೊಮ್ಮೆ ಕನಿಷ್ಠ 15 ನಿಮಿಷ ನಿಲುಗಡೆ ಮಾಡಿದರೆ ಪ್ರಯಾಣಿಕರು ದೇಹಬಾಧೆ ತೀರಿಸಿಕೊಳ್ಳಬಹುದು. ಈ ಕುರಿತು ಕೆಎಸ್‌ಆರ್‌ಟಿಸಿ ಗಮನಹರಿಸಲಿ.

ಅಶೋಕ್ ಎಂ., ಮಡಿಕೇರಿ

ಚುರುಮುರಿ



ಪಟ್ಟಕ್ಕೆ ಕುತ್ತು

• ಸುಮಂಗಲಾ

'ಛೇ... ಈ ವರ್ಷ ನೊಬೆಲ್ ಶಾಂತಿ ಕಪ್ ಯಾರಿಗೆ ಕೊಡಬಕು ಅನ್ನೂದೇ ನನಗ ಚಿಂತಿಯಾಗೈತಿ' ಎಂದು ಬೆಕ್ಕಣ್ಣ ಅಲವತ್ತುಕೊಂಡಿತು.

'ನಿನಗೆ ಎದಕ್ಕ ಚಿಂತಿ? ನೀ ಏನ್ ನೊಬೆಲ್ ಪ್ರಶಸ್ತಿ ಮಂಡಳಿವಳಗೆ ಅದೀಯೇನಲೇ' ಎಂದು ರೇಗಿದೆ.

'ನನಗ ಅಂದರೆ ನನಗೇ ಅಂತಲ್ಲ... ಪಾಪದ ನೊಬೆಲ್ ಪ್ರಶಸ್ತಿ ಮಂಡಳಿಯವರಿಗೆ ಚಿಂತಿಯಾಗಿರತೈತಿ' ಎಂದು ಮುಸಿಮುಸಿ ನಕ್ಕಿತು.

'ಯಾಕ... ಈಗ ಶಾಂತಿ ಕಪ್ಪಿಗೆ ಯಾವ ಹೊಸ ಕ್ಯಾಂಡಿಡೇಟ್ ಬಂದಾರೆ?' ಎಂದೆ ಕುತೂಹಲದಿಂದ.

'ಇರಾನ್–ಅಮೆರಿಕ ಮಾತುಕತಿಗೆ ಮಧ್ಯಸ್ಥಿಕೆ ವಹಿಸ್ತಿರೋ ಪಾಕ್ ಲಿಸ್ಟ್ ವಳಗೆ ಮೊದ್ಲೇ ಐತಿ. ಯುದ್ಧ ಬ್ಯಾಡ ಅಂತಿದ್ದ ಅಮೆರಿಕದ ಉಪಾಧ್ಯಕ್ಷ ವ್ಯಾನ್ಸ್ ಶಾಂತಿ ಮಾತುಕತೆಗೆ ಪಾಕಿಸ್ತಾನಕ್ಕೆ ಬಂದಾನೆ. ಅವಂಗೆ ಶಾಂತಿ ಕಪ್ ಕೊಡಬೌದಾ ಅಂತ' ಬೆಕ್ಕಣ್ಣ ಉದ್ದಕ್ಕೆ ವಿವರಿಸಿತು.

'ಅಮೆರಿಕದಲ್ಲೇ ತನ್ನ ಬಿಟ್ಟು ಇನ್ನೊಬ್ಬರಿಗೆ ಕೊಟ್ಟರೆ ಟ್ರಂಪಣ್ಣ ಸುಮ್ಮನೇ ಕೂರತಾನೇನು? ಅಂವಾ ನೊಬೆಲ್ ಶಾಂತಿ ಪ್ರಶಸ್ತಿ ಮಂಡಳಿ ಇರೋ ನಾರ್ವೆ ಮ್ಯಾಲೇ ಯುದ್ಧ ಸಾರತಾನೆ' ಎಂದೆ.

'ಟ್ರಂಪಣ್ಣನಿಗೆ ಈಗಲೇ ಅಡ್ವಾನ್ಸ್ ಶಾಂತಿ ಕಪ್ ಕೊಟ್ಟು, ಇನ್ ಯುದ್ಧ ಮಾಡಬ್ಯಾಡ ಅಂದ್ರ ಹೆಂಗಿರತೈತಿ?' ಬೆಕ್ಕಣ್ಣ ಹೊಸ ಉಪಾಯ ಮುಂದಿಟ್ಟಿತು.

'ಅಂವಾ ಸುಮ್ಮನಿದ್ದರೂ ಆ ನೆತನ್ಯಾಹು ಸುಮ್ಮನಿರಂಗಿಲ್ಲ. ತನ್ನ ಪೂರ್ವಜರು ಹಿಟ್ಲರ್ ಕೈಯಾಗೆ ನರಮೇಧಕ್ಕೆ ಒಳಗಾಗಿದ್ದು ಅವನಿಗೆ ಮರೆತೇ ಹೋಗಿರಬಕು' ಎಂದೆ ಸಿಟ್ಟಿನಿಂದ.

'ನರಮೇಧ ಹಾದುಬಂದವರು ಅವನ ಸ್ವಂತ ಕುಟುಂಬದವರು ಅಲ್ಲವಲ್ಲ... ಅವನಿಗೆ ದೊಡ್ಡದೊಂದು ಅಶಾಂತಿ ಕಪ್ ಕೊಡಬಕು!' ಬೆಕ್ಕಣ್ಣ ಕುಟುಕಿತು.

'ಶಾಂತಿ–ಅಶಾಂತಿ ಕಪ್ ವಿಚಾರ ಬಿಡಲೇ. ಈಗ ಪಾಕ್ ಶಾಂತಿ ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸಿ, ನಮ್ ವಿಶ್ವಗುರು ಪಟ್ಟಕ್ಕೂ ಕುತ್ತು ಬಂತಲ್ಲ...' ಎಂದೆ ಯೋಚಿಸುತ್ತ.

'ಪಾಕ್ ಹೆಚ್ಚೆಂದರೆ ಮಧ್ಯಸ್ಥ–ಗುರು ಆಗಬೌದು... ವಿಶ್ವಗುರು ಪಟ್ಟ ಯಾವಾಗಿದ್ರೂ ನಮ್ ಮೋದಿ ಮಾಮಂದೇ!' ಬೆಕ್ಕಣ್ಣ ಮೀಸೆ ತಿರುವಿತು.

ಸಂಗತ

ವಿಶ್ವವಿದ್ಯಾಲಯಗಳ 'ಗೌರವ' ಬಿಕರಿ ಆಗದಿರಲಿ


ವಿಶ್ವವಿದ್ಯಾಲಯಗಳು ನೀಡುವ ಗೌರವ ಡಾಕ್ಟರೇಟ್‌ಗಳ ಸಾಂಸ್ಕೃತಿಕ–ನೈತಿಕ ಮಹತ್ವ ಬದಲಾಗಿದೆ. ಆ ಗೌರವಗಳು ಬೇರೆಯದೇ ರೀತಿಯ 'ಮೌಲ್ಯ' ಪಡೆದುಕೊಂಡಿವೆ.

• ಟಿ.ಎಂ. ಮಂಜುನಾಥ್

ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುವ ವಿಷಯದಲ್ಲಿ ನಿಯಂತ್ರಣ ತರುವ ಉದ್ದೇಶದಿಂದ ಸಮಿತಿಯೊಂದನ್ನು ರಚಿಸುವ ಪ್ರಸ್ತಾವವನ್ನು ಕರ್ನಾಟಕ ಸರ್ಕಾರ ಇತ್ತೀಚೆಗೆ ಮುಂದಿಟ್ಟಿದೆ. ಉನ್ನತ ಶಿಕ್ಷಣ ವ್ಯವಸ್ಥೆಯ ಪ್ರಮುಖ ವಿದ್ಯಮಾನವಾಗಿ ಗೌರವ ಡಾಕ್ಟರೇಟ್ ಪ್ರದಾನದ ವಿಷಯ ಬೆಳೆದು ನಿಂತಿದೆ. ಯಾರಿಗೆ ಈ ಗೌರವ ಸಲ್ಲಿಸಬೇಕು ಎಂದು ನಿರ್ಧರಿ ಸಲು ಏಕರೂಪ ಮಾರ್ಗಸೂಚಿ ಗೊತ್ತುಪಡಿಸುವುದು ಸ್ವಾಗತಾರ್ಹ ಹಾಗೂ ಸಕಾಲಿಕ. ಈ ಸಂದರ್ಭದಲ್ಲಿ, 'ಮಾರ್ಗ ಸೂಚಿ ಒಂದೇ ಸಾಕೆ ಅಥವಾ ಇನ್ನೂ ಆಳವಾದ ಆಲೋಚನೆ ಬೇಕೆ' ಎಂಬ ಮೂಲ ಪ್ರಶ್ನೆಯನ್ನು ಹಾಕಿಕೊಳ್ಳಬೇಕಿದೆ.

ಸಾರ್ವಜನಿಕ ಸೇವೆ, ವಿಜ್ಞಾನ, ಕಲೆ, ಸಾಮಾಜಿಕ ನಾಯಕತ್ವ ಸೇರಿದಂತೆ ಹಲವು ಕ್ಷೇತ್ರಗಳ ಸಾಧಕರನ್ನು ಗುರ್ತಿಸಿ, ಅವರನ್ನು ಗೌರವ ಡಾಕ್ಟರೇಟ್ ಮೂಲಕ ವಿಶ್ವ ವಿದ್ಯಾಲಯಗಳು ಗೌರವಿಸುವುದು ನಡೆದುಕೊಂಡು ಬಂದಿರುವ ಪರಿಪಾಟ. ಶೈಕ್ಷಣಿಕ ಸಾಧನೆಯನ್ನು ಹೊರತು ಪಡಿಸಿಯೂ ವಿಶ್ವವಿದ್ಯಾಲಯ ತನ್ನ ಹೊಣೆಗಾರಿಕೆಯನ್ನು ವಿಸ್ತರಿಸಿಕೊಳ್ಳುವ ಮಾರ್ಗ ಇದು.

ಹೀಗಿದ್ದೂ ಕಾಲಾಂತರದಲ್ಲಿ ಆಗಿರುವ ಕೆಲವು ಬದಲಾವಣೆಗಳ ಬಗ್ಗೆ ಆಲೋಚಿಸಬೇಕಾಗಿದೆ. ಇಂತಹ ಗೌರವಗಳನ್ನು ಕೊಡುವುದು ಚಾಳಿಯಾಗಿ ಬೆಳೆಯುತ್ತಿದೆ. ಅಲ್ಲದೆ,ಅದನ್ನು ಪಡೆದವರು ಸಾರ್ವಜನಿಕವಾಗಿ ನಿಯಂತ್ರಣವೇ ಇಲ್ಲದಂತೆ 'ಡಾಕ್ಟರ್' ವಿಶೇಷಣವನ್ನು ತಮ್ಮ ಹೆಸರಿನ ಜೊತೆಗೆ ಪ್ರದರ್ಶಿಸುವುದು, ಆಯ್ಕೆಯಲ್ಲಿ ಪಾರ ದರ್ಶಕತೆ ಇಲ್ಲದಿರುವುದು, ಒಬ್ಬರಿಗೇ ಹಲವು ವಿಶ್ವ ವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡುವುದು ಅದರ ಘನತೆಯನ್ನು ಕುಗ್ಗಿಸುತ್ತಿವೆ.



ಗೌರವ ಡಾಕ್ಟರೇಟ್ ದುರ್ಬಳಕೆ ಆಗುತ್ತಿದೆ ಎನ್ನುವುದಷ್ಟೇ ಅಲ್ಲದೆ, ಅದರ ಪರಿಕಲ್ಪನೆಯಲ್ಲಿನ ಗೊಂದಲಗಳ ಕುರಿತೂ ಚಿಂತಿಸಬೇಕಿದೆ. 'ಗೌರವಾರ್ಥ' ಎಂದು ಸ್ಪಷ್ಟವಾಗಿ ತಿಳಿಸಿದ್ದರೂ ಶೈಕ್ಷಣಿಕವಾಗಿ ಪಡೆದ ಡಾಕ್ಟರೇಟ್ ಪದವಿಗೂ, ಇದಕ್ಕೂ ವ್ಯತ್ಯಾಸವೇ ಇಲ್ಲ ಎಂಬಂತೆ ಆಗುತ್ತಿದೆ. ಹೀಗೆ ಆದಾಗ ನಿಜವಾಗಿಯೂ ಶೈಕ್ಷಣಿಕವಾಗಿ ಸಂಶೋಧನೆ ಮಾಡಿದವರಿಗೆ, ಶಿಷ್ಯವೇತನ ಪಡೆದವರಿಗೆ ಅನ್ಯಾಯವಾಗುತ್ತದೆ.

'ಡಾಕ್ಟರೇಟ್' ಎಂದು ತಮ್ಮ ಹೆಸರಿನ ಪಕ್ಕ ಹಾಕಿಕೊಳ್ಳುವುದು ಶಿಷ್ಟಾಚಾರದ ಉಲ್ಲಂಘನೆ. ಕೆಲವೊಮ್ಮೆ ದಿಕ್ಕು ತಪ್ಪಿಸುವ ನಡಾವಳಿಯೂ ಹೌದು. ಯಾಕೆಂದರೆ, ಉನ್ನತ ಶಿಕ್ಷಣದಲ್ಲಿ ಸ್ಪರ್ಧಾತ್ಮಕತೆ, ಸಾಂಕೇತಿಕತೆ ಹಾಗೂ ಸ್ಪಷ್ಟತೆ ವಿಸ್ತರಣೆಗೊಳ್ಳುತ್ತಲೇ ಇರುವ ಹೊತ್ತಿನಲ್ಲಿ ಇಂತಹ ಅಪಸವ್ಯ ಆಗಕೂಡದು.

ಗೌರವ ಡಾಕ್ಟರೇಟ್‌ಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ನಿಯಂತ್ರಣಕ್ಕೆ ಒಳಪಡಿಸುವುದು ಸರಿಯಾದ ಕ್ರಮ. ಅರ್ಹತೆ, ಮೌಲ್ಯಮಾಪನ, ಅನುಮೋದನೆಯಂತಹ ಮಾನದಂಡಗಳಿಂದ ಪ್ರಮಾಣೀಕರಿಸಿ ಆಯ್ಕೆ ಮಾಡುವ ಮಾದರಿ ಒಪ್ಪತಕ್ಕದ್ದು. ಅದರಿಂದ ಒಂದು ಸ್ಥಿರತೆ ಬರುತ್ತದೆ.

ನಿಯಂತ್ರಣ ಎನ್ನುವುದು ಪ್ರಾಥಮಿಕವಾಗಿ ಪ್ರಕ್ರಿಯೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಮೂಲ ಕಾಳಜಿಯನ್ನು ಸಂಪೂರ್ಣವಾಗಿ ಅದೊಂದೇ ಈಡೇರಿಸಲಾರದು. ಗೌರವ ಡಾಕ್ಟರೇಟ್‌ಗೆ ಸಾಧಕರನ್ನು ಆರಿಸುವ ಈಗಿನ ಪ್ರಕ್ರಿಯೆಯನ್ನು ಪ್ರಮಾಣಿತಗೊಳಿಸಿದ ಮಾತ್ರಕ್ಕೆ ಆಯ್ಕೆಯ ಉದ್ದೇಶದಲ್ಲಿನ ಗೊಂದಲಗಳಿಗೆ ಪರಿಹಾರ ಸಿಕ್ಕಂತಾಗುವುದಿಲ್ಲ.

ಗೌರವ ಡಾಕ್ಟರೇಟ್ ಪಡೆದವರು ತಮ್ಮ ಹೆಸರಿನ ಮುಂದೆ 'ಡಾ' ಎಂದು ಬರೆದುಕೊಳ್ಳುವುದನ್ನು ಅನೇಕ ದೇಶಗಳಲ್ಲಿ ನಿರ್ಬಂಧಿಸ ಲಾಗಿದೆ. ನಮ್ಮ ದೇಶದಲ್ಲಿಯೂ ಅಂತಹ ಮಾರ್ಗಸೂಚಿ ಇದೆಯಾದರೂ, ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸಾಧ್ಯವಾಗಿಲ್ಲ.


ಗೌರವ ಡಾಕ್ಟರೇಟ್ ಎನ್ನುವುದಕ್ಕೆ ಪರ್ಯಾಯಗಳನ್ನು ಯೋಚಿಸುವುದೇ ಸೂಕ್ತ ಎನಿಸುತ್ತದೆ. ಅದು ಶೈಕ್ಷಣಿಕವಲ್ಲದ ಗೌರವಕ್ಕೆ ಸಲ್ಲುವ ಮನ್ನಣೆ ಆದುದರಿಂದ, 'ಆನರರಿ ಫೆಲೋ' (ಗೌರವ ಫೆಲೋಷಿಪ್) ಎಂದು ಮನ್ನಣೆ ನೀಡಲು ಆರಂಭಿಸಬಹುದು. ಇಂತಹ ಗೌರವ ನೀಡುವಾಗಲೇ ಅದು ಶಿಕ್ಷಣೇತರ ಚಟುವಟಿಕೆಗೆ ಸಂದಿದೆ ಎನ್ನುವ ಸಂಗತಿಯನ್ನೂ ಸ್ಪಷ್ಟವಾಗಿ ಉಲ್ಲೇಖಿಸಬೇಕು. ಹೀಗಿದ್ದರೂ ಅದು ಘನತೆಯುಳ್ಳದ್ದು ಹಾಗೂ ಪ್ರತಿಷ್ಠಿತ ಎಂಬ ಭಾವನೆ ಆಗ ಜನರಲ್ಲಿ ಉಳಿಯುತ್ತದೆ. ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಅಥವಾ ರಾಷ್ಟ್ರ ಮಟ್ಟದಲ್ಲಿ ಈ ಪದ್ಧತಿಯನ್ನು ಅಳವಡಿಸಿಕೊಳ್ಳಬಹುದು.

ಯಾವ ಕ್ಷೇತ್ರದಲ್ಲಿ ಸಾಧಕರನ್ನು ಗುರುತಿಸಲಾಗಿದೆ ಎನ್ನುವುದನ್ನೂ ನಮೂದಿಸಬೇಕು. ಉದಾಹರಣೆಗೆ, ಸಾಹಿತ್ಯ ಹಾಗೂ ಮಾನವಿಕ ವಿಷಯಗಳಲ್ಲಿ ಸಾಧನೆ ಮಾಡಿದ್ದರೆ 'ಎಫ್–ಲಿಟ್' ಎಂಬ ಗೌರವ ನೀಡಬಹುದು. ಪ್ರದರ್ಶನ ಕಲೆಯಲ್ಲಿ ಗಮನಸೆಳೆದಿದ್ದರೆ 'ಎಫ್–ಪಿಎ' ಎನ್ನಬಹುದು. ಸಾಮಾಜಿಕ ಸೇವೆಯಲ್ಲಿ ಮನ್ನಣೆ ನೀಡುವುದಿದ್ದರೆ 'ಎಫ್‌ಎಸ್‌ಎಸ್' ಎಂದು ನಮೂದಿಸಬಹುದು. ಇದರಿಂದ ಗೌರವಕ್ಕೆ ಸ್ಪಷ್ಟತೆ ಹಾಗೂ ಘನತೆ ಎರಡನ್ನೂ ದಕ್ಕಿಸಿಕೊಟ್ಟಂತೆ ಆಗುತ್ತದೆ. ಶೈಕ್ಷಣಿಕ ಪದವಿಗಳಿಗೂ ಈ ಗೌರವಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಉಲ್ಲೇಖಿಸಬೇಕು. ಆಗ ಸಂಶೋಧನೆಯ ಪಾವಿತ್ರ್ಯ ಹಾಗೂ ಭಿನ್ನತೆಗೂ, ಈ ಗೌರವಕ್ಕೂ ಇರುವ ನಡುವಿನ ಗೆರೆಯು ಎದ್ದುಕಾಣುತ್ತದೆ. ಸಾರ್ವಜನಿಕರಿಗೂ ಸ್ಪಷ್ಟವಾಗಿ ಯಾವುದು ಪದವಿ, ಯಾವುದು ಗೌರವ ಎನ್ನುವುದು ತಿಳಿಯುತ್ತದೆ. ಉನ್ನತ ಶಿಕ್ಷಣದ ಮಹತ್ವವನ್ನು ಕಾಪಾಡಲೂ ಇದು ಅತ್ಯಗತ್ಯ.

ವಿಶ್ವವಿದ್ಯಾಲಯಗಳ ವಾತಾವರಣಕ್ಕೆ ಔಷಧ ಸಿಂಪಡಿಸುವ ಮಾರ್ಗವೂ ಇದಾಗುವ ಸಾಧ್ಯತೆ ಇದೆ. ಪ್ರಸ್ತಾವಿತ ಸಮಿತಿಯು ನಕಲಿ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳನ್ನೂ ಗುರುತಿಸಿ, ಮಟ್ಟಹಾಕಬೇಕು. ಇದರಿಂದ ಶಿಕ್ಷಣ ಕ್ಷೇತ್ರದ ಸಮಗ್ರತೆಯನ್ನು ಕಾಪಾಡಿದಂತೆಯೂ ಆಗುತ್ತದೆ. ಈ ಎಲ್ಲ ಕಾರ್ಯಗಳು ಕೆಲವು ಹಂತಗಳಲ್ಲಿ ಆಗುವಂತೆ ಚೌಕಟ್ಟನ್ನು ಸಮಿತಿ ರೂಪಿಸುವಂತಾಗಲಿ.

ಲೇಖಕ: ಕೀಟಶಾಸ್ತ್ರಜ್ಞ ಹಾಗೂ ಕೀಟ ನಿಯಂತ್ರಣ ಸಲಹೆಗಾರರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಸೂರ್ಯ ಪ್ರಭೆಯ 'ಆಶಾ ತಾಯಿ'

• ಸಂಗೀತಾ ಕಟ್ಟಿ

2017ನೇ ಇಸವಿ, ಫೆಬ್ರುವರಿ ತಿಂಗಳ ಆ ದಿನ ಇನ್ನೂ ಸ್ಮೃತಿಯಲ್ಲಿ ಹಸಿರಾಗಿದೆ, ಶಾಸ್ತ್ರೀಯ ಸಂಗೀತದ ಮೇರು ಗಾಯಕಿ, ನಮ್ಮ ಮಹಾಗುರು ಕಿಶೋರಿ ಅಮೋನ್ಕರ್ ಅವರ ಮೊಮ್ಮಗಳ ಮದುವೆ ಸಡಗರ. ನಾವು ಶಿಷ್ಯೆಯರೆಲ್ಲ ಸ್ವಾಗತಕಾರಿಣಿಗಳಾಗಿ ಅತಿಥಿಗಳನ್ನೆಲ್ಲ ಬರಮಾಡಿಕೊಳ್ಳುತ್ತಿದ್ದೆವು. ಕಾರಿನಿಂದ ಇಳಿದು ಬಂದ ಆಶಾ ಭೋಸ್ಲೆ ಅವರೊಡನೆ ಹೆಜ್ಜೆ ಹಾಕುತ್ತ, ಒಟ್ಟಿಗೆ ಸೋಫಾದಲ್ಲಿ ಕುಳಿತುಕೊಳ್ಳುವ ಸೌಭಾಗ್ಯ ಒದಗಿಬಂತು. ಒಂದು ತರಹದ ಸೂರ್ಯನ ಪ್ರಭೆಯಲ್ಲಿ ಕುಳಿತ ಅನುಭವ.

'ನಾನು ಸಂಗೀತಾ... ಎಂದು ಪರಿಚಯಿಸಿಕೊಂಡೆ. ಅವರ ಮೇಲಿನ ಅತೀವ ಗೌರವ ಭಾವ ನನ್ನನ್ನು ತುಸು ಗಲಿಬಿಲಿಗೊಳಿಸಿತು. ಮಾತನ್ನು ಪುನರುಚ್ಚರಿಸಿದೆ. 'ಮುಝೆ ಮಾಲೂಮ್ ಹೈ.. ಆಗೇ ಬೋಲೋ...' ಎಂಬ ನಿಷ್ಠುರ ನುಡಿ ಎದುರಿನಿಂದ ಬಂತು. ಆಶಾ ತಾಯಿ ಸ್ವಭಾವದ ಅರಿವಿದ್ದ ನನಗೆ ಏನೂ ಅನ್ನಿಸಲಿಲ್ಲ.

ಕಿಶೋರಿ ಅಮೋನ್ಕರ್ ಮತ್ತು ಆಶಾ ಭೋಸ್ಲೆ ಅತ್ಯಾಪ್ತರು. ಆಗಾಗ ಕಿಶೋರಿ ಅಮೋನ್ಕರ್ ಮನೆಗೆ ಬರುತ್ತಿದ್ದ ಆಶಾ ತಾಯಿ ಅವರನ್ನು ಮೂರ್ನಾಲ್ಕು ಬಾರಿ ಭೇಟಿಯಾಗಿದ್ದರೂ, ಆ ಭೇಟಿ, ನಮಸ್ಕರಿಸಿ ಆಶೀರ್ವಾದ ಪಡೆಯುವುದಕ್ಕಷ್ಟೇ ಸೀಮಿತವಾಗಿತ್ತು. ಮೊದಲ ಭೇಟಿಯ ವೇಳೆ ನಮ್ಮ ಗುರುಗಳು 'ಈಕೆ ನನ್ನ ಶಿಷ್ಯೆ ಸಂಗೀತಾ, ಚೆನ್ನಾಗಿ ಹಾಡುತ್ತಾಳೆ...' ಎಂದು ಪರಿಚಯಿಸಿದ್ದನ್ನು ಅವರು ನೆನಪಿಟ್ಟುಕೊಂಡು, 'ಮುಝೆ ಮಾಲೂಮ್ ಹೈ..' ಎಂದಿದ್ದೆಂದು ಆಮೇಲೆ ನನಗೆ ತಿಳಿಯಿತು. 83ರ ಹರೆಯದಲ್ಲೂ ಅವರ ಸ್ಮರಣಶಕ್ತಿ, ಚೈತನ್ಯಶೀಲತೆ ಯುವತಲೆಮಾರನ್ನು ನಾಚಿಸುವಂತಿತ್ತು.

ದೊಡ್ಡ ವೇದಿಕೆಗಳಲ್ಲಿ ಕಾಣುವ ಪ್ರಸಿದ್ಧ ಗಾಯಕಿ ಆಶಾ ಭೋಸ್ಲೆಗೂ, ವೈಯಕ್ತಿಕ ಭೇಟಿಯಲ್ಲಿ ನಾವು ಕಾಣುವ ಆಶಾ ತಾಯಿಗೂ ಆಗಸ- ಭುವಿಯ ಅಂತರ. ವೇದಿಕೆಯಲ್ಲಿ ಅವರೊಬ್ಬ ಮಹಾನ್ ಕಲಾವಿದೆ, ಮಿನುಗು ನಕ್ಷತ್ರದಂತೆ ಭಾಸವಾಗುತ್ತಾರೆ. ವೈಯಕ್ತಿಕ ಬದುಕಿನಲ್ಲಿ ಅವರು ಆಡಂಬರದ ಹೊದಿಕೆಯಿಲ್ಲದ ಖಡಕ್ ವ್ಯಕ್ತಿ. ನೇರ, ದಿಟ್ಟ ಮಾತು, ಪರಿಶುದ್ಧ ಮನಸ್ಸು. ಅಷ್ಟೇ ಅಂತಃಕರುಣಿ, ಮಾತೃಹೃದಯಿ. ಅನಗತ್ಯವಾಗಿ ಯಾರನ್ನೂ ಹೊಗಳಿ ಅಟ್ಟಕ್ಕೇರಿಸುವವರಲ್ಲ. ಸಹ ಸಂಗೀತಗಾರರು ಸೇರಿದಂತೆ ಎಲ್ಲರನ್ನೂ ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಲತಾ ಮಂಗೇಶ್ಕರ್ ಸಹೋದರಿಯಾಗಿದ್ದರೂ, ಅವರ ವೃತ್ತಿ ಜೀವನದ ಹಾದಿ ಸುಲಭದ್ದಾಗಿರಲಿಲ್ಲ. ಪರಿಶ್ರಮ, ಶ್ರದ್ಧೆಯ ಕಾಯಕದಿಂದಲೇ ಹಿಮಾಲಯದೆತ್ತರಕ್ಕೆ ಬೆಳೆದವರು ಅವರು.

ಸಂಗೀತಗಾರರು ಜೀವನದಲ್ಲಿ ಒಮ್ಮೆಯಾದರೂ ಆಶಾ ಭೋಸ್ಲೆಯವರನ್ನು ಮುಖತಃ ಭೇಟಿ ಮಾಡಬೇಕು, ಆ ಮಾತಿನ ಸುಖವನ್ನು ಅನುಭವಿಸಬೇಕು ಎಂದು ನನಗೆ ಹಲವು ಬಾರಿ ಅನ್ನಿಸಿದ್ದಿದೆ.

ಆಶಾ ಭೋಸ್ಲೆ ಅವರು ಕ್ಯಾಬರೆ, ಕ್ಲಬ್ ಹಾಡುಗಳಿಂದ ಪ್ರಸಿದ್ಧಿ ಪಡೆದರು ಎನ್ನುತ್ತಾರೆ ಆದರೆ, ಅದಕ್ಕೂ ಎಷ್ಟೋ ಮುಂಚೆ ಅವರು ಸಂಗೀತ ನಿರ್ದೇಶಕ ಒ.ಪಿ. ನಯ್ಯರ್ ಚಿತ್ರಕ್ಕೆ ಹಾಡಿದ ಗಂಭೀರ ಹಾಡುಗಳು, ಎಸ್.ಡಿ. ಬರ್ಮನ್‌ರ ಕಪ್ಪು ಬಿಳುಪು ಚಿತ್ರಕ್ಕೆ ಹಾಡಿದ ಮಾಧುರ್ಯದ ಗೀತೆಗಳು ಕಾಡುತ್ತವೆ. ಶಾಸ್ತ್ರೀಯ ಸಂಗೀತದ ತಳಹದಿಯ ಹಲವಾರು ಗೀತೆಗಳನ್ನು 1950-60ರ ದಶಕದಲ್ಲೇ ಅವರು ಹಾಡಿದ್ದರು.

ದುಃಖದ ಸನ್ನಿವೇಶದ ಹಾಡಿಗೆ ಶ್ರೋತೃಗಳ ಕಣ್ಣಂಚು ತೇವಗೊಳಿಸುವ, ನಗುವ ಹಾಡಿಗೆ ಸಂತಸ ಉಕ್ಕಿಸುವ, ಪ್ರಣಯ ಗೀತೆಗಳಿಗೆ ಕೇಳುಗರನ್ನು ಕುಣಿಸುವ ತಾಕತ್ತು ಅವರಿಗಿತ್ತು. ಆಶಾ ತಾಯಿ ಸ್ವರದಲ್ಲಿ ರಾಮ್ ಭಜನ್, ದೇವಿ ಸ್ತುತಿ ಕೇಳುತ್ತ ಕಣ್ರೆಪ್ಪೆ ಮುಚ್ಚಿದರೆ ಎಂತಹ ನಾಸ್ತಿಕನಲ್ಲೂ ಭಕ್ತಿ ಭಾವ ಸ್ಫುರಿಸದೆ ಇರಲಾರದು. ಮುಜರಾ ಶೈಲಿಯ ಹಾಡುಗಳಲ್ಲೂ ಅವರು ಎತ್ತಿದ ಕೈ. ಮೂರ್ನಾಲ್ಕು ನಿಮಿಷಗಳ ಒಂದು ಹಾಡಿನಲ್ಲಿ ಅವರು ಕೇಳುಗರು ಅಳುವಂತೆ ಮಾಡಿದ್ದಾರೆ, ನಗಿಸಿದ್ದಾರೆ, ಕುಣಿಸಿದ್ದಾರೆ, ಭಕ್ತಿಯಲ್ಲಿ ಲೀನವಾಗುವಂತೆ ಮಾಡಿದ್ದಾರೆ. ಈ ಸಾಮರ್ಥ್ಯವಿರುವ ಸಂಗೀತಗಾರರು ಬಹಳ ವಿರಳ.

ಆಶಾ ಭೋಸ್ಲೆ ಹಾಡುಗಳನ್ನು ಹಾಡಿ ಹಲವರು ಗಾಯಕರಾದರು. ಬದುಕಿನ ದಾರಿ ಕಂಡುಕೊಂಡರು.

ಆಶಾ ಭೋಸ್ಲೆ ಅವರ 'ಪಿಯಾ ತೂ ಅಬ್ ತೊ ಆಜಾ', 'ದಮ್ ಮಾರೊ ದಮ್', 'ನೀಲ್ ಕಮಲ್' ಚಿತ್ರದ 'ಹೇ ರೋಮ್ ರೋಮ್ ಮೇ ಬಸನೆ ವಾಲೆ ರಾಮ್' ಇಂತಹ ಅನೇಕ ಹಾಡುಗಳು ಕೇಳುಗರ ಮನದಲ್ಲಿ ಅಚ್ಚಾಗಿ ನಿಲ್ಲುತ್ತವೆ. 'ದಮ್ ಮಾರೊ ದಮ್' -ಇದು ಹಿಪ್ಪಿಗಳು ಹಾಡುವಂತಹ ಹಾಡು. ಇದನ್ನು ಆಶಾ ಅವರಂತೆ ಇನ್ನಾರೂ ಹಾಡಲು ಸಾಧ್ಯವಿರಲಿಲ್ಲವೇನೋ.

ಇಂದಿನ ಸಿನಿಮಾ ಹಾಡುಗಳು ಸಿನಿಮಾ ಜೊತೆಗೇ ನೆನಪಿನಿಂದ ಮರೆಯಾಗುತ್ತವೆ. ಆದರೆ, ಆಶಾ ಭೋಸ್ಲೆ, ಲತಾ ಮಂಗೇಶ್ಕರ್, ಮೊಹಮ್ಮದ್ ರಫಿ, ಕಿಶೋರ್ ಕುಮಾರ್ ಇವರ ಹಾಡುಗಳು ನಿತ್ಯಹಸಿರು.

ಕೊನೆಯ ಮಾತು, ಆಶಾ ಭೋಸ್ಲೆ ಅವರಿಗೆ ಅವರೇ ಸಾಟಿ. ಅವರನ್ನು ಅನುಕರಿಸಬಹುದು, ಆದರೆ ಅವರಾಗಲು ಸಾಧ್ಯವಿಲ್ಲ. ಇನ್ನು ನಾವು ಅವರನ್ನು ಭೌತಿಕವಾಗಿ ಭೇಟಿಯಾಗಲು ಆಗದಿರಬಹುದು, ಆದರೆ, ಅವರ ಚೈತನ್ಯಶಕ್ತಿ, ಅವರ ಹಾಡುಗಳು, ಯುಗ ಯುಗಗಳೇ ಕಳೆದರೂ ನಮ್ಮೊಡನೆ ಶಾಶ್ವತವಾಗಿರುತ್ತವೆ, ಗುನುಗುತ್ತಿರುತ್ತವೆ.

ನಿರೂಪಣೆ: ಸಂಧ್ಯಾ ಹೆಗಡೆ

ಕಠಿಣ ತಪಸ್ಸು, ಸ್ವ ಪ್ರಯತ್ನ

ಕಿಶೋರ್ ಕುಮಾರ್ ಜೊತೆ ಆಶಾ ಭೋಸ್ಲೆ ಸ್ಟುಡಿಯೊಕ್ಕೆ ಹೋದಾಗ ಅವರ ಸ್ವರ ಸರಿಯಿಲ್ಲ ವೆಂದು ತಿರಸ್ಕರಿಸಿದ್ದರಂತೆ. ಒಂದು ಸಂದರ್ಶನದಲ್ಲಿ ಇದನ್ನು ಅವರು ಹೇಳಿಕೊಂಡಿದ್ದರು. ಕಠಿಣ ತಪಸ್ಸು, ಸ್ವ ಪ್ರಯತ್ನವೇ ಅವರನ್ನು ಔನ್ನತ್ಯಕ್ಕೆ ಕೊಂಡೊಯ್ಯಿತು. ಭಾರತದಲ್ಲಿ ಮಾತ್ರವಲ್ಲ, ಇಟಲಿ, ಸ್ಪ್ಯಾನಿಷ್, ಲ್ಯಾಟಿನ್, ಜರ್ಮನ್ ಭಾಷೆಯ ಸಂಗೀತಗಾರರಿಗೂ ಆಶಾ ಭೋಸ್ಲೆ ಚಿರ ಪರಿಚಿತರಾದರು. ಶಾಸ್ತ್ರೀಯ ಸಂಗೀತದದ ಬಗೆಗೆ ಅವರಿಗೆ ಅಪಾರ ಗೌರವವಿತ್ತು, ಕಳಕಳಿ ಇತ್ತು.



ಮುಂಬೈನಲ್ಲಿ ನಡೆದಿದ್ದ ಫ್ಯಾಷನ್ ಶೋವೊಂದರಲ್ಲಿ (2013) ಹೆಜ್ಜೆ ಹಾಕಿದ್ದ ಮೇರು ಗಾಯಕಿ ಆಶಾ ಭೋಸ್ಲೆ



ಬೆಂಗಳೂರಿನಲ್ಲಿ 'ಸೌಂಡ್ ಆಫ್ ಸ್ಟೈನ್ಸ್' (2018 ಜೂ.8) ಕಾರ್ಯಕ್ರಮದಲ್ಲಿ ರಮ್ಯಾ ವಸಿಷ್ಠ, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ ಮತ್ತು ಪ್ರವೀಣ್ ಗೋಡ್ಖಿಂಡಿ ಅವರು ಆಶಾ ಭೋಸ್ಲೆ ಅವರನ್ನು ಸನ್ಮಾನಿಸಿದ್ದರು

ಕನ್ನಡದಲ್ಲಿ ಮೂರು ಹಾಡು ಹಾಡಿದ್ದರು



ಭಾರತೀಯ ಚಿತ್ರರಂಗದ ದಿಗ್ಗಜ ಗಾಯಕಿ ಆಶಾ ಭೋಸ್ಲೆ ಕನ್ನಡ ಚಿತ್ರರಂಗದಲ್ಲಿ ಕೆಲಸ ಮಾಡಿದ್ದು ಕಡಿಮೆ. 1970ರ ದಶಕದಲ್ಲಿ ಐಟಂ ಸಾಂಗ್‌ಗೆ ಜನಪ್ರಿಯರಾಗಿದ್ದ ಅವರು ಕನ್ನಡದಲ್ಲಿ ಮೂರು ಹಾಡುಗಳನ್ನು ಹಾಡಿದ್ದಾರೆ.

1967ರಲ್ಲಿ ತೆರೆಕಂಡಿದ್ದ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಸಿನಿಮಾದ 'ಯಾಕೋ ಏನೋ ಜಾರಿ' ಎಂಬ ಹಾಡನ್ನು ಇವರು ಹಾಡಿದ್ದರು. ಚಿತ್ರಕ್ಕೆ ಲಕ್ಷ್ಮಣ್ ಬೆರಲೇಕರ್ ಸಂಗೀತವಿತ್ತು. 1973ರಲ್ಲಿ ತೆರೆಕಂಡ ರಾಜ್‌ಕುಮಾರ್ ನಟನೆಯ 'ದೂರದ ಬೆಟ್ಟ' ಸಿನಿಮಾದ 'ಸವಾಲು ಹಾಕಿ ಸೋಲಿಸಿ..' ಎಂಬ ಹಾಡನ್ನು ಪಿ.ಬಿ.ಶ್ರೀನಿವಾಸ್ ಜತೆಗೂಡಿ ಹಾಡಿದ್ದರು.

2010ರಲ್ಲಿ ತೆರೆಕಂಡ 'ಮತ್ತೆ ಮುಂಗಾರು' ಸಿನಿಮಾದ 'ಹೇಳದೆ ಕಾರಣ..' ಎಂಬ ಹಾಡನ್ನು ಹಾಡಿದ್ದಾರೆ. ಇದಕ್ಕೆ ಎಕ್ಸ್.ಪೌಲ್ರಾಜ್ ಸಂಗೀತವಿತ್ತು.

'ಭಾರತೀಯ ಚಿತ್ರರಂಗದ ಮೇರುಧ್ವನಿಯನ್ನು ಕಳೆದುಕೊಂಡಿದ್ದೇವೆ. ಕನ್ನಡ ಚಿತ್ರರಂಗದೊಂದಿಗೆ ಆಶಾ ಅವರಿಗೆ ಒಡನಾಟ ಕಡಿಮೆ. ಕೆಲವೇ ಹಾಡುಗಳನ್ನು ಹಾಡಿದ್ದರು. ದಕ್ಷಿಣ ಭಾರತದಲ್ಲಿ ಇಳಯರಾಜ ಹೊರತಾಗಿ ಬೇರೆ ಸಂಗೀತ ನಿರ್ದೇಶಕರ ಜತೆ ಅವರ ಒಡನಾಟ ಕಡಿಮೆ' ಎಂದರು ಸಂಗೀತ ನಿರ್ದೇಶಕ ವಿ.ಮನೋಹರ್.

'15 ವರ್ಷಗಳ ಹಿಂದೆ ಲತಾ ಮಂಗೇಶ್ವರ್ ಅವರನ್ನು ಭೇಟಿ ಮಾಡಲು ಮುಂಬೈನ ಅವರ ಮನೆಗೆ ಹೋಗಿದ್ದೆ. ಆಗ ಆಶಾ ಭೋಸ್ಲೆ ಅವರನ್ನು ಭೇಟಿಯಾದೆ. ಅವರು ಮಾತನಾಡುವ ರೀತಿಯೇ ಮಗುವಿನ ಥರ ಇತ್ತು. ಇವರಿಬ್ಬರು ಸಹೋದರಿಯರಾದರೂ ಹಾಡಿರುವ ಜಾನರ್ ವಿಭಿನ್ನ. ಆ ಕಾಲಕ್ಕೆ ಐಟಂ ಸಾಂಗ್‌ಗಳನ್ನು ಹಾಡಿ ಜನಪ್ರಿಯರಾದವರು ಆಶಾ ಭೋಸ್ಲೆ. ಈಗ ಅವರ ಹಾಡುಗಳನ್ನು ರಿಮಿಕ್ಸ್ ಮಾಡಿದ್ದು ಕೂಡ ಸೂಪರ್ ಹಿಟ್ ಆಗುತ್ತಿವೆ. ಕನ್ನಡದಲ್ಲಿ ಅವರನ್ನು ಕರೆತಂದು ಹಾಡಿಸಿದ್ದು ಬಹಳ ಕಡಿಮೆ. ಸಂಗೀತ ಜಗತ್ತಿನಲ್ಲಿ ಅವರ ಸ್ಥಾನವನ್ನು ಯಾರೂ ತುಂಬಲು ಸಾಧ್ಯವಿಲ್ಲ' ಎಂದು ಲಹರಿ ವೇಲು ಆಶಾ ಅವರೊಂದಿಗಿನ ಒಡನಾಟವನ್ನು ನೆನಪಿಸಿಕೊಂಡರು.

ಮೂರು ತಿಂಗಳು ಅಭ್ಯಾಸ

ಆಶಾ ಭೋಸ್ಲೆ 'ಮತ್ತೆ ಮುಂಗಾರು' ಚಿತ್ರಕ್ಕಾಗಿ ಹಾಡಿದ 'ಹೇಳದೆ ಕಾರಣ ಹೋದೆಯ ಬಹುದೂರ' ಹಾಡು ಕನ್ನಡದಲ್ಲಿ ಅವರ ಕೊನೆಯ ಗೀತೆ. 2010ರಲ್ಲಿ ಧ್ವನಿಮುದ್ರಣಗೊಂಡ ಈ ಹಾಡು ಸಿದ್ಧಗೊಂಡ ಬಗೆಯ ಕುರಿತು ಚಿತ್ರದ ನಿರ್ದೇಶಕ ರಾಘವ ದ್ವಾರ್ಕಿ ಮಾತನಾಡಿದ್ದಾರೆ.

ದುಃಖದ ಸನ್ನಿವೇಶದ ಹಾಡಿದು. ಆಶಾ ಭೋಸ್ಲೆ ಅವರ ಬಳಿಯೇ ಹಾಡಿಸಬೇಕೆಂದು ಅಂದುಕೊಂಡಿದ್ದೆವು. ಮೊದಲ ಸಲ ಅವರು ನನಗೆ ವಯಸ್ಸಾಯಿತು. ಈಗ ಹಾಡಲು ಸಾಧ್ಯವಿಲ್ಲ ಎಂದು ತಿರಸ್ಕರಿಸಿದರು. ಮತ್ತೆ ಸ್ವಲ್ಪ ದಿನ ಬಿಟ್ಟು ಪ್ರಯತ್ನಿಸಿದೆವು. ಆಗ ಹಾಡಿನ ಟ್ಯೂನ್ ಕಳಿಸಲು ಕೇಳಿದರು. ಟ್ಯೂನ್ ಕಳುಹಿಸಿದ ನಂತರ ಹಾಡಿನ ಸ್ಕೇಲ್ ನನ್ನ ಕಂಠಕ್ಕೆ ಆಗುವುದಿಲ್ಲ. ಹೀಗಾಗಿ ಅದನ್ನು ನನ್ನ ಕಂಠಕ್ಕೆ ಒಗ್ಗುವಂತೆ ಮಾಡಿಕೊಟ್ಟರೆ ಹಾಡುತ್ತೇನೆ ಎಂಬ ಷರತ್ತು ವಿಧಿಸಿದರು ಎಂದು ರಾಘವ್ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಸಂಗೀತ ನಿರ್ದೇಶಕ ಎಕ್ಸ್.ಪೌಲ್ರಾಜ್ ಮತ್ತೆ ಟ್ಯೂನ್ ಮೇಲೆ ಒಂದು ತಿಂಗಳು ಕೆಲಸ ಮಾಡಿದರು. ಆಶಾ ಅವರ ಕಂಠಕ್ಕೆ ಸರಿಹೊಂದುವ ರೀತಿ ಟ್ಯೂನ್ ಸಿದ್ಧವಾಯ್ತು. ಅದನ್ನು ಕೇಳಿ ಆಶಾ ಅವರು ಬಹಳ ಇಷ್ಟಪಟ್ಟರು. ನಂತರ ಪ್ರತಿ ವಾರ ಹಾಡಿ ಕಳುಹಿಸಿ, ಉಚ್ಚಾರಣೆ ಸರಿ ಇದೆಯಾ ಎಂದು ವಿಚಾರಿಸುತ್ತಿದ್ದರು. ಸುಮಾರು ಮೂರು ತಿಂಗಳು ಹಾಡಿನ ಅಭ್ಯಾಸ ಮಾಡಿದರು. ಕೊನೆಗೊಂದು ದಿನ ಮುಂಬೈನಲ್ಲಿ ಹಾಡಿನ ರೆಕಾರ್ಡಿಂಗ್ ಎಂದು ತೀರ್ಮಾನವಾಯಿತು. ನಾವೇ ಅಲ್ಲಿಗೆ ಹೋಗಿ ಹಾಡನ್ನು ರೆಕಾರ್ಡ್ ಮಾಡಿದೆವು ಎಂದು ರಾಘವ್ ನೆನಪುಗಳನ್ನು ತೆರೆದಿಟ್ಟರು.

'ತೆಲುಗು, ತಮಿಳು, ಮಲಯಾಳಗಳಲ್ಲಿ ಹಾಡಿದ್ದೆ. ಕನ್ನಡದಲ್ಲಿ ಹೆಚ್ಚು ಹಾಡಿದ್ದು ನನಗೆ ನೆನಪಿಲ್ಲ. ಆಶಾಗೆ ಕನ್ನಡ ಬರುವುದಿಲ್ಲ ಎಂದು ಜಗತ್ತು ಯೋಚಿಸುತ್ತಿದೆ. ಹಲವು ವರ್ಷಗಳ ನಂತರ ಮತ್ತೆ ಕನ್ನಡ ಹಾಡಿರುವೆ. ಹಾಡು ತುಂಬಾ ಚೆನ್ನಾಗಿದೆ. ಕನ್ನಡ ಭಾಷೆಯೂ ಈಗ ಸ್ವಲ್ಪ ಸ್ವಲ್ಪ ಅರ್ಥವಾಗುತ್ತೆ. ದಕ್ಷಿಣ ಭಾರತದ ಭಾಷೆಗಳಲ್ಲಿ ಹಾಡುವುದು ಕಷ್ಟಕರ. ಹೀಗಾಗಿ ಹಾಡುವುದು ಕಷ್ಟ. ಮರಾಠಿ, ಹಿಂದಿ ಬಹಳ ಸುಲಭ' ಎಂದು ಆ ವೇಳೆ ಆಶಾ ಹೇಳಿದ್ದರು.

ಗಣ್ಯರ ಕಂಬನಿ

'ಸಂಗೀತ ಕ್ಷೇತ್ರದಲ್ಲಿ ಶೂನ್ಯ ಸೃಷ್ಟಿ'



ಗಾಯಕಿ ಆಶಾ ಭೋಸ್ಲೆ ಅವರ ನಿಧನವು ಸಂಗೀತ ಕ್ಷೇತ್ರದಲ್ಲಿ ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ. ಸಂಗೀತ ಪ್ರಿಯರಿಗೆ ತುಂಬಲಾರದ ನಷ್ಟವಾಗಿದೆ. ಅವರ ಸಂಗೀತವು ಸದಾ ಕಾಲ ಜೀವಂತ. ಅವರೊಂದಿಗಿನ ವೈಯಕ್ತಿಕ ಒಡನಾಟದ ನೆನಪುಗಳು ಅಚ್ಚಳಿಯದೆ ಉಳಿಯುತ್ತವೆ

ದ್ರೌಪದಿ ಮುರ್ಮು, ರಾಷ್ಟ್ರಪತಿ


'ಭೋಸ್ಲೆ ಗೀತೆಗಳು ಚಿರಸ್ಥಾಯಿ'



ಆಶಾ ಭೋಸ್ಲೆ ಅವರ ಅಸಾಧಾರಣ ಸಂಗೀತ ಪಯಣವು ದಶಕಗಳ ಕಾಲ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಶ್ರೀಮಂತಗೊಳಿಸಿತ್ತು ಹಾಗೂ ಜಗತ್ತಿನಾದ್ಯಂತ ಅಸಂಖ್ಯಾತ ಹೃದಯಗಳನ್ನು ಮುಟ್ಟಿತ್ತು. ಅವರ ಗೀತೆಗಳು ಜನಮಾನಸದಲ್ಲಿ ಸದಾಕಾಲ ಅನುರಣಿಸುತ್ತಿರುತ್ತವೆ. ಭಾರತ ಕಂಡ ಅಪರೂಪದ ವಿಶಿಷ್ಟ ಧ್ವನಿ ಅವರದ್ದು.

ನರೇಂದ್ರ ಮೋದಿ, ಪ್ರಧಾನಿ

'ಭೋಸ್ಲೆ ಧ್ವನಿ, ಕಲೆ ಅಮರ'



ಆಶಾ ಭೋಸ್ಲೆ ಅವರು ತಮ್ಮ ವಿಶಿಷ್ಟ ಧ್ವನಿ ಹಾಗೂ ಕಲೆಯ ಮೂಲಕ ನಮ್ಮ ನಡುವೆ ಅಮರರಾಗಿರುತ್ತಾರೆ. ಈ ದುಃಖದ ಸಮಯದಲ್ಲಿ, ಅವರ ಪ್ರೀತಿಪಾತ್ರರು ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು

ರಾಹುಲ್ ಗಾಂಧಿ, ಲೋಕಸಭೆಯ ವಿಪಕ್ಷ ನಾಯಕ

'ಭಾರತೀಯ ಸಂಗೀತಕ್ಕೆ ದುಃಖದ ದಿನ'



ನಮ್ಮ ಪ್ರೀತಿಯ ಆಶಾ ತಾಯಿ ಇನ್ನಿಲ್ಲ ಎಂಬುದನ್ನು ನನಗೆ ನಂಬಲು ಸಾಧ್ಯವಾಗುತ್ತಿಲ್ಲ. ಭಾರತೀಯ ಸಂಗೀತಕ್ಕೆ ಅತ್ಯಂತ ದುಃಖದ ದಿನವಿದು. ಸಂಗೀತಗಾರನಾಗಿ, ದೀದಿಯ ಆರಾಧಕನಾಗಿ, ಅವರ ಕುಟುಂಬದ ಆಪ್ತ ಸ್ನೇಹಿತನಾಗಿ ಮತ್ತು ಅವರನ್ನು ಸರಸ್ವತಿ ದೇವಿಯಂತೆ ಕಾಣುತ್ತಿದ್ದ ನನಗೆ ಆಗುತ್ತಿರುವ ದುಃಖವನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತಿಲ್ಲ. ಪ್ರತಿಯೊಬ್ಬ ಭಾರತೀಯನ ಹೃದಯ ಒಡೆದುಹೋಗಿದೆ

ಶಂಕರ್ ಮಹದೇವನ್, ಹಿನ್ನೆಲೆ ಗಾಯಕ

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

❌ **ಸುದ್ದಿ ವಾಹಿನಿಯೊಂದರ** ನಿರೂಪಕನೊಬ್ಬ ಸುದ್ದಿ ವಿಶ್ಲೇಷಣೆ ಮಾಡುವಾಗ ಉದ್ರಿಕ್ತನಾಗಿ ವರ್ತಿಸುವ, ಎದ್ದುನಿಂತು ಕೂಗಾಡುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇರಾನ್ ಮತ್ತು ಅಮೆರಿಕ ನಡುವಿನ ಕದನವಿರಾಮದ ಸಂಬಂಧ ಪಾಕಿಸ್ತಾನವು ನಡೆಸಿದ ಮಾತುಕತೆ ಯಶಸ್ವಿಯಾಗಿದ್ದು, ಅದರಿಂದ ಭಾರತದ ಸುದ್ದಿ ವಾಹಿನಿಯ ನಿರೂಪಕ ತಾಳ್ಮೆ ಕಳೆದುಕೊಂಡಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✅ **ವಿಡಿಯೊದ ಕೀಫ್ರೇಮ್** ಅನ್ನು ರಿವರ್ಸ್ ಇಮೇಜ್ ಸರ್ಚ್ ಮತ್ತು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಹಲವರು ಈ ವಿಡಿಯೊ ಅನ್ನು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಡಿದಾಗ, ಪ್ರತಿಪಾದನೆಯನ್ನು ಸಮರ್ಥಿಸುವಂಥ ಯಾವುದೇ ವರದಿ ಸಿಗಲಿಲ್ಲ. ಸ್ಕ್ರೀನ್ ಮೇಲೆ ಸುದ್ದಿ ವಾಹಿನಿಯ ಹೆಸರೇನಾದರೂ ಕಾಣುವುದೇ ಎಂದು ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೂ, ಸ್ಪಷ್ಟವಾಗಿ ಏನೂ ಕಾಣಲಿಲ್ಲ. ವಿಡಿಯೊವನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಪರದೆ ಮೇಲಿನ ಅಕ್ಷರಗಳಲ್ಲಿ ವ್ಯತ್ಯಾಸಗಳಿರುವುದು ಕಂಡಿತು. ವಿಡಿಯೊ ಅನ್ನು ಹೈವ್ ಮಾಡರೇಷನ್ ಮತ್ತು ಡಿಟೆಕ್ಟಿವ್ ಎಐ ಎನ್ನುವ ಎಐ ಪತ್ತೆ ಸಾಧನಗಳ ಮೂಲಕ ಪರೀಕ್ಷಿಸಿದಾಗ, ಅದು ಎಐ ನಿರ್ಮಿತ ವಿಡಿಯೊ ಎನ್ನುವುದು ಖಚಿತವಾಯಿತು. ಎಐ ವಿಡಿಯೊ ಅನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಸುದ್ದಿ ಪ್ರಚಾರ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸ್ನೇಹ- ಸಲುಗೆ ಎಲ್ಲರಿಗೂ ಗೆಲುವು

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಮಹಾಭಾರತದಲ್ಲಿ ಪಾಂಡವರು ಮತ್ತು ಕೌರವರು ತಮ್ಮ ಕಲಿಕಾ ಸಾಮರ್ಥ್ಯವನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಸಂದರ್ಭದಲ್ಲಿ ಅಪರಿಚಿತನಾದ ಕರ್ಣನ ಪ್ರವೇಶವಾಗುತ್ತದೆ. ಅರ್ಜುನನ ಸಮರವಿದ್ಯಾ ಕಲೆಗೆ ಸಮನಾಗಿ ತಾನೂ ಪ್ರತಿಭಾ ಪ್ರದರ್ಶನ ಮಾಡುವುದಾಗಿ ಘೋಷಿಸಿದ ಕರ್ಣನ ಮಾತು ಅಲ್ಲಿದ್ದ ದ್ರೋಣ, ಕೃಪ ಮೊದಲಾದವರಿಗೆ ಉದ್ಧಟತನವಾಗಿ ಕಾಣುತ್ತದೆ. ಅವರು ಕರ್ಣನ ಪ್ರತಿಭಾ ಪ್ರದರ್ಶನವನ್ನು ನೋಡುವ ಮೊದಲೇ ಅವನ ಕುಲದ ಸ್ಥಾನಮಾನವನ್ನು ಕೆಣಕಿ ಅರ್ಜುನನೊಂದಿಗೆ ಸೆಣಸಾಡುವ ಅವನ ಸಾಮಾಜಿಕ ಅರ್ಹತೆಯನ್ನು ಪ್ರಶ್ನಿಸುತ್ತಾರೆ.

ಅವರ ಪ್ರಶ್ನೆಗೆ ಉತ್ತರ ಕೊಡಲು ಹಿಂಜರಿಯುತ್ತಿದ್ದ ಕರ್ಣನ ಅವಸ್ಥೆ ನೋಡಿ ಮರುಗಿದ ದುರ್ಯೋಧನ ಎಲ್ಲದಕ್ಕೂ ಕುಲವನ್ನೇಕೆ ತಂದಿಕ್ಕುವಿರಿ? ಪರಾಕ್ರಮವೇ ಅವನ ಕುಲವಲ್ಲವೇ? ಎಂದು ಹೇಳಿ ಕರ್ಣನ ಸಾಮರ್ಥ್ಯ ಪ್ರದರ್ಶನಕ್ಕೆ ಅವನ ಕುಲವೇ ಅಡ್ಡಿಯಾಗುವುದಾದರೆ ಅವನನ್ನು ಈಗಲೇ ಕುಲಜನನ್ನಾಗಿ ಮಾಡುತ್ತೇನೆಂದು ಕೈ ಹಿಡಿದೊಯ್ದು ಕನಕಪೀಠದಲ್ಲಿ ಕುಳ್ಳಿರಿಸಿ ಚತುರ್ವೇದ ಪಾರಂಗತರಿಂದ ಪುಣ್ಯ ತೀರ್ಥೋದಕಗಳನ್ನು ಅಭಿಷೇಕ ಮಾಡಿಸಿ ಅಂಗ ರಾಜ್ಯವನ್ನೂ 18 ಕೋಟಿ ಹೊನ್ನನ್ನೂ ಕೊಟ್ಟು ಕರ್ಣನ ಗೆಳೆತನವನ್ನು ಬಯಸುತ್ತಾನೆ. ಇತರರು ಚಕ್ರವರ್ತಿಯಾದ ನನ್ನ ಕಾಲಿಗೆ ಬೀಳುತ್ತಾರೆ, ಜೀಯ, ಪ್ರಸಾದ, ಕ್ಷಮಿಸಿ ಎಂದೆಲ್ಲಾ ದೀನರಂತೆ ವರ್ತಿಸುತ್ತಾರೆ. ನೀನು ನನ್ನೊಂದಿಗೆ ಹಾಗೆ ನಡೆದುಕೊಳ್ಳುವುದು ಬೇಡ, ಮಿತ್ರನಂತಿರು ಎಂದು ಹೇಳಿ ಕೊನೆಯವರೆಗೂ ಹಾಗೆಯೇ ನಡೆದುಕೊಳ್ಳುತ್ತಾನೆ. ಕರ್ಣನ ಅನುಪಸ್ಥಿತಿ ದುರ್ಯೋಧನನನ್ನು ವಿಪರೀತವಾಗಿ ಕಾಡುವ ಅನೇಕ ಸಂದರ್ಭಗಳು ಸ್ನೇಹದ ಅಪೂರ್ವ ಲಕ್ಷಣಗಳನ್ನು ವಿವರಿಸುತ್ತವೆ.

ಇಲ್ಲಿ ಮನುಷ್ಯನ ಬದುಕಿನ ಎರಡು ಮುಖ್ಯ ಸಂಗತಿಗಳು ನಮ್ಮ ವಿವೇಚನೆಯನ್ನು ಎಚ್ಚರಿಸುತ್ತವೆ. ಒಂದು ಜಾತಿ ಸುಳಿ. ಅದರಿಂದ ಹೊರಬರಲು ಪ್ರಜ್ಞಾಪೂರ್ವಕ ಪ್ರಯತ್ನ ಬೇಕು. ಇಲ್ಲದಿದ್ದರೆ ಸುಳಿ ಸುತ್ತಿಕೊಂಡು ಮತ್ತೆ ಏಳದಂತೆ ಅದುಮಿ ಬಿಡುತ್ತದೆ. ಸಾಮಾಜಿಕ ಕೀಳರಿಮೆಯಿಂದ ಒಬ್ಬರನ್ನು ಮೇಲೆತ್ತುವ ಸಲುವಾಗಿ ಹೊನ್ನು ಮಣ್ಣು ಕೊಡುವುದು ತಾತ್ಕಾಲಿಕ ಕ್ರಮ. ಆದರೆ ಅವರ ವಿದ್ಯಾ ಕೌಶಲಕ್ಕೆ ಸಿಗಬೇಕಾದ ಮಾನ್ಯತೆ ಹಾಗೇ ಉಳಿಯಿತಲ್ಲ? ಅವರಿಗೆ ಸಾರ್ವಜನಿಕವಾಗಿ ಉಂಟಾದ ಅವಮಾನದ ಕಳಂಕ ಚತುರ್ವೇದ ಪಾರಂಗತರ ಪುಣ್ಯ ಜಲಾಭಿಷೇಚನದಿಂದ ಅಳಿಸಿಹೋದೀತೆ? ಮಣ್ಣು ಹೋಯ್ತು, ಹೊನ್ನು ಹೋಯ್ತು ಕೊಟ್ಟು ಪಡೆದ ಜೀವವೂ ಹೋಯ್ತು. ಜಾತಿನಿಷ್ಠ ವ್ಯಸನದ ದಪ್ಪದಪ್ಪ ಗೆರೆಗಳು ಮಾತ್ರ ಗಾಢವಾಗಿ ಉಳಿದಿವೆ. ಅವು ನಮ್ಮ ಕೆಲಸ, ನಾವು ತಿನ್ನುವ ಅನ್ನ, ತೊಗಲಿನ ಬಣ್ಣವನ್ನು ನೋಡಿ ಮೂದಲಿಸುತ್ತಿವೆ. ಕರ್ಣ ದ್ರೋಣರೆಲ್ಲ ಹೋದರೂ ಅವರ ನಡುವಿದ್ದ ಸಂಘರ್ಷ ಜೀವಂತವಾಗಿದೆ. ಹೋಗೇ ಹೋಗುವ ಜೀವದ ಜೊತೆಗೆ ಕಳಂಕಗಳೂ ಹೋಗುವಂತಿದ್ದರೆ ವರ್ತಮಾನ ಎಷ್ಟು ಚೆನ್ನಾಗಿರುತ್ತಿತ್ತು. ಯಾರ ಜೊತೆಗೇ ಆಗಲಿ, ಆತ್ಮೀಯತೆ ಎನ್ನುವುದು ನಿರಾಡಂಬರ ಪ್ರಾಮಾಣಿಕತೆಯನ್ನು ಒರೆಗೆ ಹಚ್ಚುತ್ತದೆ. ಸ್ನೇಹದಲ್ಲಿ ಗಂಡು ಹೆಣ್ಣು, ಆಳು ಅರಸ, ಬಡವ ಬಲ್ಲಿದ ಎಂಬುದರ ನೆನಪೇ ಆಗದಷ್ಟು ಭೇದರಾಹಿತ್ಯ ಸಾಧ್ಯ ಎನ್ನುವುದನ್ನು ದುರ್ಯೋಧನ- ಕರ್ಣರ ನಡುವಿನ ಸಂಬಂಧ ಸಾರುತ್ತದೆ.

ಸದ್ಯದ ಡಿಜಿಟಲ್ ಯುಗದಲ್ಲಿ ಮನುಷ್ಯ ಮನುಷ್ಯರ ನಡುವೆ ಗಾಢವಾದ ಸ್ನೇಹ ಸಲುಗೆಯ ಅವಶ್ಯಕತೆಯಿದೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ಒಂಟಿಯಾಗುತ್ತಿರುವ ಮನುಷ್ಯನ ಎದೆಯೊಳಗಿನ ನೋವನ್ನು ಅರಿಯಬಲ್ಲ ಸ್ನೇಹಿತರು ಅಪರೂಪವಾಗುತ್ತಿರುವ ಸಂದರ್ಭದಲ್ಲಿ ಒಬ್ಬರ ಉಪಸ್ಥಿತಿಗಾಗಿ ಮತ್ತೊಬ್ಬರು ಹಾತೊರೆಯುವ ಆಕರ್ಷಣೆ ಬೇಕಾಗಿದೆ. ಗೆಳೆಯರ ಸ್ನೇಹ ಸಲುಗೆಯ ಹಿತವಾದ ಬೆಸುಗೆಯಲ್ಲಿ ಎಲ್ಲ ಪ್ರತಿಷ್ಠೆಗಳು ಕರಗಿ ಉಳಿಯುವ ಮೈತ್ರಿ ವೈಭವ ಅಪರೂಪದ್ದು. ಗೆಳೆಯನ ಗೆಳೆತನಕ್ಕೆ ಸೋಲುವುದೇ ಗೆಲುವಿಗೆ ಸೋಪಾನ. ಯುದ್ಧದಿಂದ ಒಬ್ಬರ ಸೋಲು ಅನೇಕರಿಗೆ ಸಾವು. ಇಬ್ಬರಿಗೂ ಗೆಲುವು, ಸಂಭ್ರಮ ಸ್ನೇಹದ ಅಪ್ಪುಗೆಯಲ್ಲಿ ಮಾತ್ರ ಸಾಧ್ಯ. ❖

ಪದಬಂಧ 6372


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಕನ್ನಡಿಗರ ನಾಡು (4)
3.ಸಜ್ಜನನನ್ನು ಹೀಗೂ ಕರೆವರು (3)
4.ಜೊತೆಯಲ್ಲಿ ವಾಸಿಸುವಿಕೆ (4)
8.ಆದಾಯ ಮತ್ತು ಖರ್ಚು (4)
9.ದೇವಾಲಯದ ಗೋಪುರದ ತುದಿ (3)
10.ಹತ್ತು ಎಣಿಸುತ್ತಾ ತಿಳಿಸಿದ ವಾಸ್ತವದ ಸುದ್ದಿ (4)
14.ಗಂಡಸುತನವಿಲ್ಲದವನು (4)
16.ಗರಿಯನ್ನು ಹೆಣೆದು ಮಾಡಿದ ತಟ್ಟ (3)
17.ಈತ ಪಂಡಿತ (4)

ಮೇಲಿಂದ ಕೆಳಕ್ಕೆ

1.ಕಸ್ತೂರಿ ಕಂಪಿನ ಭಾಷೆ (3)
2.ಕನಸಲ್ಲಿ ಕಾಣಿಸಿದ ಕೊಳೆ (2)
3.ಕಬ್ಬಿಣದ ಭಾರೀ ಪೆಟ್ಟಿಗೆ (3)
5.ಹಕ್ಕಿರೆಕ್ಕೆಯಲ್ಲಿ ಯೌವ್ವನವನ್ನು ಹುಡುಕಿ! (3)
6.ಮಯನ ಹತ್ತಿರ ಕಳೆದ ಕಾಲ (3)
7.ಕತ್ತು ಚಾಚಿ ತೋರಿಸಿದ ಶಕ್ತಿ (3)
8.ಆ ಸಾರೆ ನೀಡಿದ ಆಶ್ರಯ (3)
10.ವನದ ಕೊನೆಗೆ ಮಾಡಿದ ಯಜ್ಞ (3)
11.ಸರಿ ಸಮಾನನಾದವನು ಉಲ್ಟಾ ನಿಂತಿದ್ದಾನಲ್ಲ! (3)
12.ಹರನಿಗೆ ಒಪ್ಪಿಸಿದ ಮುಡಿಪು (3)
13.ಭೇದ ಈ ತರ ಬಂದಿದೆ (3)
15.ಈತ ಕವಿತೆಗಳನ್ನು ಬರೆಯುವವನು (2)



6371ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರುದ್ರಭೂಮಿ 3.ಪಟ್ಟಾಂಗ
5.ಉಲಿಯಬ 7.ನಾಸಿಕ
8.ವಶೀಕರಣ 11.ಹೂಬಾಣ
12.ಮಲ್ಲಿಗೆ 15.ಜನನಿ
16.ಸಮುದಾಯ

ಮೇಲಿಂದ ಕೆಳಕ್ಕೆ:
1.ರುಮಾಲು 2.ಮಿಥ್ಯ
3.ಪದಕ 4.ಗಮನಾರ್ಹ
6.ಬಸವ 7.ನಾಮಕರಣ
9.ಣರಮ 10.ಮದಗಜ
11.ಹೂದಾನಿ 13.ಗೆಳೆಯ
14.ಕಂಸ

ಸುಡೊಕು 6755

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	4			5	8	2	7	
	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

6754 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಏಪ್ರಿಲ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಏಕಾದಶಿ ಗಂ. 25-09 ನಕ್ಷತ್ರ: ಧನಿಷ್ಠ ಗಂ 16-04 ಯೋಗ: ಶುಭ ಗಂ. 17-17 ಕರಣ: ಬವ ಗಂ 13-19 ಮೀನ ಮಾಸದ 30 ನೇ ದಿನ. ಮಳೆ ನಕ್ಷತ್ರ : ರೇವತಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-22 ಸೂರ್ಯಾಸ್ತ : 06-40 ಮುಸ್ಲಿಂ ದಿನಾಂಕ : 24 ಶವ್ವಾಲ್ , ಅದೃಷ್ಟ ಸಂಖ್ಯೆ : 9, 6

ಮೇಷ: ಮುಂದಿನ ಜೀವನದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಎದುರಾಗಲಿದೆ. ತಂತ್ರಜ್ಞಾನ ಬಳಕೆಯಿಂದ ಕೆಲಸದಲ್ಲಿ ಬಹಳಷ್ಟು ಪ್ರಗತಿ ಕಾಣುವಿರಿ.

ವೃಷಭ: ಸರ್ಕಾರಿ ಕಚೇರಿಗಳಲ್ಲಿ ಈಗಾಗಲೇ ಆರಂಭಿಸಿರುವ ಕೆಲಸಗಳು ಯಶಸ್ಸಿನೊಂದಿಗೆ ಪೂರ್ಣಗೊಳ್ಳಲಿವೆ. ಶುಭಕಾರ್ಯಗಳಿಗೆ ಹಣ ವಿನಿಯೋಗ-ವಾಗುವುದು. ಏಜೆನ್ಸಿ ನಡೆಸುವವರಿಗೆ ಬೇಡಿಕೆ ಹೆಚ್ಚಲಿದೆ.

ಮಿಥುನ: ಸಮರ್ಥವಾಗಿ ಯೋಜನೆಗಳನ್ನು ಪೂರ್ಣಗೊಳಿಸುವಿರಿ. ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳಿ. ಸಿಬ್ಬಂದಿಯೊಂದಿಗಿನ ಮುಕ್ತ ಮಾತುಕತೆ ಕಾರ್ಯಾನುಕೂಲ ಉಂಟುಮಾಡಲಿದೆ.

ಕರ್ಕಾಟಕ: ವ್ಯವಹಾರಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಇದೆ. ದೀರ್ಘಕಾಲದ ಯೋಜನೆಗಳು ಮತ್ತೆ ಚಾಲನೆಗೊಳ್ಳಲಿವೆ.

ಸಿಂಹ: ಉತ್ತಮ ಜೀವನಶೈಲಿ ಬಯಸುವವರು ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ. ನೀತಿ ನಿರ್ಬಂಧಗಳಿಂದ ಸಮಾಜದಲ್ಲಿ ಒಂಟಿಯಾಗಿರಬೇಕಾಗುತ್ತದೆ.

ಕನ್ಯಾ: ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯುವುದು ಕಷ್ಟವಾಗದು. ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೀರಿ.

ತುಲಾ: ಸಂದಿಗ್ಧ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿ ಇಷ್ಟದೇವರನ್ನು ಪ್ರಾರ್ಥಿಸಿ. ಮಗಳ ಮದುವೆಯ ವಿಚಾರದಲ್ಲಿ ಇಡುವ ಹೆಜ್ಜೆ ಬಹಳ ಪ್ರಮುಖವಾದುದು.

ವೃಶ್ಚಿಕ: ಪದವೀಧರರಿಗೆ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡುಬರಲಿದೆ. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನಭೀತಿ ಇರುತ್ತದೆ. ನಕಾರಾತ್ಮಕ ಭಾವನೆಯಿಂದ ಹೊರಬನ್ನಿ.

ಧನು: ಕಾರ್ಯರಂಗದಲ್ಲಿ ಪರಿವರ್ತನೆ ಕಂಡುಬರುವುದರಿಂದ ದುಡುಕದೆ ಕೆಲವೊಂದು ವಿಚಾರಗಳ ಬಗ್ಗೆ ಆಲೋಚಿಸಿ. ನಿಮ್ಮ ಕ್ರಿಯಾತ್ಮಕವಾದ ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಮಕರ: ಖರ್ಚಿಗೆ ಅನೇಕ ಹೊಸ ದಾರಿಗಳು ಹುಟ್ಟುಕೊಳ್ಳುವುದರಿಂದ ಅನಗತ್ಯ ಖರೀದಿ ಬೇಡ. ಮನೆ ಬದಲಾವಣೆಯ ಯೋಜನೆಯಲ್ಲಿರುವವರಿಗೆ ಉತ್ತಮ ಸ್ಥಳ ಪ್ರಾಪ್ತಿಯಾಗಲಿದೆ.

ಕುಂಭ: ಅಗಾಧ ಅನುಭವ ಹಾಗೂ ಪ್ರಯತ್ನ ಬಲ, ಆತ್ಮವಿಶ್ವಾಸದಿಂದ ರಂಗಕಲೆಯಲ್ಲಿ ಹೆಸರು ಮಾಡುವಂತಾಗಲಿದೆ. ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ಪತ್ರವ್ಯವಹಾರದಲ್ಲಿ ಅನುಕೂಲವಾಗಲಿದೆ.

ಮೀನ: ದಾಖಲೆಗಳಿಲ್ಲದೆ ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ಬಹುಜನರ ಒಡನಾಟದಿಂದ ಬಲ, ವಿಶ್ವಾಸ, ಪ್ರೀತಿ ಪಡೆಯಲಿದ್ದೀರಿ.

ಗುಂಡಣ್ಣ



‘ತುಕ್ಡೆ ತುಕ್ಡೆ ಗ್ಯಾಂಗ್‌ಗೆ ಟಿಎಂಸಿ ಬೆಂಬಲ’

ಪಶ್ಚಿಮ ಬಂಗಾಳ: ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

ಸಿಲಿಗುರಿ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಬೀದಿಯಿಂದ ಸಂಸತ್‌ವರೆಗೆ ‘ತುಕ್ಡೆ ತುಕ್ಡೆ’ ಗ್ಯಾಂಗ್‌ಗೆ ಬೆಂಬಲ ನೀಡುತ್ತದೆ. ಈ ಮೂಲಕ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಆರೋಪಿಸಿದರು.

ಕವಾಖಾಲಿ ಮೈದಾನದಲ್ಲಿ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಟಿಎಂಸಿ ಬುಡಕಟ್ಟು ಸಮುದಾಯ ವಿರೋಧಿ, ಯುವಜನ ವಿರೋಧಿ ಪಕ್ಷ. ಅದರ ಓಲೈಕೆ ರಾಜಕಾರಣದಿಂದಾಗಿ ರಾಜ್ಯವು ಹೇಳಲಾಗದಷ್ಟು ದುಃಸ್ಥಿತಿಗೆ ತಲುಪಿದೆ’ ಎಂದು ಹೇಳಿದರು.

‘ದೇಶದಲ್ಲಿ ತುಕ್ಡೆ ತುಕ್ಡೆ ಗ್ಯಾಂಗ್ ಇದೆ. ಅದು ಸಿಲಿಗುರಿ ಕಾರಿಡಾರ್ ಅನ್ನು ಮುಚ್ಚುವುದಾಗಿ ಬೆದರಿಕೆ ಹಾಕುತ್ತದೆ. ಈಶಾನ್ಯವನ್ನು ಭಾರತದಿಂದ ಪ್ರತ್ಯೇಕಿಸಬೇಕೆಂದು ಅದು ಬಯಸುತ್ತಿದೆ. ಟಿಎಂಸಿ ಇಂಥ ಜನರನ್ನು ಬೆಂಬಲಿಸುತ್ತದೆ. ಅದು ಟಿಎಂಸಿಯ ನಿಜವಾದ ಮುಖ’ ಎಂದು ವಾಗ್ದಾಳಿ ನಡೆಸಿದರು.

‘ಈ ಪ್ರದೇಶದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ದಿನದ 24 ತಾಸೂ ಶ್ರಮಿಸುತ್ತಿದೆ. ಡಬಲ್ ಎಂಜಿನ್ ಸರ್ಕಾರಕ್ಕೆ ಮತ ನೀಡಿ. ಆಗ ಪಶ್ಚಿಮ ಬಂಗಾಳವು ಮತ್ತಷ್ಟು ವೇಗದಲ್ಲಿ ಅಭಿವೃದ್ಧಿಯನ್ನು ಕಾಣಲಿದೆ’ ಎಂದು ಮನವಿ ಮಾಡಿದರು.



ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಂಗೀತ ವಾದ್ಯವನ್ನು ಪ್ರದರ್ಶಿಸಿದರು —ಪಿಟಿಐ ಚಿತ್ರ

‘ಮಮತಾ ಬ್ಯಾನರ್ಜಿ ಅವರ ಸರ್ಕಾರವು ಮದರಸಾಗಳ ಅಭಿವೃದ್ಧಿಗೆ ರಾಜ್ಯ ಬಜೆಟ್‌ನಲ್ಲಿ ₹6,000 ಕೋಟಿ ಮೀಸಲಿಟ್ಟಿದೆ. ಆದರೆ ಉತ್ತರ ಬಂಗಾಳ ಅಭಿವೃದ್ಧಿಗೆ ಅದು ಮೀಸಲಿಟ್ಟ ಅನುದಾನವು ಏನಕ್ಕೂ ಸಾಲುವುದಿಲ್ಲ’ ಎಂದು ದೂರಿದರು.

‘ಸಿಲಿಗುರಿ ಕಾರಿಡಾರ್’ ಭಾರತದ ಈಶಾನ್ಯ ದಿಕ್ಕಿನಲ್ಲಿರುವ 8 ರಾಜ್ಯಗಳನ್ನು ದೇಶದ ಇತರ ಭಾಗಗಳೊಂದಿಗೆ ಸಂಪರ್ಕಿಸುವ ಏಕೈಕ ಕೊಂಡಿಯಾಗಿದ್ದು, ಇದನ್ನು ‘ಚಿಕನ್ ನೆಕ್’ ಪ್ರದೇಶ ಎಂದೂ ಕರೆಯಲಾಗುತ್ತದೆ. ಪಶ್ಚಿಮ ಬಂಗಾಳದ ಸಿಲಿಗುರಿ ವ್ಯಾಪ್ತಿಯಲ್ಲಿ ಈ ಜಾಗ ಇದೆ. ಅಲ್ಲಿನ ಭೌಗೋಳಿಕ ರಚನೆ ಕೋಳಿಯ ಕತ್ತಿನ ಆಕಾರದಲ್ಲಿರುವುದರಿಂದ ಅದನ್ನು ‘ಚಿಕನ್ ನೆಕ್’ ಎಂದು ಕರೆಯಲಾಗುತ್ತದೆ. ಸಿಲಿಗುರಿ ಕಾರಿಡಾರ್, ಒಂದು ಕಡೆಯಲ್ಲಿ ನೇಪಾಳ, ಇನ್ನೊಂದು ಬದಿಯಲ್ಲಿ ಬಾಂಗ್ಲಾದೇಶ, ಮತ್ತೊಂದು ಕಡೆಯಲ್ಲಿ ಭೂತಾನ್‌ಗೂ ಹೊಂದಿಕೊಂಡಿದೆ. ಚೀನಾದ ಗಡಿಯಿಂದ ಕೇವಲ 130 ಕಿ.ಮೀ ದೂರದಲ್ಲಿದೆ.

‘ಟಿಎಂಸಿ ಸೋಲಿಸಲು ₹1,000 ಕೋಟಿ ಒಳಒಪ್ಪಂದ’

ಕೋಲ್ಕತ್ತ (ಪಿಟಿಐ): ‘ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಬಿಜೆಪಿ ₹1000 ಕೋಟಿ ಒಳ ಒಪ್ಪಂದ ಮಾಡಿಕೊಂಡಿದೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಭಾನುವಾರ ಆರೋಪಿಸಿದರು.

ಬಂಕುರಾ ಮತ್ತು ಪೂರ್ವ ವರ್ಧಮಾನ್ ಜಿಲ್ಲೆಯ ಚುನಾವಣಾ ಪ್ರಚಾರ ರ್‍ಯಾಲಿಗಳಲ್ಲಿ ಅವರು ಮಾತನಾಡಿದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಮ್ ಜನತಾ ಉನ್ನಾಯನ್ ಪಾರ್ಟಿ (ಎಜೆಯುಪಿ) ಮುಖ್ಯಸ್ಥ ಹುಮಾಯೂನ್ ಕಬೀರ್ ಅವರ ವಿಡಿಯೊವನ್ನು ತಮ್ಮ ಆರೋಪಕ್ಕೆ ಮಮತಾ ಉದಾಹರಣೆಯಾಗಿ ನೀಡಿದರು.

ಬಿಜೆಪಿ ನಾಯಕರ ಜೊತೆ ಕಬೀರ್ ಅವರಿಗೆ ನಿಕಟ ಸಂಪರ್ಕವಿದೆ. ಟಿಎಂಸಿಯನ್ನು ಅಧಿಕಾರದಿಂದ ಕೆಳಗಿಳಿಸಲು ಕಬೀರ್ ₹1000 ಕೋಟಿ ಒಪ್ಪಂದ ಮಾಡಿಕೊಂಡಿದ್ದಾರೆ. ಮುಂಗಡವಾಗಿ ₹200 ಕೋಟಿ ಪಡೆದಿದ್ದಾರೆ’ ಎಂದು ಆರೋಪಿಸಿದರು.



ಪಶ್ಚಿಮ ಬಂಗಾಳದ ಬಂಕುರಾದಲ್ಲಿ ಟಿಎಂಸಿ ಅಭ್ಯರ್ಥಿ ಪರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾತನಾಡಿದರು —ಪಿಟಿಐ ಚಿತ್ರ

ಈ ವಿಡಿಯೊ ಬಗ್ಗೆ ಸಿಬಿಐ ತನಿಖೆ ನಡೆಸುವಂತೆ ಟಿಎಂಸಿ ಆಗ್ರಹಿಸಿದ್ದು, ಬಿಜೆಪಿ ಮತ್ತು ಎಜೆಯುಪಿ ಅದು ಕೃತಕ ಬುದ್ಧಿಮತ್ತೆ (ಎಐ) ಸೃಷ್ಟಿಸಿ ಹರಿಬಿಟ್ಟಿರುವ ವಿಡಿಯೊ ಎಂದಿವೆ.

ಮಹಿಳೆಯರಿಗೆ ಅಗೌರವ: ‘ರಾಜ್ಯದಲ್ಲಿ ಚುನಾವಣೆ ಭದ್ರತೆಗೆ ಕೇಂದ್ರದ ಪಡೆಗಳನ್ನು ನಿಯೋಜಿಸಲಾಗಿದೆ. ಪರಿಶೀಲನೆ ನೆಪದಲ್ಲಿ ಮಹಿಳೆಯರನ್ನು ಅಗೌರವವಾಗಿ ನಡೆಸಿಕೊಳ್ಳಲಾಗುತ್ತಿದೆ’ ಎಂದು ದೂರಿದರು.

ರಾಜ್ಯವನ್ನು ಮೂರು ಭಾಗ ಮಾಡುವ ಹುನ್ನಾರ: ‘ಪಶ್ಚಿಮ ಬಂಗಾಳವನ್ನು ಮೂರು ಭಾಗ ಮಾಡುವ ಉದ್ದೇಶದಿಂದ ಕೇಂದ್ರದ ಬಿಜೆಪಿ ಸರ್ಕಾರ ಕ್ಷೇತ್ರ ಪುನರ್ ವಿಂಗಡಣೆ ಕಾರ್ಯಕ್ಕೆ ಕೈಹಾಕುತ್ತಿದೆ’ ಎಂದು ಮಮತಾ ಬ್ಯಾನರ್ಜಿ ಆರೋಪ ಮಾಡಿದ್ದಾರೆ.

‘ಕ್ಷೇತ್ರ ಪುನರ್ ವಿಂಗಡಣೆ ಕಾಯ್ದೆ ತರುವ ಮೂಲಕ ಪಶ್ಚಿಮ ಬಂಗಾಳದ ಕೆಲವು ಪ್ರದೇಶಗಳನ್ನು ಬಿಹಾರ ಅಥವಾ ಒಡಿಶಾ ರಾಜ್ಯಗಳೊಂದಿಗೆ ವಿಲೀನಗೊಳಿಸಬಹುದು. ಅಲ್ಲಿ ಬಂಗಾಳಿ ಭಾಷಿಕರಿಗೆ ಕಿರುಕುಳ ನೀಡುವ ಹುನ್ನಾರ ನಡೆದಿದೆ’ ಎಂದರು.

‘ಚುನಾವಣೆಗೂ ಮುನ್ನವೇ ಬಿಜೆಪಿ ಹೊರಗಿನಿಂದ ಮತದಾರರನ್ನು ಕರೆಸುತ್ತಿದೆ. ಮತಯಂತ್ರಗಳನ್ನೂ ಬಿಜೆಪಿ ತಿರುಚಬಹುದು. ಪ್ರಜ್ಞೆ ತಪ್ಪಿಸುವ ಟೀ ಮತ್ತು ಸಿಹಿತಿಂಡಿಗಳನ್ನು ನೀಡಿ ನೀವು ನಿದ್ರೆಗೆ ಜಾರಿದಾಗ ಮತಗಳನ್ನು ಕಸಿಯಬಹುದು. ಕಡಿಮೆ ಮತದಾನ, ಮತ ಎಣಿಕೆ ವಿಳಂಬ ಆಗುವಂತೆ ಮಾಡಬಹುದು’ ಎಂದು ಎಚ್ಚರಿಸಿದರು.

‘ರಾಜ್ಯದಲ್ಲಿ ಬಾಕಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಬಿಜೆಪಿ ಹೇಳುತ್ತಿದೆ. ಮೋದಿ ಅವರು ಕೊಟ್ಟ 2 ಕೋಟಿ ಉದ್ಯೋಗದ ಭರವಸೆ ಏನಾಯ್ತು?’ ಎಂದು ಮಮತಾ ಪ್ರಶ್ನಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಎನ್‌ಐಎ ವಶಕ್ಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಚುನಾವಣೆಯ ಅಭ್ಯರ್ಥಿಯಾಗಿದ್ದ ಕಾಂಗ್ರೆಸ್ ನಾಯಕ ಸೇರಿದಂತೆ ಏಳು ಜನರನ್ನು ಎನ್‌ಐಎ ಭಾನುವಾರ ವಶಕ್ಕೆ ಪಡೆದಿದೆ. ಜತೆಗೆ, ಐಎಸ್‌ಎಫ್ ಸದಸ್ಯನಾಗಿರುವ ಪಂಚಾಯತ್ ಸದಸ್ಯನನ್ನು ಬಂಧಿಸಿದೆ.

ಎಸ್‌ಐಆರ್ ಪ್ರಕ್ರಿಯೆಯಿಂದ ಹೆಸರುಗಳನ್ನು ಅಳಿಸಿಹಾಕಿದ್ದನ್ನು ಪ್ರತಿಭಟಿಸಿ ಮಾಲ್ದಾದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಸ್ಥಳೀಯರು ಘೇರಾವ್ ಹಾಕಿದ್ದರು. ಪ್ರಕರಣದ ತನಿಖೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮೊಥಾಬಾರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಯೇಮ್ ಚೌಧರಿ ಅವರನ್ನು ಅಲಿನಗರ ಪಂಚಾಯತ್ ಪ್ರದೇಶದಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾಗ ಅವರ ಕೆಲವು ಆಪ್ತರೊಂದಿಗೆ ಬಂಧಿಸಲಾಯಿತು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಪ್ರಾಥಮಿಕ ಮಾಹಿತಿಯ ಪ್ರಕಾರ, ರಾಜ್ಯ ಪೊಲೀಸರು ಈ ಹಿಂದೆ ಬಂಧಿಸಿದ್ದ ಎಐಎಂಐಎಂ ಸದಸ್ಯ ಮೊಫಕ್ಕರುಲ್ ಇಸ್ಲಾಂ ಅವರು ವಿಚಾರಣೆ ವೇಳೆ ನೀಡಿದ್ದ ಸುಳಿವುಗಳ ಆಧಾರದ ಮೇಲೆ ಐಎಸ್‌ಎಫ್‌ನ ಗ್ರಾಮ ಪಂಚಾಯತ್ ಸದಸ್ಯ ಗುಲಾಮ್ ರಬ್ಬಾನಿ ಅವರನ್ನು ಬಂಧಿಸಲಾಗಿದೆ’ ಎಂದು ಹೇಳಿದ್ದಾರೆ.

ಘೇರಾವ್ ಘಟನೆಯು ಏಪ್ರಿಲ್ 1ರಂದು ನಡೆದಿತ್ತು. ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಚುನಾವಣಾ ಆಯೋಗವು ತನಿಖೆಯನ್ನು ಎನ್‌ಐಎಗೆ ವಹಿಸಿದೆ.

ಅಬ್ದುಲ್ ಜಬ್ಬಾರ್ ನಿರ್ಲಕ್ಷ್ಯ ಆರೋಪ: ರಾಜೀನಾಮೆಗೆ ಮುಂದಾದ ಮುಖಂಡರು

ದಾವಣಗೆರೆ: ವಿಧಾನಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಅವರನ್ನು ಪಕ್ಷ ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿ ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ನಾಲ್ವರು, ಜಿಲ್ಲಾ ಘಟಕದ ಪದಾಧಿಕಾರಿಗಳು ಸಾಮೂಹಿಕವಾಗಿ ರಾಜೀನಾಮೆ ನೀಡುವುದಾಗಿ ಭಾನುವಾರ ಘೋಷಿಸಿದ್ದಾರೆ.

ಕೆಪಿಸಿಸಿ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಮೊಹಮ್ಮದ್ ಸಿರಾಜ್, ಕಾರ್ಯದರ್ಶಿಗಳಾದ ಅಬ್ದುಲ್ ಗನಿ ತಾಹೀರ್, ಹುಸೇನ್ ಉಕ್ಕಡಗಾತ್ರಿ, ಉಬೇದುಲ್ಲಾ ಅತ್ತರ್, ಕಾಂಗ್ರೆಸ್ ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಕಾರ್ಯಾಧ್ಯಕ್ಷ ಎ.ಅಬ್ದುಲ್ ಜಬ್ಬಾರ್, ಪ್ರಧಾನ ಕಾರ್ಯದರ್ಶಿ ಆಸಿಫ್ ಜುನೈದಿ ಸೇರಿ ಹಲವು ಪದಾಧಿಕಾರಿಗಳು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದಾರೆ.

‘ಉಪಚುನಾವಣೆ ನಂತರದ ಬೆಳವಣಿಗೆಗಳು ಬೇಸರ ಮೂಡಿಸಿವೆ. 40 ವರ್ಷಗಳಿಂದ ಪಕ್ಷಕ್ಕೆ ದುಡಿದ ಜಬ್ಬಾರ್ ಅವರನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಆಕ್ಷೇಪಗಳಿವೆ. ಪದಾಧಿಕಾರಿಗಳ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾರ್ಯಕರ್ತರಾಗಿ ಮುಂದುವರಿಯಲಿದ್ದೇವೆ’ ಎಂದು ಮೊಹಮ್ಮದ್ ಸಿರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಸೀರ್ ಬೆಂಬಲಿಗರ ಪ್ರತಿಭಟನೆ

ಕೋಲಾರ: ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಯುತ್ತಿದೆ. ಅವರಿಂದ ರಾಜೀನಾಮೆ ಪಡೆಯಬಾರದು ಎಂದು ಆಗ್ರಹಿಸಿ ಭಾನುವಾರ ಜಿಲ್ಲಾ ಕಾಂಗ್ರೆಸ್ ಕಚೇರಿ ಮುಂದೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಪ್ರತಿಭಟಿಸಿದರು

ರಾಜೀನಾಮೆ ಪಡೆದರೆ ರಾಜ್ಯದಾದ್ಯಂತ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

‘ನಸೀರ್ ರಾಜೀನಾಮೆ ಕೊಡಬಹುದು’

ಒಂದನೇ ಪುಟದಿಂದ...

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಸಲೀಂ ಅಹಮದ್ ಪಕ್ಷದ ಮುಖಂಡರು. ದಾವಣಗೆರೆ ಉಪ ಚುನಾವಣೆಯಲ್ಲಿ ನಮ್ಮವರೇ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಅವರು ಹೇಳಿಕೆ ನೀಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆಯೇ ಹೊರತು, ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಲಿದೆ ಎಂದು ಹೇಳಿಲ್ಲ. ಪಕ್ಷ ವಿರೋಧಿ ಚಟುವಟಿಕೆ ನಡುವೆಯೂ ಅಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಚಾರ ಸಭೆಯಲ್ಲಿ ತಮಿಳುನಾಡಿನ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ವ್ಯಂಗ್ಯ

ಪಳನಿಸ್ವಾಮಿಯದ್ದು ‘ಸಾಷ್ಟಾಂಗ ನಮಸ್ಕಾರ ರಾಜಕೀಯ’

ಮನ್ನಾರ್‌ಗುಡಿ (ಪಿಟಿಐ): ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಅಧಿಕಾರಕ್ಕಾಗಿ ಸತತವಾಗಿ ನಿಷ್ಠೆಯನ್ನು ಬದಲಿಸಿಕೊಂಡು ಬಂದಿದ್ದು, ಅದಕ್ಕಾಗಿ ‘ಸಾಷ್ಟಾಂಗ ನಮಸ್ಕಾರ’ ಮಾಡುವ ರಾಜಕೀಯ ಮಾಡಿಕೊಂಡು ಬಂದಿದ್ದಾರೆ ಎಂದು ತಮಿಳುನಾಡಿನ ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ವ್ಯಂಗ್ಯವಾಡಿದ್ದಾರೆ.

ಮನ್ನಾರ್‌ಗುಡಿಯ ಡಿಎಂಕೆ ಅಭ್ಯರ್ಥಿ, ಕೈಗಾರಿಕಾ ಸಚಿವ ಟಿ.ಆರ್.ಬಿ.ರಾಜಾ ಅವರ ಪರ ಭಾನುವಾರ ಪ್ರಚಾರ ನಡೆಸಿದ ಅವರು, ‘2026ರ ವಿಧಾನಸಭಾ ಚುನಾವಣೆಯು ಗುಲಾಮರು ಮತ್ತು ಸ್ವಾಭಿಮಾನದ ನಡುವಿನ ಯುದ್ಧವಾಗಿದೆ’ ಎಂದು ಬಣ್ಣಿಸಿದರು.

‘ಜೆ.ಜಯಲಲಿತಾ (ಎಐಎಡಿಎಂಕೆ ದಿವಂಗತ ನಾಯಕಿ) ಇರುವವರೆಗೂ ಪಳನಿಸ್ವಾಮಿ ಅವರ ಪಾದಗಳನ್ನು ಹಿಡಿದಿದ್ದರು. ಅವರ ನಿಧನದ ಬಳಿಕ ವಿ.ಕೆ. ಶಶಿಕಲಾ ಅವರ ಪಾದಗಳನ್ನು ಹಿಡಿದಿದ್ದರು. ಶಶಿಕಲಾ ಅವರು ಜೈಲಿಗೆ ಹೋದ ಬಳಿಕ, ಟಿ.ಟಿ.ವಿ.ದಿನಕರನ್ ಅವರ ಪಾದಗಳನ್ನು ಹಿಡಿದರು. ಇದೀಗ ಅವರು ದೆಹಲಿಗೆ ಹೋಗಿ ಪ್ರಧಾನಿ ನರೇಂದ್ರ ಮೋದಿ ಅವರ ಪಾದಗಳನ್ನು ಹಿಡಿದು ನೇತಾಡುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.



ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ವಿ.ಕೆ.ಶಶಿಕಲಾ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ ಚಿತ್ರವನ್ನು ಉದಯನಿಧಿ ಸ್ಟಾಲಿನ್ ಮನ್ನಾರ್‌ಗುಡಿಯಲ್ಲಿ ನಡೆಸಿದ ರ್‍ಯಾಲಿಯಲ್ಲಿ ಪ್ರದರ್ಶಿಸಿದರು —ಪಿಟಿಐ ಚಿತ್ರ

‘ಪಳನಿಸ್ವಾಮಿ ಅವರು ತಮ್ಮ ರಾಜಕೀಯ ಬೆಳವಣಿಗೆಗೆ ನೆರವಾದ ಪ್ರತಿಯೊಬ್ಬರ ಬೆನ್ನಿಗೆ ಚೂರಿ ಹಾಕಿದ್ದಾರೆ’ ಎಂದ ಉದಯನಿಧಿ ಅವರು, ‘ದೆಹಲಿ ತಂಡಕ್ಕೆ ಅವರು ರಾಜ್ಯದ ಜನರ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದಾರೆ’ ಎಂದು ದೂರಿದರು.

‘ಅಧಿಕಾರ ಪಡೆಯುವುದಕ್ಕಾಗಿ ಸದಾ ನಿಷ್ಠೆ ಬದಲಿಸಿ, ಮತ್ತೊಬ್ಬರ ಕಾಲು ಹಿಡಿಯುವ ಅನುಭವ ಪಳನಿಸ್ವಾಮಿ ಅವರಿಗಿದೆ. ನನಗೆ ಅಂಥ ಅನುಭವವಿಲ್ಲ, ಬದಲಿಗೆ ನಾನು ಜನರ ಜತೆಯಲ್ಲಿದ್ದು, ಅವರ ಹಕ್ಕುಗಳಿಗಾಗಿ ಮಾತನಾಡುವ ವ್ಯಕ್ತಿಯಾಗಿದ್ದೇನೆ’ ಎಂದು ಅವರು ಪ್ರತಿಪಾದಿಸಿದರು.

ತಮಿಳುನಾಡಿಗೆ ಪ್ರಾತಿನಿಧ್ಯ ಕಡಿಮೆ ಮಾಡಲು ಯತ್ನ: ಸ್ಟಾಲಿನ್



ಎಂ.ಕೆ. ಸ್ಟಾಲಿನ್

ರಾಮನಾಥಪುರ (ಪಿಟಿಐ): ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದಕ್ಷಿಣ ಭಾರತಕ್ಕೆ ದ್ರೋಹ ಬಗೆದಿದೆ. ಪ್ರಸ್ತಾವಿತ ಮಹಿಳಾ ಮೀಸಲಾತಿ ಮಸೂದೆ ನೆಪವಾಗಿಸಿಕೊಂಡು ತಮಿಳುನಾಡಿಗೆ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆರೋಪಿಸಿದ್ದಾರೆ.

ಸಮೀಪದ ಪರಮಕುಡಿಯಲ್ಲಿ ಭಾನುವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತಂದು ರಾಷ್ಟ್ರದ ಬೆಳವಣಿಗೆಗೆ ಕೊಡುಗೆ ನೀಡಿದ ತಮಿಳುನಾಡು ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಶಿಕ್ಷೆ ವಿಧಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ’ ಎಂದು ದೂರಿದ್ದಾರೆ.

‘ದೇಶದ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಈ ಪ್ರಸ್ತಾಪವನ್ನು ವಿರೋಧಿಸುತ್ತವೆ. ಎಐಎಡಿಎಂಕೆ ಮುಖ್ಯಸ್ಥ ಪಳನಿಸ್ವಾಮಿ ಅವರಿಗೆ ಈ ಅನ್ಯಾಯವನ್ನು ವಿರೋಧಿಸಲು ಮತ್ತು ಪ್ರಶ್ನಿಸಲು ಧೈರ್ಯವಿದೆಯೇ’ ಎಂದು ಪ್ರಶ್ನಿಸಿದ್ದಾರೆ.

ಜಬ್ಬಾರ್ ರಾಜೀನಾಮೆ ಅಂಗೀಕಾರ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಂಗೀಕರಿಸಿದ್ದಾರೆ. ‘ನೂತನ ಸಮಿತಿಯನ್ನು ಶೀಘ್ರ ರಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಶಿವಕುಮಾರ್ ತಿಳಿಸಿದ್ದಾರೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಸೀಟು ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್‌ನ ಮುಸ್ಲಿಂ ಸಮುದಾಯದ ನಾಯಕರ ನಡುವೆ ಭಿನ್ನಮತ ಸ್ಫೋಟಗೊಂಡಿತ್ತು. ಟಿಕೆಟ್ ಸಿಗದ ಕಾರಣಕ್ಕೆ ಮುನಿಸಿಕೊಂಡು, ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದ ಜಬ್ಬಾರ್, ಏ.3ರಂದು ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ವಿಷಯ ಏ.11ರಂದು ಬಹಿರಂಗವಾಗಿತ್ತು.

‘ಪ್ರಜಾವಾಣಿ’ಯ ಐವರಿಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೀದರ್: ‘ಪ್ರಜಾವಾಣಿ’ಯ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾ ವರದಿಗಾರ ಓದೇಶ ಸಕಲೇಶಪುರ ಸೇರಿದಂತೆ ಪತ್ರಿಕೆಯ ಐವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ದತ್ತಿ ಪ್ರಶಸ್ತಿಗಳನ್ನು ನಗರದಲ್ಲಿ ಭಾನುವಾರ ಪ್ರದಾನ ಮಾಡಲಾಯಿತು.

ಇಲ್ಲಿ ನಡೆದ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಸಮಾರೋಪ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ವಿರೋಧಪಕ್ಷದ ನಾಯಕ ಆರ್. ಅಶೋಕ್, ಸಚಿವ ಈಶ್ವರ ಬಿ.ಖಂಡ್ರೆ ಪ್ರಶಸ್ತಿ ಪ್ರದಾನ ಮಾಡಿದರು. ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಹಾಜರಿದ್ದರು.

ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ತಾಲ್ಲೂಕಿನ ಅರೆಕಾಲಿಕ ವರದಿಗಾರ ಮಹೇಶ ಮನ್ನಯ್ಯನವರ ಮಠ ಅವರಿಗೆ ‘ಬಿ.ಎಸ್.ವೆಂಕಟರಾಂ ಪ್ರಶಸ್ತಿ’, ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ವರದಿಗಾರ ಕೆ.ವಿ. ನಾಗರಾಜ್ ಅವರಿಗೆ ‘ಕೆ.ಪ್ರಹ್ಲಾದರಾವ್ ಪ್ರಶಸ್ತಿ’, ಉತ್ತರ ಕನ್ನಡ ಜಿಲ್ಲೆಯ ಕುಮಟಾ ವರದಿಗಾರ ಎಂ.ಜಿ. ನಾಯ್ಕ ಅವರಿಗೆ ‘ಮಂಗಳಾ ಎಂ.ಸಿ.ವರ್ಗೀಸ್’ ಪ್ರಶಸ್ತಿ, ರಾಯಚೂರು ಜಿಲ್ಲೆಯ ಕವಿತಾಳ ವರದಿಗಾರ ಮಂಜುನಾಥ ಎನ್. ಬಳ್ಳಾರಿ ಅವರಿಗೆ ‘ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

30 ವಿಭಾಗದಲ್ಲಿ 58 ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿದ್ಯುನ್ಮಾನ ವಿಭಾಗದಲ್ಲಿ ಮೂರು ಪ್ರಶಸ್ತಿಗಳನ್ನು 10 ಪತ್ರಕರ್ತರಿಗೆ, ನಾಲ್ವರಿಗೆ ಕೆಯುಡಬ್ಲ್ಯುಜೆ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಯಿತು.



‘ಪ್ರಜಾವಾಣಿ’ ಜಿಲ್ಲಾ ವರದಿಗಾರ ಓದೇಶ ಸಕಲೇಶಪುರ, ಅರೆಕಾಲಿಕ ವರದಿಗಾರರಾದ ಕೆ.ವಿ. ನಾಗರಾಜ್, ಎಂ.ಜಿ. ನಾಯ್ಕ, ಮಂಜುನಾಥ ಎನ್. ಬಳ್ಳಾರಿ ಹಾಗೂ ಮಹೇಶ ಮನ್ನಯ್ಯನವರ ಮಠ ಅವರು ಕೆಯುಡಬ್ಲ್ಯುಜೆ ದತ್ತಿ ಪ್ರಶಸ್ತಿ ಸ್ವೀಕರಿಸಿದ ಸಂತಸದ ಕ್ಷಣ —ಪ್ರಜಾವಾಣಿ ಚಿತ್ರ

> **ಪತ್ರಿಕೋದ್ಯಮವು ಸಾಮಾಜಿಕ ಜವಾಬ್ದಾರಿಯ ಪ್ರತೀಕವಾಗಿದೆ. ಪತ್ರಕರ್ತರ ಲೇಖನಿ ಸತ್ಯದ ಪರವಾಗಿರಬೇಕು. ಆಗ ಸಮಾಜಕ್ಕೆ ಒಳಿತಾಗುತ್ತದೆ**
> **ಯು.ಟಿ.ಖಾದರ್,** ವಿಧಾನಸಭೆ ಸ್ಪೀಕರ್

ಕೆಲವರಿಗೆ ನಾನೇ ನಾಯಕನೆಂಬ ಭಾವನೆ: ರಿಜ್ವಾನ್

ಪ್ರಜಾವಾಣಿ ವಾರ್ತೆ



ರಿಜ್ವಾನ್ ಅರ್ಷದ್

ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಪ್ರಭಾವಿ ನಾಯಕರ ಪಾತ್ರದ ಕುರಿತು ಅದೇ ಸಮುದಾಯದ ಶಾಸಕರ ಆಕ್ರೋಶ ಮತ್ತಷ್ಟು ಹುರಿಗೊಂಡಿದೆ.

ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನಿರಾಕರಿಸಿದ್ದರಿಂದಾಗಿ ವಸತಿ ಸಚಿವ ಜಮೀರ್ ಅಹಮದ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರು ಸಕ್ರಿಯವಾಗಿ ಪ್ರಚಾರದಲ್ಲಿ ಪಾಲ್ಗೊಳ್ಳಲಿಲ್ಲ ಎಂಬ ಎಂಬುದು ಅದೇ ಸಮುದಾಯದ ನಾಯಕರ ಆರೋಪ.

ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಅಬ್ದುಲ್ ಜಬ್ಬಾರ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ರಿಜ್ವಾನ್ ಅರ್ಷದ್, ‘ಕೆಲವರು ನಾನೇ ಹೆಚ್ಚು, ನಾನು ಇಲ್ಲದಿದ್ದರೆ ಮುಸ್ಲಿಂ ಸಮುದಾಯಕ್ಕೆ ಮತ್ತೊಬ್ಬ ನಾಯಕ ಇಲ್ಲ ಎಂಬ ಭಾವನೆಯಲ್ಲಿದ್ದಾರೆ. ನಾವು ಬಿಜೆಪಿ ಸೋಲಿಸಲು ಹೋದರೆ ನಮ್ಮಲ್ಲಿನ ಕೆಲವರು ಡಬಲ್ ಗೇಮ್ ಆಡಿ ನಮ್ಮ ಅಭ್ಯರ್ಥಿಯನ್ನೇ ಸೋಲಿಸಲು ಯತ್ನಿಸಿದರು’ ಎಂದು ಸಚಿವ ಜಮೀರ್ ಹೆಸರು ಹೇಳದೇ, ಗಂಭೀರ ಆರೋಪ ಮಾಡಿದರು.

‘ಅಲ್ಪಸಂಖ್ಯಾತರ ಚಾಂಪಿಯನ್ ಎನಿಸಿಕೊಂಡವರು ಜಬ್ಬಾರ್ ಅವರಿಗೆ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದರು. ಮುಖ್ಯಮಂತ್ರಿಯ ಮುಂದೆಯೂ ಅದೇ ‘ಒಬ್ಬ ನಾಯಕರು’, ಕೊಟ್ಟರೆ ಜಬ್ಬಾರ್‌ಗೆ ಕೊಡಿ ಎಂದರು. ಜಬ್ಬಾರ್ ಬಿಟ್ಟರೆ ಬೇರೆ ಮುಸ್ಲಿಂ ಆಕಾಂಕ್ಷಿಗಳು ಇರಲಿಲ್ಲವೇ? ಒಬ್ಬ ವ್ಯಕ್ತಿಯ ಪರ ನಿಂತು ಸಮುದಾಯದ ಪರ ಎಂದು ಹೇಳಿಕೊಳ್ಳುವುದು ಸರಿಯೇ? ಟಿಕೆಟ್ ನೀಡದೆ ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಅನ್ಯಾಯ ಮಾಡಿದೆ ಎಂದು ಅಪಪ್ರಚಾರ ಮಾಡುವುದು ಸರಿಯೇ’ ಎಂದು ಕಿಡಿಕಾರಿದರು.

‘ಜಬ್ಬಾರ್ ಪರ ಪಟ್ಟು ಹಿಡಿದಿದ್ದು ಯಾರು’ ಎಂಬ ಪ್ರಶ್ನೆಗೆ, ‘ಅವರು ಯಾರು ಎಂಬುದನ್ನು ನೀವೇ ತಿಳಿದುಕೊಳ್ಳಿ. ದಾವಣಗೆರೆ ದಕ್ಷಿಣ ಕ್ಷೇತ್ರದ ಪ್ರಚಾರಕ್ಕೆ ಬಾರದವರು ಮೂವರು. ಒಬ್ಬರ ಮೇಲೆ ಕ್ರಮ ಆಗಿದೆ. ಇನ್ನಿಬ್ಬರು ಇದ್ದಾರಲ್ಲ, ಅದರಲ್ಲಿ ಒಬ್ಬರು ಜಬ್ಬಾರ್‌ಗೆ ಟಿಕೆಟ್ ಕೊಡಿಸಬೇಕೆಂದು ಪಟ್ಟು ಹಿಡಿದಿದ್ದರು’ ಎಂದು ಸೂಕ್ಷ್ಮವಾಗಿ ಜಮೀರ್ ವಿರುದ್ಧ ಆರೋಪಿಸಿದರು.

ಬಿಜೆಪಿ ಗೆಲ್ಲಿಸಲು ಯತ್ನ: ‘ಮತ ವಿಭಜಿಸಿ ಬಿಜೆಪಿ ಗೆಲ್ಲಿಸಬೇಕೆಂದು ಯಾರು ಪ್ರಯತ್ನಪಟ್ಟರು ಎಂಬುದು ಗೊತ್ತಿದೆ. ಅವರ ಪ್ರಯತ್ನ ಯಾವುದೇ ಫಲ ನೀಡಿಲ್ಲ. ನಾನು ಇಲ್ಲದಿದ್ದರೆ ಮುಸ್ಲಿಂ ಸಮುದಾಯಕ್ಕೆ ಇನ್ನೊಬ್ಬ ನಾಯಕ ಇಲ್ಲ ಎನ್ನುವ ಭಾವನೆಯಲ್ಲಿದ್ದಾರೆ. ಇದರಿಂದಲೇ ಮುಸ್ಲಿಂ ನಾಯಕ ಪಟ್ಟಕ್ಕೆ ಧಕ್ಕೆ ಬಂದಿದೆ’ ಎಂದು ಹೇಳಿದರು.

‘ಚುನಾವಣೆಯಲ್ಲಿ ಯಾವ ಮುಸ್ಲಿಂ ನಾಯಕರು, ಹೇಗೆ ಕೆಲಸ ಮಾಡಿದರು ಎಂಬ ಬಗ್ಗೆ ಹೈಕಮಾಂಡ್‌ಗೆ ಗೊತ್ತಿದೆ. ನಾವು ಬಿಜೆಪಿ ಸೋಲಿಸಲು ಹೋಗಿದ್ದೆವು. ಆದರೆ, ನಮ್ಮಲ್ಲಿ ಕೆಲವರು ಡಬಲ್ ಗೇಮ್ ಆಡಿದರು’ ಎಂದೂ ರಿಜ್ವಾನ್ ಆರೋಪಿಸಿದರು.

ಅಬ್ದುಲ್ ಜಬ್ಬಾರ್ ರಾಜೀನಾಮೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅವರ ರಾಜೀನಾಮೆ ಬಗ್ಗೆ ಮಾಧ್ಯಮಗಳಲ್ಲಿ ನೋಡಿದೆ. ಅವರ ಪತ್ರದಲ್ಲಿ ಏಪ್ರಿಲ್ 3 ಎಂದು ಇದೆ. ಬಹುಶಃ ಕಾಂಗ್ರೆಸ್‌ಗೆ ಹಿನ್ನಡೆ ಆಗಲಿ ಎಂದು ಆಗಲೇ ರಾಜೀನಾಮೆ ಬರೆದಿಟ್ಟುಕೊಂಡಿದ್ದರೋ ಏನೋ ಗೊತ್ತಿಲ್ಲ’ ಎಂದು ದೂರಿದರು.

ಜಬ್ಬಾರ್ ಹೆಸರು ಉಲ್ಲೇಖಿಸಿ ಆರೋಪ ಮಾಡಿಲ್ಲ: ಸಲೀಂ ಅಹಮದ್



ಸಲೀಂ ಅಹಮದ್

‘ಅಬ್ದುಲ್ ಜಬ್ಬಾರ್ ಅವರ ಹೆಸರು ಹೇಳಿ ನಾನು ಆರೋಪ ಮಾಡಿಲ್ಲ. ನನ್ನ ವಿರುದ್ಧ ಜಬ್ಬಾರ್ ಮಾಡುತ್ತಿರುವ ಸುಳ್ಳು ಆರೋಪ, ಅವರ ವ್ಯಕ್ತಿತ್ವವನ್ನು ತೋರಿಸುತ್ತವೆ’ ಎಂದು ಸಲೀಂ ಅಹಮದ್ ಹೇಳಿದರು.

‘ಕಾಣದ ಕೈಗಳು ಕೆಲಸ ಮಾಡಿವೆ ಎಂದು ಹೇಳಿದ್ದೇನೆ. ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ತ ಅವರು ಹೈಕಮಾಂಡ್‌ಗೆ ವರದಿ ನೀಡಿದ್ದಾರೆ. ನಾವು ಆರೋಪ ಮಾಡಿರುವುದಕ್ಕೆ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ ಎಂಬುದು ಸುಳ್ಳು’ ಎಂದರು.

‘ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕರೆದಿಲ್ಲ ಎಂಬ ಕಾರಣಕ್ಕೆ ಅಬ್ದುಲ್ ಜಬ್ಬಾರ್ ಪ್ರಚಾರಕ್ಕೆ ಬಂದಿಲ್ಲ’ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಸಲೀಂ, ‘ನನ್ನನ್ನು ಕೆಪಿಸಿಸಿಯಿಂದ ವೀಕ್ಷಕರನ್ನಾಗಿ ಮಾಡಿದ್ದರು. ನನ್ನನ್ನೇ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕರೆಯಲಿಲ್ಲ. ಕೆಪಿಸಿಸಿ ಅಧ್ಯಕ್ಷರು, ಮುಖ್ಯಮಂತ್ರಿ, ಸುರ್ಜೇವಾಲಾ ಹೇಳಿದರೆ ಸಾಕಲ್ಲವೇ? ಸಮರ್ಥ್ ಕೇವಲ ಹೆಸರಷ್ಟೇ, ನಮ್ಮ ಕರ್ತವ್ಯ ನಾವು ನಿಭಾಯಿಸಬೇಕಲ್ಲವೇ’ ಎಂದು ತಿರುಗೇಟು ನೀಡಿದರು.

ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮದ ಅಂಗವಾಗಿ ಅಂಚೆ ಚೀಟಿ ಬಿಡುಗಡೆ

ಸಾಧನೆಗೆ ಮಿತಿ ಬೇಡ: ಶುಭಾಂಶು ಶುಕ್ಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಕಾಶಕ್ಕೆ ಮಿತಿ ಇಲ್ಲ. ನನಗೂ, ನಿಮಗೂ, ಭಾರತಕ್ಕೂ ಸಾಧನೆ ಮಾಡಲು ಮಿತಿ ಬೇಡ’ ಎಂದು ಗಗನಯಾತ್ರಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ತಿಳಿಸಿದರು.

ಭಾರತದ ಮಾನವ ಬಾಹ್ಯಾಕಾಶ ಕಾರ್ಯಕ್ರಮ ಅಂಗವಾಗಿ ಭಾರತೀಯ ಅಂಚೆ ಇಲಾಖೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅಂಚೆ ಚೀಟಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮಕ್ಕಳೇ ನೀವೇ ಮಿತಿ ಹಾಕಿಕೊಳ್ಳಬೇಡಿ. ವಿಶಾಲ ಚಿಂತನೆಯನ್ನು ಇಟ್ಟುಕೊಂಡು ಸಾಧನೆ ಮಾಡಿ. ನಾನು ಬಾಹ್ಯಾಕಾಶ ಯಾನ ಮುಗಿಸಿ ಬಂದಾಗ ಬಹುತೇಕರ ಪ್ರಶ್ನೆ ಏನು ತಿಂದ್ರಿ? ಹೇಗೆ ನಿದ್ರೆ ಮಾಡಿದ್ದೀರಿ ಎಂಬುದೇ ಆಗಿತ್ತು. ಪ್ರಶ್ನೆ ತಪ್ಪಲ್ಲ. ಅದರ ಜೊತೆಗೆ ನಮ್ಮ ಯೋಚನೆಗಳು ಇನ್ನಷ್ಟು ವಿಸ್ತಾರ ಇರಬೇಕು. ಒಂದು ಹಳ್ಳಿಗಾಡಿನಿಂದ ಬಂದ ನಿಮಗೆ ಬಾಹ್ಯಾಕಾಶ ಯಾನ ಮಾಡಲು ಹೇಗೆ ಸಾಧ್ಯವಾಯಿತು ಎಂದು ಕೆಲವರು ಕೇಳಿದರು. ಮೊದಲ ಪ್ರಶ್ನೆಗಳಿಗಿಂತ ಇದುವೇ ಸ್ಫೂರ್ತಿಯಾಗಬಲ್ಲದು’ ಎಂದು ವಿವರಿಸಿದರು.



‘ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮ’ದ ಅಂಗವಾಗಿ ರೂಪಿಸಿದ ಅಂಚೆ ಚೀಟಿಗಳನ್ನು ವಿ. ತಾರಾ, ಕೆ. ಪ್ರಕಾಶ್, ವಿ. ನಾರಾಯಣನ್, ಶುಭಾಂಶು ಶುಕ್ಲಾ, ಮನೀಶ್ ತ್ರಿಪಾಠಿ, ಸಂದೇಶ ಮಹದೇವಪ್ಪ ಬಿಡುಗಡೆ ಮಾಡಿದರು —ಪ್ರಜಾವಾಣಿ ಚಿತ್ರ

ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಮಾತನಾಡಿ, ‘ವಿಕ್ರಂ ಎ ಸಾರಾಭಾಯ್ ಅವರ ದೂರದೃಷ್ಟಿಯಿಂದಾಗಿ 1961ರಲ್ಲಿ ಭಾರತದ ಬಾಹ್ಯಾಕಾಶ ಯಾನ ಆರಂಭವಾಯಿತು. ಮುಂದೆ 1969ರಲ್ಲಿ ಇಸ್ರೊ ಸ್ಥಾಪನೆಗೊಂಡಿತ್ತು. ಬಾಹ್ಯಾಕಾಶ ಕ್ಷೇತ್ರದಲ್ಲಿ ಇಂದು ಜಾಗತಿಕ ಮಟ್ಟದಲ್ಲಿ ಇಸ್ರೊ ತನ್ನದೇ ಸ್ಥಾನ ಪಡೆದಿದೆ’ ಎಂದು ವಿವರಿಸಿದರು.

ಆರ್ಯಭಟ ಉಪಗ್ರಹ ಉಡಾವಣೆಯಿಂದ ಹಿಡಿದು ಮಾನವ ಬಾಹ್ಯಾಕಾಶ ಹಾರಾಟ ಮತ್ತು ಕಕ್ಷೆಯ ಮೂಲ ಸೌಕರ್ಯದಲ್ಲಿ ಭವಿಷ್ಯದ ಮಹತ್ವಾಕಾಂಕ್ಷೆಗಳನ್ನು ಬಿಂಬಿಸುವ ಅಂಚೆ ಚೀಟಿ, ಅಂಚೆ ಹಾಳೆಗಳನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು. ಕಾರ್ಯಕ್ರಮದ ಬಳಿಕ ಶುಭಾಂಶು ಶುಕ್ಲ ಅವರಿಂದ ಆಟೊಗ್ರಾಫ್ ಪಡೆಯಲು ವಿದ್ಯಾರ್ಥಿಗಳು ಮುಗಿಬಿದ್ದರು.

‘ಹೋಮಿಯೋಪಥಿ: ಹೆಚ್ಚಿನ ಸಂಶೋಧನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೋಮಿಯೋಪಥಿ ಚಿಕಿತ್ಸಾ ಪದ್ಧತಿಯಲ್ಲಿ ಹೆಚ್ಚಿನ ಸಂಶೋಧನೆ ಮತ್ತು ಪ್ರಯೋಗ ನಡೆಯಬೇಕು. ಈ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಸಹಕಾರ ನೀಡಲಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ವಿಶ್ವ ಹೋಮಿಯೋಪಥಿ ದಿನಾಚರಣೆ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ರಾಜ್ಯದಾದ್ಯಂತ ಸುಮಾರು 60ರಿಂದ 70 ಸರ್ಕಾರಿ ಹೋಮಿಯೋಪಥಿ ಚಿಕಿತ್ಸಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಚಿಕಿತ್ಸಾ ಪದ್ಧತಿಯ ಬಗ್ಗೆ ಜನರಲ್ಲಿ ನಂಬಿಕೆ ಹೆಚ್ಚಾದಾಗ ಮಾತ್ರ ಸರ್ಕಾರಕ್ಕೂ ಹೆಚ್ಚಿನ ಕಾರ್ಯಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಚಿಕಿತ್ಸಾ ಪದ್ಧತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ವೈದ್ಯರು ಹಾಗೂ ವಿದ್ಯಾರ್ಥಿಗಳು ಸಂಶೋಧನೆಗಳನ್ನು ಕೈಗೊಳ್ಳಬೇಕು’ ಎಂದು ಅಭಿಪ್ರಾಯಪಟ್ಟರು.

‘ಹೋಮಿಯೋಪಥಿಯು 200 ವರ್ಷಗಳ ಸುದೀರ್ಘ ಇತಿಹಾಸವಿರುವ ವೈಜ್ಞಾನಿಕ ವೈದ್ಯಕೀಯ ಪದ್ಧತಿಯಾಗಿದೆ. ಈ ಚಿಕಿತ್ಸೆಯನ್ನು ಜನರಿಗೆ ಕೈಗೆಟಕುವಂತೆ ಮಾಡಲು ಸರ್ಕಾರ ಕ್ರಮ ವಹಿಸಲಿದೆ. ಹೋಮಿಯೋಪಥಿ ವೈದ್ಯಕೀಯ ಕಾಲೇಜು ನಿರ್ಮಾಣ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಶೀಘ್ರದಲ್ಲಿಯೇ ಸಂಬಂಧಪಟ್ಟವರ ಜತೆಗೆ ಚರ್ಚೆ ನಡೆಸಿ, ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದರು.

ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ, ‘ಹೋಮಿಯೋಪಥಿ, ಆಯುರ್ವೇದ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕಾದರೆ ಅಗತ್ಯ ಸೌಲಭ್ಯ ಹಾಗೂ ಅನುದಾನ ಒದಗಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ.ವೀರಬ್ರಹ್ಮಾಚಾರ್ಯ, ಹೋಮಿಯೋಪಥಿ ವೈದ್ಯ ಡಾ. ಲಕ್ಷ್ಮೀಕಾಂತ್ ನಂದಾ, ಆಯುಷ್ ಇಲಾಖೆ ಆಯುಕ್ತ ಸುನೀಲ್ ಪನ್ವಾರ್ ಉಪಸ್ಥಿತರಿದ್ದರು.



ಹೋಮಿಯೋಪಥಿ ವೈದ್ಯರ ಬೇಡಿಕೆಗಳನ್ನು ಈಡೇರಿಸುವಂತೆ ಸಂಘದ ಪದಾಧಿಕಾರಿಗಳು ದಿನೇಶ್ ಗುಂಡೂರಾವ್ ಅವರಿಗೆ ಮನವಿ ಸಲ್ಲಿಸಿದರು


‘ಜೈಲರ್ 2’ನಲ್ಲಿ ಪವನ್ ಕಲ್ಯಾಣ್?

ರಜನಿಕಾಂತ್ ಅಭಿನಯದ ತಮಿಳು ಚಿತ್ರ ‘ಜೈಲರ್ 2’ನಲ್ಲಿ ತೆಲುಗು ನಟ ಪವನ್ ಕಲ್ಯಾಣ್ ನಟಿಸಲಿದ್ದಾರೆ ಎಂಬ ಸುದ್ದಿ ದಟ್ಟವಾಗಿದೆ. ನೆಲ್ಸನ್ ದಿಲೀಪ್‌ಕುಮಾರ್ ನಿರ್ದೇಶನದ ಚಿತ್ರದಲ್ಲಿ ಶಾರುಖ್ ಖಾನ್ ನಟಿಸುತ್ತಾರೆ ಎಂಬ ವದಂತಿ ಇತ್ತು. ಆದರೆ ಅವರು ಚಿತ್ರದಿಂದ ಹಿಂದೆ ಸರಿದಿದ್ದು, ಆ ಪಾತ್ರದಲ್ಲಿ ಪವನ್ ಕಲ್ಯಾಣ್ ಕಾಣಿಸಿಕೊಳ್ಳುವ ನಿರೀಕ್ಷೆಯಿದೆ ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ.

ಸನ್ ಪಿಕ್ಚರ್ಸ್ ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಬಹುಭಾಷಾ ತಾರೆಯರ ಬಳಗವೇ ಇದೆ. ಮೋಹನ್‌ಲಾಲ್, ವಿಜಯ್ ಸೇತುಪತಿ, ಮಿಥುನ್ ಚಕ್ರವರ್ತಿ, ಶಿವರಾಜ್‌ಕುಮಾರ್ ಮತ್ತು ವಿದ್ಯಾ ಬಾಲನ್ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಶಾರುಖ್ ಖಾನ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬ ವದಂತಿ ಇತ್ತು. ಆದರೆ, ಪ್ರಸ್ತುತ ಅವರು ತಮ್ಮ ‘ಕಿಂಗ್’ ಸಿನಿಮಾದ ಚಿತ್ರೀಕರಣದಲ್ಲಿ ಮಗ್ನರಾಗಿದ್ದು, ಸಮಯ ಹೊಂದಾಣಿಕೆ ಕಾರಣ ನೀಡಿ ‘ಜೈಲರ್ 2’ ಚಿತ್ರದಿಂದ ದೂರ ಉಳಿದಿದ್ದಾರೆ ಎನ್ನಲಾಗಿದೆ.

ಆ್ಯಕ್ಷನ್, ಮಾಸ್ ಕಥೆ ಹೊಂದಿರುವ ಚಿತ್ರಕ್ಕೆ ಅನಿರುದ್ಧ್ ಸಂಗೀತ ನೀಡುತ್ತಿದ್ದಾರೆ. ಚಿತ್ರದ ಬಹುಭಾಗ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಈ ವರ್ಷವೇ ತೆರೆಗೆ ಬರುವ ನಿರೀಕ್ಷೆಯಿದೆ.


ಪವನ್ ಕಲ್ಯಾಣ್

ಫಾದರ್ ಡಬ್ಬಿಂಗ್ ಪೂರ್ಣ


ಪ್ರಕಾಶ್ ರಾಜ್
ಡಾರ್ಲಿಂಗ್ ಕೃಷ್ಣ

ಪ್ರಕಾಶ್ ರಾಜ್ ಮತ್ತು ಡಾರ್ಲಿಂಗ್ ಕೃಷ್ಣ ಪ್ರಮುಖ ಪಾತ್ರದಲ್ಲಿ ನಟಿಸಿರುವ ‘ಫಾದರ್’ ಚಿತ್ರದ ಡಬ್ಬಿಂಗ್ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ರಾಜ್ ಮೋಹನ್ ನಿರ್ದೇಶನದ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

‘ಫಾದರ್’ ಎಂದರೆ ಒಂದು ಶಕ್ತಿ. ತಮ್ಮ ನಟನೆ ಮೂಲಕ ಎಲ್ಲರ ಗಮನ ಸೆಳೆಯುವ ಪ್ರಕಾಶ್ ರಾಜ್ ತಂದೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ತಂದೆ - ಮಗನ ಬಾಂಧವ್ಯದ ಕಥೆಯಿದ್ದು, ಮಗನಾಗಿ ಡಾರ್ಲಿಂಗ್ ಕೃಷ್ಣ ನಟಿಸಿದ್ದಾರೆ. ಅಮೃತಾ ಅಯ್ಯಂಗಾರ್ ಅವರಿಗೆ ಜೋಡಿಯಾಗಿದ್ದಾರೆ. ನೋಡುಗರನ್ನು ಭಾವುಕ ಲೋಕಕ್ಕೆ ಕರೆದುಕೊಂಡು ಹೋಗುವ ಕಥೆಯಿದು. ಈಗಾಗಲೇ ಬಿಡುಗಡೆಗೊಂಡಿರುವ ಚಿತ್ರದ ಟೀಸರ್‌ಗೆ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಗಿದೆ’ ಎಂದಿದೆ ಚಿತ್ರತಂಡ.

ಆರ್.ಸಿ. ಸ್ಟುಡಿಯೋಸ್ ಮೂಲಕ ಆರ್. ಚಂದ್ರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸುಜ್ಞಾನ್ ಛಾಯಾಚಿತ್ರಗ್ರಹಣ, ನಕುಲ್ ಅಭ್ಯಂಕರ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.



ಅದಿತಿಯ ಹಾಡು ಬಿಡುಗಡೆ

ಮಹಿಳಾ ಪ್ರಧಾನ ಕಥೆಯನ್ನು ಹೊಂದಿರುವ ‘ಅದಿತಿ’ ಚಿತ್ರದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನೆಲ್ಸನ್ ರೋಜರ್ಸ್ ಡಬ್ಲ್ಯೂ. ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

‘ಚಿತ್ರ ಸೈಕಲಾಜಿಕಲ್, ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ. ಶೀರ್ಷಿಕೆ ಹೆಸರಿನ ಹುಡುಗಿ ಯಾರು? ಯಾಕೆ ಬಂದಳು? ಏನು ಮಾಡಿದಳು? ಅದಕ್ಕೆ ಕಾರಣವೇನು? ಎಂಬಿತ್ಯಾದಿ ಕುತೂಹಲಗಳೊಂದಿಗೆ ಕಥೆ ಸಾಗುತ್ತದೆ. ಸಿನಿಮಾವನ್ನು ಕೇವಲ ಐದು ಶಾಟ್‌ಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಪ್ರತಿಯೊಂದು ದೃಶ್ಯ 20–25 ನಿಮಿಷ ಇರಲಿದೆ. ಇದಕ್ಕಾಗಿ ಕಲಾವಿದರಿಗೆ ತಿಂಗಳ ಕಾಲ ತರಬೇತಿ ನೀಡಲಾಗಿದೆ. ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು, ಮಲೆಯಾಳ ಹಾಗೂ ಕೊಂಕಣಿ ಭಾಷೆಗಳಲ್ಲಿ ಸಿನಿಮಾವು ಸಿದ್ಧಗೊಂಡಿದೆ’ ಎಂದರು ನಿರ್ದೇಶಕಿ.

ವ್ಯಾಲೆರಿನಾ ಮರಿಯ ರೋಜರ್ಸ್ ಮತ್ತು ನೆಲ್ಸನ್ ರೋಜರ್ಸ್ ಡಬ್ಲ್ಯೂ. ಬಂಡವಾಳ ಹೂಡಿದ್ದಾರೆ. ಇಶಾನಾ ಸಣ್ಣಪ್ಪನವರ, ಹರ್ಷಿತಾ ಕಲ್ಲಿಂಗಲ್, ಯಶಾ, ಆರತಿ, ನಿಸರ್ಗ ಮಂಜುನಾಥ್, ಡ್ಯಾನಿ ಕುಟ್ಟಪ್ಪ ಮುಂತಾದವರು ನಟಿಸಿದ್ದಾರೆ.

ರಮೇಶ್ ಕೃಷ್ಣ-ಕೃಷ್ಣ ಪ್ರಿಯದರ್ಶನ್ ಸಂಗೀತ, ಪಿ. ಕೆ.ಹೆಚ್.ದಾಸ್ ಛಾಯಾಚಿತ್ರಗ್ರಹಣ, ಸೋಲೋಮನ್. ಕೆ.ಜಾರ್ಜ್ ಸಂಕಲನವಿದೆ. ಬೆಂಗಳೂರು, ಕನಕಪುರ ಮುಂತಾದೆಡೆ ಚಿತ್ರೀಕರಣಗೊಂಡ ಚಿತ್ರ ಸೆನ್ಸಾರ್ ಹಂತದಲ್ಲಿದೆ.

ವಿಶೇಷ ಅಧಿವೇಶನ: ಸಂಸದರಿಗೆ ಪ್ರಧಾನಿ ಮೋದಿ ಪತ್ರ

ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬೆಂಬಲ ನೀಡಿ, ಐತಿಹಾಸಿಕ ಪ್ರಯತ್ನದ ಭಾಗವಾಗಿ ಎಂದು ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ವಿಶೇಷ ಅಧಿವೇಶನದ ಕುರಿತು ಎಲ್ಲ ಪಕ್ಷಗಳ ಸಂಸದರಿಗೆ ಪತ್ರ ಬರೆದಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬೆಂಬಲ ನೀಡುವಂತೆ ಮನವಿ ಮಾಡಿದ್ದಾರೆ.

‘ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸುವ ನಮ್ಮೆಲ್ಲರ ಕನಸನ್ನು ನನಸು ಮಾಡುವ ಸಮಯ ಬಂದಿದೆ. ಸಾಂವಿಧಾನಿಕ ತಿದ್ದುಪಡಿಯನ್ನು ತರಲು ಎಲ್ಲರೂ ಒಗ್ಗೂಡೋಣ. ಇದು ಸಕಾಲಿಕವಾಗಿದೆ’ ಎಂದು ಮೋದಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


ನರೇಂದ್ರ ಮೋದಿ

‘ಈ ತಿದ್ದುಪಡಿ ಬಗ್ಗೆ ಸಂಸತ್ತಿನಲ್ಲಿ ಹಲವು ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಒಳಿತಾಗುತ್ತದೆ. ಇದು ಒಂದು ಪಕ್ಷ ಅಥವಾ ವ್ಯಕ್ತಿಯನ್ನು ಮೀರಿದ ವಿಷಯ. ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಿಸುವ ಇಚ್ಛೆ ಎಲ್ಲ ಪಕ್ಷಗಳದ್ದಾಗಿದೆ’ ಎಂದು ಹೇಳಿದ್ದಾರೆ.

‘ನಾರಿ ಶಕ್ತಿ ವಂದನಾ ಅಧಿನಿಯಮ ಜಾರಿಗೆ ಕೊಡುಗೆ ನೀಡುವ ಸಂಸದರು ಐತಿಹಾಸಿಕ ಪ್ರಯತ್ನವೊಂದರ ಭಾಗ ಆಗಿರುವುದಕ್ಕೆ ಹೆಮ್ಮೆ ಪಡುತ್ತಾರೆ. ಎಲ್ಲರೂ ಈ ಅವಕಾಶವನ್ನು ಬಳಸಿಕೊಳ್ಳೋಣ. ವಿಶೇಷ ಅಧಿವೇಶನವು ಪ್ರಜಾಪ್ರಭುತ್ವವನ್ನು ಬಲಪಡಿಸಲು ಇರುವ ಅವಕಾಶ. 2023ರಲ್ಲಿ ಮಸೂದೆಯು ಅಂಗೀಕಾರಗೊಂಡಾಗ ಅದನ್ನು ಶೀಘ್ರದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಎಲ್ಲ ಪಕ್ಷಗಳ ಒಮ್ಮತವಿತ್ತು’ ಎಂದಿದ್ದಾರೆ.

ಬಿಜೆಪಿಯಿಂದ ವಿಪ್ ಜಾರಿ

ಗುರುವಾರ ಆರಂಭಗೊಳ್ಳಲಿರುವ ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಪಕ್ಷದ ಎಲ್ಲ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು ಕಡ್ಡಾಯವಾಗಿ ಭಾಗವಹಿಸುವಂತೆ ಬಿಜೆಪಿ ಮೂರು ಸಾಲಿನ ವಿಪ್ ಜಾರಿಗೊಳಿಸಿದೆ.

‘2029ರ ಲೋಕಸಭಾ ಚುನಾವಣೆ ಮತ್ತು ವಿಧಾನಸಭಾ ಚುನಾವಣೆಗಳು ಮಹಿಳಾ ಮೀಸಲಾತಿ ಕಾನೂನು ತಿದ್ದುಪಡಿಯ ಅನ್ವಯದೊಂದಿಗೆ ನಡೆಯಬೇಕು. ಇದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಶಕ್ತಿಯನ್ನು ವೃದ್ಧಿಸಲಿದೆ ಮತ್ತು ಸಾರ್ವಜನಿಕರ ನಂಬಿಕೆಯನ್ನು ಹೆಚ್ಚಿಸಲಿದೆ’ ಎಂದು ಹೇಳಿದ್ದಾರೆ.


‘ಏ.29ರ ಬಳಿಕ ಸರ್ವಪಕ್ಷಗಳ ಸಭೆ ಕರೆಯಿರಿ’

ಕ್ಷೇತ್ರ ಪುನರ್‌ವಿಂಗಡಣೆ ಬಗ್ಗೆ ಚರ್ಚೆ ನಡೆಸಲು ಏಪ್ರಿಲ್ 29ರ ನಂತರವೇ ಸರ್ವ ಪಕ್ಷಗಳ ಸಭೆ ಕರೆಯಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದ್ದಾರೆ.

ಕ್ಷೇತ್ರ ಪುನರ್‌ವಿಂಗಡಣೆ ಬಗ್ಗೆ ಸಂಪೂರ್ಣ ಮಾಹಿತಿಯಿಲ್ಲದೇ ಮಹಿಳಾ ಮೀಸಲಾತಿ ಕಾನೂನು ತಿದ್ದುಪಡಿಯ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸಲು ಸಾಧ್ಯವಿಲ್ಲ. ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮುಕ್ತಾಯಗೊಂಡ ಬಳಿಕ ಏಪ್ರಿಲ್ 29ರ ನಂತರ ಸರ್ವಪಕ್ಷಗಳ ಸಭೆ ಕರೆಯಬಹುದು ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿರುವ ಖರ್ಗೆ, ‘ವಿಧಾನಸಭಾ ಚುನಾವಣೆಗಳ ನಡುವೆಯೇ ಸಂಸತ್ತಿನ ವಿಶೇಷ ಅಧಿವೇಶನ ಕರೆದಿರುವುದರಿಂದ, ಸರ್ಕಾರವು ರಾಜಕೀಯ ಲಾಭಕ್ಕಾಗಿ ಮಹಿಳಾ ಮೀಸಲಾತಿ ಕಾನೂನನ್ನು ಜಾರಿಗೊಳಿಸಲು ಆತುರಪಡುತ್ತಿದೆ ಎನ್ನುವುದು ಸ್ಪಷ್ಟವಾಗುತ್ತಿದೆ’ ಎಂದು ಹೇಳಿದ್ದಾರೆ.

ನಾರಿ ಶಕ್ತಿ ವಂದನಾ ಅಧಿನಿಯಮ ಕುರಿತ ಚರ್ಚೆಗಾಗಿ ಏಪ್ರಿಲ್ 16ರಿಂದ ಸಂಸತ್ತಿನ ವಿಶೇಷ ಅಧಿವೇಶನ ನಡೆಯಲಿದೆ ಎಂದು ಪ್ರಧಾನಿ ಮೋದಿ ಬರೆದಿರುವ ಪತ್ರಕ್ಕೆ ಪ್ರತಿಯಾಗಿ ಖರ್ಗೆ ಈ ಪತ್ರ ಬರೆದಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

ನಾರಿ ಶಕ್ತಿ ವಂದನಾ ಅಧಿನಿಯಮವು 2023 ಸೆಪ್ಟೆಂಬರ್‌ನಲ್ಲಿ ಸಂಸತ್ತಿನಲ್ಲಿ ಅಂಗೀಕಾರಗೊಂಡಿದೆ. ಈ ಕಾನೂನು ತಕ್ಷಣ ಜಾರಿಯಾಗಬೇಕು ಎಂದು ನಾನು ಕಾಂಗ್ರೆಸ್ ಪರವಾಗಿ ಮನವಿ ಮಾಡಿದ್ದೆ. ಕಾನೂನಿನ ಅನುಷ್ಠಾನಕ್ಕೆ ಒಮ್ಮತವಿದೆ ಎಂದು ಪ್ರಧಾನಿ ಹೇಳಿದ್ದರು. ಆದರೆ, ಅವರು ಅದನ್ನು ಜಾರಿಗೊಳಿಸಲಿಲ್ಲ. 30 ತಿಂಗಳು ಕಳೆದಿದೆ. ಈಗ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ವಿಶೇಷ ಅಧಿವೇಶನ ಕರೆಯಲಾಗಿದೆ. ಕ್ಷೇತ್ರ ಪುನರ್‌ವಿಂಗಡನೆಯ ಬಗ್ಗೆ ಯಾವುದೇ ಮಾಹಿತಿ ನೀಡದೇ ಸರ್ಕಾರ ನಮ್ಮ ಸಹಕಾರವನ್ನು ಬಯಸುತ್ತಿದೆ’ ಎಂದಿದ್ದಾರೆ.

‘ಈ ಬಗ್ಗೆ ಎಲ್ಲ ಪಕ್ಷಗಳೊಂದಿಗೆ ಚರ್ಚೆ ನಡೆಸುತ್ತಿರುವುದಾಗಿ ಪತ್ರದಲ್ಲಿ ನೀವು ಹೇಳಿದ್ದೀರಿ. ಇದು ಸುಳ್ಳು. ಏಪ್ರಿಲ್ 29ರ ಬಳಿಕ ಸರ್ವಪಕ್ಷ ಸಭೆ ಕರೆಯುವಂತೆ ಎಲ್ಲ ವಿರೋಧಪಕ್ಷಗಳು ಒತ್ತಾಯಿಸುತ್ತಿವೆ’ ಎಂದು ಹೇಳಿದ್ದಾರೆ.

ಜಾತಿ ಗಣತಿ ಶೈತ್ಯಾಗಾರಕ್ಕೆ: ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ‘ಕೇಂದ್ರ ಸರ್ಕಾರ ಜಾತಿ ಗಣತಿಯನ್ನು ‘ಶೈತ್ಯಾಗಾರ’ದಲ್ಲಿಡಲು ಬಯಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರ ದಾರಿತಪ್ಪಿಸಲು ಮಹಿಳಾ ಮೀಸಲು ಕಾನೂನು ತರುವ ಕಾರ್ಯತಂತ್ರ ರೂಪಿಸಿದ್ದಾರೆ’ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಈ ಆರೋಪ ಮಾಡಿದ್ದಾರೆ.

‘ಜಾತಿ ಗಣತಿ ಪರಿಣಾಮಗಳು ಕೆಲ ದಿನಗಳವರೆಗೂ ಗೋಚರಿಸುವುದಿಲ್ಲ ಎಂಬುದನ್ನೇ ಆಧಾರವಾಗಿಟ್ಟುಕೊಂಡು ಮೋದಿ ಸರ್ಕಾರ, ಸಂವಿಧಾನದ 334–ಎ ವಿಧಿಗೆ ತಿದ್ದುಪಡಿ ತರಲು ಮುಂದಾಗಿದೆ’ ಎಂದು ಅವರು ಹೇಳಿದರು.

‘ಜನಗಣತಿ ಮತ್ತು ಕ್ಷೇತ್ರಪುನರ್ ವಿಂಗಣೆ ಪ್ರಕ್ರಿಯೆ ಮೂಲಕ ಮಹಿಳಾ ಮೀಸಲು ಕ್ಷೇತ್ರಗಳು ಅಸ್ತಿತ್ವಕ್ಕೆ ಬರಬೇಕು ಎಂಬ ಅವಕಾಶ 334–ಎ ವಿಧಿಯಲ್ಲಿದೆ. ಆದರೆ ಕೇಂದ್ರ ಸರ್ಕಾರ ಇದನ್ನು ಉಲ್ಲಂಘಿಸುತ್ತಿದೆ ಎಂದರು.

‘ವಿಳಂಬವಾದರೆ ಮಹಿಳೆಯರಿಗೆ ಅನ್ಯಾಯವಾದಂತೆ’

ನವದೆಹಲಿ (ಪಿಟಿಐ): ‘ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ ಕಾನೂನು ಜಾರಿಯನ್ನು ವಿಳಂಬಗೊಳಿಸುವುದರಿಂದ ಲಕ್ಷಾಂತರ ಮಹಿಳೆಯರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಕಾಂಗ್ರೆಸ್ ಪಕ್ಷವು ರಾಜಕೀಯವನ್ನು ಮೀರಿ ‘ನಾರಿಶಕ್ತಿ ವಂದನಾ ಕಾಯ್ದೆ’ಗೆ ಬೆಂಬಲ ನೀಡಬೇಕು’ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಅವರು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆಗೆ ಮನವಿ ಮಾಡಿದ್ದಾರೆ.


ಕಿರಣ್ ರಿಜಿಜು

‘ರಾಜಕೀಯ ಲಾಭಕ್ಕಾಗಿ ಮಹಿಳಾ ಮೀಸಲಾತಿ ಕಾನೂನು ಜಾರಿಗೆ ತರಲಾಗುತ್ತಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಆರೋಪಿಸಿದ್ದರು.

ಇದಕ್ಕೆ ತಿರುಗೇಟು ನೀಡಿರುವ ಸಚಿವ ರಿಜಿಜು, ‘ಇದು ರಾಜಕೀಯ ವಿಚಾರವಲ್ಲ. ಭಾರತದ ಹೆಣ್ಣುಮಕ್ಕಳಿಗೆ ನೀಡಿದ ಭರವಸೆ ಈಡೇರಿಕೆ’ ಎಂದರು.

ಚಿಟಿಕೆ ಸುದ್ದಿ

ಮಕ್ಕಳ ಕಳ್ಳಸಾಗಣೆ 163 ಬಾಲಕರ ರಕ್ಷಣೆ

ಕಟನಿ (ಮಧ್ಯ ಪ್ರದೇಶ): ಬಿಹಾರದಿಂದ ಮಹಾರಾಷ್ಟ್ರಕ್ಕೆ ರೈಲಿನಲ್ಲಿ ಕಳ್ಳಸಾಗಣೆ ಮಾಡಲಾಗುತ್ತಿದ್ದ ಅಪ್ರಾಪ್ತ ವಯಸ್ಸಿನ 163 ಬಾಲಕರನ್ನು ಮಧ್ಯಪ್ರದೇಶದ ಕಟನಿ ಜಿಲ್ಲೆಯ ರೈಲ್ವೆ ಪೊಲೀಸರು ರಕ್ಷಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಮಂದಿಯನ್ನು ಬಂಧಿಸಲಾಗಿದೆ.

ಬಾಲಕರು 6 ರಿಂದ 13 ವಯಸ್ಸಿನವರಾಗಿದ್ದು, ಲಾತೂರ್‌ನಲ್ಲಿ ಕೂಲಿ ಕೆಲಸ ಮಾಡಿಸಲೆಂದು ಬಿಹಾರದಿಂದ ಅವರನ್ನು ಕಳ್ಳಸಾಗಣೆ ಮಾಡಲಾಗುತ್ತಿತ್ತು. ಮಕ್ಕಳ ಕಲ್ಯಾಣ ಸಮಿತಿಯು ಈ ಬಗ್ಗೆ ನೀಡಿದ್ದ ಮಾಹಿತಿ ಆಧರಿಸಿ, ಆರ್‌ಪಿಎಫ್ ಹಾಗೂ ಜಿಆರ್‌ಪಿ ಸಿಬ್ಬಂದಿ ಶನಿವಾರ ರಾತ್ರಿ ಜಂಟಿ ಶೋಧ ಕಾರ್ಯಾಚರಣೆ ನಡೆಸಿ, ಮಕ್ಕಳನ್ನು ರಕ್ಷಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಜತೆಗೆ ಮಕ್ಕಳೊಂದಿಗೆ ಪ್ರಯಾಣಿಸುತ್ತಿದ್ದ ಎಂಟು ಮಂದಿಯನ್ನೂ ಸಿಬ್ಬಂದಿ ವಿಚಾರಣೆ ನಡೆಸಿದ್ದು, ಅವರ ಬಳಿ ಟಿಕೆಟ್, ಸೂಕ್ತ ದಾಖಲೆ ಇಲ್ಲದಿದ್ದನ್ನು ಗಮನಿಸಿ ಅವರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 143 (4)ರ ಅನ್ವಯ ಪ್ರಕರಣ ದಾಖಲಿಸಿದ್ದಾರೆ.

ಪಟ್ನಾ- ಪೂರ್ಣ ಎಕ್ಸ್‌ಪ್ರೆಸ್ ರೈಲಿನಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಮಕ್ಕಳನ್ನು ಕರೆದೊಯ್ಯಲಾಗುತ್ತಿರುವ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ಸಿಕ್ಕಿತ್ತು. ತಕ್ಷಣವೇ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಮಕ್ಕಳನ್ನು ರಕ್ಷಿಸಿದ್ದಾರೆ. ಬಾಲಕರನ್ನು ಮಕ್ಕಳ ರಕ್ಷಣಾ ಘಟಕಗಳಲ್ಲಿ ಆಶ್ರಯ ನೀಡಲಾಗಿದೆ ಎಂದು ಮಕ್ಕಳ ರಕ್ಷಣಾ ಅಧಿಕಾರಿ ಮನೀಶ್ ತಿವಾರ್ ತಿಳಿಸಿದ್ದಾರೆ.

ದೋಣಿ ದುರಂತ: ಮೃತರ ಸಂಖ್ಯೆ 13ಕ್ಕೆ ಏರಿಕೆ

ಮಥುರಾ (ಪಿಟಿಐ): ಇಲ್ಲಿನ ಯಮುನಾ ನದಿಯಲ್ಲಿ ದೋಣಿ ಮಗುಚಿದ ಪರಿಣಾಮ ಮೃತಪಟ್ಟವರ ಪೈಕಿ ಮತ್ತಿಬ್ಬರ ಶವಗಳು ಭಾನುವಾರ ಪತ್ತೆಯಾಗಿವೆ. ಇದರೊಂದಿಗೆ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 13ಕ್ಕೆ ಏರಿಕೆಯಾಗಿದೆ.

ಮೃತರನ್ನು ಡಿಂಕಿ ಬನ್ಸಾಲ್ ಹಾಗೂ ರಿಷಬ್ ಶರ್ಮಾ ಎಂದು ಗುರುತಿಸಲಾಗಿದ್ದು, ರಿಷಬ್ ಅವರ ಶವವು ದುರಂತ ನಡೆದ ಸ್ಥಳದಿಂದ 3 ಕಿ.ಮೀ. ದೂರದಲ್ಲಿ ಪತ್ತೆಯಾಗಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ. ಜತೆಗೆ ದುರಂತದ ವೇಳೆ ಕಾಣೆಯಾಗಿರುವ ಇನ್ನೂ ಮೂವರ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ ಎಂದೂ ಹೇಳಿದ್ದಾರೆ.

‘ಲೈಂಗಿಕ ಕಿರುಕುಳ: ಶೂನ್ಯ ಸಹಿಷ್ಣುತೆ ನೀತಿ’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ‘ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರ ದಂತಹ ವಿಷಯಗಳಲ್ಲಿ ಕಂಪನಿ ಶೂನ್ಯ ಸಹಿಷ್ಣುತೆ ನೀತಿಯನ್ನು ಅಳವಡಿಸಿಕೊಂಡಿದೆ’ ಎಂದು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಭಾನುವಾರ ಸ್ಪಷ್ಟನೆ ನೀಡಿದೆ.

‘ಮಹಾರಾಷ್ಟ್ರದ ನಾಸಿಕ್‌ನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ತ್ವರಿತ ಕ್ರಮ ಕೈಗೊಳ್ಳಲಾಗಿದೆ. ತನಿಖೆ ಮುಗಿಯುವವರೆಗೂ, ಆರೋಪ ಎದುರಿಸುತ್ತಿರುವ ಉದ್ಯೋಗಿಗಳನ್ನು ಅಮಾನತು ಮಾಡಲಾಗಿದೆ. ತನಿಖಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡಲಾಗುತ್ತಿದೆ’ ಎಂದು ತಿಳಿಸಿದೆ.

‘ಕೆಲಸದ ಸ್ಥಳದಲ್ಲಿ ನಮ್ಮ ಉದ್ಯೋಗಿಗಳ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಸದಾಕಾಲ ಖಚಿತಪಡಿಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದೆ.



ಏನಿದು ಘಟನೆ?: ‘ನಾಸಿಕ್‌ನಲ್ಲಿರುವ ಟಿಸಿಎಸ್ ಕಚೇರಿಯ ಹಿರಿಯ ಉದ್ಯೋಗಿಗಳು ಲೈಂಗಿಕ ಕಿರುಕುಳ ನೀಡಿದ್ದಲ್ಲದೆ, ಬಲವಂತದ ಮತಾಂತರಕ್ಕೆ ಪ್ರಯತ್ನಿಸಿದ್ದಾರೆ. ಈ ಬಗ್ಗೆ ಮಾನವ ಸಂಪನ್ಮೂಲ (ಎಚ್.ಆರ್) ವಿಭಾಗಕ್ಕೆ ದೂರು ನೀಡಿದರೂ ಸ್ಪಂದಿಸಿಲ್ಲ’ ಎಂದು ಆರೋಪಿಸಿ ಎಂಟು ಮಹಿಳಾ ಉದ್ಯೋಗಿಗಳು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಒಂಬತ್ತು ಎಫ್‌ಐಆರ್‌ಗಳು ದಾಖಲಾಗಿದ್ದವು. ಇದರ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ಕಳೆದ ವಾರ ರಚಿಸಲಾಗಿತ್ತು.

ಪ್ರಕರಣ ಸಂಬಂಧ ಎಚ್. ಆರ್ ವಿಭಾಗದ ವ್ಯವಸ್ಥಾಪಕಿ ಸೇರಿದಂತೆ ಏಳು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ಆರೋಪಿಗಳನ್ನು ಡ್ಯಾನಿಶ್ ಶೇಖ್, ತೌಸಿಫ್ ಅತ್ತರ್, ರಜಾ ಮೆಮನ್, ಶಾರುಖ್ ಖುರೇಷಿ, ಶಫಿ ಶೇಖ್, ಆಸಿಫ್ ಮತ್ತು ಅನ್ಸಾರಿ ಎಂದು ಗುರುತಿಸಲಾಗಿದೆ.

ಹುತಾತ್ಮರ ಸ್ಮರಣೆ

ಎಎಫ್‌ಪಿ ಚಿತ್ರ:


ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ಸ್ಮರಣೆಗಾಗಿ ಅಮೃತಸರದಲ್ಲಿರುವ ಜಲಿಯನ್‌ವಾಲಾ ಬಾಗ್‌ಗೆ ನಾಗರಿಕರು ಭಾನುವಾರ ಭೇಟಿ ನೀಡಿದರು

ಲಷ್ಕರ್– ಎ–ತಯಬಾ ನಂಟು ಆರೋಪದಡಿ ಐವರ ಬಂಧನ
ಉಗ್ರರಿಗೆ ನಕಲಿ ಪಾಸ್‌ಪೋರ್ಟ್ ನೆರವು

ಶ್ರೀನಗರ/ನವದೆಹಲಿ (ಪಿಟಿಐ): ಲಷ್ಕರ್- ಎ-ತಯಬಾ (ಎಲ್‌ಇಟಿ) ಭಯೋತ್ಪಾದಕ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಆರೋಪದಡಿ ಬಂಧಿಸಲಾಗಿರುವ ಆರೋಪಿಗಳು ಭಯೋತ್ಪಾದಕರಿಗೆ ನಕಲಿ ಆಧಾರ್, ಪ್ಯಾನ್ ಕಾರ್ಡ್ ಹಾಗೂ ಪಾಸ್‌ಪೋರ್ಟ್ ಸೇರಿದಂತೆ ವಿವಿಧ ದಾಖಲೆಗಳನ್ನು ಒದಗಿಸಲು ನೆರವಾಗಿರುವ ಸಂಗತಿ ವಿಚಾರಣೆಯಿಂದ ಗೊತ್ತಾಗಿದೆ.

ಜಮ್ಮು ಮತ್ತು ಕಾಶ್ಮೀರ ಪೊಲೀಸರು ಸಮನ್ವಯದೊಂದಿಗೆ ಎಲ್‌ಇಟಿಯ ಅಂತರರಾಜ್ಯ ಜಾಲವನ್ನು ಭೇದಿಸಿದ್ದರು. ದೇಶದ ವಿವಿಧೆಡೆ ವಿಸ್ತರಿಸಿದ್ದ ಜಾಲಗಳ ಮೇಲೆ ಕೇಂದ್ರ ಸಂಸ್ಥೆಗಳು ಹಾಗೂ ರಾಜ್ಯಗಳ ಪೊಲೀಸರ ನೆರವಿನೊಂದಿಗೆ ದಾಳಿ ನಡೆಸಿದ್ದರು.

ಮಾರ್ಚ್ 31ರಂದು ಕಾರ್ಯಾಚರಣೆ ಆರಂಭವಾಗಿದ್ದು, ಪಾಕಿಸ್ತಾನಿ ಭಯೋತ್ಪಾದಕರಾದ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾ ಹಾಗೂ ಉಸ್ಮಾನ್ ಅಲಿಯಾಸ್ ಖುಬೈಬ್, ಶ್ರೀನಗರ ನಿವಾಸಿಗಳಾದ ಮೊಹಮ್ಮದ್ ನಖೀಬ್ ಭಟ್, ಆದಿಲ್ ರಶೀದ್ ಭಟ್ ಮತ್ತು ಗುಲಾಮ್ ಮೊಹಮ್ಮದ್ ಮಿರ್ ಅಲಿಯಾಸ್ ಮಾಮಾನನ್ನು ಬಂಧಿಸಲಾಗಿತ್ತು. ಬಂಧಿತರ ಪೈಕಿ ಶ್ರೀನಗರದ ಮೂವರು ಆರೋಪಿಗಳು ಭಯೋತ್ಪಾದಕರಿಗೆ ಆಶ್ರಯ, ಆಹಾರ ಮತ್ತು ಸಾಗಣೆ ಬೆಂಬಲ ನೀಡಿದ್ದರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಆಧಾರ್, ಪಾನ್ ಕಾರ್ಡ್‌ಗಳನ್ನೂ ಒದಗಿಸಿ ಕೊಡಲಾಗುತ್ತಿತ್ತು
- ಕೇಂದ್ರ ಗುಪ್ತಚರ ಸಂಸ್ಥೆಗಳ ಸಮನ್ವಯ ದೊಂದಿಗೆ ಪತ್ತೆ

‘ಭಯೋತ್ಪಾದಕರ ಪೈಕಿ ಒಬ್ಬನನ್ನು ಉಮರ್ ಅಲಿಯಾಸ್ ಖುರ್ಷೀದ್ (ಮೊಲ) ಎಂದು ಗುರುತಿಸಲಾಗಿದೆ. ಪಾಸ್‌ಪೋರ್ಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದ ಈತ ಇಂಡೊನೇಷ್ಯಾಕ್ಕೆ ಪರಾರಿಯಾಗಿದ್ದ. ಆತ ಮತ್ತೊಂದು ನಕಲಿ ಪ್ರಯಾಣ ದಾಖಲೆಯನ್ನು ಬಳಸಿಕೊಲ್ಲಿ ದೇಶಕ್ಕೆ ತೆರಳಿ ನೆಲಸಿದ್ದಾನೆ’ ಎಂದು ಮಾಹಿತಿ ನೀಡಿದ್ದಾರೆ.

‘ಪಾಕಿಸ್ತಾನದ ಕರಾಚಿ ನಿವಾಸಿ ಉಮರ್ 2012ರ ನಂತರ ಭಾರತಕ್ಕೆ ನುಸುಳಿದ್ದ. 2024ರಲ್ಲಿ ರಾಜಸ್ಥಾನದ ಜೈಪುರದಿಂದ ಪಡೆದ ನಕಲಿ ಪಾಸ್‌ಪೋರ್ಟ್ ಬಳಸಿ ಪರಾರಿಯಾಗಿದ್ದ. ಪಾಕಿಸ್ತಾನಿ ಭಯೋತ್ಪಾದಕ ಅಬ್ದುಲ್ಲಾ 16 ವರ್ಷಗಳಿಂದ ತಲೆಮರೆಸಿಕೊಂಡಿದ್ದ. ಕಾಶ್ಮೀರದ ಹೊರಗೂ ತನ್ನ ಜಾಲವನ್ನು ಸ್ಥಾಪಿಸಲು ಯಶಸ್ವಿಯಾಗಿದ್ದ’ ಎಂದು ತಿಳಿಸಿದ್ದಾರೆ.

‘ನಾನು ಮತ್ತು ಉಮರ್ ಭಾರತದಾದ್ಯಂತ ವಿಶೇಷವಾಗಿ ರಾಜಸ್ಥಾನ, ಹರಿಯಾಣ ಮತ್ತು ಪಂಜಾಬ್‌ನಲ್ಲಿ ಸಂಚರಿಸಿದ್ದೆವು’ ಎಂದು ಅಬ್ದುಲ್ಲಾ ವಿಚಾರಣೆ ವೇಳೆ ತನಿಖಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾನೆ. ಕಾಶ್ಮೀರದ ಭಯೋತ್ಪಾದಕರ ಬಗ್ಗೆ ಸಹಾನುಭೂತಿ ಹೊಂದಿದ್ದ ವ್ಯಕ್ತಿಯ ಪುತ್ರಿಯೊಂದಿಗೆ ಈ ಭಯೋತ್ಪಾದಕ ಮಾಡಿಕೊಂಡ ವಿವಾಹ ಸಮಾರಂಭವೂ ಸೇರಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಮರನಾಥ ಯಾತ್ರೆ ಜುಲೈ 3ರಿಂದ

ಜಮ್ಮು (ಪಿಟಿಐ): ವಾರ್ಷಿಕ ಅಮರನಾಥ ಯಾತ್ರೆಯು ಜುಲೈ 3ರಂದು ಆರಂಭವಾಗಿ, ಆಗಸ್ಟ್ 28ರಂದು ಮುಕ್ತಾಯಗೊಳ್ಳಲಿದೆ ಎಂದು ಜಮ್ಮುಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ತಿಳಿಸಿದ್ದಾರೆ.

‘13ರಿಂದ 70 ವರ್ಷದೊಳಗಿನ ಯಾತ್ರಿಕರು ಯಾತ್ರೆ ಕೈಗೊಳ್ಳಬಹುದು. ಯಾತ್ರೆಗೆ ನೋಂದಣಿ ಕಡ್ಡಾಯಗೊಳಿಸಲಾಗಿದ್ದು, ನೋಂದಣಿ ಏಪ್ರಿಲ್ 15ರಿಂದ ಆರಂಭವಾಗಲಿದೆ’ ಎಂದು ಸಿನ್ಹಾ ಅವರು ಲೋಕಭವನದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಸಿನ್ಹಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಯಾತ್ರೆಯ ದಿನಾಂಕವನ್ನು ನಿರ್ಧರಿಸಲಾಗಿದೆ.

ಗಾನ ಮುಗಿಸಿದ ಆಶಾ ಭೋಸ್ಲೆ

ಒಂದನೇ ಪುಟದಿಂದ...

ಅತ್ಯುಚ್ಚ ಸ್ಥಾಯಿಯಲ್ಲಿ ಹಾಡುವುದಕ್ಕೆ ಹೆಸರುವಾಸಿಯಾಗಿದ್ದ ಅವರು ಚಿತ್ರಗೀತೆಗಳ ಜೊತೆಗೆ ಪಾಪ್, ರಾಕ್, ಡಿಸ್ಕೊ ಗೀತೆಗಳನ್ನು ಹಾಡಿದ್ದಾರೆ. ಗಜಲ್‌ಗಳು, ಭಜನೆ, ಕ್ಯಾಬರೆ, ಜಾನಪದ ಗೀತೆಗಳನ್ನು ಹಾಡಿದ್ದಲ್ಲದೇ, ಶಾಸ್ತ್ರೀಯ ಸಂಗೀತ ಹಾಗೂ ರವೀಂದ್ರ ಸಂಗೀತ ಕ್ಷೇತ್ರದಲ್ಲೂ ತಮ್ಮ ಛಾಪು ಮೂಡಿಸಿದ್ದರು.

ಅವರಿಗೆ ಪುತ್ರ ಆನಂದ ಭೋಸ್ಲೆ ಹಾಗೂ ಮೊಮ್ಮಕ್ಕಳು ಇದ್ದಾರೆ. ಅವರ ಪುತ್ರಿ ವರ್ಷಾ ಅವರು 2012ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಹಿರಿಯ ಮಗ ಹೇಮಂತ ಭೋಸ್ಲೆ ಕ್ಯಾನ್ಸರ್‌ನಿಂದಾಗಿ 2015ರಲ್ಲಿ ಮೃತಪಟ್ಟಿದ್ದರು.

ಉಸಿರಾಟದ ತೊಂದರೆ ಹಾಗೂ ಹೃದಯಾಘಾತದ ಕಾರಣಕ್ಕೆ ಶನಿವಾರ ಸಂಜೆ ಅವರನ್ನು ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಹು ಅಂಗಾಂಗ ವೈಫಲ್ಯದಿಂದಾಗಿ ಅವರು ಭಾನುವಾರ ಬೆಳಿಗ್ಗೆ ನಿಧನರಾದರು.

ದಾದರ್‌ನಲ್ಲಿರುವ ಶಿವಾಜಿ ಪಾರ್ಕ್‌ನಲ್ಲಿ ಸೋಮವಾರ ಸಂಜೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಅಂತ್ಯಸಂಸ್ಕಾರ ನೆರವೇರಿಸಲಾಗುತ್ತದೆ. 1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಗೋರ್ ಗ್ರಾಮದ ಪಂಡಿತ ದೀನಾನಾಥ ಮಂಗೇಶ್ಕರ್ ಹಾಗೂ ಶೇವಂತಿ ಅವರಿಗೆ ಜನಿಸಿದ್ದರು. ಅವರು 9 ವರ್ಷದವರಿದ್ದಾಗ ತಂದೆ ದೀನಾನಾಥ್ ಮೃತಪಟ್ಟರು. 16 ವರ್ಷದವರಾಗಿದ್ದಾಗ, ಮನೆಯವರ ವಿರೋಧದ ನಡುವೆ ಆಪ್ತ ಕಾರ್ಯದರ್ಶಿ 31 ವರ್ಷದ ಗಣಪತ ರಾವ್ ಭೋಸ್ಲೆರನ್ನು ಮದುವೆಯಾಗಿದ್ದರು. 1960ರಲ್ಲಿ ಅವರು ವಿಚ್ಛೇದನ ಪಡೆದಿದ್ದರು.

ಬಳಿಕ ಖ್ಯಾತ ಸಂಗೀತ ನಿರ್ದೇಶಕ ಆರ್.ಡಿ.ಬರ್ಮನ್ ಅವರನ್ನು ಮದುವೆಯಾಗಿದ್ದರು. ಬರ್ಮನ್ ಅವರು 1994 ಜನವರಿ 4ರಂದು ಮೃತಪಟ್ಟರು.

ಪ್ರಶಸ್ತಿ–ಗೌರವ: ಗಾಯನ ಕ್ಷೇತ್ರದಲ್ಲಿನ ಸಾಧನೆಯಿಂದಾಗಿ ಹಲವಾರು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು.

ಎರಡನೇ ಅತ್ಯುನ್ನತ ನಾಗರಿಕ ಪುರಸ್ಕಾರ ಪದ್ಮ ವಿಭೂಷಣ, ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಮಹಾರಾಷ್ಟ್ರ ಭೂಷಣ ಹಾಗೂ ವಂಗ ವಿಭೂಷಣ ಪ್ರಶಸ್ತಿಗಳನ್ನು ಅವರು ಮುಡಿಗೇರಿಸಿಕೊಂಡಿದ್ದರು.

‘ಅತ್ಯುತ್ತಮ ಹಿನ್ನೆಲೆ ಗಾಯಕಿ’ಯಾಗಿ ಏಳು ಬಾರಿ ಫಿಲ್ಮ್‌ಫೇರ್ ಪ್ರಶಸ್ತಿ, ಎರಡು ಬಾರಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯೂ (ದಿಲ್ ಚೀಜ್ ಕ್ಯಾ ಹೈ ಮತ್ತು ಮೇರಾ ಕುಛ್ ಸಾಮಾನ್ ಗೀತೆಗಳಿಗೆ) ಅವರಿಗೆ ಸಂದಿತ್ತು. ಆಶಾ ಭೋಸ್ಲೆ ಮಾತ್ರವಲ್ಲ, ಅವರ ಸಹೋದರಿ ದಿವಂಗತ ಲತಾ ಮಂಗೇಶ್ಕರ್, ಉಷಾ ಮಂಗೇಶ್ಕರ್, ಮೀನಾ ಖಡೀಕರ್, ಸಹೋದರ ಹೃದಯನಾಥ ಮಂಗೇಶ್ಕರ್ ಕೂಡ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ.

ಗಾಯನ ಪಯಣ

ತಮ್ಮ ಆಪ್ತ ಬಳಗದಲ್ಲಿ ‘ಆಶಾ ತಾಯಿ’ ಎಂದೇ ಪ್ರಸಿದ್ಧರಾಗಿದ್ದ ಅವರು, 20ಕ್ಕೂ ಹೆಚ್ಚು ಭಾಷೆಗಳು ಹಾಗೂ ಕೆಲ ವಿದೇಶಿ ಭಾಷೆಗಳಲ್ಲೂ ಹಾಡಿದ್ದರು. ಭಾರತೀಯ ಚಿತ್ರರಂಗದ ಹೆಸರಾಂತ ಸಂಗೀತ ನಿರ್ದೇಶಕರು, ಸಂಯೋಜಕರು ಹಾಗೂ ಹಿನ್ನೆಲೆ ಗಾಯಕರೊಂದಿಗೆ ಕೆಲಸ ಮಾಡಿದ್ದರು.

ಸಂಗೀತ ಕ್ಷೇತ್ರದ ಇತಿಹಾಸದಲ್ಲಿ ಅತಿ ಹೆಚ್ಚು ಗೀತೆಗಳ ಧ್ವನಿಮುದ್ರಣ ಮಾಡಿದ ಗಾಯಕಿ ಎಂದು ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್ 2011ರಲ್ಲಿ ಅವರನ್ನು ಗೌರವಿಸಿತ್ತು.

ವೈವಿಧ್ಯಮಯ ಗೀತೆಗಳಿಗೆ ಧ್ವನಿ: ಆಶಾ ಭೋಸ್ಲೆ ಅವರು ವೈವಿಧ್ಯಮಯ ಗೀತೆಗಳನ್ನು ಹಾಡಿದ್ದು, ಈಗಲೂ ಅವು ಜನಮಾನಸದಲ್ಲಿ ಹಸಿರಾಗಿವೆ.

‘ಕಾರವಾನ್’ ಚಿತ್ರದ ‘ಪಿಯಾ ತು ಅಬ್ ತೋ ಆಜಾ’ ಎಂಬ ಗೀತೆಯಿಂದ ಹಿಡಿದು, ‘ಹರೇ ರಾಮ ಹರೇ ಕೃಷ್ಣ’ ಚಿತ್ರದ ‘ದಮ್ ಮಾರೊ ದಮ್’ನಂತಹ ಹಾಡಿನೊಂದಿಗೆ ಸಂಗೀತಪ್ರಿಯರ ಭಾವಕೋಶ ತುಂಬಿದ್ದ ಆಶಾ ಭೋಸ್ಲೆ, 1970ರ ದಶಕದಲ್ಲಿ ಕಸುವುಳ್ಳ ಧ್ವನಿ ಹಾಗೂ ಪ್ರಯೋಗಕ್ಕೆ ಒಡ್ಡಿಕೊಳ್ಳುವ ಮೂಲಕ ಗಮನ ಸೆಳೆದಿದ್ದರು.

‘ಯಾದೋಂ ಕಿ ಬಾರಾತ್’ ಚಿತ್ರದ ‘ಚುರಾ ಲಿಯಾ ಹೈ ತುಮ್ನೆ..’, ‘ಡಾನ್’ ಚಿತ್ರದ ‘ಯೆ ಮೇರಾ ದಿಲ್...’ ಗೀತೆಗಳ ಮೂಲಕ ಪ್ರಣಯ, ಭಾವಪ್ರಧಾನ ಗೀತೆಗಳನ್ನು ಹಾಡುವುದರಲ್ಲೂ ಸೈ ಎನಿಸಿಕೊಂಡಿದ್ದರು.

1980ರ ದಶಕದಲ್ಲಿ ಅವರು ಹಾಡಿದ ‘ಇನ್ ಆಂಖೋ ಕಿ ಮಸ್ತಿ’, ‘ದಿಲ್ ಚೀಜ್ ಕ್ಯಾ ಹೈ’ನಂತಹ (ಉಮ್ರಾವೊ ಜಾನ್ ಚಿತ್ರ) ಗಜಲ್‌ಗಳು, ‘ಮೇರಾ ಕುಛ್ ಸಾಮಾನ್...’ ನಂತಹ (ಇಜಾಜತ್) ಗೀತೆಗಳನ್ನು ಜನರು ಈಗಲೂ ಮೆಲುಕು ಹಾಕುತ್ತಿರುವುದು ಅವರ ಪ್ರತಿಭೆಗೆ ಸಾಕ್ಷಿ. ಯುವ ಮನಸ್ಸುಗಳನ್ನು ಹುಚ್ಚೆಬ್ಬಿಸಿದ್ದ ‘ರಂಗೀಲಾ ರೆ...’ (ರಂಗೀಲಾ ಚಿತ್ರ), ಶಾಸ್ತ್ರೀಯ ಸಂಗೀತದ ಛಾಪಿನ ‘ರಾಧಾ ಕೈಸೆ ನ ಜಲೆ...’ (ಲಗಾನ್), ಜನಪ್ರಿಯ ‘ಕಜ್ರಾ ರೆ...’ (ಬಂಟಿ ಔರ್ ಬಬ್ಲಿ) ಗೀತೆಗಳ ಮೂಲಕ ತಮ್ಮ ಹಾಡುಗಳಲ್ಲಿ ಲವಲವಿಕೆ ಮಾಸಿಲ್ಲ ಎಂದು ತೋರಿಸಿಕೊಟ್ಟಿದ್ದರು.

138 ಪದವಿ ಪಡೆದ ನಿವೃತ್ತ ಯೋಧ

ಜೈಪುರ (ಪಿಟಿಐ): ರಾಜಸ್ಥಾನದ ನಿವೃತ್ತ ಯೋಧರೊಬ್ಬರು 138 ಪದವಿ, ಡಿಪ್ಲೊಮಾ ಮತ್ತು ಪ್ರಮಾಣಪತ್ರಗಳನ್ನು ಪಡೆಯುವ ಮೂಲಕ ಅಪರೂಪದ ಸಾಧನೆ ಮಾಡಿದ್ದಾರೆ.

ಝುಂಜುನು ಜಿಲ್ಲೆಯ ನಿವಾಸಿ ದಶರಥ್ ಸಿಂಗ್(55) ಅವರು ಇತ್ತೀಚೆಗೆ ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದಿಂದ ವೇದಾಧ್ಯಯನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ದಶರಥ್ ಅವರು ಶಿಕ್ಷಣ ಕ್ಷೇತ್ರದಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್, ಗೋಲ್ಡನ್ ಬುಕ್ ಆಫ್ ರೆಕಾರ್ಡ್, ಏಷ್ಯಾ ಬುಕ್ ಆಫ್ ರೆಕಾರ್ಡ್ ಮತ್ತು ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್ ಸೇರಿದಂತೆ 11 ವಿಶ್ವ ದಾಖಲೆಗಳನ್ನು ಮಾಡಿದ್ದಾರೆ. ಆರ್ಥಿಕ ಅಡಚಣೆಯಿಂದಾಗಿ ದಶರಥ ಅವರು ಹೆಚ್ಚಿನ ಶಿಕ್ಷಣ ಪಡೆದಿರಲಿಲ್ಲ. ಸೇನೆಗೆ ಸೇರಿದ ಬಳಿಕ ಎರಡು ತಿಂಗಳ ರಜಾ ಅವಧಿಯಲ್ಲಿ ಅಧ್ಯಯನ ಮಾಡುತ್ತಿದ್ದರು. 2004ರಲ್ಲಿ ಸೇನೆಯಿಂದ ನಿವೃತ್ತರಾದ ಬಳಿಕ ಪೂರ್ಣ ಪ್ರಮಾಣದಲ್ಲಿ ಶಿಕ್ಷಣವನ್ನು ಪಡೆದರು. ದಶರಥ್ ಮೂರು ಪಿಎಚ್.ಡಿ, 46 ಸ್ನಾತಕೋತ್ತರ ಪದವಿ, 7 ಪದವಿ, 23 ಡಿಪ್ಲೊಮಾ, ಸೇನೆಗೆ ಸಂಬಂಧಿಸಿದ 7 ಪದವಿ ಮತ್ತು 52 ಪ್ರಮಾಣಪತ್ರಗಳನ್ನು ಪಡೆದಿದ್ದಾರೆ.

ದಶರಥ ಅವರು ಸೇನೆಯ ಸಪ್ತ ಶಕ್ತಿ ಕಮಾಂಡ್‌ನ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸೇವೆಯಲ್ಲಿರುವ ಮತ್ತು ನಿವೃತ್ತರಾಗಿರುವ ಸಿಬ್ಬಂದಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಕಾನೂನು ನೆರವು ನೀಡುತ್ತಾರೆ.

‘ಏ. 13ರ ನಂತರ ಬಿಹಾರದಲ್ಲಿ ಹೊಸ ಸರ್ಕಾರ’

ಪಟ್ನಾ (ಪಿಟಿಐ): ಬಿಹಾರದಲ್ಲಿ ಹೊಸ ಸರ್ಕಾರ ರಚನೆಯ ಪ್ರಕ್ರಿಯೆಯು ಏಪ್ರಿಲ್ 13ರ ನಂತರ ಆರಂಭವಾಗಲಿದೆ ಎಂದು ಜೆಡಿಯು ರಾಷ್ಟ್ರೀಯ ಕಾರ್ಯಕಾರಿ ಅಧ್ಯಕ್ಷ ಸಂಜಯ್ ಕುಮಾರ್ ಝಾ ಅವರು ಭಾನುವಾರ ತಿಳಿಸಿದ್ದಾರೆ.

‘ಹೊಸ ಸರ್ಕಾರ ಏಪ್ರಿಲ್ 13ರ ನಂತರ ಜಾರಿಗೆ ಬರುತ್ತದೆ ಎಂದು ಭಾವಿಸುತ್ತೇನೆ’ ಎಂದು ಝಾ ಹೇಳಿದರು.

‘ಎನ್‌ಡಿಎ ಶಾಸಕರು ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುತ್ತಾರೆ. ಹೊಸ ಸರ್ಕಾರ ರಚನೆಯಲ್ಲಿ ಬಿಜೆಪಿ ಪ್ರಮುಖ ಪಾತ್ರ ವಹಿಸಲಿದೆ’ ಎಂದು ಜೆಡಿಯು ಹಿರಿಯ ನಾಯಕ ಮತ್ತು ಸಂಸದೀಯ ವ್ಯವಹಾರಗಳ ಸಚಿವ ವಿಜಯ್ ಕುಮಾರ್ ಚೌಧರಿ ಸುದ್ದಿಗಾರರಿಗೆ ತಿಳಿಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯಸಭೆಗೆ ಆಯ್ಕೆಯಾಗಿದ್ದರಿಂದ ಬಿಹಾರದಲ್ಲಿ ನೂತನ ಮುಖ್ಯಮಂತ್ರಿ ಆಯ್ಕೆಯಾಗಬೇಕಾಗಿದೆ. ಹೊಸ ಸರ್ಕಾರದ ನೇತೃತ್ವವನ್ನು ಬಿಜೆಪಿ ವಹಿಸುವ ಸಾಧ್ಯತೆ ಇದೆ. ಬಿಜೆಪಿಯಲ್ಲೂ ಈ ಸಂಬಂಧ ಚಟುವಟಿಕೆ ಬಿರುಸಾಗಿವೆ.

‘25 ಸಾವಿರ ಹೊಸಬರ ನೇಮಕ’

ಅಗತ್ಯವಿದ್ದಲ್ಲಿ ಹೆಚ್ಚುವರಿ ನೇಮಕ: ಟಿಸಿಎಸ್ ಸಿಇಒ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ 25 ಸಾವಿರ ಹೊಸಬರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳಲಾಗುವುದು ಎಂದು ದೇಶದ ಪ್ರಮುಖ ಮಾಹಿತಿ ತಂತ್ರಜ್ಞಾನ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಹೇಳಿದೆ.

ಅಗತ್ಯವಿದ್ದಲ್ಲಿ ಮತ್ತಷ್ಟು ಜನರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಕಂಪನಿಯ ಮುಖ್ಯ ಕಾರ್ಯ ನಿರ್ವಹಣ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ. ಕೃತಿವಾಸನ್ ಹೇಳಿದ್ದಾರೆ.

2025–26ರ ಆರ್ಥಿಕ ವರ್ಷದಲ್ಲಿ ಕಂಪನಿಯು 44 ಸಾವಿರ ಹೊಸಬರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿತ್ತು. ಕಳೆದ ಮೂರು ಆರ್ಥಿಕ ವರ್ಷಗಳಿಂದ ಕಂಪನಿಯು ವಾರ್ಷಿಕ 40 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಹೊಸಬರನ್ನು ನೇಮಕ ಮಾಡಿಕೊಳ್ಳುತ್ತಿದೆ.

ಹೊಸಬರನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ 9 ತಿಂಗಳ ತರಬೇತಿ ನೀಡಲಾಗುತ್ತದೆ. ವ್ಯವಹಾರದ ಅಗತ್ಯಕ್ಕೆ ಅನುಗುಣವಾಗಿ ನೇಮಕದ ಪ್ರಮಾಣ ಇರುತ್ತದೆ ಎಂದು ತಿಳಿಸಿದ್ದಾರೆ.

12 ಸಾವಿರ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವುದಾಗಿ ಕಂಪನಿಯು ಕಳೆದ ಆರ್ಥಿಕ ವರ್ಷದಲ್ಲಿ ಹೇಳಿತ್ತು. ಇಂತಹ ಆಲೋಚನೆ ಈಗಲೂ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಕೃತಿವಾಸನ್, ‘ಕಂಪನಿಯಲ್ಲಿ ಉತ್ತಮವಾಗಿ ಕೆಲಸ ಮಾಡುವವರಿಗೆ, ಕಂಪನಿಯ ಅಭಿವೃದ್ಧಿ ಜೊತೆಗೆ ಅವರ ಬೆಳವಣಿಗೆ ಇರುತ್ತದೆ’ ಎಂದಷ್ಟೇ ಹೇಳಿದ್ದಾರೆ.

ಕಂಪನಿಯು ಯೋಜನೆಗಳನ್ನು ಕಾರ್ಯಗತಗೊಳಿಸುವ ಶೈಲಿಯು ಇತ್ತೀಚೆಗೆ ಬದಲಾಗಿದೆ. ಹೀಗಾಗಿ, ಹೆಚ್ಚಾಗಿ ಹಿರಿಯ ಶ್ರೇಣಿಯ ಸಿಬ್ಬಂದಿಯನ್ನು ಕೈಬಿಡಬೇಕಾಯಿತು ಎಂದು ತಿಳಿಸಿದ್ದಾರೆ.

2025–26ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹3.72 ಲಕ್ಷ ಕೋಟಿ ಮೌಲ್ಯದ ಒಪ್ಪಂದಗಳನ್ನು ಪಡೆದುಕೊಂಡಿದೆ.

5 ಕೆ.ಜಿ ತೂಕದ 13 ಲಕ್ಷ ಎಲ್‌ಪಿಜಿ ಸಿಲಿಂಡರ್ ಪೂರೈಕೆ: ಕೇಂದ್ರ

ನವದೆಹಲಿ (ಪಿಟಿಐ): 5 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಕೇಂದ್ರ ಸರ್ಕಾರ ಹೆಚ್ಚು ಮಾಡಿದೆ. ಅಲ್ಲದೆ, ಕೊಳವೆ ಮೂಲಕ ನೈಸರ್ಗಿಕ ಅನಿಲವನ್ನು (ಪಿಎನ್‌ಜಿ) ಗ್ರಾಹಕರಿಗೆ ತಲುಪಿಸಲು ಕೊಳವೆ ಜಾಲ ನಿರ್ಮಾಣ ಕೆಲಸಕ್ಕೆ ಚುರುಕು ನೀಡಿದೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಅಡುಗೆ ಅನಿಲ ಪೂರೈಕೆಯಲ್ಲಿ ಅಡಚಣೆ ಉಂಟಾದ ನಂತರದಲ್ಲಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ.

5 ಕೆ.ಜಿ. ತೂಕದ 13 ಲಕ್ಷಕ್ಕೂ ಹೆಚ್ಚಿನ ಎಲ್‌ಪಿಜಿ ಸಿಲಿಂಡರ್‌ಗಳನ್ನು ಮಾರ್ಚ್ 23ರ ನಂತರ ಮಾರಾಟ ಮಾಡಲಾಗಿದೆ. ಈಗ ದಿನವೊಂದಕ್ಕೆ ಈ ಸಿಲಿಂಡರ್‌ಗಳ ಮಾರಾಟವು 1 ಲಕ್ಷಕ್ಕಿಂತ ಹೆಚ್ಚಾಗಿದೆ. ವಲಸೆ ಕಾರ್ಮಿಕರು ಹಾಗೂ ಕಡಿಮೆ ಆದಾಯದ ಕುಟುಂಬಗಳಿಗೆ ಇವುಗಳ ಲಭ್ಯತೆಯನ್ನು ಹೆಚ್ಚು ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮಾರ್ಚ್ ನಂತರದಲ್ಲಿ ಒಟ್ಟು 4.24 ಲಕ್ಷ ಹೊಸ ಪಿಎನ್‌ಜಿ ಸಂಪರ್ಕಗಳನ್ನು ಸಕ್ರಿಯಗೊಳಿಸಲಾಗಿದೆ. ಅಲ್ಲದೆ, ಪಿಎನ್‌ಜಿ ಸಂಪರ್ಕ ಪಡೆಯುವ ಪ್ರಕ್ರಿಯೆಯ ಭಾಗವಾಗಿ 30 ಸಾವಿರಕ್ಕೂ ಹೆಚ್ಚು ಗ್ರಾಹಕರು ತಮ್ಮ ಎಲ್‌ಪಿಜಿ ಸಂಪರ್ಕವನ್ನು ಕಂಪನಿಗಳಿಗೆ ಮರಳಿಸಿದ್ದಾರೆ.

ಮನೆಗಳಲ್ಲಿ ಅಡುಗೆಗೆ ಬಳಸುವ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಸ್ಥಿರವಾಗಿದೆ, ಏಪ್ರಿಲ್ 11ರಂದು 52 ಲಕ್ಷಕ್ಕಿಂತ ಹೆಚ್ಚು ಸಿಲಿಂಡರ್ ವಿತರಣೆ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೇ 2ನೇ ವಾರದಲ್ಲಿ ಭಾರತ–ಬ್ರಿಟನ್ ಎಫ್‌ಟಿಎ

ನವದೆಹಲಿ (ಪಿಟಿಐ): ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಮೇ ತಿಂಗಳ ಎರಡನೇ ವಾರದಿಂದ ಜಾರಿ ಆಗಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವರ್ಷದ ಜುಲೈ 24ರಂದು ಉಭಯ ರಾಷ್ಟ್ರಗಳು ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ (ಸಿಇಟಿಎ) ಸಹಿ ಹಾಕಿದ್ದವು.

ಒಪ್ಪಂದದ ಪ್ರಕಾರ, ಬ್ರಿಟನ್ ಮಾರುಕಟ್ಟೆ ಪ್ರವೇಶಿಸುವ ಭಾರತದ ಶೇ 99ರಷ್ಟು ಸರಕುಗಳಿಗೆ ಶೂನ್ಯ ಸುಂಕ ಇರಲಿದೆ. ಬ್ರಿಟನ್‌ನ ಕಾರುಗಳು, ವಿಸ್ಕಿಗೆ ಭಾರತದಲ್ಲಿ ಸುಂಕ ಕಡಿಮೆ ಆಗಲಿದೆ.

2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರವನ್ನು ₹5.21 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿಯನ್ನು ಸಿಇಟಿಎ ಹೊಂದಿದೆ.

ಅವಧಿ ವಿಮೆ: ಕಂತು ಉಳಿಸುವ ಗುಟ್ಟೇನು?

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.

ಚಾರ್ಟರ್ಡ್ ಅಕೌಂಟೆಂಟ್

ಅಗತ್ಯಕ್ಕೆ ತಕ್ಕಂತೆ ಅವಧಿ ನಿಗದಿಪಡಿಸಿ

ಬಹಳಷ್ಟು ಜನರು 85 ಅಥವಾ 99 ವರ್ಷ ವಯಸ್ಸಿನವರೆಗೆ ರಕ್ಷಣೆ ನೀಡುವ ಪಾಲಿಸಿ ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಪ್ರಾಯೋಗಿಕವಾಗಿ ಹೇಳುವುದಾದರೆ, ನಿಮಗೆ ವಿಮೆಯ ಅಗತ್ಯವಿರುವುದು ನಿಮ್ಮ ದುಡಿಯುವ ಅವಧಿಯಲ್ಲಿ ಮಾತ್ರ. ನಿಮ್ಮ ನಿವೃತ್ತಿಯ ನಂತರ ಅಥವಾ ನಿಮ್ಮ ಮಕ್ಕಳು ಆರ್ಥಿಕವಾಗಿ ಸ್ವತಂತ್ರರಾದ ಮೇಲೆ ವಿಮೆಯ ಅವಶ್ಯಕತೆ ಕಡಿಮೆಯಾಗುತ್ತದೆ. ಆದ್ದರಿಂದ 60 ಅಥವಾ 65 ವರ್ಷ ವಯಸ್ಸಿನವರೆಗೆ ಮಾತ್ರ ರಕ್ಷಣೆ ನೀಡುವ ಪಾಲಿಸಿ ಆರಿಸಿಕೊಂಡರೆ ಕಂತಿನ ಮೊತ್ತ ಗಣನೀಯವಾಗಿ ಕಡಿಮೆಯಾಗುತ್ತದೆ. ಅದೇ ರೀತಿ ಪಾವತಿಸಿದ ಹಣ ವಾಪಸ್ ಬರುವ ‘ರಿಟರ್ನ್ ಆಫ್ ಪ್ರೀಮಿಯಂ’ (ಆರ್‌ಒಪಿ) ಯೋಜನೆಗಳು ಆಕರ್ಷಕವಾಗಿ ಕಂಡರೂ, ಅವುಗಳ ಕಂತು ತುಂಬಾ ಜಾಸ್ತಿ ಇರುತ್ತದೆ. ಅದರ ಬದಲು ಸಾಮಾನ್ಯ ಅವಧಿ ವಿಮೆ ಖರೀದಿಸಿ, ಉಳಿದ ಹಣವನ್ನು ಬೇರೆಡೆ ಹೂಡಿಕೆ ಮಾಡುವುದು ಜಾಣತನ.

ಈಗಿನ ದುಬಾರಿ ಕಾಲದಲ್ಲಿ ಒಂದು ಸಿನಿಮಾ ನೋಡಲು ಅಥವಾ ಹೊರಗಡೆ ಊಟಕ್ಕೆ ಕುಟುಂಬ ಸಮೇತ ಹೋದರೆ ಸರಿಸುಮಾರು ₹2 ಸಾವಿರ ಖರ್ಚಾಗುತ್ತದೆ. ಆದರೆ, ನೀವು ದಿನವೂ ಕುಡಿಯುವ ಒಂದು ಕಪ್ ಕಾಫಿಯ ಬೆಲೆಗೆ ನಿಮ್ಮ ಕುಟುಂಬಕ್ಕೆ ₹1 ಕೋಟಿ ಮೌಲ್ಯದ ವಿಮಾ ರಕ್ಷಣೆ ನೀಡಲು ಸಾಧ್ಯವಿದೆ. ಹೌದು, ಅವಧಿ ವಿಮೆ (ಟರ್ಮ್ ಇನ್ಶೂರೆನ್ಸ್) ಎಂಬುದು ಕೇವಲ ವಿಮೆಯಲ್ಲ; ಅದು ನಿಮ್ಮ ಕುಟುಂಬದ ಭವಿಷ್ಯಕ್ಕೆ ನೀವು ನೀಡುವ ಅತಿದೊಡ್ಡ ಉಡುಗೊರೆ. ಸರಿಯಾಗಿ ಯೋಜನೆ ರೂಪಿಸಿ ಮುನ್ನಡೆದರೆ ಅಗ್ಗದ ದರದಲ್ಲಿ ಉತ್ತಮ ಅವಧಿ ವಿಮೆ ಕೊಳ್ಳಲು ಸಾಧ್ಯ. ವಿಮಾ ಕಂತಿನ ಭಾರ ಇಳಿಸಿಕೊಳ್ಳಲು ಏನು ಮಾಡಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕಿದೆ.

ಕಂತಿನ ಭಾರ ಕಡಿಮೆ ಹೇಗೆ?: ಅವಧಿ ವಿಮೆ ಕಂತನ್ನು ಕಡಿಮೆ ಮಾಡುವುದು ಅದು ಹೇಗೆ ಕೆಲಸ ಮಾಡುತ್ತದೆ ಎಂಬ ತಿಳಿವಳಿಕೆಯಿಂದ ಪ್ರಾರಂಭವಾಗುತ್ತದೆ. ಆರೋಗ್ಯ ವಿಮೆಯಂತೆ ವಯಸ್ಸು ಮತ್ತು ವೈದ್ಯಕೀಯ ಹಣದುಬ್ಬರದೊಂದಿಗೆ ಇಲ್ಲಿ ಕಂತು ಹೆಚ್ಚಾಗುವುದಿಲ್ಲ. ಬದಲಾಗಿ, ಒಮ್ಮೆ ನೀವು ಪಾಲಿಸಿ ಖರೀದಿಸಿದರೆ ಅದರ ಕಂತು ಸ್ಥಿರವಾಗಿರುತ್ತದೆ. ಇದರರ್ಥ ಪಾಲಿಸಿ ಖರೀದಿಸುವ ಮೊದಲೇ ನಮಗೆ ಉಳಿತಾಯ ಮಾಡಲು ದೊಡ್ಡ ಅವಕಾಶವಿರುತ್ತದೆ. 2025ರ ಸೆಪ್ಟೆಂಬರ್ 22ರಿಂದ ಜಾರಿಗೆ ಬಂದಿರುವ ಕೇಂದ್ರ ಸರ್ಕಾರದ ಹೊಸ ನಿಯಮದಂತೆ, ವೈಯಕ್ತಿಕ ಜೀವ ವಿಮಾ ಕಂತಿನ ಮೇಲಿನ ಶೇ 18ರಷ್ಟು ಜಿಎಸ್‌ಟಿಯನ್ನು ಸಂಪೂರ್ಣವಾಗಿ ತೆಗೆಯಲಾಗಿದೆ. ಇದು ಸಾಮಾನ್ಯ ಜನರಿಗೆ ಅವಧಿ ವಿಮೆಯನ್ನು ಮೊದಲಿಗಿಂತಲೂ ಅಗ್ಗವಾಗಿಸಿದೆ.

ಯೌವನದಲ್ಲೇ ವಿಮೆ ಪಡೆಯುವುದರ ಲಾಭ: ಅವಧಿ ವಿಮೆ ದರವನ್ನು ನಿರ್ಧರಿಸುವಲ್ಲಿ ವಯಸ್ಸು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ನೀವು ಎಷ್ಟು ಕಡಿಮೆ ವಯಸ್ಸಿನಲ್ಲಿ ಪಾಲಿಸಿ ಪಡೆಯುತ್ತೀರೋ, ಅಷ್ಟು ಕಡಿಮೆ ಕಂತಿನ ಲಾಭ ನಿಮಗೆ ಸಿಗುತ್ತದೆ. ಏಕೆಂದರೆ ವಿಮಾ ಕಂಪನಿಗಳು ಯುವಕರನ್ನು ಕಡಿಮೆ ಅಪಾಯವಿರುವ ಗ್ರಾಹಕರೆಂದು ಪರಿಗಣಿಸುತ್ತವೆ. ಉದಾಹರಣೆಗೆ, 25 ವರ್ಷ ವಯಸ್ಸಿನ ಯುವಕನು ₹1 ಕೋಟಿ ಮೊತ್ತದ ಪಾಲಿಸಿಯನ್ನು ಖರೀದಿಸಿದರೆ ವಾರ್ಷಿಕ ಸುಮಾರು ₹10,273 ಪಾವತಿಸಬೇಕಾಗುತ್ತದೆ. ಅದೇ ವ್ಯಕ್ತಿ 40ನೇ ವಯಸ್ಸಿನಲ್ಲಿ ಖರೀದಿಸಿದರೆ ವಾರ್ಷಿಕ ₹20,417 ಪಾವತಿಸಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, 40ನೇ ವಯಸ್ಸಿನಲ್ಲಿ ಖರೀದಿ ಸುವವರು ಕಡಿಮೆ ವರ್ಷಗಳಿಗೆ ಕಂತು ಪಾವತಿಸಿದರೂ, ಒಟ್ಟಾರೆಯಾಗಿ ಅವರು ನೀಡುವ ಒಟ್ಟು ಮೊತ್ತವು ಯುವ ವಯಸ್ಸಿನಲ್ಲಿ ಖರೀದಿಸಿದವರಿಗಿಂತ ಸುಮಾರು ₹1 ಲಕ್ಷದಷ್ಟು ಹೆಚ್ಚಾಗಿರುತ್ತದೆ.

ಸ್ಮಾರ್ಟ್ ಪಾವತಿ ವಿಧಾನ ಮತ್ತು ರಿಯಾಯಿತಿಗಳು: ಕಂತು ಉಳಿಸಲು ಮತ್ತೊಂದು ಸುಲಭದ ದಾರಿ ವಾರ್ಷಿಕ ಪಾವತಿ ವಿಧಾನವನ್ನು ಆರಿಸಿಕೊಳ್ಳುವುದು. ಮಾಸಿಕ ಪಾವತಿಯ ಮೇಲೆ ವಿಮಾ ಕಂಪನಿಗಳು ಸಾಮಾನ್ಯವಾಗಿ ಶೇ 2ರಿಂದ ಶೇ 4ರಷ್ಟು ಹೆಚ್ಚುವರಿ ಶುಲ್ಕ ವಿಧಿಸುತ್ತವೆ. ಇದನ್ನು ತಪ್ಪಿಸಲು ವರ್ಷಕ್ಕೊಮ್ಮೆ ಕಂತು ಪಾವತಿಸುವುದು ಆರ್ಥಿಕವಾಗಿ ಲಾಭದಾಯಕ. ಇದರ ಜೊತೆಗೆ ಆನ್‌ಲೈನ್ ಮೂಲಕ ಪಾಲಿಸಿ ಖರೀದಿಸುವುದರಿಂದ ಹೆಚ್ಚು ಅನುಕೂಲ ಸಿಗುತ್ತದೆ. ಆನ್‌ಲೈನ್ ಪಾಲಿಸಿಗಳಿಗೆ ಆಡಳಿತಾತ್ಮಕ ವೆಚ್ಚಗಳು ಕಡಿಮೆ ಇರುವುದರಿಂದ ಕಂಪನಿಗಳು ಗ್ರಾಹಕರಿಗೆ ವಿಶೇಷ ರಿಯಾಯಿತಿ ನೀಡುತ್ತವೆ. ಮಹಿಳೆಯರಿಗೂ ಇಲ್ಲಿ ವಿಶೇಷ ಸೌಲಭ್ಯವಿದ್ದು, ಅವರಿಗೆ ಕಂತಿನ ದರದಲ್ಲಿ ಶೇ 10ರಿಂದ ಶೇ 15ರಷ್ಟು ರಿಯಾಯಿತಿ ಲಭ್ಯವಿರುತ್ತದೆ.

ಸತ್ಯ ಹೇಳುವುದು ಮುಖ್ಯ: ಕಂತಿನ ಮೊತ್ತ ಕಡಿಮೆ ಇರಲಿ ಎಂಬ ಕಾರಣಕ್ಕೆ ನಿಮ್ಮ ಆರೋಗ್ಯದ ಸ್ಥಿತಿ, ಜೀವನಶೈಲಿ ಅಥವಾ ಧೂಮಪಾನ ಅಭ್ಯಾಸದ ಬಗ್ಗೆ ವಿಮಾ ಕಂಪನಿಗೆ ತಪ್ಪು ಮಾಹಿತಿ ನೀಡಬೇಡಿ. ಒಂದು ವೇಳೆ ಮಾಹಿತಿ ಸುಳ್ಳೆಂದು ತಿಳಿದು ಬಂದರೆ, ಕ್ಲೇಮ್ ಸಮಯದಲ್ಲಿ ವಿಮಾ ಕಂಪನಿಯು ಹಣ ನೀಡಲು ನಿರಾಕರಿಸಬಹುದು. ಇದರಿಂದ ನೀವು ವರ್ಷಗಟ್ಟಲೆ ಕಟ್ಟಿದ ಹಣ ವ್ಯರ್ಥವಾಗುವುದಲ್ಲದೆ, ನಿಮ್ಮ ಕುಟುಂಬಕ್ಕೆ ಸಿಗಬೇಕಾದ ಆರ್ಥಿಕ ಭದ್ರತೆಯೂ ಇಲ್ಲದಂತಾಗುತ್ತದೆ. ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ನಿಮ್ಮ ಪಾಲಿಸಿಯನ್ನು ಭದ್ರವಾಗಿರಿಸುತ್ತದೆ. ಹಾಗೆಯೇ, ಕೇವಲ ಕಡಿಮೆ ಬೆಲೆಯ ಪಾಲಿಸಿಯನ್ನು ಹುಡುಕುವ ಬದಲು, ಕಂಪನಿಯ ಕ್ಲೇಮ್ ಸೆಟಲ್‌ಮೆಂಟ್ ಅನುಪಾತ ಮತ್ತು ಒಟ್ಟಾರೆ ಸೇವೆಯನ್ನು ನೋಡಿ ಪಾಲಿಸಿ ಆರಿಸಿಕೊಳ್ಳಿ.

ಅವಧಿ ವಿಮೆ ಎಂಬುದು ಪ್ರತಿ ಕುಟುಂಬದ ಅಡಿಪಾಯವಿದ್ದಂತೆ. ಸರಿಯಾದ ವಯಸ್ಸಿನಲ್ಲಿ, ಸೂಕ್ತವಾದ ಅವಧಿಗೆ ಮತ್ತು ಪ್ರಾಮಾಣಿಕ ಮಾಹಿತಿಯೊಂದಿಗೆ ಪಾಲಿಸಿ ಖರೀದಿಸಿದರೆ ಅತ್ಯಂತ ಕಡಿಮೆ ಬೆಲೆಯಲ್ಲಿ ಗರಿಷ್ಠ ಲಾಭ ಪಡೆಯಬಹುದು. ಇಂದು ನೀವು ಮಾಡುವ ಒಂದು ಸಣ್ಣ ಹೂಡಿಕೆ ನಾಳೆ ನಿಮ್ಮ ಅನುಪಸ್ಥಿತಿಯಲ್ಲಿ ನಿಮ್ಮ ಕುಟುಂಬದ ಆರ್ಥಿಕ ಸ್ವಾತಂತ್ರ್ಯವನ್ನು ಕಾಪಾಡುತ್ತದೆ. ವಿಳಂಬ ಮಾಡದೆ, ಮಾರುಕಟ್ಟೆಯಲ್ಲಿ ಲಭ್ಯವಿರುವ ಯೋಜನೆಗಳನ್ನು ಹೋಲಿಸಿ ನೋಡಿ, ನಿಮ್ಮ ಬಜೆಟ್‌ಗೆ ಹೊಂದುವ ಉತ್ತಮ ಅವಧಿ ವಿಮೆಯನ್ನು ಆದಷ್ಟು ಬೇಗ ಆರಿಸಿಕೊಳ್ಳಿ.

ನೃತ್ಯ ಪ್ರದರ್ಶನ

ಪಿಟಿಐ ಚಿತ್ರ



ಮಧ್ಯಪ್ರದೇಶದ ಭೋಪಾಲ್‌ನಲ್ಲಿ ‘ನವ ವರ್ಷ ಮೇಳ ಮಹೋತ್ಸವ’ದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು

‘ಚೀನಾದ ಕೃತ್ಯ ದ್ವಿಪಕ್ಷೀಯ ಸಂಬಂಧಕ್ಕೆ ಕುತ್ತು’

ನವದೆಹಲಿ (ಪಿಟಿಐ): ಭಾರತೀಯ ಪ್ರದೇಶಗಳ ಹೆಸರುಗಳನ್ನು ಬದಲಿಸುವ ಮೂಲಕ ಅಥವಾ ಆಧಾರರಹಿತ ನಿರೂಪಣೆಗಳನ್ನು ಸೃಷ್ಟಿಸುವ ಮೂಲಕ ವಾಸ್ತವವನ್ನು ಬದಲಿಸಲು ಚೀನಾದಿಂದ ಸಾಧ್ಯವಿಲ್ಲ. ಆದರೆ, ಉಭಯ ರಾಷ್ಟ್ರಗಳ ನಡುವಿನ ಸಂಬಂಧವನ್ನು ತಿಳಿಗೊಳಿಸುವ ಪ್ರಯತ್ನಕ್ಕೆ ಚೀನಾದ ಈ ಕ್ರಮಗಳಿಂದ ತೊಡಕಾಗಬಹುದು ಎಂದು ಭಾರತ ಭಾನುವಾರ ಹೇಳಿದೆ.



ರಣಧೀರ್ ಜೈಸ್ವಾಲ್

‘ಭಾರತದ ಭೂ ಪ್ರದೇಶಗಳಿಗೆ ಚೀನಾ ಹೊಸ ಹೆಸರುಗಳನ್ನು ಇಡುವಂತಹ ಯಾವುದೇ ಪ್ರಯತ್ನಗಳನ್ನು ಮಾಡಿದರೂ ಭಾರತ ಅದನ್ನು ಖಂಡಿತವಾಗಿ ವಿರೋಧಿಸುತ್ತದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಜತೆಗೆ ‘ಚೀನಾದ ಇಂಥ ಪ್ರಯತ್ನಗಳು ವಾಸ್ತವವನ್ನು ಬದಲಿಸಲು ಸಾಧ್ಯವಿಲ್ಲ. ಅರುಣಾಚಲ ಪ್ರದೇಶವೂ ಸೇರಿದಂತೆ ಭಾರತದ ಎಲ್ಲಾ ಭೂ ಪ್ರದೇಶಗಳು ಹಿಂದೆಯೂ, ಈಗಲೂ ಹಾಗೂ ಮುಂದೆಯೂ ಭಾರತದ ಅವಿಭಾಜ್ಯ ಅಂಗವಾಗಿವೆ ಹಾಗೆಯೇ ಉಳಿದಿರುತ್ತವೆ’ ಎಂದೂ ಜೈಸ್ವಾಲ್ ಪ್ರತಿಪಾದಿಸಿದ್ದಾರೆ. ಅಲ್ಲದೇ, ಉಭಯ ರಾಷ್ಟ್ರಗಳ ಸಂಬಂಧಗಳನ್ನು ಹದಗೆಡಿಸುವ ಕೃತ್ಯಗಳಿಂದ ಚೀನಾ ದೂರ ಸರಿಯಬೇಕು ಎಂದೂ ಅವರು ಹೇಳಿದರು.

ನಾಗರಿಕತೆ ನಾಶವಾಗಲಿದೆ ಎಂದು ಹೇಳಿದ್ದರಿಂದಲೇ ಮಾತುಕತೆ: ಟ್ರಂಪ್

ವಾಷಿಂಗ್ಟನ್ (ಪಿಟಿಐ): ‘ನಾಗರಿಕತೆ ನಾಶವಾಗಲಿದೆ ಎಂದು ನಾನು ಬೆದರಿಕೆ ಹಾಕಿದ್ದರಿಂದಲೇ ಇರಾನ್ ಮಾತುಕತೆಗೆ ಮುಂದಾಯಿತು. ಇದೀಗ, ಶಾಂತಿ ಮಾತುಕತೆಯೂ ವಿಫಲವಾಗಿದೆ. ಭವಿಷ್ಯದಲ್ಲಿ ಅವರು ಮತ್ತೆ ಬರಲಿದ್ದಾರೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

‘ನನ್ನ ಹೇಳಿಕೆಯಿಂದ ಎಲ್ಲವೂ ಬದಲಾಯಿತು. ಆ ಹೇಳಿಕೆಯಿಂದಲೇ ಅವರು ಚೌಕಾಶಿಗಾಗಿ ನಮ್ಮ ಬಳಿ ಬಂದರು. ಈಗ ಅವರು ಮಾತುಕತೆಯಿಂದ ಅರ್ಧಕ್ಕೆ ತೆರಳಿದ್ದಾರೆ. ನನ್ನ ಪ್ರಕಾರ, ಅವರು ಮತ್ತೆ ಮಾತುಕತೆ ಬರಲಿದ್ದಾರೆ. ನಾವು ಕೇಳಿದ ಎಲ್ಲವನ್ನೂ ಕೊಡಲಿದ್ದಾರೆ’ ಎಂದು ‘ಫಾಕ್ಸ್ ನ್ಯೂಸ್’ನ ‘ಸಂಡೇ ಫ್ಯೂಚರ್’ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹530	100 ಕ್ಕೆ	₹550
12 ಕ್ಕೆ	₹72		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-725
ದ್ವಿತಳಿ (ಬಿ.ವಿ)	₹460-810

‘ಮೃತ್ಯು ಸುಳಿ’ಗೆ ಶತ್ರು: ಇರಾನ್ ಎಚ್ಚರಿಕೆ

ಟೆಹರಾನ್(ಎಎಫ್‌ಪಿ): ಹಡಗುಗಳು ಸಾಗುವ ಹೊರ್ಮುಜ್ ಜಲಸಂಧಿಯ ಪ್ರಮುಖ ಜಾಗ ಇರಾನ್ ಹಿಡಿತದಲ್ಲಿದೆ. ಈ ಜಲಮಾರ್ಗದ ಮೂಲಕ ಸಾಗಲು ಯತ್ನಿಸುವ ಇಲ್ಲವೇ ಯಾವುದೇ ದುಸ್ಸಾಹಸ ಮಾಡುವ ಶತ್ರುಗಳನ್ನು ಭಯಾನಕ ‘ಮೃತ್ಯು ಸುಳಿ’ಯಲ್ಲಿ ಸಿಲುಕಿಸಲಾಗುವುದು ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್(ಐಆರ್‌ಜಿಸಿ) ಭಾನುವಾರ ಬೆದರಿಕೆ ಹಾಕಿದೆ.



ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಗೆ ದಿಗ್ಬಂಧನ ವಿಧಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶಿಸಿದ ಬೆನ್ನಲ್ಲೇ, ಐಆರ್‌ಜಿಸಿ ಈ ಎಚ್ಚರಿಕೆ ನೀಡಿದೆ.

‘ಈ ಜಲಮಾರ್ಗದ ಮೂಲಕ ನಡೆಯುವ ಹಡಗುಗಳ ಸಂಚಾರ ನಮ್ಮ ಸಶಸ್ತ್ರ ಪಡೆಗಳ ನಿಯಂತ್ರಣದಲ್ಲಿದೆ’ ಎಂದು ಐಆರ್‌ಜಿಸಿಯ ನೌಕಾ ಕಮಾಂಡ್ ಪರ್ಷಿಯನ್ ಭಾಷೆಯಲ್ಲಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಪೇಟೆಂಟ್‌ಗೆ 1.43 ಲಕ್ಷ ಅರ್ಜಿ

ನವದೆಹಲಿ (ಪಿಟಿಐ): ‘ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಪೇಟೆಂಟ್‌ಗಾಗಿ 1,43,729 ಅರ್ಜಿಗಳು ಸಲ್ಲಿಕೆ ಆಗಿವೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

2024–25ರಲ್ಲಿ 1,10,375 ಅರ್ಜಿಗಳು ಸಲ್ಲಿಕೆ ಆಗಿದ್ದವು. ಇದಕ್ಕೆ ಹೋಲಿಸಿದರೆ ಈ ಬಾರಿ ಅರ್ಜಿಗಳ ಪ್ರಮಾಣ ಶೇ 30.2ರಷ್ಟು ಹೆಚ್ಚಳವಾಗಿದೆ. ಶೇ 69ರಷ್ಟು ಪೇಟೆಂಟ್ ಅರ್ಜಿಗಳು ದೇಶೀಯವಾಗಿ ಸಲ್ಲಿಕೆ ಆಗಿವೆ. ಈ ಪೈಕಿ ತಮಿಳುನಾಡು, ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಬೌದ್ಧಿಕ ಆಸ್ತಿ ಹಕ್ಕುಗಳನ್ನು ಸದೃಢಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಇದೇ ಪೇಟೆಂಟ್ ಸಂಖ್ಯೆ ಏರಿಕೆಗೆ ಕಾರಣ ಎಂದು ತಿಳಿಸಿದ್ದಾರೆ.

ನವೋದ್ಯಮಗಳು, ಎಂಎಸ್‌ಎಂಇಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಪೇಟೆಂಟ್ ಶುಲ್ಕವನ್ನು ಕಡಿಮೆ ಮಾಡಿರುವುದು, ತ್ವರಿತವಾಗಿ ಅರ್ಜಿಗಳ ಪರಿಶೀಲನೆ ಸೇರಿದಂತೆ ಹಲವು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

1970ರ ಪೇಟೆಂಟ್ ಕಾಯ್ದೆ ಅಡಿಯಲ್ಲಿ ಈ ಅರ್ಜಿಗಳ ವಸ್ತುನಿಷ್ಠ ಪರಿಶೀಲನೆ ಮಾಡಿದ ಬಳಿಕ ಮಾತ್ರವೇ ಪೇಟೆಂಟ್ ನೀಡಲಾಗುತ್ತಿದೆ.

ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಕೆ

ಆರ್ಥಿಕ ವರ್ಷ	ಅರ್ಜಿಗಳ ಸಂಖ್ಯೆ
2016-17	45,444
2017-18	47,894
2018-19	50,660
2019-20	56,268
2020-21	58,503
2021-22	66,440
2022-23	82,208
2023-24	92,163
2024-25	1,10,375
2025-26	1,43,729

ಪಿಒಕೆ ಗಡಿ ಸಮೀಪ ಚೀನಾ ಹೊಸ ‘ಕೌಂಟಿ’ ರಚನೆ

ಬೀಜಿಂಗ್ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಹಾಗೂ ಅಫ್ಗಾನಿಸ್ತಾನದ ಗಡಿಯ ಸಮೀಪದಲ್ಲಿರುವ ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಚೀನಾ ‘ಸೆನ್ಲಿಂಗ್’ ಹೆಸರಿನ ಹೊಸ ‘ಕೌಂಟಿ’ಯನ್ನು ರಚಿಸಿದೆ.

ವಾಖಾನ್ ಕಾರಿಡಾರ್ ಮೂಲಕ ಉಯ್ಗರ್ ಪ್ರತ್ಯೇಕವಾದಿ ಉಗ್ರರು ಚೀನಾದ ಒಳನುಸುಳುವುದನ್ನು ತಡೆಯಲು ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಚೀನಾ ರಚಿಸುತ್ತಿರುವ ಮೂರನೇ ಕೌಂಟಿ ಇದಾಗಿದ್ದು, ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಮತ್ತು ಅಫ್ಗಾನಿಸ್ತಾನದ ಗಡಿಯಂತಹ ಆಯಕಟ್ಟಿನ ಪ್ರದೇಶದಲ್ಲಿ ಚೀನಾ ತನ್ನ ಆಡಳಿತ ಬಲಪಡಿಸುತ್ತಿರುವುದು ಮಹತ್ವ ಪಡೆದಿದೆ.

ಕ್ಸಿನ್‌ಜಿಯಾಂಗ್ ಉಯ್ಗರ್ ಸ್ವಾಯತ್ತ ಪ್ರದೇಶದ ಸ್ಥಳೀಯ ಸರ್ಕಾರವು ಮಾರ್ಚ್ 26ರಂದು ಕೌಂಟಿ ರಚನೆಯ ಬಗ್ಗೆ ಘೋಷಿಸಿದೆ. ಆದರೆ, ಕೌಂಟಿ ವ್ಯಾಪ್ತಿಗೆ ಬರುವ ನಿರ್ದಿಷ್ಟ ಗಡಿಗಳನ್ನು ಸ್ಪಷ್ಟಪಡಿಸಿಲ್ಲ.

ಕಳೆದ ವರ್ಷ ‘ಹೆಯಾನ್’ ಮತ್ತು ‘ಹೆಕಾಂಗ್’ ಹೆಸರಿನ ಕೌಂಟಿಗಳನ್ನು ಚೀನಾ ರಚಿಸಿದಾಗ ಅದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಅಕ್ಸಾಯ್ ಚಿನ್‌ನಲ್ಲಿ ಚೀನಾ ಅಕ್ರಮವಾಗಿ ವಶಪಡಿಸಿಕೊಂಡಿದೆ ಎಂದು ಭಾರತ ಪ್ರತಿಪಾದಿಸುತ್ತಿರುವ ಪ್ರದೇಶದ ಜಾಗವನ್ನು ಹೆಯಾನ್ ಕೌಂಟಿ ಒಳಗೊಂಡಿದೆ ಎಂದೂ ಆರೋಪಿಸಿತ್ತು ಎಂಬುದು ಗಮನಾರ್ಹ.

ಪೆಜೆಶ್ಕಿಯಾನ್ ಜೊತೆ ಪುಟಿನ್ ಮಾತುಕತೆ

ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರ ಜೊತೆ ಭಾನುವಾರ ದೂರವಾಣಿ ಸಂಭಾಷಣೆ ನಡೆಸಿದರು.

ಇಸ್ಲಾಮಾಬಾದ್‌ನಲ್ಲಿ ನಡೆದ ಇರಾನ್ ಮತ್ತು ಅಮೆರಿಕ ನಡುವಿನ ಮಾತುಕತೆಯ ಕುರಿತು ಉಭಯ ನಾಯಕರು ಚರ್ಚೆ ನಡೆಸಿದರು.

‘ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪಿಸುವ ಪ್ರಯತ್ನದಲ್ಲಿ ಮಧ್ಯಸ್ಥಿಕೆ ವಹಿಸಲು ಸಿದ್ಧವಿರುವುದಾಗಿ ಪುಟಿನ್ ತಿಳಿಸಿದ್ದಾರೆ’ ಎಂದು ಕ್ರೆಮ್ಲಿನ್ ತಿಳಿಸಿದೆ.

‘ಇರಾನ್‌ಗೆ ಶಸ್ತ್ರಾಸ್ತ್ರ ಕಳುಹಿಸಿದರೆ ಚೀನಾಕ್ಕೆ ಶೇ 50ರಷ್ಟು ಸುಂಕ’

ವಾಷಿಂಗ್ಟನ್ (ಎಪಿ): ‘ಇರಾನ್‌ಗೆ ಶಸ್ತ್ರಾಸ್ತ್ರ ಮಾರಾಟ ಮಾಡಿದರೆ, ಆ ದೇಶಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಶೇಕಡ 50 ರಷ್ಟು ಸುಂಕ ವಿಧಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ. ಚೀನಾವನ್ನು ಗುರಿಯಾಗಿರಿಸಿಕೊಂಡೇ ಈ ಹೇಳಿಕೆ ನೀಡಿದ್ದಾರೆ ಎಂದು ಹೇಳಲಾಗಿದೆ.

‘ಹೆಗಲ ಮೇಲೆ ಇಟ್ಟು ಉಡಾಯಿಸಬಹುದಾದ ಯುದ್ಧವಿಮಾನ ನಿರೋಧಕ ಕ್ಷಿಪಣಿಗಳನ್ನು ಇರಾನ್‌ಗೆ ಚೀನಾವು ನೀಡಿದೆ ಎಂಬ ಫಾಕ್ಸ್ ನ್ಯೂಸ್ ವರದಿಗೆ ಪ್ರತಿಕ್ರಿಯಿಸಿದ ಅವರು, ಚೀನಾವು ಆ ರೀತಿ ಮಾಡುವುದಿಲ್ಲ ಎಂದು ಭಾವಿಸುತ್ತೇನೆ. ಆ ರೀತಿ ಮಾಡಿದರೆ, ಅವರ ಸರಕುಗಳಿಗೆ ಶೇ 50 ಸುಂಕ ವಿಧಿಸಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ ಮುಂದುವರಿಸುತ್ತೇವೆ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಇರಾನ್–ಅಮೆರಿಕ ನಡುವಣ ಶಾಂತಿ ಮಾತುಕತೆಗೆ ಪಾಕಿಸ್ತಾನವು ಮಧ್ಯಸ್ಥಿಕೆಯನ್ನು ಮುಂದುವರಿಸಲಿದೆ ಎಂದು ಉಪ ಪ್ರಧಾನಿ ಇಶಾಕ್ ದಾರ್ ಭಾನುವಾರ ಹೇಳಿದರು.



ಇಶಾಕ್ ದಾರ್

ಕದನ ವಿರಾಮವನ್ನು ಮುಂದುವರಿಸುವ ಬದ್ಧತೆಯನ್ನು ಉಭಯ ದೇಶಗಳು ಪ್ರದರ್ಶಿಸಬೇಕು ಎಂದು ಮನವಿ ಮಾಡಿದರು. ಅಮೆರಿಕ–ಇರಾನ್ ನಡುವಣ ಶಾಂತಿ ಮಾತುಕತೆಯು ಮುರಿದುಬಿದ್ದ ಬೆನ್ನಲ್ಲೇ ದಾರ್ ಈ ಹೇಳಿಕೆ ನೀಡಿದರು.

‘ನಾನು ಮತ್ತು ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಸೈಯದ್ ಮುನೀರ್ ಅವರು ಹಲವು ಸುತ್ತಿನ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದೆವು’ ಎಂದು ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದರು.

ಅಸೀಮ್ ನಡೆಗೆ ಪ್ರಶಂಸೆ

ಇಸ್ಲಾಮಾಬಾದ್(ಎಎಫ್‌ಪಿ): ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಮಾತುಕತೆಗಾಗಿ ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ಆಯೋಜಿಸಿದ್ದ ಸಭೆಗೆ ಸಂಬಂಧಿಸಿ ಸೇನೆಯ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರ ಪಾತ್ರವೇ ಮುಖ್ಯವಾಗಿತ್ತು.



ಅಸೀಮ್ ಮುನೀರ್

ಇಲ್ಲಿನ ವಿಮಾನನಿಲ್ದಾಣದಲ್ಲಿ ಶನಿವಾರ ಬಂದಿಳಿದ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರನ್ನು ಅಸೀಮ್ ಮುನೀರ್ ಅವರೇ ಸ್ವಾಗತಿಸಿದರು. ಈ ವೇಳೆ ಅವರು ಸಾಮಾನ್ಯ ನಾಗರಿಕನಂತೆ ಬಟ್ಟೆ ಧರಿಸಿ ಗಮನ ಸೆಳೆದಿದ್ದರು.

ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪಿಸುವುದಕ್ಕಾಗಿ ಅಮೆರಿಕ ಹಾಗೂ ಇರಾನ್ ಅನ್ನು ಮುಖಾಮುಖಿಯಾಗಿಸಿ, ನೇರ ಮಾತುಕತೆಗೆ ವೇದಿಕೆ ಕಲ್ಪಿಸುವುದಕ್ಕೆ ಸಂಬಂಧಿಸಿ ಅಸೀಮ್ ಮುನೀರ್ ಅವರ ಶ್ರಮಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆ ವ್ಯಕ್ತವಾಗುತ್ತಿದೆ.

ಮುನೀರ್ ಅವರ ವರ್ಚಸ್ಸು ಹೆಚ್ಚುತ್ತಿದ್ದು, ಪಾಕಿಸ್ತಾನದ ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅವರು ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ಈ ಬೆಳವಣಿಗೆ ತೋರಿಸುತ್ತದೆ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

‘ಮುನೀರ್ ಅವರು ಯೋಧ ಮಾತ್ರವಲ್ಲ ರಾಜನೀತಿಜ್ಞ ಹಾಗೂ ರಾಜತಾಂತ್ರಿಕ’ ಎಂದು ಇಸ್ಲಾಮಾಬಾದ್ ಮೂಲದ ರಾಜಕೀಯ ವಿಶ್ಲೇಷಕ ಕಮರ್ ಚೀಮಾ ಹೇಳುತ್ತಾರೆ.

‘ಜಾಗತಿಕ ಮಟ್ಟದಲ್ಲಿ ಪಾಕಿಸ್ತಾನ ಕುರಿತ ಗ್ರಹಿಕೆಯನ್ನು ಅವರು ಬದಲಾಯಿಸಿದ್ದಾರೆ. ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಪಾಕಿಸ್ತಾನ ವಹಿಸುವ ಪಾತ್ರಕ್ಕೆ ಅವರು ಬಲ ತುಂಬಿದ್ದಾರೆ’ ಎಂದು ಚೀಮಾ ಹೇಳುತ್ತಾರೆ.

ಮಾತುಕತೆ ವಿಫಲ: ತಪ್ಪದ ತಲ್ಲಣ

ಒಂದನೇ ಪುಟದಿಂದ...

ಉಭಯ ದೇಶಗಳ ನಿಯೋಗದ ಪ್ರತಿನಿಧಿಗಳು ಹಲವು ಸುತ್ತು ನೇರ ಮಾತುಕತೆ ನಡೆಸಿದರು. ಎರಡು ವಾರಗಳ ತಾತ್ಕಾಲಿಕ ಕದನ ವಿರಾಮ ಒಪ್ಪಂದಕ್ಕೆ ಸ್ಪಷ್ಟ ರೂಪ ನೀಡಿ ಜಾರಿಗೊಳಿಸುವ ಮೂಲಕ ಪಶ್ಚಿಮ ಏಷ್ಯಾದಲ್ಲಿ ಶಾಂತಿ ಮರುಸ್ಥಾಪಿಸುವ ಆಶಯ ಹೊಂದಿದ್ದ ಸಭೆ ಯಾವುದೇ ನಿರ್ಣಯ ಕೈಗೊಳ್ಳದೇ ಬರ್ಖಾಸ್ತುಗೊಂಡಿತು.

ಒಪ್ಪಂದ ಏರ್ಪಡದೇ ಇರುವುದು ಹೊರ್ಮುಜ್ ಜಲಸಂಧಿಯನ್ನು ತೆರೆಯುವ ಸಾಧ್ಯತೆ ಕ್ಷೀಣಿಸುವಂತೆ ಮಾಡಿದೆ. ಅಲ್ಲದೇ, ಇರಾನ್ ವಿರುದ್ಧದ ದಾಳಿಗಳನ್ನು ಅಮೆರಿಕ ಮತ್ತೆ ಆರಂಭಿಸಲಿದೆಯೇ ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ.

ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ಆಯೋಜನೆಗೊಂಡಿದ್ದ ಸಭೆಯಲ್ಲಿ ಅಮೆರಿಕ ಹಾಗೂ ಇರಾನ್ ಪ್ರತಿನಿಧಿಗಳಲ್ಲದೇ, ಪ್ರಧಾನಿ ಶೆಹಬಾಜ್ ಶರೀಫ್ ಸಹ ಪಾಲ್ಗೊಂಡಿದ್ದರು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವ್ಯಾನ್ಸ್, ‘21 ಗಂಟೆ ಸುದೀರ್ಘ ಮಾತುಕತೆ ನಡೆಸಿದ್ದೇವೆ. ಇರಾನ್ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆದಿರುವುದು ಒಳ್ಳೆ ಸುದ್ದಿ’ ಎಂದರು.

‘ಮಾತುಕತೆ ಬಳಿಕ ಯಾವುದೇ ಒಪ್ಪಂದ ಏರ್ಪಡದಿರುವುದು ಕೆಟ್ಟ ಸುದ್ದಿ. ಹಾಗೆ ನೋಡಿದರೆ, ಇದು ಅಮೆರಿಕಕ್ಕಿಂತ ಇರಾನ್ ಪಾಲಿಗೇ ಹೆಚ್ಚು ಕೆಟ್ಟದಾದ ಸುದ್ದಿ’ ಎಂದು ಹೇಳಿದರು.

ಪಶ್ಚಿಮ ಏಷ್ಯಾ ವ್ಯವಹಾರಗಳ ಕುರಿತ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅಳಿಯ ಹಾಗೂ ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಇದ್ದರು.

ಸುದ್ದಿಗೋಷ್ಠಿ ಬಳಿಕ ವ್ಯಾನ್ಸ್ ನೇತೃತ್ವದ ನಿಯೋಗ ಅಮೆರಿಕ ವಾಯುಪಡೆಯ ವಿಶೇಷ ವಿಮಾನದಲ್ಲಿ ಪ್ರಯಾಣ ಬೆಳೆಸಿತು. ಪಾಕಿಸ್ತಾನ ಉಪ ಪ್ರಧಾನಿ ಇಶಾಕ್ ದಾರ್, ಸೇನೆ ಮುಖ್ಯಸ್ಥ ಅಸೀಮ್ ಮುನೀರ್, ಒಳಾಡಳಿತ ಸಚಿವ ಮೊಹಸಿನ್ ನಕ್ವಿ ಅವರು ನಿಯೋಗವನ್ನು ಬೀಳ್ಕೊಟ್ಟರು.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ನಿಯೋಗದ ನೇತೃತ್ವ ವಹಿಸಿದ್ದರು.

ಎರಡು ವಾರಗಳ ಕದನ ವಿರಾಮ ಘೋಷಣೆಯಾದ ಬಳಿಕ, ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ಕುರಿತು ಮಾತುಕತೆಗಾಗಿ ಈ ಸಭೆ ಆಯೋಜಿಸಲಾಗಿತ್ತು. 1979ರಲ್ಲಿ ನಡೆದ ಇಸ್ಲಾಮಿಕ್ ಕ್ರಾಂತಿ ಬಳಿಕ, ಅಮೆರಿಕ ಹಾಗೂ ಇರಾನ್ ನಡುವೆ ಉನ್ನತ ಮಟ್ಟದ ಹಾಗೂ ನೇರ ಮಾತುಕತೆ ಈಗ ನಡೆದಿದೆ.

ಶಾಂತಿ ಮಾತುಕತೆಗಾಗಿ ಇರಾನ್ 10 ಅಂಶಗಳನ್ನು ಒಳಗೊಂಡ ಪ್ರಸ್ತಾವ ಮುಂದಿಟ್ಟಿತ್ತು.

‘ವಿಪರೀತ ಬೇಡಿಕೆ: ಸಂಧಾನ ವಿಫಲ’

ಒಂದನೇ ಪುಟದಿಂದ...

‘ರಾಜತಾಂತ್ರಿಕ ಪ್ರಕ್ರಿಯೆಗೆ ಎಂದಿಗೂ ಕೊನೆ ಎಂಬುದು ಇರುವುದಿಲ್ಲ’ ಎಂದು ಸಚಿವಾಲಯ ವಕ್ತಾರ ಇಸ್ಮಾಯಿಲ್ ಬಕಾಯ್ ಪ್ರತಿಕ್ರಿಯಿಸಿದ್ದಾರೆ.

‘ಒಂದು ದಿನದ ಮಟ್ಟಿಗೆ ನಡೆದ ಸಭೆಯಿಂದ ಒಪ್ಪಂದವಾಗುತ್ತದೆ ಎಂದು ನಾವು ನಿರೀಕ್ಷಿಸಿಯೇ ಇಲ್ಲ. ಉಭಯ ದೇಶಗಳ ನಡುವೆ ಒಪ್ಪಂದ ಏರ್ಪಡುವಂತೆ ಮಾಡುವ ದಿಸೆಯಲ್ಲಿ ನಮ್ಮ ಪ್ರಯತ್ನ ಮುಂದುವರಿಯಲಿದೆ’ ಎಂದು ಬಕಾಯ್ ಹೇಳಿದ್ದಾರೆ.

‘ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮ, ಹೊರ್ಮುಜ್ ಮೇಲೆ ನಿಯಂತ್ರಣ ಹೊಂದುವುದು ಹಾಗೂ ಮುಟ್ಟುಗೋಲು ಹಾಕಿಕೊಂಡಿರುವ ವಿದೇಶಗಳಲ್ಲಿನ ಇರಾನ್ ಸ್ವತ್ತುಗಳನ್ನು ಬಿಡುಗಡೆ ಮಾಡಬೇಕು ಎಂಬ ಬೇಡಿಕೆಗಳಿಗೆ ಅಮೆರಿಕ ನಿಯೋಗದಿಂದ ಸ್ಪಂದನೆ ಸಿಗದ ಕಾರಣ ಮಾತುಕತೆ ವಿಫಲವಾಗಿದೆ’ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

ಕಚ್ಚಾ ತೈಲ ದರ ಬ್ಯಾರಲ್‌ಗೆ 140 ಡಾಲರ್?

ಒಂದನೇ ಪುಟದಿಂದ...

ಕಳೆದ ವಾರ ಕೆಲವು ವರ್ತಕರು ತಕ್ಷಣಕ್ಕೆ ಲಭ್ಯವಿರುವ ಕಚ್ಚಾ ತೈಲದ ಹಡಗುಗಳಿಗೆ ಬಿಡ್ ಸಲ್ಲಿಸಿದ್ದರೂ, ಎಲ್ಲ ಬಿಡ್‌ಗಳಿಗೆ ಪ್ರತಿಯಾಗಿ ತೈಲ ಲಭ್ಯ ಆಗಿಲ್ಲ ಎಂದು ಕೂಡ ವರದಿಗಳು ಹೇಳಿವೆ. ತಕ್ಷಣಕ್ಕೆ ಲಭ್ಯವಿರುವ ತೈಲವನ್ನು ಖರೀದಿಸಲು ತೈಲ ಸಂಸ್ಕರಣಾ ಘಟಕಗಳು ಹಲವೆಡೆ ಅವಕಾಶ ಅರಸುತ್ತಿವೆ ಎನ್ನಲಾಗಿದೆ.

ಶನಿವಾರ ಮತ್ತು ಭಾನುವಾರ ಮಾರುಕಟ್ಟೆ ರಜೆ ಇದ್ದ ಕಾರಣಕ್ಕೆ, ತೈಲ ಬೆಲೆಯಲ್ಲಿ ಏರಿಳಿತಗಳು ಕಂಡುಬಂದಿಲ್ಲ. ಆದರೆ ಸೋಮವಾರ ಬೆಳಿಗ್ಗೆ ಮಾರುಕಟ್ಟೆ ಚಟುವಟಿಕೆ ಆರಂಭ ಆಗುತ್ತಿದ್ದಂತೆ, ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಏರಿಳಿತಗಳು ಕಾಣುವ ಸಾಧ್ಯತೆ ಇದೆ.

‘ಹೊರ್ಮುಜ್’ಗೆ ದಿಗ್ಬಂಧನ’

ಒಂದನೇ ಪುಟದಿಂದ...

ಶಾಂತಿ ಒಪ್ಪಂದ ವಿಫಲಗೊಂಡ ಬೆನ್ನಲ್ಲೇ ‘ಟ್ರೂತ್ ಸೋಷಿಯಲ್’ ನಲ್ಲಿ ಟ್ರಂಪ್ ಈ ವಿಷಯ ತಿಳಿಸಿದ್ದಾರೆ.

‘ವಿಶ್ವದ ಅತ್ಯಂತ ಬಲಶಾಲಿಯಾದ ಅಮೆರಿಕ ನೌಕಾಪಡೆಯು ತಕ್ಷಣದಿಂದಲೇ ಹೊರ್ಮುಜ್‌ಗೆ ಪ್ರವೇಶಿಸುವ ಹಾಗೂ ತೆರಳುವ ಎಲ್ಲ ಹಡಗುಗಳ ಸಂಚಾರಕ್ಕೆ ನಿರ್ಬಂಧ ಹೇರಲಿದೆ’ ಎಂದು ತಿಳಿಸಿದ್ದಾರೆ.

ಹೊರ್ಮುಜ್ ಮೂಲಕ ಸಾಗುವ ಹಡಗುಗಳಿಗೆ ಟೋಲ್ ಶುಲ್ಕ ವಿಧಿಸುವ ವಿಚಾರಕ್ಕೆ ಟ್ರಂಪ್ ಮೊದಲಿನಿಂದಲೂ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

‘ಇರಾನ್ ಟೋಲ್ ಪಾವತಿಸಿ, ಅಂತರರಾಷ್ಟ್ರೀಯ ಜಲಮಾರ್ಗದ ಮೂಲಕ ಸಾಗುವ ಎಲ್ಲ ಹಡಗುಗಳ ಸಂಚಾರಕ್ಕೆ ನಿರ್ಬಂಧ ವಿಧಿಸುವಂತೆ ನೌಕಾಪಡೆಗೆ ಸೂಚನೆ ನೀಡಿದ್ದೇನೆ. ಯಾರು ಕೂಡ ಸುರಕ್ಷಿತವಾಗಿ ಪ್ರಯಾಣಿಸಲು ಶುಲ್ಕ ಪಾವತಿಸಬೇಕಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಬೆದರಿಕೆಗೆ ಮಣಿಯಲ್ಲ’

ಟೆಹರಾನ್ (ಎಎಫ್‌ಪಿ): ‘ಅಮೆರಿಕದ ನೌಕಾ ದಿಗ್ಬಂಧನದ ಬೆದರಿಕೆಗಳಿಗೆ ಮಣಿಯುವುದಿಲ್ಲ, ಅವರು ಹೋರಾಡಿದರೆ ನಾವೂ ಹೋರಾಡುತ್ತೇವೆ. ಅವರು ಬೇಕಾದರೆ ನಮ್ಮ ಇಚ್ಛಾಶಕ್ತಿ ಪರೀಕ್ಷಿಸಲಿ’ ಎಂದು ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಎಚ್ಚರಿಕೆ ನೀಡಿದರು.



ಮುಂಬೈ ಚಾಲೆಂಜ್ ಗೆದ್ದ ಬೆಂಗಳೂರು

ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ರಜತ್ ಪಾಟೀದಾರ್ ಅರ್ಧಶತಕಗಳ ಭರಾಟೆ • ರುದರ್‌ಫೋರ್ಡ್ ಅಬ್ಬರ

ಮುಂಬೈ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗೆಲುವಿನ ಹಾದಿಗೆ ಮರಳಿತು. ಆದರೆ ಮುಂಬೈ ಇಂಡಿಯನ್ಸ್ ಸೋಲಿನ 'ಹ್ಯಾಟ್ರಿಕ್' ಮಾಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಒಟ್ಟು 462 ರನ್‌ಗಳು ಹರಿದವು. ಈ ಪ್ರವಾಹದಲ್ಲಿ ಆರ್‌ಸಿಬಿಯು 18 ರನ್‌ಗಳ ಅಂತರದಿಂದ ಗೆಲುವಿನ ದಡ ಸೇರಿತು. ಟೂರ್ನಿಯಲ್ಲಿ ರಜತ್ ಪಾಟೀದಾರ್ ಬಳಗವು ಆಡಿದ ನಾಲ್ಕು ಪಂದ್ಯಗಳಲ್ಲಿ ಮೂರನೇ ಜಯ ಇದಾಗಿದೆ. ಎರಡು ದಿನಗಳ ಹಿಂದಷ್ಟೇ ರಾಜಸ್ಥಾನ ರಾಯಲ್ಸ್ ಎದುರು ಪರಾಭವಗೊಂಡಿತ್ತು.

ಆರ್‌ಸಿಬಿಯ ಆರಂಭಿಕ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ (53 ರನ್), ಫಿಲ್ ಸಾಲ್ಟ್ (78 ರನ್) ಮತ್ತು ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಾಯಕ ರಜತ್ ಪಾಟೀದಾರ್ (53 ರನ್) ಅವರ ಆಟದಿಂದ ಆರ್‌ಸಿಬಿಯು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 240 ರನ್ ಗಳಿಸಿತು. ತಂಡದ ಗರಿಷ್ಠ ಮೊತ್ತ ಗಳಿಕೆಯ ಪಟ್ಟಿಯಲ್ಲಿ ಇದು ಆರನೇ ಸ್ಥಾನ ಪಡೆಯಿತು. ವಾಂಖೆಡೆಯಲ್ಲಿ ಆರ್‌ಸಿಬಿಯ ಅತ್ಯಧಿಕ ಮೊತ್ತವೂ ಇದಾಗಿದೆ.

ಗುರಿ ಬೆನ್ನಟ್ಟಿದ ಮುಂಬೈ ಕೂಡ ದಿಟ್ಟತನದಿಂದ ಆಡಿತು. ರಿಯಾನ್ ರಿಕೆಲ್ಟನ್ (37; 22ಎ) ಮತ್ತು ರೋಹಿತ್ ಶರ್ಮಾ (19 ರನ್) ಅವರು ಉತ್ತಮ ಆರಂಭ ನೀಡಿದರು. ಕೇವಲ 7 ಓವರ್‌ಗಳಲ್ಲಿ 72 ರನ್ ಸೇರಿಸಿದರು. ಆದರೆ ರಿಕೆಲ್ಟನ್ ವಿಕೆಟ್ ಪಡೆದ ಸುಯಶ್ ಶರ್ಮಾ ಮಿಂಚಿದರು. ರೋಹಿತ್ ಗಾಯಗೊಂಡು ನಿವೃತ್ತಿಯಾದರು. ಇದು ತಂಡದ ಹಿನ್ನಡೆಗೆ ಕಾರಣವಾಯಿತು. ಸೂರ್ಯಕುಮಾರ್ ಯಾದವ್ (33; 22ಎ) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (40 ರನ್) ಅವರ ಪ್ರಯತ್ನ ಸಾಕಾಗಲಿಲ್ಲ.

ಕೊನೆಯ ಹಂತದ ಓವರ್‌ಗಳಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದ ಶೆರ್ಫೇನ್ ರುದರ್‌ಫೋರ್ಡ್ (ಔಟಾಗದೇ 71; 31ಎ, 4x1, 6x9) ಪ್ರೇಕ್ಷಕರನ್ನು ರಂಜಿಸಿದರು. ಆದರೆ ತಂಡಕ್ಕೆ ಗೆಲುವು ಒಲಿಯಲಿಲ್ಲ. ರುದರ್‌ಫೋರ್ಡ್ ಅವರ ಪ್ರಹಾರದಿಂದ ತಪ್ಪಿಸಿಕೊಳ್ಳಲು ಆರ್‌ಸಿಬಿ ಬೌಲರ್‌ಗಳು ಮಾಡಿದ ತಂತ್ರಗಾರಿಕೆಗಳು ಫಲಿಸಲಿಲ್ಲ. ಮುಂಬೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 222 ರನ್ ಗಳಿಸಿತು.


ರಜತ್ ಪಾಟೀದಾರ್


ಬೂಮ್ರಾಗೆ ಒಲಿಯದ ವಿಕೆಟ್

ಮುಂಬೈ ಇಂಡಿಯನ್ಸ್ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಈ ಟೂರ್ನಿಯಲ್ಲಿ ನಾಲ್ಕು ಪಂದ್ಯಗಳಿಂದ ಒಟ್ಟು 15 ಓವರ್ ಬೌಲಿಂಗ್ ಮಾಡಿದ್ದಾರೆ. ಆದರೂ ಅವರಿಗೆ ಈವರೆಗೆ ಒಂದೂ ವಿಕೆಟ್ ಲಭಿಸಿಲ್ಲ.

ರಸೀಕ್ ಧಾರ್ 2.5 ಓವರ್ ಎಸೆದಿದ್ದಾಗ ಕಾಲು ನೋವಿನಿಂದ ಡಗ್‌ಔಟ್‌ಗೆ ಮರಳಿದರು. ಅವರ ಬದಲಿಗೆ ರೊಮಾರಿಯೊ ಶೆಫರ್ಡ್ ಬೌಲ್ ಮಾಡಿದರು.

ವಿರಾಟ್–ಸಾಲ್ಟ್ ಮಿಂಚು: ವಿರಾಟ್ ಮತ್ತು ಸಾಲ್ಟ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 120 ರನ್ ಸೇರಿಸಿದರು. ಸಾಲ್ಟ್ ಅವರು ಕಳೆದ ಮೂರು ಪಂದ್ಯಗಳಲ್ಲಿ (8, 46 ಮತ್ತು 0) ವೈಫಲ್ಯ ಅನುಭವಿಸಿದ್ದರು. ಆದರೆ ಇಲ್ಲಿ ಮಾತ್ರ ಆರಂಭದಿಂದಲೇ ಬೌಲರ್‌ಗಳನ್ನು ದಂಡಿಸಿದರು. 25 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇನ್ನೊಂದೆಡೆ ಕೊಹ್ಲಿ ರನ್ ಗಳಿಸಲು ಹೆಚ್ಚಿನ ಧಾವಂತ ತೋರಿಸಲಿಲ್ಲ. 11ನೇ ಓವರ್‌ನಲ್ಲಿ ಶಾರ್ದೂಲ್ ಠಾಕೂರ್ ಅವರು ಈ ಜೊತೆಯಾಟ ಮುರಿಯುವಲ್ಲಿ ಯಶಸ್ವಿಯಾದರು. ಅವರ ಎಸೆತವನ್ನು ಹೊಡೆದ ಸಾಲ್ಟ್ ಹಾರ್ದಿಕ್ ಪಾಂಡ್ಯಗೆ ಕ್ಯಾಚಿತ್ತರು.

ಕ್ರೀಸ್‌ಗೆ ಬಂದ ರಜತ್ ಕೂಡ ಬಿರುಸಿನ ಆಟ ಆರಂಭಿಸಿದರು. ಆಗಲೂ ಕೊಹ್ಲಿ ಸಮಾಧಾನ ಚಿತ್ತದಿಂದ ಇದ್ದರು. ಹೆಚ್ಚು ಬ್ಯಾಟಿಂಗ್‌ನತ್ತ ಪ್ರಯತ್ನಿಸಲಿಲ್ಲ. ರಜತ್ ಅವರಿಗೇ ಇನಿಂಗ್ಸ್ ಹೊಣೆ ಬಿಟ್ಟರು. ಅದಕ್ಕೆ ತಕ್ಕಂತೆ 265ರ ಸ್ಟ್ರೈಕ್‌ರೇಟ್‌ನಲ್ಲಿ ರಜತ್ ರನ್ ಸೂರೆ ಮಾಡಿದರು. ಐದು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಸಿಡಿಸಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ರಜತ್ ಮತ್ತು ವಿರಾಟ್ 65 ರನ್ (23ಎ) ಸೇರಿಸಿದರು. 37 ಎಸೆತಗಳಲ್ಲಿ ವಿರಾಟ್ ಅರ್ಧಶತಕ ಹೊಡೆದರು. ಅವರು 15ನೇ ಓವರ್‌ನಲ್ಲಿ ಔಟಾದರು. ರಜತ್ 17 ಎಸೆತಗಳಲ್ಲಿ 50ರ ಗಡಿ ದಾಟಿದರು. ಅವರು ಔಟಾದ ಬಳಿಕ ಕ್ರೀಸ್‌ಗೆ ಬಂದ ಟಿಮ್ ಡೇವಿಡ್ 16 ಎಸೆತಗಳಲ್ಲಿ 34 ರನ್ ಗಳಿಸಿದರು. ಅದರಿಂದಾಗಿ ಮೊತ್ತವು ದೊಡ್ಡದಾಗಿ ಬೆಳೆಯಿತು.



ಆರ್‌ಸಿಬಿ ತಂಡದ ಆರಂಭಿಕ ಜೋಡಿ ವಿರಾಟ್ ಕೊಹ್ಲಿ–ಫಿಲಿಪ್ ಸಾಲ್ಟ್ ಚಿತ್ರಗಳು: ಎಎಫ್‌ಪಿ/ಪಿಟಿಐ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 4ಕ್ಕೆ240 (20 ಓವರ್‌ಗಳಲ್ಲಿ)
ಸಾಲ್ಟ್ ಸಿ ಹಾರ್ದಿಕ್ ಬಿ ಶಾರ್ದೂಲ್ 78 (36ಎ, 4x6, 6x6)
ವಿರಾಟ್ ಸಿ ಸೂರ್ಯಕುಮಾರ್ ಬಿ ಹಾರ್ದಿಕ್ 50 (38ಎ, 4x5, 6x1)
ರಜತ್ ಸಿ ತಿಲಕ್ ಬಿ ಸ್ಯಾಂಟನರ್ 53 (20ಎ, 4x4, 6x5)
ಟಿಮ್ ಡೇವಿಡ್ ಔಟಾಗದೇ 34 (16ಎ, 4x2, 6x3)
ಜಿತೇಶ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 10 (9ಎ, 4X1)
ರೊಮಾರಿಯೊ ಶೆಫರ್ಡ್ ಔಟಾಗದೇ 2 (2ಎ)
ಇತರೆ: 13 (ಲೆಗ್‌ಬೈ 1, ವೈಡ್ 11, ನೋಬಾಲ್ 1)
ವಿಕೆಟ್ ಪತನ: 1–120 (ಫಿಲಿಪ್ ಸಾಲ್ಟ್; 10.5), 2–185 (ವಿರಾಟ್ ಕೊಹ್ಲಿ; 14.4), 3–194 (ರಜತ್ ಪಾಟೀದಾರ್; 15.6), 4–231 (ಜಿತೇಶ್ ಶರ್ಮಾ; 19.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–50–1, ಹಾರ್ದಿಕ್ ಪಾಂಡ್ಯ 4–0–39–1, ಜಸ್‌ಪ್ರೀತ್ ಬೂಮ್ರಾ 4–0–35–0, ಮಿಚೆಲ್ ಸ್ಯಾಂಟನರ್ 4–0–43–1, ಮಯಂಕ್ ಮಾರ್ಕಂಡೆ 2–0–40–0, ಶಾರ್ದೂಲ್ ಠಾಕೂರ್ 2–0–32–1

ಮುಂಬೈ ಇಂಡಿಯನ್ಸ್: 5ಕ್ಕೆ222 (20 ಓವರ್‌ಗಳಲ್ಲಿ)
ರಿಕೆಲ್ಟನ್ ಸಿ ಭುವನೇಶ್ವರ್ ಬಿ ಸುಯಶ್ 37 (22ಎ, 4x3, 6x3)
ರೋಹಿತ್ ಶರ್ಮಾ ಗಾಯಾಳಾಗಿ ನಿವೃತ್ತಿ 19 (13ಎ, 4x2, 6x1)
ಸೂರ್ಯಕುಮಾರ್ ಸಿ ರಸೀಕ್ ಬಿ ಕೃಣಾಲ್ 33 (22ಎ, 4x5)
ತಿಲಕ್ ಸಿ ಡಫಿ ಬಿ ಸುಯಶ್ 1 (3ಎ)
ಹಾರ್ದಿಕ್ ಸಿ ಶೆಫರ್ಡ್ ಬಿ ಡಫಿ 40 (22ಎ, 4x6, 6x1)
ಶೆರ್ಫೇನ್ ರುದರ್‌ಫೋರ್ಡ್ ಔಟಾಗದೇ 71 (31ಎ, 4x1, 6x9)
ನಮನ್ ಸಿ ರಜತ್ ಬಿ ರಸೀಕ್ 1 (2ಎ)
ಸ್ಯಾಂಟ್ನರ್ ಔಟಾಗದೇ 8 (6ಎ, 4x1)
ಇತರೆ: 12 (ಲೆಗ್‌ಬೈ 2, ವೈಡ್ 9, ನೋಬಾಲ್ 1)
ವಿಕೆಟ್ ಪತನ: 1–72 (ರಿಯಾನ್ ರಿಕೆಲ್ಟನ್, 7.1), 2–74 (ತಿಲಕ್ ವರ್ಮಾ, 7.5), 3–121 (ಸೂರ್ಯಕುಮಾರ್ ಯಾದವ್, 12.2), 4–145 (ಹಾರ್ದಿಕ್ ಪಾಂಡ್ಯ, 14.4), 5–154 (ನಮನ್ ಧೀರ್, 15.3)
ಬೌಲಿಂಗ್: ಜೇಕಬ್ ಡಫಿ 4–0–58–1; ಭುವನೇಶ್ವರ್ ಕುಮಾರ್ 4–0–38–0; ರಸೀಕ್ ಸಲಾಮ್ ಧಾರ್ 2.5–0–23–1; ಕೃಣಾಲ್ ಪಾಂಡ್ಯ 4–0–26–1; ಸುಯಶ್ ಶರ್ಮಾ 4–0–47–2; ರೊಮಾರಿಯೊ ಶೆಫರ್ಡ್ 1.1–0–28–0
ಪಂದ್ಯದ ಆಟಗಾರ: ಫಿಲಿಪ್ ಸಾಲ್ಟ್.

ಗಿಲ್, ಬಟ್ಲರ್ ಅಮೋಘ ಬ್ಯಾಟಿಂಗ್: ಜಿಟಿ ಜಯಭೇರಿ

ಪ್ರಸಿದ್ಧ ದಾಳಿ: ಲಖನೌ ದೂಳೀಪಟ

ಲಖನೌ (ಪಿಟಿಐ): ಕರ್ನಾಟಕದ ಪ್ರಸಿದ್ಧಕೃಷ್ಣ ಅವರ ಅಮೋಘ ಬೌಲಿಂಗ್ ಬಲದಿಂದ ಗುಜರಾತ್ ಟೈಟನ್ಸ್ ತಂಡವು ಭಾನುವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಜಯಿಸಿತು.

ಏಕನಾ ಕ್ರೀಡಾಂಗಣದಲ್ಲಿ ಬೆಂಗಳೂರಿನ ವೇಗದ ಬೌಲರ್ ಪ್ರಸಿದ್ಧ (4-0-28-4) ಅವರ ನಿಖರ ದಾಳಿಯ ಮುಂದೆ ಆತಿಥೇಯ ಲಖನೌ ಸೂಪರ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 164 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ಗುರಿ ಬೆನ್ನಟ್ಟಿದ ಗುಜರಾತ್ ತಂಡವು 7 ವಿಕೆಟ್‌ಗಳಿಂದ ಜಯಿಸಿತು. ಟೂರ್ನಿಯಲ್ಲಿ ಪ್ರಸಿದ್ಧ ನಾಲ್ಕು ಪಂದ್ಯಗಳಿಂದ ಒಟ್ಟು 10 ವಿಕೆಟ್ ಗಳಿಸಿದರು.

ನಾಯಕ ಶುಭಮನ್ ಗಿಲ್ (56; 40ಎ, 4x6, 6x1) ಮತ್ತು ಜೋಸ್ ಬಟ್ಲರ್ (60; 37ಎ, 4x11) ಅಮೋಘ ಬ್ಯಾಟಿಂಗ್ ಮೂಲಕ ತಂಡದ ಗೆಲುವಿನ ಹಾದಿಯನ್ನು ಸರಳಗೊಳಿಸಿದರು. 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 165 ರನ್ ಗಳಿಸಿದ ಗುಜರಾತ್ ಜಯಭೇರಿ ಬಾರಿಸಿತು. ಗಿಲ್ ಮತ್ತು ಬಟ್ಲರ್ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಗಳಿಸಿದರು.

ಟಾಸ್ ಗೆದ್ದ ಟೈಟನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಕಗಿಸೊ ರಬಾಡ ಹಾಕಿದ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಮಿಚೆಲ್ ಮಾರ್ಷ್ (11 ರನ್) ಅವರು ಔಟಾದರು. ಇದಾಗಿ ಎರಡು ಓವರ್‌ಗಳ ನಂತರ ಮೊಹಮ್ಮದ್ ಸಿರಾಜ್ ಅವರು ರಿಷಭ್ ಪಂತ್ (18; 11ಎ) ವಿಕೆಟ್ ಕಬಳಿಸಿ ಮತ್ತೊಂದು ಪೆಟ್ಟು ಕೊಟ್ಟರು. ಈ ಸಂದರ್ಭವನ್ನು ಪ್ರಸಿದ್ಧ ಸಮರ್ಥವಾಗಿ ಬಳಸಿಕೊಂಡರು. ಪವರ್‌ಪ್ಲೇ ನಂತರದ ಓವರ್‌ನಲ್ಲಿ ಆರಂಭಿಕ ಬ್ಯಾಟರ್ ಏಡನ್ ಮರ್ಕರಂ (30; 21ಎ, 4X5, 6X1) ವಿಕೆಟ್ ಪಡೆದು ತಮ್ಮ ಖಾತೆ ತೆರೆದರು. ಆಯುಷ್ ಬಡೋನಿ (9ರನ್), ನಿಕೊಲಸ್ ಪೂರನ್ (19 ರನ್) ಹಾಗೂ ಕಳೆದ ಪಂದ್ಯದಲ್ಲಿ ಅಬ್ಬರಿಸಿದ್ದ ಮುಕುಲ್ ಚೌಧರಿ (18 ರನ್) ಅವರಿಗೆ ಡಗ್‌ಔಟ್ ದಾರಿ ತೋರಿಸಿದರು. ಇದರಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.


ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಪ್ರಸಿದ್ಧ ಕೃಷ್ಣ (ಮಧ್ಯ) ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 8ಕ್ಕೆ164 (ಏಡನ್ ಮರ್ಕರಂ 30, ರಿಷಭ್ ಪಂತ್ 18, ನಿಕೊಲಸ್ ಪೂರನ್ 19, ಅಬ್ದುಲ್ ಸಮದ್ 18, ಮುಕುಲ್ ಚೌಧರಿ 18, ಜಾರ್ಜ್ ಲಿಂಡೆ 16, ಮೊಹಮ್ಮದ್ ಶಮಿ ಔಟಾಗದೇ 12, ಅಶೋಕ್ ಶರ್ಮಾ 32ಕ್ಕೆ2, ಪ್ರಸಿದ್ಧಕೃಷ್ಣ 28ಕ್ಕೆ4) ಗುಜರಾತ್ ಟೈಟನ್ಸ್: 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 165 (ಸಾಯಿ ಸುದರ್ಶನ್ 15, ಶುಭಮನ್ ಗಿಲ್ 56, ಜೋಸ್ ಬಟ್ಲರ್ 60, ವಾಷಿಂಗ್ಟನ್ ಸುಂದರ್ ಔಟಾಗದೇ 21, ರಾಹುಲ್ ತೆವಾಟಿಯಾ ಔಟಾಗದೇ 10, ಮೊಹಮ್ಮದ್ ಶಮಿ 36ಕ್ಕೆ1, ಪ್ರಿನ್ಸ್ ಯಾದವ್ 31ಕ್ಕೆ1, ದಿಗ್ವೇಶ್ ಸಿಂಗ್ ರಾಠಿ 31ಕ್ಕೆ1) ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 7 ವಿಕೆಟ್ ಜಯ.
ಪಂದ್ಯದ ಆಟಗಾರ: ಪ್ರಸಿದ್ಧ ಕೃಷ್ಣ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಆರ್	4	4	0	0	8	2.055
ಪಿಬಿಕೆಎಸ್	4	3	0	1	7	0.720
ಆರ್‌ಸಿಬಿ	4	3	1	0	6	1.148
ಡಿಸಿ	4	2	2	0	4	0.322
ಜಿಟಿ	4	2	2	0	4	0.322
ಎಲ್‌ಎಸ್‌ಜಿ	4	2	2	0	4	- 0.427
ಎಸ್‌ಆರ್‌ಎಚ್	4	1	3	0	2	- 0.024
ಎಂಐ	4	1	3	0	2	- 0.772
ಸಿಎಸ್‌ಕೆ	4	1	3	0	2	- 1.532
ಕೆಕೆಆರ್	4	0	3	1	1	- 1.315

ಆರೇಂಜ್ ಕ್ಯಾಪ್–ವೈಭವ್ ಸೂರ್ಯವಂಶಿ, ಆರ್‌ಆರ್ (200 ರನ್)
ಪರ್ಪಲ್ ಕ್ಯಾಪ್–ಪ್ರಸಿದ್ಧ ಕೃಷ್ಣ, ಜಿಟಿ (10 ವಿಕೆಟ್)

ಕೃಷಿಕ್‌ಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕೃಷಿಕ್ ಎಂ. ಅವರು ರಾಂಚಿಯಲ್ಲಿ ಭಾನುವಾರ ನಡೆದ ಇಂಡಿಯನ್ ಅಥ್ಲೆಟಿಕ್ಸ್ ಸರಣಿ–4ರ ಪುರುಷರ 110 ಮೀ. ಹರ್ಡಲ್ಸ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಪ್ರದರ್ಶನದೊಂದಿಗೆ ಅಗ್ರಸ್ಥಾನ ಪಡೆದರು.

ರಿಲಾಯನ್ಸ್ ಸ್ಪೋರ್ಟ್ಸ್ ಅನ್ನು ಪ್ರತಿನಿಧಿಸಿದ್ದ 22 ವರ್ಷ ವಯಸ್ಸಿನ ಕೃಷಿಕ್ ಅವರು 13.72 ಸೆಕೆಂಡುಗಳಲ್ಲಿ ಗುರಿ ತಲುಪಿದರು. ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ ಶಿರ್ಸೆ, ಅನುಭವಿ ಸಿದ್ಧಾಂತ್ ಟಿ. ಅವರು ಗೈರಾಗಿದ್ದರು. ಹೀಗಾಗಿ, ಕೃಷಿಕ್ ಅವರಿಗೆ ಪ್ರಬಲ ಪೈಪೋಟಿ ಕಂಡುಬರಲಿಲ್ಲ.

20 ವರ್ಷದೊಳಗಿನ ಮಹಿಳೆಯರ ವಿಭಾಗದಲ್ಲಿ ವೈಷ್ಣವಿ ರಾವಲ್ ಅವರು 2 ನಿ., 10.25 ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಮೊದಲಿಗರಾದರು.

ರಮ್ಯಶ್ರೀ ಜೈನ್ ಅವರು ಮಹಿಳೆಯರ ಜಾವೆಲಿನ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಏಕೈಕ ಅಥ್ಲೀಟ್ ಆಗಿದ್ದರು. ಅವರು ಭರ್ಜಿಯನ್ನು 49.80 ಮೀ. ದೂರಕ್ಕೆ ಎಸೆದರು.

ನವದೆಹಲಿಯಲ್ಲಿ ಶನಿವಾರ ನಡೆದ ಇಂಡಿಯನ್ ಅಥ್ಲೆಟಿಕ್ಸ್ ಸರಣಿ–3ರಲ್ಲಿ ಭಾಗವಹಿಸಿದ್ದ ಬಹುತೇಕ ತಾರಾ ಅಥ್ಲೀಟ್‌ಗಳು ಈ ಕೂಟಕ್ಕೆ ಗೈರಾದರು




ಕಾಲ್ಚಳಕ... ಎಕ್ಸ್ ಚಿತ್ರ

ಕೋಲ್ಕತ್ತದ ಕಿಶೋರ್ ಭಾರತಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸೂಪರ್ ಲೀಗ್‌ನ ಪಂದ್ಯದಲ್ಲಿ ಇಂಟರ್ ಕಾಶಿ (ಕೆಂಪು) ಮತ್ತು ಮೊಹಮ್ಮಡನ್ ಎಸ್‌ಸಿ ತಂಡಗಳ ಆಟಗಾರರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು. ಈ ಪಂದ್ಯವನ್ನು ಇಂಟರ್ ಕಾಶಿ ತಂಡವು 1–0 ಗೋಲಿನಿಂದ ಜಯಿಸಿತು

ಸನ್‌ರೈಸರ್ಸ್–ರಾಜಸ್ಥಾನ ರಾಯಲ್ಸ್ ಹಣಾಹಣಿ ಇಂದು • ಅಜೇಯ ಓಟದತ್ತ ಪರಾಗ್ ಪಡೆ ಚಿತ್ತ

ಸೂರ್ಯವಂಶಿ– ಅಭಿಷೇಕ್ ಮುಖಾಮುಖಿ


ಅಭಿಷೇಕ್ ಶರ್ಮಾ ತಾಲೀಮು 'ಎಕ್ಸ್' ಚಿತ್ರ

ಹೈದರಾಬಾದ್ (ಪಿಟಿಐ): ಅಜೇಯ ಓಟವನ್ನು ಮುಂದುವರಿಸುವ ಛಲದೊಂದಿಗೆ ರಾಜಸ್ಥಾನ ರಾಯಲ್ಸ್ ತಂಡವು ಸೋಮವಾರ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯಲಿದೆ. ಪ್ರಸಕ್ತ ಕಾಲಘಟ್ಟದ ಇಬ್ಬರು ಸಿಡಿಲಬ್ಬರದ ಬ್ಯಾಟರ್‌ಗಳಾದ ವೈಭವ್ ಸೂರ್ಯವಂಶಿ ಮತ್ತು ಅಭಿಷೇಕ್ ಶರ್ಮಾ ಅವರು ಇಲ್ಲಿ ಮುಖಾಮುಖಿಯಾಗಲಿದ್ದಾರೆ.

ಮ್ಯಾಟ್ ಹೆನ್ರಿ, ಜಸ್‌ಪ್ರೀತ್ ಬೂಮ್ರಾ, ಜೋಶ್ ಹೇಜಲ್‌ವುಡ್, ಭುವನೇಶ್ವರ್ ಕುಮಾರ್ ಅವರಂತಹ ನುರಿತ ಬೌಲರ್‌ಗಳ ಎಸೆತಗಳಲ್ಲಿ ಸಿಕ್ಸರ್ ಹೊಡೆದು ಸುದ್ದಿಯಾಗಿರುವ 15 ವರ್ಷದ ವೈಭವ್ ಅವರೀಗ ಹೈದರಾಬಾದ್ ತಂಡದ ಬೌಲರ್‌ಗಳ ಸವಾಲು ಎದುರಿಸಲು ಸಿದ್ಧರಾಗಿದ್ದಾರೆ. ವೈಭವ್ ಮತ್ತು ಯಶಸ್ವಿ ಜೈಸ್ವಾಲ್ ಅವರು ಉತ್ತಮ ಆರಂಭ ನೀಡುತ್ತಿರುವುದು ರಾಜಸ್ಥಾನ ತಂಡದ ಗೆಲುವುಗಳಿಗೆ ನೆರವಾಗುತ್ತಿದೆ. ಪವರ್‌ಪ್ಲೇ ಹಂತದಲ್ಲಿ ರನ್‌ಗಳ ರಾಶಿ ಹಾಕುತ್ತಿರುವ ಈ ಜೋಡಿಯಿಂದಾಗಿ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಆತ್ಮವಿಶ್ವಾಸದಿಂದ ಆಡುವಂತಾಗಿದೆ.

ಧ್ರುವ ಜುರೇಲ್, ನಾಯಕ ರಿಯಾನ್ ಪರಾಗ್, ಶಿಮ್ರಾನ್ ಹೆಟ್ಮೆಯರ್ ಅವರು ಉಪಯುಕ್ತ ಕಾಣಿಕೆ ನೀಡಿದ್ದಾರೆ. ರಾಜಸ್ಥಾನ ಬೌಲಿಂಗ್ ವಿಭಾಗವು ಉತ್ತಮ ಲಯದಲ್ಲಿದೆ. ಜೋಫ್ರಾ ಆರ್ಚರ್, ಸ್ಪಿನ್ನರ್ ರವಿ ಬಿಷ್ಣೋಯಿ, ನಾಂದ್ರೆ ಬರ್ಗರ್ ಹಾಗೂ ಅನುಭವಿ ರವೀಂದ್ರ ಜಡೇಜ ಅವರು ಪ್ರಮುಖರಾಗಿದ್ದಾರೆ. ಅಬ್ಬರದ ಬ್ಯಾಟಿಂಗ್‌ಗೆ ಹೆಸರಾಗಿರುವ ಹೈದರಾಬಾದ್ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವ ಸವಾಲು ಬೌಲರ್‌ಗಳಿಗೆ ಇದೆ.

ಇಶಾನ್ ಕಿಶನ್ ನಾಯಕತ್ವದ ಸನ್‌ರೈಸರ್ಸ್ ತಂಡಕ್ಕೆ ಇದು ಐದನೇ ಪಂದ್ಯ. ಕಳೆದ ನಾಲ್ಕು ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಜಯಿಸಿತ್ತು. ಮೂರರಲ್ಲಿ ಸೋತಿದೆ. ಅಭಿಷೇಕ್, ಟ್ರಾವಿಸ್ ಹೆಡ್, ನಿತೀಶ್ ಕುಮಾರ್ ರೆಡ್ಡಿ, ನಾಯಕ ಇಶಾನ್ ಹಾಗೂ ಹೆನ್ರಿಚ್ ಕ್ಲಾಸೆನ್ ಅವರು ಇರುವ ಬ್ಯಾಟಿಂಗ್ ಪಡೆಯು ಉತ್ತಮ ಲಯದಲ್ಲಿದೆ. ಆದರೆ ಬೌಲಿಂಗ್ ವಿಭಾಗದಲ್ಲಿ ಅನುಭವಿಗಳ ಕೊರತೆ ಎದ್ದು ಕಾಣುತ್ತಿದೆ. ಪ್ಯಾಟ್ ಕಮಿನ್ಸ್ ಅವರ ಗೈರುಹಾಜರಿಯೂ ಇದಕ್ಕೆ ಕಾರಣ. ಇಶಾನ್ ಮಾಲಿಂಗ್, ಶಿವಾಂಗ್ ಕುಮಾರ್, ಜಯದೇವ್ ಉನದ್ಕತ್, ಹರ್ಷಲ್ ಪಟೇಲ್ ಮತ್ತು ಹರ್ಷ ದುಬೆ ಅವರು ನಿರೀಕ್ಷೆಗೆ ತಕ್ಕ ಬೌಲಿಂಗ್ ಮಾಡುತ್ತಿಲ್ಲ. ಆದ್ದರಿಂದಾಗಿಯೇ ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ 219 ರನ್‌ಗಳ ಗುರಿ ಒಡ್ಡಿದ್ದ ಸನ್‌ರೈಸರ್ಸ್ ಬೌಲಿಂಗ್ ವೈಫಲ್ಯದಿಂದ ಸೋಲಬೇಕಾಯಿತು. ತವರಿನಂಗಳದಲ್ಲಿ ಬೌಲಿಂಗ್ ವಿಭಾಗವನ್ನು ಬಲಿಷ್ಠಗೊಳಿಸಿಕೊಂಡು ಕಣಕ್ಕಿಳಿಯಬೇಕಾದ ಅನಿವಾರ್ಯತೆ ಹೈದರಾಬಾದ್ ತಂಡಕ್ಕೆ ಇದೆ. ಇಲ್ಲದಿದ್ದರೆ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೋಡಿಯ ಆರ್ಭಟಕ್ಕೆ ತುತ್ತಾಗಬೇಕಾದ ಆತಂಕವೂ ಇದೆ.

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್ V/s ರಾಜಸ್ಥಾನ ರಾಯಲ್ಸ್
ತಾಣ: ಹೈದರಾಬಾದ್
ಆರಂಭ: ರಾತ್ರಿ 7.30
ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್


ವೈಭವ್ ಸೂರ್ಯವಂಶಿ 'ಎಕ್ಸ್' ಚಿತ್ರ

ಕುಸ್ತಿ: ಅಮನ್, ಮುಕುಲ್‌ಗೆ ರಜತ


ಬಿಷ್ಕೆಕ್ (ಕಿರ್ಗಿಸ್ತಾನ), (ಪಿಟಿಐ): ಭಾರತದ ಪೈಲ್ವಾನರಾದ ಅಮನ್ ಸೆಹ್ರಾವತ್ ಮತ್ತು ಮುಕುಲ್ ದಹಿಯಾ ಅವರು ಭಾನುವಾರ ಇಲ್ಲಿ ಮುಕ್ತಾಯಗೊಂಡ ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕದ ಸಾಧನೆ ಮೆರೆದರು.


ಮುಕುಲ್ ದಹಿಯಾ

ಅದರೊಂದಿಗೆ, ಭಾರತವು ಎರಡು ಸ್ವರ್ಣ ಸೇರಿ 17 ಪದಕಗಳೊಂದಿಗೆ ಅಭಿಯಾನ ಮುಗಿಸಿತು.

ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಅಮನ್ ಅವರು ಪುರುಷರ 61 ಕೆ.ಜಿ. ಫ್ರೀಸ್ಟೈಲ್ ವಿಭಾಗದ ಫೈನಲ್‌ನಲ್ಲಿ ಪ್ರಬಲ ಹೋರಾಟ ತೋರಿದರಾದರೂ, 10–13ರಲ್ಲಿ ಕೊರಿಯಾದ ಕ್ವಾಂಗ್ ಮ್ಯೋಂಗ್ ಕಿಮ್ ವಿರುದ್ಧ ಪರಾಭವಗೊಂಡರು. ಈ ವಿಭಾಗವು ಒಲಿಂಪಿಕ್‌ಯೇತರ ವಿಭಾಗವಾಗಿದೆ.

ನಂತರ ನಡೆದ ಪುರುಷರ 86 ಕೆ.ಜಿ. ಫ್ರೀಸ್ಟೈಲ್ ವಿಭಾಗದ ಚಿನ್ನದ ಪದಕದ ಸುತ್ತಿನಲ್ಲಿ ಮುಕುಲ್ ಅವರು 0–7ರಿಂದ ಇರಾನ್‌ನ ಕಮ್ರನ್ ಜಿ. ಘಸೆಂಪೂರ್ ಎದುರು ಸುಲಭವಾಗಿ ಸೋತರು.


ಅಮನ್ ಸೆಹ್ರಾವತ್

ಪುರುಷರ 125 ಕೆ.ಜಿ. ವಿಭಾಗದ ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ದಿನೇಶ್ ಅವರು 12–1ರಿಂದ ತಾಂತ್ರಿಕ ಪರಿಣತಿಯ ಆಧಾರದಲ್ಲಿ ಕಿರ್ಗಿಸ್ತಾನದ ಅರ್ಸಲನ್‌ಬೆಕ್ ತುರ್ದುಬೆಕೊವ್ ವಿರುದ್ಧ ಗೆಲುವು ಸಾಧಿಸಿದರು.

ತಲಾ 6 ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಜಯಿಸಿದ ಇರಾನ್, ಪದಕಪಟ್ಟಿಯಲ್ಲಿ ಅಗ್ರಸ್ಥಾನ ತನ್ನದಾಗಿಸಿಕೊಂಡಿತು. ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಕುಸ್ತಿಪಟುಗಳು ಗೆದ್ದ 17 ಪದಕಗಳಲ್ಲಿ ಆರು ಬೆಳ್ಳಿ ಹಾಗೂ ಒಂಬತ್ತು ಕಂಚು ಸೇರಿವೆ.

ಸೈಕ್ಲಿಂಗ್: ಕರ್ನಾಟಕಕ್ಕೆ 2 ಸ್ವರ್ಣ

ತಿರುವನಂತಪುರ (ಪಿಟಿಐ): ಕರ್ನಾಟಕದ ಸೈಕ್ಲಿಸ್ಟ್‌ಗಳು ಭಾನುವಾರ ಮುಕ್ತಾಯಗೊಂಡ ಅಸ್ಮಿತಾ– ಖೇಲೊ ಇಂಡಿಯಾ ಮಹಿಳಾ ಲೀಗ್ ದಕ್ಷಿಣ ವಲಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಸ್ವರ್ಣ ಸೇರಿ ಏಳು ಪದಕಗಳನ್ನು ಗೆದ್ದುಕೊಂಡರು. ಅದರೊಂದಿಗೆ, ರಾಜ್ಯವು ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿತು.

ಆತಿಥೇಯ ಕೇರಳ 35 ಪದಕ (11 ಚಿನ್ನ, 14 ಬೆಳ್ಳಿ ಹಾಗೂ 10 ಕಂಚು) ಜಯಿಸಿ, ಸಮಗ್ರ ಚಾಂಪಿಯನ್ ಆಯಿತು. ತಮಿಳುನಾಡು ತಂಡವು (7 ಚಿನ್ನ ಸೇರಿ 14 ಪದಕ) ರನ್ನರ್ಸ್‌ಅಪ್ ಆಯಿತು.

ಕನ್ನಡಿಗ ಆಯುಷ್ ಶೆಟ್ಟಿಗೆ ಬೆಳ್ಳಿ

ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಚಿನ್ನ ಗೆದ್ದ ಚೀನಾದ ಶೀ ಯು ಕಿ

ನಿಂಗ್ಬೊ, ಚೀನಾ (ಪಿಟಿಐ): ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ 61 ವರ್ಷಗಳ ನಂತರ ಫೈನಲ್ ತಲುಪಿದ್ದ ಭಾರತದ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಆಯುಷ್ ಶೆಟ್ಟಿ ಬೆಳ್ಳಿ ಪದಕ ಗಳಿಸಿದರು.

ಭಾನುವಾರ ನಡೆದ ಫೈನಲ್‌ನಲ್ಲಿ ಆಯುಷ್ ಅವರು 8–21, 10–21ರಿಂದ ವಿಶ್ವ ರ‍್ಯಾಂಕಿಂಗ್ ನಲ್ಲಿ ಎರಡನೇ ಸ್ಥಾನ ದಲ್ಲಿರುವ ಚೀನಾದ ಶಿ ಯು ಕೀ ವಿರುದ್ಧ ಪರಾಭವಗೊಂಡರು. ಕರ್ನಾಟಕದ ಆಯುಷ್ ಶೆಟ್ಟಿ ಅವರು ಶನಿವಾರ ಸೆಮಿ ಫೈನಲ್‌ನಲ್ಲಿ ಥಾಯ್ಲೆಂಡ್ ದೇಶದ ಕುನ್ಲಾವತ್ ವಿರುದ್ಧ ಜಯಿಸಿದ್ದರು.

61 ವರ್ಷಗಳ ಹಿಂದೆ ದಿನೇಶ್ ಖನ್ನಾ ಅವರು ಸಿಂಗಲ್ಸ್ ಫೈನಲ್ ಪ್ರವೇಶಿಸಿ, ಚಾಂಪಿಯನ್ ಆಗಿದ್ದರು. ಅವರ ಬಳಿಕ ಫೈನಲ್ ಸಾಧನೆ ಮಾಡಿದ ವರು ಉಡುಪಿ ಜಿಲ್ಲೆಯವರಾದ ಆಯುಷ್.

> **ಟೂರ್ನಿಯ ಆರಂಭದಿಂದಲೂ ಪ್ರಬಲ ಆಟಗಾರರನ್ನು ಎದುರಿಸಬೇಕಾಯಿತು. ನನ್ನ ಆಟ ಹಾಗೂ ಸಾಧನೆಯ ಬಗ್ಗೆ ನಿಜಕ್ಕೂ ಸಂತೋಷವಾಗುತ್ತಿದೆ**
> **ಆಯುಷ್ ಶೆಟ್ಟಿ,** ಬ್ಯಾಡ್ಮಿಂಟನ್ ಆಟಗಾರ

ವಿಶ್ವ ರ‍್ಯಾಂಕಿಂಗ್‌ನಲ್ಲಿ 25ನೇ ಸ್ಥಾನದಲ್ಲಿರುವ ಆಯುಷ್ ಅವರು ಫೈನಲ್ ಪಂದ್ಯದಲ್ಲಿ ಲಯ ಕಂಡು ಕೊಳ್ಳುವ ಪ್ರಯತ್ನದಲ್ಲಿ ವಿಫಲರಾದರು. ಅನುಭವಿ ಆಟಗಾರ ಶೀ ಅವರ ತಾಂತ್ರಿಕ ಕೌಶಲ್ಯವು ಉನ್ನತಮಟ್ಟದ್ದಾಗಿತ್ತು. ಅವರ ಸ್ಮ್ಯಾಷ್‌ಗಳು ಪರಿಣಾಮಕಾರಿ ಯಾಗಿದ್ದವು. ಆಯುಷ್ ಒಡ್ಡಿದ ಎಲ್ಲ ಸವಾಲುಗಳಿಗೂ ಚೀನಾದ ಆಟಗಾರ ಬಳಿ ಉತ್ತರಗಳು ಸಿದ್ಧವಾಗಿದ್ದವು. ಇದರಿಂದಾಗಿ ಆಯುಷ್ ಮೇಲೆ ಒತ್ತಡ ಹೆಚ್ಚಿತು. ಮೊದಲ ಗೇಮ್‌ನಲ್ಲಿ ಹತ್ತು ಅಂಕ ತಲುಪಲು ಕೂಡ ಅವರಿಗೆ ಸಾಧ್ಯ-ವಾಗಲಿಲ್ಲ. ಎರಡನೇ ಗೇಮ್‌ನಲ್ಲಿಯೂ 11 ಅಂಕಗಳ ಅಂತರದಿಂದ ಸೋತರು.

ಚೀನಾದ ಆಟಗಾರ ವೈವಿಧ್ಯಮಯ ಹೊಡೆತಗಳನ್ನು ಪ್ರಯೋಗಿಸಿದರು. ಶರವೇಗದ ಸ್ಮ್ಯಾಷ್, ದೀರ್ಘ ರ‍್ಯಾಲಿಗಳು ಮತ್ತು ನೆಟ್ ಸಮೀಪದ ಆಟದ ಮೂಲಕ ಶೀ ಅವರು ಆಯುಷ್ ಮೇಲೆ ಒತ್ತಡ ಹೆಚ್ಚಿಸಿದರು.

20 ವರ್ಷ ವಯಸ್ಸಿನ ಆಯುಷ್ ಅವರು ಬೆಂಗಳೂರಿನ ಪಡುಕೋಣೆ–ದ್ರಾವಿಡ್ ಕ್ರೀಡಾ ಶ್ರೇಷ್ಠತಾ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.



ಭಾರತದ ಆಯುಷ್ ಶೆಟ್ಟಿ ಆಟದ ಸೊಬಗು ಚಿತ್ರ: 'ಬ್ಯಾಡ್ಮಿಂಟನ್ ಫೋಟೊ'

ಬ್ಯಾಸ್ಕೆಟ್‌ಬಾಲ್: ನಾಲ್ಕರ ಘಟ್ಟಕ್ಕೆ ಯಂಗ್ ಓರಿಯನ್ಸ್

ಬೆಂಗಳೂರು: ಯಂಗ್ ಓರಿಯನ್ಸ್ ತಂಡವು ರಾಜ್ಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 57–55ರಿಂದ ಜೆಎಸ್‌ಸಿ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಅದರೊಂದಿಗೆ, ಅಂಕಪಟ್ಟಿ ಯಲ್ಲಿ ನಾಲ್ಕನೇ ಸ್ಥಾನ ಪಡೆದು ಸೆಮಿಫೈನಲ್ ಪ್ರವೇಶಿಸಿತು.

ವಿದ್ಯಾನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್, ಡಿವೈಇಎಸ್ ವಿದ್ಯಾನಗರ ಹಾಗೂ ಮೈಸೂರು ಜಿಲ್ಲೆ ಎ ತಂಡಗಳೂ ನಾಲ್ಕರ ಘಟ್ಟಕ್ಕೆ ಮುನ್ನಡೆದವು.

ಭಾನುವಾರ ನಡೆದ ಲೀಗ್ ಪಂದ್ಯ ಗಳಲ್ಲಿ ಮೈಸೂರು ಜಿಲ್ಲೆ ಎ ತಂಡವು 86–48ರಿಂದ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ವಿರುದ್ಧ; ಜೆಎಸ್‌ಸಿ ತಂಡವು 50–24ರಿಂದ ಅಪ್ಪಯ್ಯ ಬಿ.ಸಿ ತಂಡದ ವಿರುದ್ಧ ಹಾಗೂ ಮೌಂಟ್ಸ್ ಕ್ಲಬ್ ತಂಡವು 61–37ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ವಿರುದ್ಧ; ಮೈಸೂರು ಜಿಲ್ಲೆ ಎ ತಂಡವು 65–54ರಿಂದ ಡಿವೈಇಎಸ್ ವಿದ್ಯಾನಗರ ತಂಡದ ವಿರುದ್ಧ ಹಾಗೂ ಮೌಂಟ್ಸ್ ಕ್ಲಬ್ ತಂಡವು 46–42ರಿಂದ ವಿಮಾನಪುರ ಸ್ಪೋರ್ಟ್ಸ್ ಕ್ಲಬ್ ತಂಡದ ವಿರುದ್ಧ ಜಯಸಾಧಿಸಿದವು.

ಫುಟ್‌ಬಾಲ್: ಸೆಮಿಗೆ ರಾಜ್ಯ ಬಾಲಕಿಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ಪಂಜಾಬ್‌ನಲ್ಲಿ ನಡೆಯುತ್ತಿರುವ 'ಅಸ್ಮಿತಾ' 13 ವರ್ಷದೊಳಗಿನವರ ಫುಟ್‌ಬಾಲ್ ಲೀಗ್‌ನಲ್ಲಿ ಭಾನುವಾರ ಅಸ್ಸಾಂ ತಂಡವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಮಹಿಲ್ಪುರದ ಕರ್ತಾರ್ ಸಿಂಗ್ ಬೈನ್ಸ್ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ರಿಚಾ ಭಾಟಿಯಾ (1ನೇ ಹಾಗೂ 13ನೇ ನಿ.) ಅವರ ಅವಳಿ ಗೋಲುಗಳ ನೆರವಿನಿಂದ ಕರ್ನಾಟಕ ತಂಡವು 3–1ರಿಂದ ರೋಚಕ ಜಯ ಸಾಧಿಸಿತು. ರಾಜ್ಯ ತಂಡದ ಎ.ಸುಭಾತ್ರ (19ನೇ ನಿ.) ಅವರೂ ಒಂದು ಗೋಲು ಗಳಿಸಿದರು.

ಕರ್ನಾಟಕ ತಂಡವು ಮಂಗಳವಾರ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಮಿಜೋರಾಂ ತಂಡವನ್ನು ಎದುರಿಸಲಿದೆ.

ಚೇನಂಡ ತಂಡಕ್ಕೆ ಭರ್ಜರಿ ಗೆಲುವು

ಕೊಡವ ಕೌಟುಂಬಿಕ ಹಾಕಿ ಟೂರ್ನಿ: ಧ್ಯಾನ್ ಬೆಳ್ಳಿಯಪ್ಪ ಅವಳಿ ಗೋಲು

ಪ್ರಜಾವಾಣಿ ವಾರ್ತೆ

ನಾಪೋಕ್ಲು: ಆತಿಥೇಯ ಚೇನಂಡ ತಂಡವು ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಭಾನುವಾರ 5-0 ಗೋಲುಗಳ ಅಂತರದಲ್ಲಿ ಮಂದನೆರವಂಡ ತಂಡದ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಇಲ್ಲಿನ ಚೆರಿಯಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ಚೇನಂಡ ತಂಡದ ಧ್ಯಾನ್ ಬೆಳ್ಳಿಯಪ್ಪ ಅವಳಿ ಗೋಲು ಹೊಡೆದರೆ, ಸಚಿನ್ ಬೆಳ್ಳಿಯಪ್ಪ, ಚಮನ್ ಮತ್ತು ದಿನೇಶ್ ತಿಮ್ಮಯ್ಯ ತಲಾ ಒಂದು ಗೋಲು ದಾಖಲಿಸಿ ತಂಡಕ್ಕೆ ಜಯದ ಕಾಣಿಕೆ ನೀಡಿದರು.

ಒಟ್ಟು 6 ಪಂದ್ಯಗಳಲ್ಲಿ ಸಮಬಲದ ಹೋರಾಟ ಕಂಡು ಬಂದು ಗೆಲುವಿಗಾಗಿ ಟೈಬ್ರೇಕರ್ ಮೊರೆ ಹೋಗಬೇಕಾಯಿತು.

ಮಾಪಂಗಡ 3–2ರಿಂದ ಮನೆಯಪಂಡ ವಿರುದ್ಧ; ಕರ್ತಮಾಡ (ಬಿರುನಾಣಿ) 4-3ರಿಂದ ಕುಟ್ಟಂಡ (ಅಮ್ಮತ್ತಿ) ವಿರುದ್ಧ; ನಾಯಕಂಡ 5-4ರಿಂದ ಮಲ್ಚಿರ ವಿರುದ್ಧ; ಚೊಟ್ಟೆಯಂಡಮಾಡ 6–5ರಿಂದ ಚೆರಿಯಪಂಡ ವಿರುದ್ಧ; ಮೂಕೊಂಡ 3-0ಯಿಂದ ಚೆಕ್ಕೇರ ವಿರುದ್ಧ ಹಾಗೂ ಮರುವಂಡ 4–2ರಿಂದ ಮನಿಪಂಡ ವಿರುದ್ಧ ಟೈಬ್ರೇಕರ್‌ನಲ್ಲಿ ಗೆದ್ದವು.

ಉಳಿದಂತೆ, ಕೈಬುಲಿರ 1-0ಯಿಂದ ಬೋಳ್ಳೆರ ವಿರುದ್ಧ; ಅಚ್ಚಪಂಡ 3 -2ರಿಂದ ಪೊನ್ನಚಂಡ ವಿರುದ್ಧ; ಕಂಬಿರಂಡ 5-0ರಿಂದ ಅಲ್ಲುಮಾಡ ವಿರುದ್ಧ; ಕೊಂಡಿರ 2-1ರಿಂದ ಬೇರೆರ ವಿರುದ್ಧ; ಮುಕ್ಕಾಟಿರ (ಕಡಗದಾಳು) 3-2 ರಿಂದ ಬಾರಿಯಂಡ ವಿರುದ್ಧ; ಅಲಮೇಂಗಡ 5-0ರಿಂದ ಕರ್ತಮಾಡ (ಬಿ. ಶೆಟ್ಟಿಗೇರಿ) ವಿರುದ್ಧ; ಮಾಲೇಟಿರ (ಕೆದಮುಳ್ಳೂರು) 6-0ರಿಂದ ಅಲ್ಮಚಂಡ ವಿರುದ್ಧ; ಚಂದುರ 3-0ರಿಂದ ವಲ್ಲಂಡ ವಿರುದ್ಧ; ಮಳವಂಡ 2-1ರಿಂದ ಬೊಳ್ಳಂಡ ವಿರುದ್ಧ; ಬೊಳಕಾರಂಡ 2-0ಯಿಂದ ಚಿಕ್ಕಂಡ ವಿರುದ್ಧ; ಬೊಟ್ಟಂಗಡ 1–0ಯಿಂದ ಪುತ್ತರೀರ ವಿರುದ್ಧ; ಮಂಡೇಟಿರ 2–0 ಬೊಳಿಯಾಡೀರ ವಿರುದ್ಧ; ಕುಂದೀರ 2–0ಯಿಂದ ಕೋಲಿರ ವಿರುದ್ಧ; ಚೋಯಮಾಡಂಡ 2–1ರಿಂದ ಕೊಕ್ಕಂಡ ವಿರುದ್ಧ; ಪುಲ್ಲೇರ 2–0ಯಿಂದ ತಾಚಮಂಡ ವಿರುದ್ಧ; ಚಿಂಡಮಾಡ 1–0ಯಿಂದ ಕನ್ನಂಬೀರ ವಿರುದ್ಧ; ಚೋಯಮಾಡಂಡ 2–1ರಿಂದ ಕೊಕ್ಕಂಡ ವಿರುದ್ಧ ಜಯ ಗಳಿಸಿದವು.

ಭಾನುವಾರವಾದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಪ್ರೇಮಿಗಳು ಮೈದಾನದಲ್ಲಿ ಸೇರಿದ್ದರು. ತಮ್ಮ ತಮ್ಮ ಕುಟುಂಬದವರನ್ನು ಬೆಂಬಲಿಸಿದರು. ವಿಜೇತ ತಂಡದ ಆಟಗಾರರು ಮತ್ತು ಅವರ ಬೆಂಬಲಿಗರು ಮೈದಾನದಲ್ಲಿ ಕುಣಿದು ಕುಪ್ಪಳಿಸಿದರು.



ಮಡಿಕೇರಿ ತಾಲ್ಲೂಕಿನ ನಾಪೋಕ್ಲುವಿನಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿಯಲ್ಲಿ ಚೇನಂಡ ಮತ್ತು ಮಂದನೆರವಂಡ ಆಟಗಾರರು ಚೆಂಡಿಗಾಗಿ ಸೆಣಸಾಡಿದರು

ಮ್ಯಾರಥಾನ್: ಬರ್ವಾಲ್ ರಾಷ್ಟ್ರೀಯ ದಾಖಲೆ

ರೋಟರ್‌ಡ್ಯಾಮ್ (ನೆದರ್ಲೆಂಡ್ಸ್), (ಪಿಟಿಐ): ಸಾವನ್ ಬರ್ವಾಲ್ ಅವರು ಭಾನುವಾರ ರೋಟರ್‌ಡ್ಯಾಮ್ ನಲ್ಲಿ ನಡೆದ ಮ್ಯಾರಥಾನ್ ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು.



ಬರ್ವಾಲ್ ಅವರು 2 ಗಂಟೆ 11 ನಿಮಿಷ 58 ಸೆಕೆಂಡುಗಳಲ್ಲಿ ಗುರಿ ತಲುಪಿ ಎಲೀಟ್ ಮ್ಯಾರಥಾನ್ ಓಟದಲ್ಲಿ 20ನೇ ಸ್ಥಾನ ಪಡೆದರು. ಇದರೊಂದಿಗೆ 1978ರಿಂದ ಶಿವನಾಥ್ ಸಿಂಗ್ ಅವರ ಹೆಸರಿನಲ್ಲಿದ್ದ (2ಗಂಟೆ 12ನಿ 00) ರಾಷ್ಟ್ರೀಯ ದಾಖಲೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡರು. ಸ್ಪರ್ಧೆಯಲ್ಲಿದ್ದ ಮತ್ತೊಬ್ಬ ಭಾರತೀಯ ಗೋಪಿ ಥೋನಕಲ್ 42.195 ಕಿ.ಮೀ ದೂರವನ್ನು 2 ಗಂಟೆ 13 ನಿ. 16 ಸೆ.ಗಳಲ್ಲಿ ಕ್ರಮಿಸಿ 23ನೇ ಸ್ಥಾನ ಪಡೆದರು.

ಜನವರಿಯಲ್ಲಿ ಅಮೆರಿಕದಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ ನಂತರ ಬರ್ವಾಲ್ ಅವರಿಗೆ ಇದು ಋತುವಿನ ಎರಡನೇ ಸ್ಪರ್ಧೆಯಾಗಿತ್ತು.

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಜೋಗಿಂದರ್ ನಗರದ ಹಳ್ಳಿಯಿಂದ ಬಂದ 28 ವರ್ಷದ ಬರ್ವಾಲ್ ಅವರು ಹಲವು ವರ್ಷಗಳಿಂದ ಕಠಿಣ ತರಬೇತಿ ಪಡೆದಿದ್ದಾರೆ. '37 ಕಿ.ಮೀ. ದೂರದ ವರೆಗೂ ಮಧ್ಯಮ ನಿಧಾನಗತಿಯಲ್ಲಿ ಓಡುತ್ತಿದ್ದೆ. ಆದರೆ ಕೊನೆಯ ಹಾದಿ ಹೆಚ್ಚು ಸವಾಲಿನದ್ದಾಗಿತ್ತು. 2 ಗಂಟೆ 10 ನಿಮಿಷಗಳಲ್ಲಿ ಗುರಿ ತಲುಪಲು ಮಾನಸಿಕ ಮತ್ತು ದೈಹಿಕವಾಗಿ ತಯಾರಿ ನಡೆಸಿದ್ದೆ. ಇಲ್ಲಿನ ವಾತಾವರಣ ರಾಷ್ಟ್ರೀಯ ದಾಖಲೆಯನ್ನು ಇನ್ನಷ್ಟು ಸುಧಾರಿಸುವ ಅವಕಾಶವನ್ನು ಕಸಿದುಕೊಂಡಿತು' ಎಂದು ಬರ್ವಾಲ್ ಪ್ರತಿಕ್ರಿಯಿಸಿದರು.